ಮಂಗಳೂರು
ಸೋಮವಾರ, 30 ಮಾರ್ಚ್ 2026
ಸಂಪುಟ 48, ಸಂಚಿಕೆ 11 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಸರ್ಕಾರ ನೀಡುವ ಮಾಹಿತಿ ಮಾತ್ರ ನಂಬಿ | 0೨
2 ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ | 0೨
ನುಸುಳುಕೋರರನ್ನು ಹೊರದಬ್ಬುತ್ತೇವೆ | 0೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮಘೆ

ದಿನದ ಮಾತು

ಲೋಕದಲ್ಲಿ ಜೀವನವು ಅಸ್ಥಿರ, ಯೌವನ, ಧನ ಅಸ್ಥಿರ. ಹೆಂಡತಿ ಮಕ್ಕಳು ಅಸ್ಥಿರ. ಆದರೆ ಧರ್ಮ, ಕೀರ್ತಿಗಳು ಮಾತ್ರ ಸ್ಥಿರ.

▲ಶ್ರೀ ಶಂಕರಾಚಾರ್ಯರು

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಪುಸ್ತಕ

• **ಬೆಂಗಳೂರು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

• ಪುಟ ೫

ಮಾದಕವಸ್ತುಮುಕ್ತ ರಾಜ್ಯ: ಸಿಎಂ ಸಿದ್ದರಾಮಯ್ಯ

• **ಮೈಸೂರು:** ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಭಾನುವಾರ ಮೈಸೂರಿನಲ್ಲಿ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಬೇಕು ಎಂದು ಸೂಚಿಸಿದರು.

• ಪುಟ ೫

ಪರಪ್ಪನ ಜೈಲ್ ವಿಡಿಯೋ 3 ಸಿಬ್ಬಂದಿ ಅಮಾನತು

• **ಬೆಂಗಳೂರು:** ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

• ಪುಟ ೪

ಈಜಲು ತೆರಳಿದ್ದ ನಾಲ್ವರು ಮಕ್ಕಳ ಮೃತ್ಯು

• ಪುಟ ೫

ಉತವ ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

• ಪುಟ ೫

ಸಮುದಾಯ ಚಿಕ್ಕದು, ಸಾಧನೆ ದೊಡ್ಡದು

• ಪುಟ ೫

ಪಾಲಕ್ಕಾಡ್ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ

ಕೇರಳ ಚುಕ್ಕಾಣಿ ನಮ್ದೇ

• **ಪಾಲಕ್ಕಾಡ್:** ಬಿಜೆಪಿಯ ಬಿ-ಟೀಮ್‌ಗಳೆಂದು ಯುಡಿಎಫ್ ಮತ್ತು ಎಲ್‌ಡಿಎಫ್ ಪರಸ್ಪರ ಆರೋಪಿಸುತ್ತ ಕೇರಳ ಜನರ ದಾರಿತಪ್ಪಿಸುತ್ತಿದ್ದಾರೆ. ಬಿಜೆಪಿಯೇ ಕೇರಳದ ನಿಜವಾದ ಎ-ಟೀಮ್ ಎಂಬುದನ್ನು ಎರಡೂ ಬಣಗಳು ಪರೋಕ್ಷವಾಗಿ ಒಪ್ಪಿವೆ. ನಿಮ್ಮೆಲ್ಲರ ಆಶೀರ್ವಾದದೊಂದಿಗೆ ಕೇರಳದಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಪಾಲಕ್ಕಾಡ್‌ನಲ್ಲಿ ಆಯೋಜಿಸಿದ್ದ ಬೃಹತ್ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳೆರಡೂ ದಶಕಗಳಿಂದ ಕೇರಳವನ್ನು ಲೂಟಿ ಮಾಡುತ್ತಲೇ ಬಂದಿವೆ. ಇವುಗಳೆರಡರ ಬಲೆಗೆ ಸಿಲುಕಿರುವ ನಮ್ಮ ಕೇರಳ ಚಡಪಡಿಸುತ್ತಿದೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮುಂದಿನ ಸರ್ಕಾರವನ್ನು ರಚಿಸಲಿದೆ ಎಂದು ಮೋದಿ ಭವಿಷ್ಯ ನುಡಿದಿದ್ದಾರೆ. ಕೇರಳ ಜನತೆಯ ಆಶೀರ್ವಾದ ಹಾಗೂ ನಿಮ್ಮೆಲ್ಲರ ಬೆಂಬಲದಿಂದ ನಾವಿಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ. ಕೇರಳದಲ್ಲಿ ಜನಸೇವೆ ಮಾಡುವ ಯಾವುದೇ ಅವಕಾಶವನ್ನು ಬಿಟ್ಟುಕೊಡುವುದಿಲ್ಲ ಎಂದು ಪ್ರಧಾನಿ ಮೋದಿ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬದಲಾವಣೆ ಬಯಸುತ್ತಿದೆ ಕೇರಳ: ಈ ಬಾರಿ ಕೇರಳದಲ್ಲಿ ವಿಶೇಷವಾದ ಬದಲಾವಣೆಯ ವಾತಾವರಣವನ್ನು ನೋಡುತ್ತಿದ್ದೇನೆ. ಕೇರಳ ಬದಲಾವಣೆಯ ಸಂದೇಶ ರವಾನಿಸುತ್ತಿದೆ.

➡ಪುಟ ೪



- ದಶಕಗಳಿಂದ ಯುಡಿಎಫ್, ಎಲ್‌ಡಿಎಫ್ ಭ್ರಷ್ಟಾಚಾರ
- ಇವರೆಡೂ ಬಣಗಳಿಂದ ಅವಕಾಶವಾದಿ ರಾಜಕೀಯ
- ಬದಲಾವಣೆಯ ಸಂದೇಶ ರವಾನಿಸಿದೆ ಕೇರಳ
- ಬಿಜೆಪಿಯೇ ಕೇರಳದ ಅಸಲಿ ಎ-ಟೀಮ್

ಹೆಚ್ಚಿದ ಎನ್‌ಡಿಎ ಜನಪ್ರಿಯತೆ

ಕೇರಳದಲ್ಲಿ ಎನ್‌ಡಿಎ ಜನಪ್ರಿಯತೆ ಹೆಚ್ಚಾಗುತ್ತಿದೆ. ಜನರಿಗೆ ಬಿಜೆಪಿಯ ಮೇಲಿನ ವಿಶ್ವಾಸ ಹೆಚ್ಚಾಗುತ್ತಿದೆ. ಭಾರೀ ಸಂಖ್ಯೆಯಲ್ಲಿ ಸೇರಿ ಬಿಜೆಪಿಗೆ ನಿಮ್ಮ ಬೆಂಬಲವನ್ನು ತೋರಿಸಿದ್ದೀರಿ. ಪಾಲಕ್ಕಾಡ್‌ನ ಇಂದಿನ ವಾತಾವರಣವು ಕೇರಳದ ಬಯಕೆಯನ್ನು ತೋರಿಸುತ್ತದೆ. ಕೇರಳದ ಯುವಜನತೆ ಬಿಜೆಪಿ ಮತ್ತು ಎನ್‌ಡಿಎ ಮೇಲೆ ವಿಶ್ವಾಸ ಹೊಂದಿರುವುದಲ್ಲದೆ, ಮಹಿಳೆಯರು ಮತ್ತು ಕೃಷಿಕರೂ ಬಿಜೆಪಿ ಮತ್ತು ಎನ್‌ಡಿಎಯನ್ನು ಪ್ರೀತಿಸುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಲೂಟಿ ಹಣ ಜನರಿಗೆ ವಾಪಸ್

ಪಿಣರಾಯಿ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಹಣಕಾಸಿನ ನೆರವನ್ನು ದುರ್ಬಳಕೆಯ ಆರೋಪ ಹೊರಿಸಿದ ಮೋದಿ, ನಿಮಗೆ (ಜನರಿಗೆ) ಸೇರಬೇಕಾದ ಹಣವನ್ನು ಭ್ರಷ್ಟಾಚಾರ ನಡೆಸಿ ಲೂಟಿ ಮಾಡಿದ್ದಾರೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೇರಿದ ತಕ್ಷಣ ಎಲ್‌ಡಿಎಫ್ ಸರ್ಕಾರ ನಿಮ್ಮಿಂದ ಲೂಟಿ ಮಾಡಿದ ಹಣವನ್ನು ವಾಪಸ್ ನೀಡುವ ಮೂಲಕ ಕೇರಳದ ಆರ್ಥಿಕ ಪ್ರಗತಿ ಯನ್ನು ಉತ್ತೇಜಿಸುತ್ತೇವೆ ಎಂದು ಮೋದಿ ಭರವಸೆ ನೀಡಿದ್ದಾರೆ.

5 ಲಕ್ಷ ಕೋಟಿ ಸಾಲದ ಹೊರೆ!

ಕಳೆದ 10 ವರ್ಷಗಳಲ್ಲಿ ಎಲ್‌ಡಿಎಫ್ ಸರ್ಕಾರ ಕೇರಳವನ್ನು 5 ಲಕ್ಷ ಕೋಟಿ ರೂ. ಸಾಲದ ಹೊರೆಗೆ ದೂಡಿದೆ. ಕಳೆದೊಂದು ದಶಕದಲ್ಲಿ ಕೇರಳದ ಸಾಲದ ಹೊರೆ ದ್ವಿಗುಣಗೊಂಡಿದೆ. ಜನರ ಹಣವೆಲ್ಲವೂ ಎಲ್‌ಡಿಎಫ್ ಜೇಬನ್ನು ಸೇರಿಕೊಂಡಿದೆ ಎಂದು ಮೋದಿ ಆರೋಪಿಸಿದ್ದಾರೆ.

ಧ್ವನಿವರ್ಧಕದಲ್ಲಿ ಹೊಗೆ, ಆತಂಕ

ಮೋದಿ ರ್‍ಯಾಲಿ ಆರಂಭಕ್ಕೂ ಮುನ್ನ ಧ್ವನಿವರ್ಧಕದಲ್ಲಿ ಹೊಗೆ ಕಂಡುಬಂದಿದ್ದು, ಸ್ವಲ್ಪ ಸಮಯ ಆತಂಕ ಸೃಷ್ಟಿಸಿತ್ತು. ಧ್ವನಿವರ್ಧಕದಿಂದ ಹೊಗೆ ಬಂದಿರುವುದನ್ನು ಪೊಲೀಸರು ದೃಢೀಕರಿಸಿದ್ದಾರೆ. ಜಿಲ್ಲೆಯ ಕೋಟ್ಟ ಮೈದಾನಂನಲ್ಲಿ ಮೋದಿ ಆಗಮಿಸುವ ಮುನ್ನ ಈ ಘಟನೆ ನಡೆದಿತ್ತು.

ತ್ರಿಶ್ಯೂರ್ ರೋಡ್‌ಶೋ: 50 ಸಾವಿರ ಜನ ಭಾಗಿ!

ಎನ್‌ಡಿಎ ಚುನಾವಣಾ ಪ್ರಚಾರದ ಅಂಗವಾಗಿ ತ್ರಿಶ್ಯೂರ್‌ನಲ್ಲಿ ಆಯೋಜಿಸಿದ್ದ ಬೃಹತ್ ರೋಡ್‌ಶೋನಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡಿದ್ದು, ರಸ್ತೆಯ ಎರಡೂ ಬದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಅವರನ್ನು ಸ್ವಾಗತಿಸಿದರು. 900 ಮೀ. ದೂರದವರೆಗೆ ವ್ಯಾಪಿಸಿದ್ದ ರೋಡ್‌ಶೋನಲ್ಲಿ 50,000ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ತ್ರಿಶ್ಯೂರ್ ಜಿಲ್ಲೆಯ ಎನ್‌ಡಿಎ ಅಭ್ಯರ್ಥಿಗಳಾದ ಪದ್ಮಜಾ ವೇಣುಗೋಪಾಲ್ ಮತ್ತು ಕೆ.ಕೆ. ಅನೀಶ್ ಕುಮಾರ್ ಹಾಗೂ ಕೇಂದ್ರ ಸಚಿವ ಸುರೇಶ್ ಗೋಪಿ ಪ್ರಧಾನಿ ಜತೆಗಿದ್ದರು.

ಎಲ್ಲಾ ವಲಯಗಳಿಗೂ ನಿರಂತರ ಪೂರೈಕೆ, ಯಾವುದೇ ಆತಂಕ ಬೇಡ ಎಂದ ಸಚಿವ

ಆಟೋ ಎಲ್‌ಪಿಜಿಗಿಲ್ಲ ಕೊರತೆ: ಮುನಿಯಪ್ಪ



• **ಬೆಂಗಳೂರು:** ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ವಿಶೇಷವಾಗಿ ಆಟೋ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ.

ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ಎಎಲ್‌ಡಿಎಸ್) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 31 ಕೇಂದ್ರಗಳು ಬೆಂಗಳೂರು ನಗರವೊಂದರಲ್ಲೇ ಇವೆ. ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ (ಒಎಂಸಿಎಸ್) ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ 77.74 ರೂ. ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ ಎಂದು ಮಾಹಿತಿ ನೀಡಿದ್ದಾರೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಇಸ್ರೇಲ್-ಇರಾನ್ ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ ಎಂದು ವಿವರಿಸಿದ್ದಾರೆ.

ವಿದ್ಯುತ್-ಸೌರ ಸ್ಟವ್ ಬಳಸಿ

ಸಾರ್ವಜನಿಕರು, ವಾಣಿಜ್ಯ ಬಳಕೆದಾರರು ಅನಾವಶ್ಯಕವಾಗಿ ಮುಂಗಡ ಕಾಯ್ದಿರಿಸದೆ ಸರ್ಕಾರದೊಂದಿಗೆ ಸಹಕರಿಸುವಂತೆ ಹಾಗೂ ವಾಣಿಜ್ಯ ಬಳಕೆದಾರರು ಸಾಧ್ಯವಾದಷ್ಟು, ವಿದ್ಯುತ್ ಸ್ಟವ್, ಸೌರ ಆಧಾರಿತ ಅಡುಗೆ ವ್ಯವಸ್ಥೆ ಬಳಸುವಂತೆ ಸಚಿವ ಕೆ.ಎಚ್.ಮುನಿಯಪ್ಪ ಮನವಿ ಮಾಡಿದ್ದಾರೆ. ಹೆಚ್ಚು ದರ ವಸೂಲಿ ಮಾಡಿ ಕಾಳಸಂತೆಯಲ್ಲಿ ಗೃಹಬಳಕೆ, ವಾಣಿಜ್ಯ ಬಳಕೆ, ಆಟೋ ಎಲ್‌ಪಿಜಿಗಳನ್ನು ಮಾರಾಟ ಮಾಡುವುದು ಕಂಡುಬಂದಲ್ಲಿ ಕಾನೂನು ಕ್ರಮವಲ್ಲದೆ ಪರವಾನಗಿ ರದ್ದುಗೊಳಿಸುವ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಸಿಲಿಂಡರ್ ಪೂರೈಕೆ ಭರವಸೆ ದೊರೆತಿರುವುದರಿಂದ ರಾಜ್ಯದಲ್ಲಿ ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಗಮನಾರ್ಹವಾಗಿ ಸುಧಾರಿಸುವ ನಿರೀಕ್ಷೆ ಇದೆ. ಶಿಕ್ಷಣ ಸಂಸ್ಥೆ, ವಸತಿ ನಿಲಯ, ಆಸ್ಪತ್ರೆ ಮತ್ತು ಇತರೆ ಅವಶ್ಯಕ ಸಂಸ್ಥೆಗಳಿಗೆ ಪ್ರತಿದಿನ 4200 ಸಿಲಿಂಡರ್ ಹಂಚಿಕೆ ಮಾಡಲಾಗಿದೆ. ಸರ್ಕಾರಿ, ಪಿಎಸ್‌ಯು ಸಂಸ್ಥೆ, ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ 1200 ಸಿಲಿಂಡರ್ ಹಂಚಲಾಗಿದೆ.

➡ಪುಟ ೪

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಆರೋಪಿ ತಪ್ಪೊಪ್ಪಿಗೆ

ನಾನು ತಪ್ಪು ಮಾಡಿದ್ದೇನೆ: ಶಾರೀಕ್

• **ಬೆಂಗಳೂರು/ಮಂಗಳೂರು:** ನಾಲ್ಕು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದಾನೆ.



ಈತನ ತಪ್ಪೊಪ್ಪಿಗೆ ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯ ಅಂಗೀಕರಿಸಿದೆ. ನಾನು ತಪ್ಪು ಮಾಡಿದ್ದೇನೆ. ನನಗೆ ಪಶ್ಚಾತ್ತಾಪ ವಾಗಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ ಎಂದು ತಪ್ಪೊಪ್ಪಿಗೆಯಲ್ಲಿ ಹೇಳಿಕೊಂಡಿದ್ದಾನೆ.

ಪ್ರಕರಣ ಸಂಬಂಧ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಶಾರೀಕ್, 2025ರ ಡಿಸೆಂಬರ್‌ನಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 229 ಅಡಿಯಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಈ ಅರ್ಜಿಯನ್ನು ಅಂಗೀಕರಿಸಿದೆ.

ಏಪ್ರಿಲ್ 10ಕ್ಕೆ ಶಿಕ್ಷೆ ಪ್ರಕಟ

ಮೂರು ತಿಂಗಳ ಹಿಂದೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದ್ದು ಏಪ್ರಿಲ್ 10ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ. ಕುಕ್ಕರ್ ಬಾಂಬ್ ಸ್ಫೋಟ ಕುರಿತಂತೆ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸಿದ್ದರು.

ಪ್ರಕರಣ ಹಿನ್ನೆಲೆ: 2022ರ ನವೆಂಬರ್ 19ರಂದು ಶಿವಮೊಗ್ಗ ಮೂಲದ 27 ವರ್ಷದ ಶಾರೀಕ್, ಆಟೋರಿಕ್ಷಾದಲ್ಲಿ ಸಾಗಿಸುತ್ತಿದ್ದ ಪ್ರೆಶರ್ ಕುಕ್ಕರ್ ಬಾಂಬ್ ಅವನ ಮಡಿಲಲ್ಲೇ ಸ್ಫೋಟಗೊಂಡ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ. ಚಿಕಿತ್ಸೆ ಬಳಿಕ ಶಾರೀಕ್‌ನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಕುಕ್ಕರ್‌ನಲ್ಲಿ ಐಇಡಿ ಇಟ್ಟು ಸ್ಫೋಟ ಮಾಡಿದ್ದೇನೆ. ಮೂರು ತಿಂಗಳ ವಿಚಾರಣೆ ಬಳಿಕ ನ್ಯಾಯಾಲಯವು ಈ ಅರ್ಜಿಯನ್ನು ಮಾನ್ಯಗೊಳಿಸಿದೆ.

ಮಧ್ಯಪ್ರಾಚ್ಯ ಯುದ್ಧ: ಅಮೆರಿಕಕ್ಕೆ ಇರಾನ್ ಖಡಕ್ ಎಚ್ಚರಿಕೆ

ಭೂ ದಾಳಿ ನಡೆದರೆ ಪ್ರತಿದಾಳಿ

• **ದುಬೈ:** ಅಮೆರಿಕ ಭೂ ದಾಳಿ ನಡೆಸಿದರೆ ಅದರ ಸೈನಿಕರನ್ನು ಬೆಂಕಿಗೆ ತಳ್ಳಲಾಗುತ್ತದೆ ಎಂದು ಇರಾನ್‌ನ ಉನ್ನತ ಅಧಿಕಾರಿಯೊಬ್ಬರು ಕಠಿಣ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, ತಿಂಗಳಿನಿಂದ ಮುಂದುವರಿದಿರುವ ಯುದ್ಧಕ್ಕೆ ತೆರೆ ಎಳೆಯಲು ಪ್ರಾದೇಶಿಕ ದೇಶಗಳ ರಾಜತಾಂತ್ರಿಕರು ಪಾಕಿಸ್ತಾನದಲ್ಲಿ ಸಭೆ ಸೇರಿದ್ದಾರೆ.



ಅಮೆರಿಕ ಮಧ್ಯಪ್ರಾಚ್ಯಕ್ಕೆ ಹೆಚ್ಚುವರಿ ಸೈನಿಕರನ್ನು ಕಳುಹಿಸುವುದನ್ನು ಮಾತುಕತೆಯ ವಿರೋಧಿ ಕ್ರಮವೆಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಟೀಕಿಸಿದ್ದಾರೆ. ಇರಾನ್ ತನ್ನ ಭೂಮಿಯಲ್ಲಿ ಯಾವುದೇ ಅಮೆರಿಕ ಪಡೆಗಳನ್ನು ಎದುರಿಸಲು ಸಿದ್ಧವಿದ್ದು, ಅಮೆರಿಕ ಸೈನಿಕರು ಹಾಗೂ ಅದರ ಮಿತ್ರ ರಾಷ್ಟ್ರಗಳ ವಿರುದ್ಧ ಕಠಿಣ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದ್ದಾರೆ. ಇದರ ನಡುವೆ, ಪಾಕಿಸ್ತಾನದಲ್ಲಿ ಸೌದಿ ಅರೇಬಿಯಾ, ಟರ್ಕಿ ಮತ್ತು ಈಜಿಪ್ಟ್ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಹಾಗೂ ಇಸ್ರೇಲ್ ಪ್ರತಿನಿಧಿಗಳು ಇಲ್ಲದೇ ಮಾತುಕತೆ ನಡೆಸುತ್ತಿದ್ದಾರೆ. ಆದರೆ ಯುದ್ಧ ಶಮನದ ಲಕ್ಷಣಗಳು ಕಾಣಿಸುತ್ತಿಲ್ಲ. ಇಸ್ರೇಲ್ ಮತ್ತು ಅಮೆರಿಕ ಇರಾನ್ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದ್ದು, ಇರಾನ್ ಪ್ರಾದೇಶಿಕವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದೆ.

➡ಪುಟ ೪

ಅಮೆರಿಕದ ಅತ್ಯಾಧುನಿಕ ಕಣ್ಗಾವಲು ವಿಮಾನ ಧ್ವಂಸ?

ಯುದ್ಧಭೂಮಿಯಲ್ಲಿ ಸೈನಿಕರ ಕಣ್ಣು, ಕಿವಿಯಂತೆ ಕೆಲಸ ಮಾಡುವ ಅಮೆರಿಕದ ಕಣ್ಗಾವಲು ವಿಮಾನ ಇ3-ಸೆಂಟ್ರಿ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿ ನಾಶಪಡಿಸಿದೆ. ಈ ದಾಳಿಯಲ್ಲಿ ಅಮೆರಿಕದ 10 ಯೋಧರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ಈ ಘಟನೆ ನಡೆದಿದೆ. ಅಮೆರಿಕದ ನಿಯತಕಾಲಿಕೆ ವಾಲ್ ಸ್ಟ್ರೀಟ್ ಜರ್ನಲ್ ಈ ಮಾಹಿತಿ ಬಹಿರಂಗಪಡಿಸಿದೆ.

ಹಿಂದಿ ಕೈಬಿಟ್ಟದ್ದು ಸರಿಯಲ್ಲ



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆ

• **ಬೆಂಗಳೂರು:** ಕೇವಲ ರಾಜಕೀಯ ವಿರೋಧಕ್ಕಾಗಿ, ಕೇಂದ್ರ ಸರ್ಕಾರದ ಮೇಲಿನ ದ್ವೇಷಕ್ಕಾಗಿ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿರುವ ರಾಜ್ಯ ಸರ್ಕಾರದ ತೀರ್ಮಾನ ವಿವೇಕರಹಿತ ಹಾಗೂ ಆಘಾತಕಾರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಹಿಂದಿ ಭಾಷೆ ಏಕಾಏಕಿ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ. ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಹಠಾತ್ ನಿಲುವು ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

➡ಪುಟ ೪

ರಾಜ್ಯದಲ್ಲಿ ಬೇಸಿಗೆ ಮಳೆ ಚೇತರಿಕೆ

• **ಬೆಂಗಳೂರು:** ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಬೇಸಿಗೆ ಮಳೆ ಚೇತರಿಕೆ ಕಂಡಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2-3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ.

• ವಿವರ ಪುಟ ೫

ಹಾರ್ಮುಜ್ ಜಲಸಂಧಿ ಸಮೀಪದ ಕರಾವಳಿ ಪ್ರದೇಶಗಳು, ಖಾರ್ಗ್ ದ್ವೀಪದ ಮೇಲೆ ದಾಳಿಗೆ ಅಮೆರಿಕ ಭಾರೀ ಸಿದ್ಧತೆ



ಇರಾನ್ ಮೇಲೆ ಭೂ ದಾಳಿಗೆ ಸನ್ನದ್ಧ

ದುಬೈ: ಪಶ್ಚಿಮ ಏಷ್ಯಾದ ಸಂಘರ್ಷವು ಐದನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಹಾರ್ಮುಜ್ ಜಲಸಂಧಿಯ ಸಮೀಪವಿರುವ ಕರಾವಳಿ ಪ್ರದೇಶಗಳು ಮತ್ತು ಖಾರ್ಗ್ ದ್ವೀಪದ ಮೇಲೆ ದಾಳಿ ಸೇರಿದಂತೆ ಇರಾನ್‌ನಲ್ಲಿ ವಾರಗಳ ಕಾಲ ಭೂಸೇನಾ ಕಾರ್ಯಾಚರಣೆ ನಡೆಸಲು ಪೆಂಟಗನ್ ಸಿದ್ಧತೆ ನಡೆಸುತ್ತಿದೆ.

ವಾಣಿಜ್ಯ ಮತ್ತು ಮಿಲಿಟರಿ ಹಡಗುಗಳನ್ನು ಗುರಿಯಾಗಿಸುವ ಶಸ್ತ್ರಾಸ್ತ್ರಗಳನ್ನು ನಾಶಪಡಿಸಲು, ಇರಾನ್‌ನ ಶೇ.90 ರಷ್ಟು ಕಚ್ಚಾ ತೈಲ ರಫ್ತು ಮಾಡುವ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಬಗ್ಗೆ ಟ್ರಂಪ್ ಆಡಳಿತ ಚರ್ಚಿಸುತ್ತಿದೆ. ವಿಶೇಷ ಕಾರ್ಯಾಚರಣೆ ಪಡೆಗಳು ಮತ್ತು ಕಾಲಾಳುಗಳನ್ನು ಒಳಗೊಂಡ ಈ ಯೋಜನೆ, ಮುಂದಿನ ಮಾತುಕತೆಗಳಲ್ಲಿ ಇರಾನ್ ಮೇಲೆ ಒತ್ತಡ ಹೇರಲು ನೆರವಾಗಲಿದೆ ಎನ್ನಲಾಗುತ್ತಿದೆ. ಮಿಲಿಟರಿ ಈ ಬಗ್ಗೆ ವಿಸ್ತೃತ ಯೋಜನೆಗಳನ್ನು ರೂಪಿಸಿದ್ದರೂ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಂತಿಮ ನಿರ್ಧಾರ ಇನ್ನೂ ಬಾಕಿ ಇದೆ.

ಕಾರ್ಯಾಚರಣೆಯ ಕಾಲಮಿತಿ: ಈ ಉದ್ದೇಶಗಳನ್ನು ಪೂರ್ಣಗೊಳಿಸಲು ಹಲವಾರು ವಾರಗಳಿಂದ ಎರಡು ತಿಂಗಳುಗಳ ಕಾಲಾವಕಾಶ ಬೇಕಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಖಾರ್ಗ್ ದ್ವೀಪದಂತಹ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಸುಲಭವಾದರೂ, ಅಲ್ಲಿ ನೆಲೆ ನಿಂತು ದ್ವೀಪವನ್ನು ಕಾಯುವ ಅಮೆರಿಕದ ಪಡೆಗಳನ್ನು ರಕ್ಷಿಸುವುದು ದೊಡ್ಡ ಸವಾಲು ಎಂದು ಮಾಜಿ ರಕ್ಷಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಿಲಿಟರಿ ಜಮಾವಣೆ: ಶನಿವಾರ ಯುಎಸ್ ಸೆಂಟ್ರಲ್ ಕಮಾಂಡ್ ಮಾಹಿತಿ ನೀಡಿದಂತೆ, 3,500 ಮೆರಿನ್ ಪಡೆಗಳು ಮತ್ತು ನಾವಿಕರು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯ ಮೂಲಕ ಪಶ್ಚಿಮ ಏಷ್ಯಾವನ್ನು ತಲುಪಿದ್ದಾರೆ. ಎಫ್–35 ಫೈಟರ್ ಜೆಟ್ ಮತ್ತು ಸಾರಿಗೆ ವಿಮಾನಗಳನ್ನು ಒಳಗೊಂಡಿರುವ ಈ ನಿಯೋಜನೆ, ಕಳೆದ ಎರಡು ದಶಕಗಳಲ್ಲಿ ಆ ಪ್ರದೇಶದಲ್ಲಿ ಅಮೆರಿಕ ಕೈಗೊಂಡಿರುವ ಅತಿದೊಡ್ಡ ಮಿಲಿಟರಿ ಜಮಾವಣೆ ಎನಿಸಿದೆ.

ರಾಜತಾಂತ್ರಿಕ ನಿಲುವು: ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಇರಾನ್ ಒಪ್ಪದಿದ್ದರೆ ಮಿಲಿಟರಿ ಕ್ರಮವನ್ನು ತೀವ್ರಗೊಳಿಸಲು ಅಧ್ಯಕ್ಷರು ಸಿದ್ಧರಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಹೇಳಿದ್ದಾರೆ. ಮತ್ತೊಂದೆಡೆ, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಭೂಸೇನೆಯನ್ನು ಬಳಸದೆಯೇ ಗುರಿಗಳನ್ನು ಸಾಧಿಸಬಹುದು ಎಂದು ಸೂಚಿಸಿದ್ದಾರೆ. ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯೊಂದಿಗೆ ಈ ಸಂಘರ್ಷ ಆರಂಭವಾಗಿತ್ತು. ಇತ್ತ ಅಮೆರಿಕ ಮಾತುಕತೆಯಲ್ಲಿ ಪ್ರಗತಿಯಾಗಿದೆ ಎಂದು ಹೇಳುತ್ತಿದ್ದರೂ, ಇರಾನ್ ಯಾವುದೇ ಅಧಿಕೃತ ಮಾತುಕತೆ ನಡೆಯುತ್ತಿಲ್ಲ ಎಂದು ವಾದಿಸುತ್ತಿದೆ.

ಸಾರ್ವಜನಿಕ ಪ್ರತಿಕ್ರಿಯೆ: ಅಮೆರಿಕದಲ್ಲಿ ಈ ಕುರಿತು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ನೋ ಕಿಂಗ್ಸ್ ಪ್ರತಿಭಟನಾಕಾರರು ಸಂಭಾವ್ಯ ಯುದ್ಧವನ್ನು ಖಂಡಿಸುತ್ತಿದ್ದರೆ, ಟ್ರಂಪ್ ಬೆಂಬಲಿಗರು ನಿರ್ಣಾಯಕ ಕ್ರಮವನ್ನು ಬೆಂಬಲಿಸುತ್ತಿದ್ದಾರೆ. ಇಸ್ರೇಲ್ ಈ ಕಾರ್ಯಾಚರಣೆಗೆ ಗುಪ್ತಚರ ಮತ್ತು ಲಾಜಿಸ್ಟಿಕ್ ಬೆಂಬಲ ನೀಡಲಿದೆ, ಪ್ರಾದೇಶಿಕ ಭದ್ರತೆಗೆ ಖಾರ್ಗ್ ದ್ವೀಪದ ತಟಸ್ಥೀಕರಣ ಅತ್ಯಗತ್ಯ ಎಂದು ಅದು ಪರಿಗಣಿಸಿದೆ.



ಇರಾನ್ ಇಂಟರ್‌ನೆಟ್ ಬ್ಲ್ಯಾಕ್‌ಔಟ್‌ಗೆ 30 ದಿನ

ಇರಾನ್‌ನಲ್ಲಿನ ಇಂಟರ್‌ನೆಟ್ ಬ್ಲ್ಯಾಕ್‌ಔಟ್ 30 ದಿನಗಳನ್ನು ದಾಟಿದ್ದು, ಸುಮಾರು 696 ಗಂಟೆಗಳಿಂದ ಇರಾನ್ ನಾಗರಿಕರು ಇಂಟರ್‌ನೆಟ್ ಸಂಪರ್ಕ ವಂಚಿತರಾಗಿದ್ದಾರೆ ಎಂದು ಇಂಟರ್‌ನೆಟ್ ನಿರೀಕ್ಷಕ ನೆಟ್‌ಬ್ಲಾಕ್ಸ್ ಹೇಳಿದೆ. ಬ್ಲ್ಯಾಕ್‌ಔಟ್ ಒಂದು ತಿಂಗಳು ದಾಟಿದ್ದು, ಇನ್ನೂ ಜಾರಿಯಲ್ಲಿದೆ. ಇದು ಇರಾನಿಯನ್ನರ ಸಂವಹನ ಮತ್ತು ಮಾಹಿತಿ ಹಕ್ಕುಗಳ ಉಲ್ಲಂಘನೆ ಎಂದು ನೆಟ್‌ಬ್ಲಾಕ್ಸ್ ಎಕ್ಸ್‌ನಲ್ಲಿ ಅಭಿಪ್ರಾಯಿಸಿದೆ. ಫೆ.28ರಂದು ಯುದ್ಧ ಆರಂಭವಾದಲ್ಲಿಂದ ದೇಶಾದ್ಯಂತ ಇಂಟರ್‌ನೆಟ್ ಬ್ಲಾಕ್ ಮಾಡಲು ಇರಾನ್ ನಿರ್ಧರಿಸಿತ್ತು.

ದುಬೈ, ಕುವೈತ್ ಮೇಲೆ ಇರಾನ್ ದಾಳಿ

ದುಬೈ: ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ), ದುಬೈ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ. ಆದರೆ ಅಮೆರಿಕದ ಸೆಂಟ್ರಲ್ ಕಮಾಂಡ್ ಈ ವರದಿಗಳನ್ನು ನಿರಾಕರಿಸಿದೆ. ಶುವೈಖ್ ಬಂದರು ಮತ್ತು ದುಬೈ ಕರಾವಳಿಯಲ್ಲಿ ಬ್ಯಾಲಿಸ್ಟಿಕ್ ಮತ್ತು ಕ್ರೂಸ್ ಕ್ಷಿಪಣಿಗಳನ್ನು ಬಳಸಿ ಅಮೆರಿಕದ ಸಿಬ್ಬಂದಿ ಮತ್ತು ನೌಕಾ ಹಡಗುಗಳನ್ನು ಗುರಿಯಾಗಿಸಿಕೊಂಡಿರುವುದಾಗಿ ಐಆರ್‌ಜಿಸಿ ತಿಳಿಸಿದೆ. ಜೊತೆಗೆ, ಕುವೈತ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ ನಡೆದಿದ್ದು, ರೇಡಾರ್ ವ್ಯವಸ್ಥೆಗಳಿಗೆ ಹಾನಿಯಾಗಿದೆ, ಎಂದಿದೆ. ಅಮೆರಿಕದ ಅಧಿಕಾರಿಗಳು ಈ ಪ್ರತಿಪಾದನೆಗಳನ್ನು ಸುಳ್ಳು ಎಂದಿದ್ದು, ದುಬೈನಲ್ಲಿ ಯಾವುದೇ ಸಿಬ್ಬಂದಿಯ ಮೇಲೆ ದಾಳಿ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಅಥವಾ ಇಸ್ರೇಲ್‌ಗೆ ತಮ್ಮ ಭೂಪ್ರದೇಶವನ್ನು ಬಳಸಲು ಅವಕಾಶ ನೀಡದಂತೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಗಲ್ಫ್ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದಾರೆ. ಈ ನಡುವೆ, ಹೌತಿ ಬಂಡುಕೋರರು ದಕ್ಷಿಣ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದ್ದು, ಸಂಘರ್ಷ ಒಂದು ತಿಂಗಳು ಪೂರೈಸಿದೆ.

28,455 ಕೋಟಿ ರೂ. ಅಮೆರಿಕ ರಕ್ಷಣಾ ನಷ್ಟ

ಇರಾನ್ ಯುದ್ಧದ ಮೊದಲ ಮೂರು ವಾರಗಳಲ್ಲಿ ಅಮೆರಿಕದ ಸೈನಿಕ ಸಂಪತ್ತಿಗೆ ಭಾರೀ ಹಾನಿಯಾಗಿದೆ. ಸುಮಾರು 28,455 ಕೋಟಿ ರೂ.(3 ಬಿಲಿಯನ್ ಡಾಲರ್) ನಷ್ಟವಾಗಿದೆ. ವರದಿಗಳ ಪ್ರಕಾರ, ಈ ನಷ್ಟ ಮತ್ತು ದುರಸ್ತಿ ವೆಚ್ಚವು ಸುಮಾರು 1.4 ಬಿಲಿಯನ್‌ರಿಂದ 2.9 ಬಿಲಿಯನ್ ಡಾಲರ್ ನಡುವೆಯಾಗಿದೆ. ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳು ಮಧ್ಯಪ್ರಾಚ್ಯದ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳ ಸೌಲಭ್ಯಗಳನ್ನು ಗುರಿಯಾಗಿಸಿವೆ. ಈ ನಷ್ಟಗಳನ್ನು ಪರಿಗಣಿಸಿ ಪೆಂಟಗನ್ ಸುಮಾರು 200 ಬಿಲಿಯನ್ ಡಾಲರ್ ಹೆಚ್ಚುವರಿ ವೆಚ್ಚ ಪ್ರಸ್ತಾವನೆಯನ್ನು ವೈಟ್ ಹೌಸ್‌ಗೆ ಸಲ್ಲಿಸುವ ನಿರೀಕ್ಷೆಯಿದೆ.

ಯುದ್ಧ ವಿಮಾನಗಳ ನಷ್ಟ: ಉನ್ನತ ಮೌಲ್ಯದ ಯುದ್ಧ ವಿಮಾನಗಳು ದೊಡ್ಡ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಮಾ.1ರಂದು ಮೂರು ಎಫ್–15ಇ ಸ್ಟ್ರೈಕ್ ಈಗಲ್ ವಿಮಾನಗಳನ್ನು ತಪ್ಪಾಗಿ ಕುವೈತ್‌ನ ಎಫ್/ಎ–18 ಮೂಲಕ ಹೊಡೆದುರುಳಿಸಲಾಗಿದೆ. ಪ್ರತಿಯೊಂದು ವಿಮಾನದ ಬೆಲೆ ಸುಮಾರು 100 ಮಿಲಿಯನ್ ಡಾಲರ್. ಮಾ. 19ರಂದು ಒಂದು ಎಫ್–35ಎ ಲೈಟ್ನಿಂಗ್ ತುರ್ತು ಲ್ಯಾಂಡಿಂಗ್ ಮಾಡಬೇಕಾಯಿತು, ಇದನ್ನು ಇರಾನ್ ಗುರಿಯಾಗಿಸಿದೆ ಎಂದು ಹೇಳಿದೆ. ಈ ವಿಮಾನದ ಬೆಲೆ ಸುಮಾರು 82.5 ಮಿಲಿಯನ್ ಡಾಲರ್.



ಟ್ಯಾಂಕರ್ ಮತ್ತು ಸಿಬ್ಬಂದಿ ನಷ್ಟ: ಎ ಕೆಸಿ–135 ಸ್ಟ್ರಾಟೋಟ್ಯಾಂಕರ್ ವಿಮಾನವು ಇರಾಕ್‌ನಲ್ಲಿ ಪತನಗೊಂಡಿದ್ದು, ಆರು ಸಿಬ್ಬಂದಿ ಮೃತಪಟ್ಟಿದ್ದಾರೆ. ಸೌದಿ ಅರೇಬಿಯಾದಲ್ಲಿ ಐದು ಕೆಸಿ–135 ವಿಮಾನಗಳು ಕ್ಷಿಪಣಿ ದಾಳಿಯಿಂದ ಹಾನಿಗೊಳಗಾಗಿವೆ. ಈ ವಿಮಾನಗಳ ಉತ್ಪಾದನೆ ನಿಂತಿರುವುದರಿಂದ, ಕೆಸಿ–46 ಪೆಗಾಸಸ್ ವಿಮಾನಗಳಿಂದ ಅವುಗಳನ್ನು ಬದಲಿಸುವ ಸಾಧ್ಯತೆ ಇದೆ.

ಡ್ರೋನ್ ನಷ್ಟಗಳು: ಎಂಕ್ಯು–9 ರೀಪರ್ ಡ್ರೋನ್‌ಗಳಲ್ಲಿ ಡಜನ್‌ಗಿಂತ ಹೆಚ್ಚು ನಷ್ಟವಾಗಿದೆ. ಕನಿಷ್ಠ ಎಂಟು ಡ್ರೋನ್‌ಗಳನ್ನು ಕ್ಷಿಪಣಿಗಳು ಹೊಡೆದುರುಳಿಸಿದರೆ, ಕೆಲವು ನೆಲದಲ್ಲೇ ನಾಶವಾಗಿವೆ. ಪ್ರತಿಯೊಂದು ಡ್ರೋನ್ ಬೆಲೆ 16 ಮಿಲಿಯನ್‌ರಿಂದ 30 ಮಿಲಿಯನ್ ಡಾಲರ್‌ವರೆಗೆ ಇದೆ. ಜೋರ್ಡನ್‌ನ ಎಎನ್/ಟಿಪಿವೈ–2 ರಡಾರ್ ಮತ್ತು ಖತಾರ್‌ನ ಎಎನ್/ಎಫ್‌ಪಿಎಸ್–132 ರಡಾರ್ ಹಾನಿಗೊಳಗಾಗಿವೆ. ಈ ವ್ಯವಸ್ಥೆಗಳು ನೂರಾರು ಮಿಲಿಯನ್ ಡಾಲರ್ ಮೌಲ್ಯದವು. ಇವುಗಳ ಜತೆಗೆ ಇತರ ಗಲ್ಫ್ ರಾಷ್ಟ್ರಗಳಲ್ಲಿಯೂ ರಕ್ಷಣಾ ವ್ಯವಸ್ಥೆಗಳು ಹಾನಿಗೊಂಡಿವೆ.

ನೌಕಾಪಡೆ ಸಮಸ್ಯೆಗಳು: ಯುಎಸ್‌ಎಸ್ ಜೆರಾಲ್ಡ್ ಆರ್ ಫೋರ್ಡ್ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡು ಹಲವು ಭಾಗಗಳಿಗೆ ಹಾನಿಯಾಗಿದೆ. ಇದ ದುರಸ್ತಿ ಗ್ರೀಸ್‌ನಲ್ಲಿ ನಡೆಯುತ್ತಿದೆ. ಈ ಆರಂಭಿಕ ನಷ್ಟವೇ ಯುದ್ಧದ ಗಂಭೀರತೆಯನ್ನು ತೋರಿಸುತ್ತದೆ. ಭವಿಷ್ಯದಲ್ಲಿ ವೆಚ್ಚ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ.

ಹಾರ್ಮುಜ್ ದಾಟಿದ ಭಾರತದ 2 ನೌಕೆಗಳು

ಭಾರತದ ರಾಷ್ಟ್ರಧ್ವಜವಿರುವ ಎರಡು ಅಡುಗೆ ಅನಿಲ(ಎಲ್‌ಪಿಜಿ) ಕ್ಯಾರಿಯರ್ ಹಡಗುಗಳು ಯುದ್ಧ ಬಾಧಿತ ಹಾರ್ಮುಜ್ ಜಲಸಂಧಿಯನ್ನು ದಾಟಿದ್ದು, ಎರಡು ದಿನಗಳೊಳಗೆ ಭಾರತವನ್ನು ತಲುಪುವ ನಿರೀಕ್ಷೆಯಿದೆ. ಎರಡೂ ಹಡಗುಗಳಲ್ಲಿ ಒಟ್ಟು 94,000 ಟನ್‌ಗಳಷ್ಟು ಎಲ್‌ಪಿಜಿ ಕಾರ್ಗೊ ಇದೆ. ಬಿಡಬ್ಲ್ಯೂ ಟಿವೈಆರ್ ಮತ್ತು ಇಎಲ್‌ಎಂ ಹೆಸರಿನ ಎಲ್‌ಪಿಜಿ ಕ್ಯಾರಿಯರ್‌ಗಳು ಭಾರತದತ್ತ ಬರುತ್ತಿವೆಯೆಂಬ ಮಾಹಿತಿ ಲಭಿಸಿದೆ. ಇವುಗಳಲ್ಲಿ ಟಿವೈಆರ್ ಹಡಗು ಮಾ.31ರಂದು ಮುಂಬೈ ಕರಾವಳಿ ತಲುಪಲಿದ್ದು, ಇಎಲ್‌ಎಂ ಹಡಗು ಏ.1ರಂದು ನವ ಮಂಗಳೂರು ಬಂದರಿಗೆ ಪ್ರವೇಶಿಸುವ ನಿರೀಕ್ಷೆಯಿದೆ. ಜಗತ್ತಿನ ಯಾವುದೇ ರಾಷ್ಟ್ರಗಳಿಗೆ ಅನುಮತಿ ನೀಡಿರದ ಇರಾನ್, ಮೊದಲು ಭಾರತೀಯ ಹಡಗುಗಳಿಗೆ ಮಾತ್ರ ತೈಲ ಮತ್ತು ಅನಿಲ ಸಾಗಣೆಗೆ ಅವಕಾಶ ನೀಡಿತ್ತು. ಇದೀಗ ಭಾರತ ಸಹಿತ ಐದು ಮಿತ್ರ ರಾಷ್ಟ್ರಗಳಿಗೆ ಇರಾನ್ ಅನುಮತಿ ನೀಡಿದೆ. ಈಗಾಗಲೇ 6 ಭಾರತೀಯ ಹಡಗುಗಳು ಭಾರತಕ್ಕೆ ತಲುಪಿವೆ. ಅವುಗಳಲ್ಲಿ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ 92,612 ಟನ್, ಎಂಟಿ ಶಿವಾಲಿಕ್ ಮತ್ತು ನಂದಾದೇವಿ 92,712 ಟನ್ ಎಲ್‌ಪಿಜಿ ಹೊತ್ತು ತಂದಿದ್ದವು. ಈ 6 ಅನಿಲ ಟ್ಯಾಂಕರ್‌ಗಳಲ್ಲದೆ, ಯುಎಇನಿಂದ 80,886 ಟನ್ ಕಚ್ಚಾ ತೈಲ ಹೊತ್ತ ಜಗ್ ಲಾಡ್ಕಿ ಹಡಗು ಮಾ.18ರಂದು ಮೊದಲಿಗೆ ಭಾರತ ತಲುಪಿತ್ತು.

ವಿದೇಶಾಂಗ ಸಚಿವರ ಸಮಾಗಮ

ಇಸ್ಲಾಮಾಬಾದ್: ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಶಮನಗೊಳಿಸುವ ಉದ್ದೇಶದಿಂದ ಪಾಕಿಸ್ತಾನ ಆಯೋಜಿಸಿರುವ ಎರಡು ದಿನಗಳ ಚತುರ್ಭುಜ ಶೃಂಗಸಭೆಯಲ್ಲಿ ಭಾಗವಹಿಸಲು ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಆಗಮಿಸಿದ್ದಾರೆ. ಉಪ ಪ್ರಧಾನ ಮಂತ್ರಿ ಇಶಾಕ್ ದಾರ್ ಆಹ್ವಾನದ ಮೇರೆಗೆ ಪ್ರಿನ್ಸ್ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಬದ್ರ್ ಅಬ್ದೆಲಾಟ್ಟಿ ಮತ್ತು ಹಕನ್ ಫಿಡಾನ್ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಈ ನಾಯಕರು ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯ ವೇಳೆ, ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು 20 ಪಾಕಿಸ್ತಾನಿ ಧ್ವಜದ ಹಡಗುಗಳಿಗೆ ಇರಾನ್ ಅನುಮತಿ ನೀಡಲಿದೆ ಎಂದು ದಾರ್ ಘೋಷಿಸಿದರು. ಪ್ರತಿದಿನ ಎರಡು ಹಡಗುಗಳು ಜಲಸಂಧಿಯನ್ನು ದಾಟಲಿವೆ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಅಂತ್ಯಗೊಳಿಸಲು ಪಾಕಿಸ್ತಾನ ಸಂಬಂಧಿತ ದೇಶಗಳೊಂದಿಗೆ ಮಾತುಕತೆ ಮುಂದುವರಿಸಿದೆ.

ಅಮೆರಿಕ, ಯುರೋಪಿನಾದ್ಯಂತ ನೋ ಕಿಂಗ್ಸ್ ಬೃಹತ್ ಪ್ರತಿಭಟನೆ



ಸೇಂಟ್ ಪಾಲ್: ಇರಾನ್ ಮೇಲಿನ ಯುದ್ಧ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಗಳನ್ನು ವಿರೋಧಿಸಿ ಅಮೆರಿಕ ಮತ್ತು ಯುರೋಪಿನಾದ್ಯಂತ ನಡೆದ ನೋ ಕಿಂಗ್ಸ್ ರ್‍ಯಾಲಿಯಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು.

ಆಯೋಜಕರು ಅಮೆರಿಕದ ಎಲ್ಲಾ 50 ರಾಜ್ಯಗಳಲ್ಲಿ 3,100ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿದ್ದು, ಮಿನ್ನೇಸೋಟ ಈ ಪ್ರತಿಭಟನೆಯ ಕೇಂದ್ರವಾಗಿತ್ತು. ಈ ವಾರ 90 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನ್ಯೂಯಾರ್ಕ್ ಮತ್ತು ಸ್ಯಾನ್ ಡಿಯಾಗೋದಂತಹ ಪ್ರಮುಖ ನಗರಗಳಲ್ಲದೆ, ಇಡಾಹೊ ಮತ್ತು ವ್ಯೋಮಿಂಗ್‌ನಂತಹ ರಾಜ್ಯಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಪ್ರಮುಖ ಆರೋಪಗಳು: ವಲಸೆ ಜಾರಿ ಕ್ರಮಗಳು, ಲೈಂಗಿಕ ಅಲ್ಪಸಂಖ್ಯಾತರ(ಟ್ರಾನ್ಸ್ ಜೆಂಡರ್) ಹಕ್ಕುಗಳ ಹಿಂತೆಗೆತ ಮತ್ತು ಇರಾನ್ ಮೇಲಿನ ಯುದ್ಧದ ವಿರುದ್ಧ ಪ್ರತಿಭಟನಾಕಾರರು ಸಿಡಿದೆದ್ದಿದ್ದಾರೆ. ಸೇಂಟ್ ಪಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟೀನ್, ಫೆಡರಲ್ ಏಜೆಂಟ್‌ಗಳ ಗುಂಡಿಗೆ ಬಲಿಯಾದ ರೆನೀ ಗುಡ್ ಮತ್ತು ಅಲೆಕ್ಸ್ ಪ್ರೆಟ್ಟಿ ಅವರಿಗೆ ಗೌರವ ಸಲ್ಲಿಸಿದರು. ಲಂಡನ್, ಪ್ಯಾರಿಸ್ ಮತ್ತು ರೋಮ್‌ಗಳಲ್ಲೂ ಯುದ್ಧ ವಿರೋಧಿ ರ್‍ಯಾಲಿಗಳು ನಡೆದಿವೆ.

ಕಿರುಸುದ್ದಿ

ಡಿಎಂಕೆ ಪ್ರಾಬಲ್ಯದ ಎರಡು ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ

ಚೆನ್ನೈ: ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆಗಾಗಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ತನ್ನ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದು, ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ದಳಪತಿ ವಿಜಯ್ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವುದಾಗಿ ಭಾನುವಾರ ಘೋಷಿಸಿದೆ. ಡಿಎಂಕೆ ಅಧಿಕಾರದಲ್ಲಿರುವ ಪೆರಂಬೂರ್ ಮತ್ತು ತಿರುಚ್ಚಿ(ಪೂರ್ವ) ವಿಧಾನಸಭಾ ಕ್ಷೇತ್ರಗಳಿಂದ ನಟ ವಿಜಯ್ ಸ್ಪರ್ಧಿಸಲಿದ್ದಾರೆ. ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿದಿರುವ ವಿಜಯ್, ತಮ್ಮ ಪಕ್ಷಕ್ಕೊಂದು ಅವಕಾಶ ನೀಡಬೇಕೆಂದು ಜನತೆಗೆ ಮನವಿ ಮಾಡಿದ್ದಾರೆ.

ರೇಮಂಡ್ ಗ್ರೂಪ್ ಮಾಜಿ ಅಧ್ಯಕ್ಷ ವಿಜಯಪತ್ ನಿಧನ

ಮುಂಬೈ: ರೇಮಂಡ್ ಗ್ರೂಪ್‌ನ ಮಾಜಿ ಅಧ್ಯಕ್ಷರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ವಿಜಯಪತ್ ಸಿಂಘಾನಿಯಾ(87) ಅವರು ನಿಧನ ಹೊಂದಿದ್ದಾರೆ. ಮಗ, ಸಮೂಹದ ಹಾಲಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ನಿಧನ ವಾರ್ತೆಯನ್ನು ತಿಳಿಸಿದ್ದಾರೆ.

ದಶಕದ ನಂತರ ಕಛ್‌ನಲ್ಲಿ ಜನ್ಮ ತಾಳಿದ ಹೆಬ್ಬಕ ಮರಿ



ಗಾಂಧಿನಗರ: ಗುಜರಾತ್ ಮತ್ತು ರಾಜಸ್ಥಾನದ ಅರಣ್ಯ ಇಲಾಖೆಗಳ ಯಶಸ್ವಿ ಸಂರಕ್ಷಣಾ ಯೋಜನೆಯ ಫಲವಾಗಿ ಒಂದು ದಶಕದ ನಂತರ ಕಛ್‌ನ ಅಬ್ಡಾಸ ಪ್ರದೇಶದಲ್ಲಿ ಬಿಳಿ ಹೆಬ್ಬಕದ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಮರಿ ಜನ್ಮ ತಾಳಿದೆ. ರಾಜಸ್ಥಾನದ ಸಂತಾನೋತ್ಪತ್ತಿ ಕೇಂದ್ರದಿಂದ ತಂದ ಫಲವತ್ತಾದ ಮೊಟ್ಟೆಯಿಂದ ಮೂಲಕ ಮಾರ್ಚ್ 26ರಂದು ಮರಿ ಜನಿಸಿದೆ ಎಂದು ಅರಣ್ಯ ಸಚಿವ ಅರ್ಜುನ್ ಮೊಢ್ವಾಡಿಯಾ ಖಚಿತಪಡಿಸಿದ್ದಾರೆ. ಮಾರ್ಚ್ 22ರಂದು ಜಂಪ್ ಸ್ಟಾರ್ಟ್ ಅಪ್ರೋಚ್ ಅನ್ವಯ ಅಧಿಕಾರಿಗಳು ಹೆಣ್ಣು ಹಕ್ಕಿಯ ಗೂಡಿನಲ್ಲಿದ್ದ ಬಂಜೆ ಮೊಟ್ಟೆ ತೆಗೆದು, ಅದರ ಬದಲಿಗೆ ಈ ಫಲವತ್ತಾದ ಮೊಟ್ಟೆಯನ್ನು ಇರಿಸಿದ್ದರು.

ಯೋಜನೆಯ ಹಿನ್ನೆಲೆ ಏನು? ಬಿಳಿ ಹೆಬ್ಬಕಗಳ ನೈಸರ್ಗಿಕ ವಾಸಸ್ಥಾನವನ್ನು ಸಂರಕ್ಷಿಸುವ ಉದ್ದೇಶದಿಂದ 2016ರಲ್ಲಿ ಪ್ರಾಜೆಕ್ಟ್ ಜಿಐಬಿ ಅನ್ನು ಪ್ರಾರಂಭಿಸಲಾಗಿತ್ತು. ಪ್ರಸ್ತುತ ಆರೋಗ್ಯ ರಕ್ಷಣಾ ತಂಡಗಳು ಹೆಣ್ಣು ಹಕ್ಕಿ ಮತ್ತು ಆರೋಗ್ಯಕರ ಮರಿಯ ಸುರಕ್ಷತೆ ಹಾಗೂ ಬೆಳವಣಿಗೆಯನ್ನು ನಿರಂತರವಾಗಿ ಗಮನಿಸುತ್ತಿವೆ.

ತ.ನಾಡು ಮಹಿಳೆಯರಿಗೆ 8,000 ರೂ.ಗಳ ಕೂಪನ್

ಚೆನ್ನೈ: ವಿಧಾನಸಭೆ ಚುನಾವಣೆಗೆ ಡಿಎಂಕೆ ತಮ್ಮ ಪಕ್ಷದ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದ್ದು, ಮಹಿಳೆಯರಿಗೆ ಮನೆ ಉಪಕರಣಗಳನ್ನು ಖರೀದಿಸಲು ಅಥವಾ ಬದಲಾಯಿಸಲು ಇಲ್ಲತರಾಸಿ ರೂಪದಲ್ಲಿ 8,000 ರೂ. ಮೌಲ್ಯದ ಕೂಪನ್ ನೀಡಲಾಗುತ್ತದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ. ಈ ಕೂಪನ್ ಟಿವಿ, ಫ್ರಿಜ್, ವಾಷಿಂಗ್ ಮಶಿನ್, ಮೈಕ್ರೋವೇವ್ ಓವೆನ್, ಮಿಕ್ಸಿ, ಇಂಡಕ್ಷನ್ ಸ್ಟವ್ ಮುಂತಾದ ಉಪಕರಣಗಳಿಗೆ ಬಳಸಬಹುದು. ಹಿರಿಯ ನಾಗರಿಕರು ಮತ್ತು 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಪಿಂಚಣಿ 2,000 ರೂ.ಗೆ ಹೆಚ್ಚಳ, ಸಿಎಂ ಆರೋಗ್ಯ ರಕ್ಷಣೆ ಯೋಜನೆಯ ವ್ಯಾಪ್ತಿ 10 ಲಕ್ಷ ರೂ.ವರೆಗೆ ಹೆಚ್ಚಳ, 20 ಲಕ್ಷ ಕೃಷಿಕರಿಗೆ ಉಚಿತ ವಿದ್ಯುತ್ ಉಪಕರಣಗಳೊಂದಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ ನೀಡಲಾಗುವುದು. 10 ಲಕ್ಷ ನೂತನ ಕಾಂಕ್ರೀಟ್ ಮನೆ ನಿರ್ಮಾಣ, 5 ಲಕ್ಷ ಯುವಕರಿಗೆ 1,500 ರೂ. ಮಾಸಿಕ ಸಹಾಯ, 50 ಲಕ್ಷ ಉದ್ಯೋಗ ಸೃಷ್ಟಿ ಮತ್ತು 35 ಲಕ್ಷ ಉಚಿತ ಲ್ಯಾಪ್‌ಟಾಪ್ ಹಂಚಿಕೆ ಮತ್ತು ಕೊಯಂಬತ್ತೂರು, ಸಲೇಮ್, ಮಧುರೈ, ತಿರುಚಿರಾಪಳ್ಳಿ ಬಳಿ ಭವಿಷ್ಯದ ಅತ್ಯಾಧುನಿಕ ವಿಶ್ವನಗರಗಳ ನಿರ್ಮಾಣ ಮಾಡುತ್ತೇವೆ.

ಹೆಲ್ತ್ ಸೆಕ್ಟರ್‌ನಲ್ಲಿ ಡಯಾಲಿಸಿಸ್ ಘಟಕಗಳನ್ನು ದುಪ್ಪಟ್ಟು ಮಾಡಲಾಗುತ್ತದೆ ಮತ್ತು 11 ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗುತ್ತದೆ. ಮೀನುಗಾರರಿಗೆ ಮತ್ತು ಹಾಲು ಉತ್ಪಾದಕರಿಗೆ ಸಹಾಯದ ಪ್ರಮಾಣ ಹೆಚ್ಚಿಸಲಾಗುತ್ತದೆ ಎಂದು ಡಿಎಂಕೆ ಭರವಸೆ ನೀಡಿದೆ.

ಇಂಧನ, ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗದಂತೆ ಕ್ರಮ

ಹೊಸದಿಲ್ಲಿ: ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಂಧನ ಮತ್ತು ಅನಿಲ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಜಾರಿಗೊಳಿಸಿದ್ದು, ಆತಂಕದಿಂದ ಇಂಧನ ಖರೀದಿ ಮಾಡದಂತೆ ನಾಗರಿಕರಿಗೆ ಸೂಚಿಸಿದೆ.ಸಂಸ್ಕರಣಾಗಾರಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೇಶಾದ್ಯಂತ ಕಚ್ಚಾ ತೈಲ, ಪೆಟ್ರೋಲ್ ಮತ್ತು ಡೀಸೆಲ್‌ನ ಸಾಕಷ್ಟು ದಾಸ್ತಾನು ಇವೆ. ವದಂತಿಗಳಿಂದಾಗಿ ಕೆಲವು ರಾಜ್ಯಗಳಲ್ಲಿ ತಾತ್ಕಾಲಿಕವಾಗಿ ಬೇಡಿಕೆ ಹೆಚ್ಚಾಗಿದ್ದರೂ, ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಪೂರೈಕೆಗೆ ಅಗತ್ಯವಿರುವಷ್ಟು ದಾಸ್ತಾನು ಲಭ್ಯವಿದೆ. ಪೈಪ್ಡ್ ನೈಸರ್ಗಿಕ ಅನಿಲ(ಪಿಎನ್‌ಜಿ) ಮತ್ತು ಸಿಎನ್‌ಜಿ (ಸಿಎನ್‌ಜಿ) ಪೂರೈಕೆಗೆ ಶೇ.100ರಷ್ಟು ಆದ್ಯತೆ ನೀಡಲಾಗಿದೆ. ಕೈಗಾರಿಕಾ ಬಳಕೆದಾರರು ಸರಾಸರಿ ಬಳಕೆಯ ಶೇ.80ರಷ್ಟು ಪೂರೈಕೆಯನ್ನು ಪಡೆಯುತ್ತಿದ್ದರೆ, ರಸಗೊಬ್ಬರ ಘಟಕಗಳು ಶೇ.70ರಿಂದ 75ರಷ್ಟು ಪೂರೈಕೆಯನ್ನು ಪಡೆಯುತ್ತಿವೆ. ಮಾರ್ಚ್‌ನಲ್ಲಿ 2,90,000ಕ್ಕೂ ಹೆಚ್ಚು ಹೊಸ ಪೈಪ್ಡ್ ಗ್ಯಾಸ್ ಸಂಪರ್ಕಗಳನ್ನು ಒದಗಿಸಲಾಗಿದೆ. ದೈನಂದಿನ ಎಲ್‌ಪಿಜಿ ವಿತರಣೆ 55 ಲಕ್ಷ ಸಿಲಿಂಡರ್‌ಗಳನ್ನು ಮೀರಿದೆ. ವಾಣಿಜ್ಯ ಬಳಕೆಯ ಪೂರೈಕೆ ಬಿಕ್ಕಟ್ಟಿನ ಪೂರ್ವದ ಮಟ್ಟದ ಶೇ.70ರಷ್ಟನ್ನು ತಲುಪಿದೆ. ಅಕ್ರಮ ದಾಸ್ತಾನು ತಡೆಗಟ್ಟಲು ಅಧಿಕಾರಿಗಳು 2,900 ದಾಳಿಗಳನ್ನು ನಡೆಸಿ 1,000 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಇದೇ ವೇಳೆ ರಾಜ್ಯಗಳಿಗೆ ಸೀಮೆಎಣ್ಣೆ ಹಂಚಿಕೆಯನ್ನು ಹೆಚ್ಚಿಸಲಾಗಿದೆ. ದೇಶೀಯ ಲಭ್ಯತೆಯನ್ನು ಹೆಚ್ಚಿಸಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10 ರೂ. ಕಡಿತಗೊಳಿಸಲಾಗಿದೆ.

ಮಿಗ್29 ಫೈಟರ್ ಜೆಟ್‌ಗೆ ಶೀಘ್ರವೇ ಆಧುನಿಕ ಕ್ಷಿಪಣಿ

ಹೊಸದಿಲ್ಲಿ: ಭಾರತೀಯ ವಾಯುಪಡೆಯ(ಐಎಎಫ್) ಮಿಗ್–29 ಯುದ್ಧ ವಿಮಾನಗಳಲ್ಲಿನ ರಷ್ಯಾ ಶಸ್ತ್ರಾಸ್ತ್ರಗಳ ಬದಲಿಗೆ ಯುರೋಪಿನ ಅತ್ಯಾಧುನಿಕ ಕಡಿಮೆ ದೂರವ್ಯಾಪ್ತಿಯ ಏರ್–ಟು–ಏರ್ ಕ್ಷಿಪಣಿಗಳನ್ನು ಅಳವಡಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಇದರಿಂದ ಐಎಎಫ್‌ನ ಯುದ್ಧ ಸಾಮರ್ಥ್ಯವು ಇನ್ನಷ್ಟು ಹೆಚ್ಚಾಗಲಿದೆ. ರಷ್ಯಾ ಮೂಲದ ಯುದ್ಧ ವಿಮಾನಗಳಲ್ಲಿ ಸುಮಾರು 25 ಕಿ.ಮೀ. ದೂರವ್ಯಾಪ್ತಿ ಇರುವ ಅತ್ಯಾಧುನಿಕ ಯುದ್ಧ ಕ್ಷಿಪಣಿಗಳನ್ನು ನಿಯೋಜಿಸಲು ರಕ್ಷಣಾ ಸಚಿವಾಲಯವು ಟೆಂಡರ್ ಆಹ್ವಾನಿಸಿತ್ತು. ಪ್ರಸ್ತುತ ಈ ರೀತಿಯ 50ಕ್ಕೂ ಹೆಚ್ಚು ಯುದ್ಧವಿಮಾನಗಳನ್ನು ವಾಯುಪಡೆಯು ಹೊಂದಿದ್ದು, ಅದರಲ್ಲಿ ಎರಡು ಆಸನಗಳ 8 ತರಬೇತಿ ಯುದ್ಧ ವಿಮಾನಗಳೂ ಸೇರಿವೆ. ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳಲ್ಲಿ ಎಎಸ್‌ಆರ್‌ಎಎಂ ಕ್ಷಿಪಣಿಗಳ ಅಳವಡಿಕೆಯಿಂದ 1980ರ ದಶಕದ ಇನ್‌ಫ್ರಾರೆಡ್ ಮಾರ್ಗದರ್ಶಿತ ಆರ್–73 ಕ್ಷಿಪಣಿಯನ್ನು (10ರಿಂದ 15 ಕಿ.ಮೀ. ವ್ಯಾಪ್ತಿ) ಹಿಂಪಡೆಯಲಾಗುತ್ತದೆ.

ಸಂಘರ್ಷಗಳಿಂದ ಜಾಗತಿಕ ಇಂಧನ ಪೂರೈಕೆಗೆ ಸಂಕಷ್ಟ: ಮನ್ ಕಿ ಬಾತ್‌ನಲ್ಲಿ ಮೋದಿ

ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಿ

ಹೊಸದಿಲ್ಲಿ: ಜಾಗತಿಕ ಇಂಧನ ಪರಿಸ್ಥಿತಿ ಕುರಿತು ಎಚ್ಚರಿಕೆ ನೀಡಿರುವ ಪ್ರಧಾನಿ ನರೇಂದ್ರ ಮೋದಿಯವರು, ವಿಶ್ವದ ಹಲವು ಭಾಗಗಳಲ್ಲಿ ನಡೆಯುತ್ತಿರುವ ಯುದ್ಧಗಳು ಮತ್ತು ಸಂಘರ್ಷಗಳು ಪೆಟ್ರೋಲ್ ಹಾಗೂ ಡೀಸೆಲ್ ಸರಬರಾಜಿನ ಮೇಲೆ ಪರಿಣಾಮ ಬೀರುತ್ತಿದ್ದು, ಜಾಗತಿಕ ಮಟ್ಟದಲ್ಲಿ ಇಂಧನ ಸಂಕಷ್ಟ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ತಮ್ಮ 132ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಇಂತಹ ಸವಾಲುಗಳ ನಡುವೆಯೂ ಭಾರತವು ಪರಿಸ್ಥಿತಿಯನ್ನು ಸ್ಥಿರವಾಗಿ ಎದುರಿಸುತ್ತಿದೆ. ಇಂತಹ ಸಮಯದಲ್ಲಿ ದೇಶದ ಜನರು ಏಕತೆ ಪ್ರದರ್ಶಿಸಬೇಕು ಮತ್ತು ಅಪಪ್ರಚಾರಗಳಿಗೆ ಕಿವಿಗೊಡಬಾರದು. ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಬೇಕು ಎಂದು ಮನವಿ ಮಾಡಿದರು.

ಕೋವಿಡ್ ನಂತರ ವಿಶ್ವವು ಪುನಶ್ಚೇತನಗೊಳ್ಳಲಿದೆ ಎಂದು ನಿರೀಕ್ಷಿಸಿದ್ದರೂ, ವಿವಿಧ ಪ್ರದೇಶಗಳಲ್ಲಿ ಯುದ್ಧಗಳು ಮುಂದುವರಿದಿವೆ. ವಿಶೇಷವಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷವನ್ನು ಉಲ್ಲೇಖಿಸಿದ ಅವರು, ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಭಾರತೀಯರ



ಸುರಕ್ಷತೆ ಹಾಗೂ ಅಲ್ಲಿ ದೊರೆಯುತ್ತಿರುವ ಸಹಕಾರಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಈ ಪ್ರದೇಶವು ಭಾರತದ ಪ್ರಮುಖ ಇಂಧನ ಮೂಲವಾಗಿರುವುದರಿಂದ ಇಂಧನ ಸರಬರಾಜಿನ ಮೇಲೆ ಪರಿಣಾಮ ಕಂಡುಬರುತ್ತಿದೆ ಎಂದು ಹೇಳಿದರು.

ಜ್ಞಾನ ಭಾರತಂ ಆ್ಯಪ್: ಜ್ಞಾನ ಭಾರತಂ ಸಮೀಕ್ಷೆಯ ಕುರಿತು ಮಾತನಾಡಿದ ಅವರು, ದೇಶದ ಹಸ್ತಪ್ರತಿಗಳ ಮಾಹಿತಿ ಸಂಗ್ರಹಿಸುವ ಈ ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಕೋರಿದರು. ಜ್ಞಾನ ಭಾರತಂ ಆ್ಯಪ್ ಮೂಲಕ ಮಾಹಿತಿ ಹಂಚಿಕೊಳ್ಳಬಹುದು ಎಂದು ಹೇಳಿದರು.

ಭಾರತದ ಜಯ ದೇಶಕ್ಕೆ ಹೆಮ್ಮೆ: ಕ್ರೀಡೆಗಳ ಕುರಿತು ಮಾತನಾಡಿದ ಪ್ರಧಾನಿ, ಟಿ20 ವಿಶ್ವಕಪ್‌ನಲ್ಲಿ ಭಾರತದ ಜಯ ದೇಶಕ್ಕೆ ಹೆಮ್ಮೆ ತಂದಿದೆ. ಜಮ್ಮು–ಕಾಶ್ಮೀರದಲ್ಲಿ ಕ್ರೀಡೆಗಳಿಗೆ ಹೆಚ್ಚುತ್ತಿರುವ ಪ್ರೋತ್ಸಾಹವನ್ನು ಉಲ್ಲೇಖಿಸಿ, ಯುವಕರು ವಿವಿಧ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಚಾರ ಎಂದರು.

ಆರೋಗ್ಯದ ಮಹತ್ವವನ್ನು ಒತ್ತಿಹೇಳಿದ ಅವರು, ಸಕ್ಕರೆ ಮತ್ತು ಖಾದ್ಯ ತೈಲ ಬಳಕೆಯನ್ನು ಕಡಿಮೆ ಮಾಡಲು ಸಲಹೆ ನೀಡಿದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ತಯಾರಾಗುವಂತೆ ಕರೆ ನೀಡಿದರು.

ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಅಭ್ಯಾಸದ ಅಗತ್ಯವನ್ನು ಒತ್ತಿ ಹೇಳಿದ ಅವರು, ಬೆಂಗಳೂರಿನ ಪ್ರಯೋಗಾ ಸಂಸ್ಥೆಯ ಅನ್ವೇಷಣೆ ಕಾರ್ಯಕ್ರಮವನ್ನು ಮೆಚ್ಚಿದರು. ಇದು ವಿದ್ಯಾರ್ಥಿಗಳಿಗೆ ಸಂಶೋಧನಾ ಅವಕಾಶ ಒದಗಿಸುತ್ತದೆ ಎಂದು ಹೇಳಿದರು. ಜೊತೆಗೆ ನಾಗಾ ಸಮುದಾಯದ 'ಮೊರುಂಗ್' ಶಿಕ್ಷಣ ಪದ್ಧತಿಯನ್ನು ಉದಾಹರಣೆಯಾಗಿ ನೀಡಿ, ಪರಂಪರಾ ಜ್ಞಾನವನ್ನು ಉಳಿಸುವ ಮಹತ್ವವನ್ನು ವಿವರಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಅಕ್ರಮ ನುಸುಳುವಿಕೆ ತಡೆಗಟ್ಟಿದ ಬಿಜೆಪಿ: ಶಾ

ನುಸುಳುಕೋರರನ್ನು ಹೊರದಬ್ಬುತ್ತೇವೆ

ಧೇಕಿಯಾಜುಲಿ(ಅಸ್ಸಾಂ): ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರ ಅಸ್ಸಾಂನಲ್ಲಿ ನುಸುಳುವಿಕೆಯನ್ನು ತಡೆಗಟ್ಟಿದೆ. ಆದರೆ ಅದಷ್ಟೇ ಸಾಕಾಗುವುದಿಲ್ಲ, ಬಂಧಿಸಲ್ಪಟ್ಟ ಪ್ರತಿಯೊಬ್ಬ ನುಸುಳುಕೋರನನ್ನೂ ವಾಪಸ್ ಹೊರದಬ್ಬಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಡುಗಿದ್ದಾರೆ. ಅಸ್ಸಾಂನ ಸೋನಿತ್ಪುರ್ ಜಿಲ್ಲೆಯ ಧೇಕಿಯಾಜುಲಿ ಪ್ರದೇಶದಲ್ಲಿ ಭಾನುವಾರ ನಡೆದ ಚುನಾವಣಾ ಸಭೆಯಲ್ಲಿ ಮಾತನಾಡಿದ ಅವರು, ಅಸ್ಸಾಂಗೆ ನುಸುಳುಕೋರರು ಪ್ರವೇಶಿಸದಂತೆ ತಡೆಯುತ್ತೇವೆಂದು ಹತ್ತು ವರ್ಷಗಳ ಹಿಂದೆ ನೀಡಿದ್ದ ವಾಗ್ದಾನವನ್ನು ಬಿಜೆಪಿ ಈಡೇರಿಸಿದೆ ಎಂದು ಹೇಳಿದ್ದಾರೆ.

ಉದ್ಯೋಗ, ಆಹಾರಧಾನ್ಯ ಕಸಿದ ಅಕ್ರಮ ವಲಸಿಗರು: ಒಳನುಸುಳುಕೋರರು ಅಸ್ಸಾಮಿ ಯುವಕರ ಉದ್ಯೋಗ ಕಸಿದುಕೊಂಡಿದ್ದು, ಬಡವರ ಆಹಾರಧಾನ್ಯವನ್ನೂ ಕಬಳಿಸಿದ್ದಾರೆ ಎಂದು ಶಾ ಆರೋಪಿಸಿದರು.

1.25 ಲಕ್ಷ ಎಕರೆ ನುಸುಳುಕೋರ ಮುಕ್ತ: ಹಿಮಂತ ಬಿಸ್ವ ಶರ್ಮಾ ಸರ್ಕಾರವು ನುಸುಳುಕೋರರು ಅಕ್ರಮವಾಗಿ ಅತಿಕ್ರಮಿಸಿದ್ದ 1.25 ಲಕ್ಷ ಏಕರೆ ಭೂಮಿಯನ್ನು ನುಸುಳುಕೋರರಿಂದ ಮುಕ್ತಗೊಳಿಸಿದೆ. ಮುಂದಿನ ಐದು ವರ್ಷಗಳಲ್ಲಿ ನುಸುಳುಕೋರರ ನಿಯಂತ್ರಣದಲ್ಲಿ ಭೂಮಿ ಉಳಿಯದಂತೆ ಶರ್ಮಾ ಖಚಿತಪಡಿಸುವರು ಎಂದು ಶಾ ಭರವಸೆ ನೀಡಿದ್ದಾರೆ.

ನುಸುಳುಕೋರರ ರಕ್ಷಣೆಗೆ ನಿಂತ ರಾಹುಲ್: ನುಸುಳುಕೋರರ



ರಕ್ಷಿಸುವ ಉದ್ದೇಶದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ವಿರೋಧಿಸುತ್ತಲೇ ಇದ್ದಾರೆಂದು ಶಾ ಆರೋಪಿಸಿದ್ದಾರೆ.

ಹುತಾತ್ಮರಿಗೆ ಸ್ಮಾರಕ ಕಟ್ಟಲಿಲ್ಲ ಕಾಂಗ್ರೆಸ್: ಅಸ್ಸಾಂ ಚಳವಳಿಯ ಹುತಾತ್ಮರಿಗಾಗಿ ಕಾಂಗ್ರೆಸ್ ಏನೇನೂ ಮಾಡಿಲ್ಲ. ಹುತಾತ್ಮರ ಸ್ಮರಣಾರ್ಥ ಗುವಾಹಟಿಯಲ್ಲಿ ಸ್ವಹೀದ್ ಸ್ಮಾರಕವನ್ನು ರಾಜ್ಯದ ಬಿಜೆಪಿ ಸರ್ಕಾರವೇ ನಿರ್ಮಾಣ ಮಾಡಿದೆ ಎಂದು ಶಾ ಹೇಳಿದರು. ಕಾಂಗ್ರೆಸ್ ದೇಶದ ಭದ್ರತೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆದರೆ ಪ್ರಧಾನಿ ಮೋದಿ ಭಯೋತ್ಪಾದಕರ ವಿರುದ್ಧ ಕಠಿಣ ನಿಲುವುಗಳನ್ನು ತೆಗೆದುಕೊಂಡಿದ್ದರೆಂದ ಶಾ, ತಮ್ಮ ಭಾಷಣದಲ್ಲಿ ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ಏರ್ ಸ್ಟ್ರೈಕ್ ಮತ್ತು ಆಪರೇಷನ್ ಸಿಂದೂರವನ್ನು ಉಲ್ಲೇಖಿಸಿದ್ದಾರೆ.

ಕಿರುಸುದ್ದಿ

ಮಧುರೈ ಕ್ಷೇತ್ರದ ಪ್ರಭಾರಿಯಾಗಿ ಅಕ್ಷಯ್ ರೈ ದಂಬೆಕಾನ ಆಯ್ಕೆ



ಪುತ್ತೂರು: 2026ರ ತಮಿಳುನಾಡು ಚುನಾವಣೆಯಲ್ಲಿ ಮಧುರೈ ಜಿಲ್ಲೆಯ ಮಧುರೈ ದಕ್ಷಿಣ ವಿಧಾನಸಭಾ ಕ್ಷೇತ್ರದ ಪ್ರಭಾರಿಯಾಗಿ ಬಿಜೆಪಿ ಪಕ್ಷದಿಂದ ಪುತ್ತೂರಿನ ಅಕ್ಷಯ್ ರೈ ದಂಬೆಕಾನ ಆಯ್ಕೆಯಾಗಿದ್ದಾರೆ. ಅಕ್ಷಯ್ ಅವರು ಕಳೆದ 2021ರ ಚುನಾವಣೆಯಲ್ಲಿ ತಮಿಳುನಾಡಿನ ಕನ್ಯಾಕುಮಾರಿ ಕೊಳಚೆಲ್ ವಿಧಾನಸಭಾ ಕ್ಷೇತ್ರದ ಜವಾಬ್ದಾರಿಯನ್ನು ಪಡೆದುಕೊಂಡಿದ್ದರು. 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಪ್ರಭಾರಿಯಾಗಿ ಕೆಲಸ ಮಾಡಿರುವ ಇವರು ಪ್ರಸ್ತುತ ಬಿಜೆಪಿ ರಾಜ್ಯ ಸಾಮಾಜಿಕ ಜಾಲತಾಣದಲ್ಲಿ ಜವಾಬ್ದಾರಿಯನ್ನು ಹೊಂದಿದ್ದಾರೆ. ಇವರಿಗೆ ಹಲವಾರು ತಮಿಳು ಸಂಘ ಸಂಸ್ಥೆಗಳ ಒಡನಾಟ ಇರುವುದರಿಂದ ಹಾಗೂ ತಮಿಳು ಭಾಷೆಯಲ್ಲಿ ಹಿಡಿತ ಇರುವುದರಿಂದ ತಮಿಳುನಾಡಿನಲ್ಲಿ ಜವಾಬ್ದಾರಿ ನೀಡಲಾಗುತ್ತಿದೆ.

ತುಳು ಭವನ: ಕಾರ್ಯಕ್ರಮಗಳಿಗೆ ಉಚಿತ ಸ್ಥಳಾವಕಾಶ ಲಭ್ಯ

ಮಂಗಳೂರು: ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಂಗಳೂರಿನ ಉರ್ವಸ್ಟೋರ್‌ನಲ್ಲಿರುವ ತುಳು ಭವನದ ಮೊದಲ ಮಹಡಿಯಲ್ಲಿರುವ ಡಾ. ವಾಮನ ನಂದಾವರ ಚಾವಡಿಯನ್ನು ಬಾಡಿಗೆ ರಹಿತವಾಗಿ ನೀಡಲು ನಿರ್ಧರಿಸಲಾಗಿದೆ. ಪುಸ್ತಕ ಬಿಡುಗಡೆ, ನಾಟಕ, ಸಿನಿಮಾಗಳ ಪೋಸ್ಟರ್ ಬಿಡುಗಡೆ, ಸಾಹಿತ್ಯ ಸಂವಾದ, ವಿಚಾರಗೋಷ್ಠಿ, ನಾಟಕ ತರಬೇತಿ, ನಾಟಕ ಅಭ್ಯಾಸ ಮೊದಲಾದ ಕಾರ್ಯಕ್ರಮಗಳಿಗೆ ಸಿದ್ಧತಾ ಕೊಠಡಿ, ಸಣ್ಣ ವೇದಿಕೆ, ಮೈಕ್, ಭಾಷಣ ಪೀಠ ಹಾಗೂ 75 ಆಸನಗಳ ವ್ಯವಸ್ಥೆ ಒಳಗೊಂಡ ಚಾವಡಿಯನ್ನು ಉಚಿತವಾಗಿ ನೀಡಲಾಗುವುದು. ಕಾರ್ಯಕ್ರಮದಂದು ಶುಚಿತ್ವದ ಸಾಂಕೇತಿಕ ವೆಚ್ಚವನ್ನು ಸಂಘಟಕರು ಭರಿಸಬೇಕಾಗುತ್ತದೆ. ಕಾರ್ಯಕ್ರಮ ಆಯೋಜಕರು ಕನಿಷ್ಠ ಒಂದು ವಾರಗಳ ಮುಂಚಿತವಾಗಿ ಅಕಾಡೆಮಿಗೆ ಲಿಖಿತವಾಗಿ ಕೋರಿಕೆ ಸಲ್ಲಿಸಬೇಕಾಗುತ್ತದೆ ಎಂದು ತುಳು ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.2ರಂದು ವಿಶೇಷ ನೃತ್ಯ ಪ್ರದರ್ಶನ



ಮಂಗಳೂರು: ಶಬರಿಮಲೆ ಅಯ್ಯಪ್ಪ ಸೇವಾ ಸಮಾಜಮ್ ದ.ಕ. ಜಿಲ್ಲೆ ಮತ್ತು ಶ್ರೀ ರಾಮಕೃಷ್ಣ ಭಜನಾ ಮಂದಿರ ಬಟ್ಟಗುಡ್ಡೆ ಬಿಜೈ ಸಹಭಾಗಿತ್ವದಲ್ಲಿ ಹನುಮ ಜಯಂತಿ ಪ್ರಯುಕ್ತ ಏ.2ರಂದು ಸಂಜೆ 4ಕ್ಕೆ ನಗರದ ಬಿಜೈ ನೋಡು ಲೇನ್ ಶ್ರೀ ರಾಮಕೃಷ್ಣ ಭಜನಾ ಮಂದಿರದಲ್ಲಿ ವಿದುಷಿ ಗೀತಾ ಸರಳಾಯ ಮತ್ತು ಬಳಗದಿಂದ ವಿಶೇಷ ನೃತ್ಯ ಪ್ರದರ್ಶನ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.30ರಿಂದ ಏ.6ರವರೆಗೆ ಆರಿಕ್ಕಾಡಿ ಪಾರೆಯಲ್ಲಿ ವಾರ್ಷಿಕ ಕಳಿಯಾಟ

ಮಂಗಳೂರು: ಕುಂಬ್ಳೆ ಆರಿಕ್ಕಾಡಿ ಪಾರೆ ಶ್ರೀ ಭಗವತೀ ಆಲಿ ಚಾಮುಂಡಿ ಕ್ಷೇತ್ರ ಪಾರೆಸ್ಥಾನ ಇದರ ವಾರ್ಷಿಕ ಕಳಿಯಾಟ ಮಹೋತ್ಸವ ಮಾ.30ರಿಂದ ಏ.6ರವರೆಗೆ ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯಲಿದೆ.

ಮಾ. 30ರಂದು ಸಂಜೆ ಚಪ್ಪರ ಮುಹೂರ್ತ, ರಾತ್ರಿ 10 ಗಂಟೆಗೆ ಭಂಡಾರ ಮನೆಯಿಂದ ಶ್ರೀ ಕ್ಷೇತ್ರಕ್ಕೆ ಭಂಡಾರ ಆಗಮನ, 31ರಂದು ಸಂಜೆ 4 ಗಂಟೆಗೆ ಭಗವತೀ ದರ್ಶನ, ಕೆಂಡಸೇವೆ 5 ಗಂಟೆಗೆ ಧ್ವಜಾರೋಹಣ, 6 ಗಂಟೆಗೆ ಪುಳ್ಳಿ ಪೂವಣ್ಣ ದೈವದ ವೆಳ್ಳಾಟ, 9 ಗಂಟೆಗೆ ದೈವದ ಕೋಲ, ಏ.1ರಂದು ಸಂಜೆ 4 ಗಂಟೆಗೆ ಭಗವತೀ ದರ್ಶನ, ಅಡಯಾಳಂ ಚೇರ್ಕಲ್, ಸಂಜೆ 7ಗಂಟೆಗೆ ವೀರ ಪುತ್ರನ್ ದೈವದ ವೆಳ್ಳಾಟಂ, 9ಗಂಟೆಗೆ ಪಳ್ಳಕ್ಕ ನಾಯರ್ ವೆಳ್ಳಾಟಂ, ಮಲೆಯಾಳ ಚಾಮುಂಡಿ ದೈವದ ಕುಳಿಚ್ಚಾಟಂ, 2ರಂದು ಬೆಳಿಗ್ಗೆ 8ಗಂಟೆಯಿಂದ ಮೊದಲ ಕಳಿಯಾಟ, 3ರಂದು ನಡು ಕಳಿಯಾಟ, 4ರಂದು ಸಂಜೆ 6ರಿಂದ ಆಲಿಭೂತ, ಭಗವತೀ ದರ್ಶನ, ಕೆಂಡಸೇವೆ, ಬಲಿ, ಬಿಂಬದರ್ಶನ, ಪುದಿಯ ಭಗವತೀ ದೈವ, ಕಳಶ ಪ್ರದಕ್ಷಿಣೆ ಮತ್ತು ವೀರ ಕಾಳಿದೈವದ ತೊಡಂಬಳ್ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಬಳಿಕ ರಾತ್ರಿ 8 ಗಂಟೆಗೆ ಗಾಯಕ ಜಗದೀಶ್ ಆಚಾರ್ ಪುತ್ತೂರು ಅವರಿಂದ ಸಂಗೀತ ಗಾನ ಸಂಭ್ರಮ, ಬಳಿಕ ರಾತ್ರಿ 9.30 ಬಳಿಕ ದೈವಗಳಿಗೆ ಕೆಂಡಸೇವೆ, ಕೋಲ, ಉರುಳು ಸೇವೆ ಮುಂತಾದ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ, ಏ.5ಹಾಗೂ 6ರಂದು ಪಿಯಾಯಿ, ಆಲಿ ಭೂತ ಹಾಗೂ ದೈವಗಳ ಕೋಲ ನಡೆಯಲಿದ್ದು ಸಂಜೆ ಧ್ವಜಾವರೋಹಣ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.



ಶಿವಮೊಗ್ಗ ಲೋಕಸಭಾ ಸದಸ್ಯ ಬಿ. ವೈ.ರಾಘವೇಂದ್ರ ಅವರು ಕುಟುಂಬ ಸಮೇತರಾಗಿ ಉಡುಪಿ ಜಿಲ್ಲೆಯ ಉಚ್ಚಿಲ ಶ್ರೀ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಭೇಟಿ ನೀಡಿ, ಅಮ್ಮನವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಾಸುದೇವ ಶೆಟ್ಟಿ , ಶರತ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ರಾಜ್ಯ ಹಾಕಿ ತಂಡಕ್ಕೆ ಕೊಡಗು ವಿದ್ಯಾಲಯದ ವಿದ್ಯಾರ್ಥಿನಿಯರ ಆಯ್ಕೆ



ಮಡಿಕೇರಿ: ಹಾಕಿ ಕರ್ನಾಟಕವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಲಾದ ಸಬ್-ಜೂನಿಯರ್ ಹಾಕಿ ರಾಜ್ಯ ಮಟ್ಟದ ಆಯ್ಕೆ ಶಿಬಿರದಲ್ಲಿ ಕೊಡಗು ವಿದ್ಯಾಲಯದ 10ನೇ ತರಗತಿಯ ಮೂವರು ವಿದ್ಯಾರ್ಥಿನಿಯರು ಕರ್ನಾಟಕ ರಾಜ್ಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಹಾಕಿ ಕ್ರೀಡಾ ಆಯ್ಕೆ ಶಿಬಿರದಲ್ಲಿ ಭಾಗವಹಿಸಿದ್ದ ಮಡಿಕೇರಿಯ ನಿವಾಸಿ ಕನ್ನಂಡ ಎಂ. ಪೊನ್ನಪ್ಪ ಹಾಗೂ ನಳಿನಿ ದಂಪತಿಯ ಪುತ್ರಿ ವರ್ಣಾ ಭೋಜಮ್ಮ, ನಾಪೋಕ್ಲುವಿನ ಕಲಿಯಂಡ ಬೋಪಣ್ಣ ಹಾಗೂ ನೀತು ದಂಪತಿಯ ಪುತ್ರಿ ತೇಜಲ್ ಬೋಪಣ್ಣ ಮತ್ತು ಚೆಟ್ಟಳ್ಳಿಯ ಕೆಚ್ಚೆಟ್ಟಿರ ಮೊಣ್ಣಯ್ಯ ಹಾಗೂ ಮುತ್ತಮ್ಮ ದಂಪತಿಯ ಪುತ್ರಿ ಲಕ್ಷ್ಯಾ ಪೊನ್ನಕ್ಕ ಇವರುಗಳು ಆಯ್ಕೆಯಾಗಿದ್ದಾರೆ.

ಇವರು ಏಪ್ರಿಲ್ 1ರಿಂದ 6ರವರೆಗೆ ರಾಂಚಿಯಲ್ಲಿ ನಡೆಯಲಿರುವ ಸಬ್-ಜೂನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಅಭಿನಂದನೆ

ವಿದ್ಯಾರ್ಥಿನಿಯರ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ವಿದ್ಯಾಲಯದ ತರಬೇತುದಾರರಾದ ದೀನಾ ಮತ್ತು ಪಾರ್ವತಿ ಅಭಿನಂದನೆಗಳನ್ನು ತಿಳಿಸಿದ್ದು, ಅವರ ಪರಿಶ್ರಮ ಮತ್ತು ಮಾರ್ಗದರ್ಶನವೂ ಈ ಯಶಸ್ಸಿಗೆ ಕಾರಣವಾಗಿದೆ ಎಂದು ಶಾಲಾ ಪ್ರಾಂಶುಪಾಲರು ತಿಳಿಸಿದ್ದಾರೆ.

ಯಶಸ್ಸು ಕಂಡಿದೆ ಪುತ್ತೂರಿನ ಹೊಟೇಲ್‌ನ ಈ ಹೊಸ ಪ್ರಯೋಗ

ಎಲ್‌ಪಿಜಿಗೆ ಚೂರು ಟಕ್ಕರ್!

ರಾಜೇಶ್ ಪಟ್ಟೆ

ಪುತ್ತೂರು: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಯುದ್ಧ ಮುಂದುವರೆದಿರುವುದರಿಂದ ಭಾರತದಲ್ಲಿ ಗ್ಯಾಸ್ ಪೂರೈಕೆ ಕುರಿತಂತೆ ವ್ಯತ್ಯಯ ಉಂಟಾಗಿರುವುದರಿಂದ ಮುಖ್ಯವಾಗಿ ಹೊಟೇಲ್ ಆಹಾರ ಉದ್ಯಮ ಸಂಕಷ್ಟ ಎದುರಿಸುತ್ತಿದೆ. ಅನಿವಾರ್ಯ ಗ್ಯಾಸ್ ಬಳಕೆಗೆ ಪರ್ಯಾಯವಾಗಿ ಪುತ್ತೂರು ನಗರದ ಪ್ರಮುಖ ಹೊಟೇಲ್ ಒಂದರಲ್ಲಿ ಕಂಡುಕೊಂಡಿರುವ ಮಾರ್ಗ ಇದೀಗ ವಿಶೇಷವಾಗಿ ಗಮನ ಸೆಳೆಯುತ್ತಿದೆ.

ಕಟ್ಟಿಗೆಯ ಚೂರುಗಳನ್ನು ಬಳಸಿಕೊಂಡು ಬ್ಲೋವರ್ ಮೂಲಕ ಬೆಂಕಿ ಉರಿಸುವ ಸಾಧನವನ್ನು ಜಿಲ್ಲೆಯಲ್ಲೇ ಮೊದಲ ಬಾರಿಗೆ ಎಂಬಂತೆ ಪುತ್ತೂರು ನಗರದ ಗಣೇಶ್ ಪ್ರಸಾದ್ ಹೊಟೇಲ್‌ನಲ್ಲಿ ಬಳಸಲು ಆರಂಭಿಸಲಾಗಿದೆ. ಆ ಮೂಲಕ ಅನ್ನ ಸೇರಿದಂತೆ ಪದಾರ್ಥಗಳನ್ನು ಮಿತ ಖರ್ಚಿನಲ್ಲಿ ಬೇಯಿಸಲಾಗುತ್ತಿದೆ.

ಫ್ಯಾನ್ ತಿರುಗಲು ಸ್ವಲ್ಪ ಪ್ರಮಾಣದ ವಿದ್ಯುತ್ ವ್ಯಯವಾಗುತ್ತದೆ. ಸ್ವಲ್ಪ ಕಟ್ಟಿಗೆ ತುಂಡುಗಳು ಅಥವಾ ತೆಂಗಿನ ಚಿಪ್ಪು ಒಲೆಗೆ ಹಾಕಿದರೆ ಗ್ಯಾಸ್ ಮೂಲಕ ಉರಿದಂತೆಯೇ ಉರಿಯುತ್ತದೆ. ಕಟ್ಟಿಗೆಯೂ ಹೆಚ್ಚು ಖರ್ಚಾಗುವುದಿಲ್ಲ. ಒಲೆಯನ್ನು ಇರಿಸಲು ಅಲ್ಪ ಜಾಗ ಸಾಕು. ಈ ವಿಶೇಷ ಒಲೆಯನ್ನು ಪುತ್ತೂರಿನ ಸೋಜಾ ಮೆಟಲ್ ಸಂಸ್ಥೆಯ ಮೂಲಕ ತಯಾರಿಸಲಾಗಿದೆ. ಸುಮಾರು ರೂ.10 ಸಾವಿರದ ಒಳಗಡೆ ಈ ಒಲೆ ಲಭ್ಯವಾಗುತ್ತದೆ. ಈಗ ಆರಂಭದಲ್ಲಿ ಅನ್ನ, ಎರಡು-ಮೂರು ಬಗೆ ಪದಾರ್ಥವನ್ನು ಬೇಯಿಸಿದ್ದೇವೆ. ಮುಂದೆ ತಿಂಡಿಗಳ ತಯಾರಿಗೂ ಈ ಒಲೆಯನ್ನು ಬಳಸುತ್ತೇವೆ ಎಂದು ಹೊಟೇಲ್ ಮಾಲಕರು ತಿಳಿಸಿದ್ದಾರೆ.





ಪ್ರಯೋಜನಕಾರಿ ಒಲೆ



ಗ್ಯಾಸ್ ಅಭಾವದಿಂದ ಕೆಲವು ದಿನಗಳಿಂದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಮುಂದಕ್ಕೆ ಏನು ಮಾಡುವುದು ಎಂದು ಚರ್ಚೆ ನಡೆಸುವಾಗ ಸ್ನೇಹಿತ ಜಾನ್ ಮಾಸ್ಟ್ರು ಎಂಬವರು ಕೊಟ್ಟ ಉಪಾಯದಂತೆ ಅವರ ಬೆಂಗಳೂರಿನ ಸ್ನೇಹಿತರಲ್ಲಿ ಒಲೆಯನ್ನು ತರಿಸಿ ಅವರ ಪುತ್ರನ ಮೂಲಕ ಅಭಿವೃದ್ಧಿಪಡಿಸಿ ಇದನ್ನು ತಯಾರಿಸಲಾಗಿದೆ. ಶನಿವಾರ ಪ್ರಾಯೋಗಿಕವಾಗಿ ಎರಡು ಮೂರು ಐಟಂ ಬೇಯಿಸಿದ್ದೇವೆ. ಯಶಸ್ಸು ಕಾಣುತ್ತಿದೆ. ಗ್ಯಾಸ್‌ಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಲ್ಲಿ ಈ ವಿಶೇಷ ಒಲೆ ಪ್ರಯೋಜನಕಾರಿಯಾಗಿ ನಮಗೆ ಕಾಣಿಸಿದೆ.

■ ಗೋಪಾಲಕೃಷ್ಣಹೇರಳೆ, ಮಾಲಕರು ಪುತ್ತೂರು ಗಣೇಶ್ ಪ್ರಸಾದ್ ಹೊಟೇಲ್

ಪರ್ಯಾಯ ವ್ಯವಸ್ಥೆ

ಗ್ಯಾಸ್ ಕೊರತೆ ನೀಗಿಸಲು ಪರ್ಯಾಯ ವ್ಯವಸ್ಥೆಯನ್ನು ಪುತ್ತೂರಿನವರು ಕಂಡುಕೊಂಡಿರುವುದು ಖುಷಿ ಇದೆ. ಹೊಸ ಆವಿಷ್ಕಾರದ ಕಟ್ಟಿಗೆ ಸ್ಟವ್ ಮಾಡಿದ್ದಾರೆ. ಎಸಿ-ಡಿಸಿ ಕನ್ವರ್ಟ್ ಪ್ಲಗ್ ಇರುವ ಫ್ಯಾನ್ ವ್ಯವಸ್ಥೆ ಮಾಡಿದ್ದಾರೆ. ಒಲೆಗೆ ಕಟ್ಟಿಗೆ ಚೂರು ಹಾಕುತ್ತಾ ಹೋದರೆ ಎಲ್‌ಪಿಜಿ ಸ್ಟವ್ ಉರಿಯುವಂತೆ ಉರಿಯುತ್ತದೆ. ಇದು ಉಳಿದ ಕಡೆಗಳಲ್ಲೂ ಅನುಕೂಲ ಆಗಬಹುದು. ವಿಕಸಿತ, ಬದಲಾವಣೆಯ ಭಾರತದ ಕುರಿತು ಪ್ರಧಾನಿಯವರು ಹೇಳುವಂತೆ ನಮ್ಮ ಕೊಡುಗೆಯೂ ನೀಡಬಹುದು. ಒಳ್ಳೆಯ ಪ್ರಯತ್ನವನ್ನು ಗೋಪಾಲಕೃಷ್ಣ ಹೇರಳೆ ಅವರು ಆರಂಭಿಸಿದ್ದಾರೆ. ಉಳಿದ ಹೊಟೇಲ್‌ಗಳಿಗೂ ಇದು ಮಾದರಿಯಾಗಿ ಮುಂದೆ ಬಳಕೆಯಾಗಬಹುದು.

■ ಆರ್.ಸಿ.ನಾರಾಯಣ, ಹೊಟೇಲ್ ಗ್ರಾಹಕರು

ಹತ್ತು ದಿನದಲ್ಲಿ ಒಂದೇ ಜಾಗ, ಎರಡು ಅಪಘಾತ: ಎರಡು ಜೀವಗಳು ಬಲಿ



ಕಾರ್ಕಳ: ತಾಲೂಕಿನ ಸಾಣೂರಿನಲ್ಲಿ ಅವೈಜ್ಞಾನಿಕ ಹೆದ್ದಾರಿ ಕಾಮಗಾರಿಗೆ ಸರ್ವಿಸ್ ರಸ್ತೆ ಇಲ್ಲದೆ ವಿರುದ್ಧ ದಿಕ್ಕಿನಲ್ಲಿ ವಾಹನಗಳನ್ನು ಚಾಲನೆ ಮಾಡಿ ಕೇವಲ 10 ದಿನಗಳ ಅಂತರದಲ್ಲಿ ಒಂದೇ ಜಾಗದಲ್ಲಿ ಎರಡು ದುರ್ದೈವಿಗಳ ದುರ್ಮರಣ..

ಮಾರ್ಚ್ 18 ರಂದು ಹರೀಶ್ ಸುವರ್ಣ ಎಂಬ ಸ್ಕೂಟರ್ ಸವಾರ ರಸ್ತೆ ದಾಟುವಾಗ ಬೈಕಿಗೆ ಡಿಕ್ಕಿ ಹೊಡೆದು ಮೃತ್ಯು, ಮಾರ್ಚ್ 28ರಂದು ಸ್ಥಳೀಯ ನಿವಾಸಿ ಜಯಾನಂದ ಶೆಟ್ಟಿ ಸ್ಕೂಟರ್‌ನಲ್ಲಿ ರಸ್ತೆ ದಾಟುವಾಗ ಟೆಂಪೋ ಡಿಕ್ಕಿ ಹೊಡೆದು ಮೃತ್ಯು.

ಸರ್ವಿಸ್ ರಸ್ತೆ ಇಲ್ಲದೆ ಸರಣಿ ಅಪಘಾತಗಳು ನಡೆದು ಇನ್ನೆಷ್ಟು ಬಲಿ ತೆಗೆದುಕೊಳ್ಳಲಿದೆ ರಾಷ್ಟ್ರೀಯ ಹೆದ್ದಾರಿ ಎಂಬುವುದು ಆಘಾತಕಾರಿ ವಿಚಾರ ಎಂದು ಊರ ನಾಗರಿಕರು ಕಳವಳದಿಂದ ಹೇಳಿದ್ದಾರೆ.

ಸಾಣೂರಿನ ರಾಮಮಂದಿರದ ಎದುರುಗಿನ ರಸ್ತೆ ವಿಭಾಜಕವು ತೀರಾ ಅವೈಜ್ಞಾನಿಕವಾಗಿ ರಚನೆಯಾಗಿದ್ದು ಹೆದ್ದಾರಿಯಲ್ಲಿ ವೇಗವಾಗಿ ಧಾವಿಸಿ ಬರುವ ವಾಹನಕ್ಕೆ ಸಾಣೂರು ರಾಮಮಂದಿರದ ಎದುರು ಅಡ್ಡ ದಾಟುವ ಮತ್ತು ವಿರುದ್ಧ ದಿಕ್ಕಿನಲ್ಲಿ ಚಲಿಸುವ ವಾಹನಗಳು ಕೊನೆ ಕ್ಷಣದಲ್ಲಿ ಗಮನಕ್ಕೆ ಬಂದು ಏನೂ ಮಾಡಲಾಗದ ಸ್ಥಿತಿಯಲ್ಲಿ ಪರಸ್ಪರ ಡಿಕ್ಕಿ ಹೊಡೆಯುವ ಪ್ರಕರಣಗಳು ನಿರಂತರ ಸಂಭವಿಸುತ್ತಿವೆ.

ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ಸಾಣೂರಿನ ರಾಷ್ಟ್ರೀಯ ಹೆದ್ದಾರಿ ಮರಣ ಕೂಪವಾಗಿ ಪರಿಣಮಿಸಲಿದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಹಸುಗಳಿಗೆ ಬೈಹುಲ್ಲು ಕೊಡುಗೆ



ಉಪ್ಪಿನಂಗಡಿ: ಬರೋಬ್ಬರಿ ಮಲೆನಾಡ ಗಿಡ್ಡ ಜಾತಿಯ 63 ದನಕರುಗಳೊಂದಿಗೆ ಜೀವನ ನಡೆಸುತ್ತಿರುವ ಕಡಬ ತಾಲೂಕು ಗೋಳಿತೊಟ್ಟು ಗ್ರಾಮದ ತಿರ್ಲೆ ಎಂಬಲ್ಲಿನ ನಿವಾಸಿಗರಾದ ನಾಲ್ವರು ಸಹೋದರಿಯರ ಗೋವಿನ ಮೇಲಿನ ಕಾಳಜಿಯನ್ನು ಮೆಚ್ಚಿ, ಅವರ ಸತ್ ಕಾರ್ಯಕ್ಕೆ ಬೆಂಬಲವಾಗಿ ಆನ್ಸರ್ ಫಾರ್ ಕ್ಯಾನ್ಸರ್ ಖ್ಯಾತಿಯ ವೈದ್ಯರಾದ ಡಾ.ಡಿ.ಪಿ. ರಮೇಶ್ ಅವರು ರೂ. 5 ಸಾವಿರ ಮೌಲ್ಯದ ಬೈ ಹುಲ್ಲನ್ನು ಸಹೋದರಿಯರು ಸಾಕುತ್ತಿರುವ ಗೋವುಗಳಿಗೆ ನೀಡಿದ್ದಾರೆ.

ಹೆತ್ತವರನ್ನು ಕಳಕೊಂಡ ಬಳಿಕ ಅನಾಥರಂತೆ ಬಾಳುತ್ತಿರುವ ಗೋಳಿತೊಟ್ಟು ಗ್ರಾಮದ ತಿರ್ಲೆ ಮರಂದೆ ಮನೆ ನಿವಾಸಿಗರಾದ ನಾಗಮ್ಮ ಗೌಡ, ಚೆನ್ನಮ್ಮ ಗೌಡ, ರೇವತಿ ಗೌಡ, ಲಲಿತಾ ಗೌಡ ಎಂಬ ನಾಲ್ವರು ಸಹೋದರಿಯರು ಸುಮಾರು 5 ಎಕ್ರೆ ಪ್ರದೇಶದ ಕೃಷಿ ಭೂಮಿ ಮತ್ತದರಲ್ಲಿನ ಚಿಕ್ಕದಾದ ಮನೆಯಲ್ಲಿ ವಾಸ್ತವ್ಯ ಹೊಂದಿದ್ದು, ಸ್ಥಳೀಯರು ಗಣತಿ ಮಾಡುವಾಗ 63 ದನಕರುಗಳು ಲೆಕ್ಕಕ್ಕೆ ಸಿಕ್ಕಿವೆ. ಕಾಡಿನಲ್ಲಿನ ಪ್ರಾಣಿಗಳು ಕಾಡಿನೊಳಗೆ ಹೇಗೆ ಜೀವನ ನಡೆಸುತ್ತಿದೆಯೋ ಅಂತೆಯೇ ಇವರ ಜಾನುವಾರುಗಳು ಜೀವನ ನಡೆಸುತ್ತಿರುತ್ತದೆ. ಇವರ ಗದ್ದೆ, ತೋಟ, ರಬ್ಬರ್ ತೋಟದ ವಿಶಾಲ ಪರಿಸರದಲ್ಲಿ ಮನಸೋ ಇಚ್ಚೆ ಅಲೆದಾಡುತ್ತಿರುವ ದನಕರುಗಳು ಮನಸ್ಸಾದರೆ ಮನೆಯೊಳಗೆ ಬಂದು ಮಲಗುತ್ತದೆ. ತನ್ನ ದನಕರುಗಳಿಗೆ ಮೇವು ನೀಡದ ತಮ್ಮ ಅಸಮರ್ಥತೆ ಹಾಗೂ ಮೇವು ನೀಡದೇ ಇರುವಾಗ ಹಾಲು ತೆಗೆಯದ ಮಾನವೀಯತೆ ಅವರ ನಿಲುವಿನಲ್ಲಿ ವ್ಯಕ್ತಿವಾಗಿತ್ತು. ಇದನ್ನು ಗಮನಿಸಿದ ಡಾ. ಡಿ. ಪಿ. ರಮೇಶ್ ಅವರು, ಇವರಿಗೆ ಸಹಾಯಹಸ್ತ ನೀಡುವ ಸಲುವಾಗಿ ಬೈಹುಲ್ಲನ್ನು ಸಹೋದರಿಯರ ಮನೆಗೆ ತಲುಪಿಸಿದ್ದಾರೆ. ತನ್ಮೂಲಕ ದೇವನಿತ್ತ ಸಂಪತ್ತನ್ನು ದೇವನೊಲುಮೆಯ ಕಾರ್ಯಕ್ಕೆ ವಿನಿಯೋಗಿಸಬೇಕೆಂಬ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ.

ತಾಂತ್ರಿಕ ಸಮಸ್ಯೆ ಇಲ್ಲದಿದ್ದರೆ ಇಲ್ಲಿ ನೀರಿದೆ

ದೇರೆಬೈಲು ದಕ್ಷಿಣ: ನೀರು ಪೂರೈಕೆ ಸರಾಗ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಮನಪಾ ವ್ಯಾಪ್ತಿಯ ಬಹುತೇಕ ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆಯಿದ್ದರೆ, ದೇರೆಬೈಲು ದಕ್ಷಿಣದಲ್ಲಿ ಭಾರಿ ಪ್ರಮಾಣದಲ್ಲಿ ನೀರಿನ ಕೊರತೆ ಕಾಣಿಸಿಕೊಂಡಿಲ್ಲ.

ದೇರೆಬೈಲು ದಕ್ಷಿಣ ವಾರ್ಡ್‌ಗೆ ಲೇಡಿಹಿಲ್ ಕರಾವಳಿ ಪಂಪ್ ಹೌಸ್‌ನಿಂದ ಚಿಲಿಂಬಿಗುಡ್ಡೆ ಟ್ಯಾಂಕ್‌ಗೆ ನೀರು ಪೂರೈಕೆಯಾಗುತ್ತಿದೆ. ಚಿಲಿಂಬಿಗುಡ್ಡೆಯಿಂದ ಕಾಪಿಕಾಡ್, ಬಿಜೈ, ಅಂಗಡಿಗುಡ್ಡೆ, ಕೋಟೆಕಣಿ, ಕೋಡಿಕಲ್ ಪ್ರದೇಶಗಳಿಗೆ ನೀರು ಪೂರೈಕೆಯಾಗುತ್ತದೆ. ಇನ್ನೊಂದೆಡೆ, ಮೇರಿಹಿಲ್ ಟ್ಯಾಂಕ್‌ನಿಂದ ಪ್ರಶಾಂತ್‌ನಗರ, ಲೋಹಿತ್‌ನಗರ ಪ್ರದೇಶಗಳಿಗೆ ನೀರು ಬರುತ್ತಿದೆ.

ಮೇರಿಹಿಲ್ ಟ್ಯಾಂಕ್‌ನಿಂದ ಮುಂಜಾನೆ ನಾಲ್ಕರ ವೇಳೆಗೆ ನೀರು ಬಿಡಲಾಗುತ್ತಿದೆ. ಆದರೆ, ಕೆಲವೊಮ್ಮೆ ಬೆಳಗ್ಗೆ 8 ಗಂಟೆಯಾದರೂ ಮೇರಿಹಿಲ್ ಟ್ಯಾಂಕ್ ಭರ್ತಿಯಾಗುತ್ತಿಲ್ಲ. ಮೇರಿಹಿಲ್ ಟ್ಯಾಂಕ್‌ಗೆ ಬೆಂದೂರುವೆಲ್‌ನಿಂದ ಬರುವ ನೀರಿನ ಪ್ರಮಾಣ ಕಡಿಮೆಯಾಗಿದೆ. ಇದರಿಂದಾಗಿ ಮೇರಿಹಿಲ್ ಟ್ಯಾಂಕ್ ಭರ್ತಿಯಾಗುತ್ತಿಲ್ಲ. ಈ ಬೃಹತ್ ಟ್ಯಾಂಕ್‌ನಿಂದ ಮಂಗಳೂರು ಮಹಾನಗರ ಪಾಲಿಕೆಯ ಐದಾರು ವಾರ್ಡ್‌ಗಳಿಗೆ ನೀರು ಸರಬರಾಜು ಆಗುತ್ತದೆ. ಈ ಟ್ಯಾಂಕ್ ಬೆಳಗ್ಗೆ 8 ಗಂಟೆಯಾದರೂ ಒಮ್ಮೊಮ್ಮೆ ಅರ್ಧ, ಮುಕ್ಕಾಲು ಭಾಗ ಮಾತ್ರ ಭರ್ತಿಯಾಗುತ್ತಿದೆ. ಹೀಗಾದಾಗ ಪ್ರೆಶರ್ ಕಡಿಮೆಯಾಗಿ ದೇರೆಬೈಲು ದಕ್ಷಿಣದ ಕೆಲ ಪ್ರದೇಶಗಳಿಗೆ ನೀರು ಪೂರೈಕೆಯಲ್ಲಿ ಕೆಲವೊಮ್ಮೆ ವ್ಯತ್ಯಯ ಆಗುತ್ತಿದೆ. ಈ ರೀತಿಯ ತಾಂತ್ರಿಕ ಸಮಸ್ಯೆ ಹೊರತುಪಡಿಸಿದರೆ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ.


ದೇರೆಬೈಲು ದಕ್ಷಿಣ ವಾರ್ಡ್‌ನ ಮೂಲಕ ಎಂಸಿಎಫ್ ನೀರಿನ ಪೈಪ್‌ಲೈನ್ ಹಾದುಹೋಗುತ್ತಿರುವುದು ಈ ವಾರ್ಡ್‌ಗೆ ಮತ್ತೊಂದು ಅನುಕೂಲವಾಗಿದೆ. ಬಿಜೈ ,ಕೆಎಸ್‌ಆರ್‌ಟಿಸಿ ಸುತ್ತಲಿನ ಪ್ರದೇಶ, ಕಾಪಿಕಾಡ್, ದಡ್ಡಲಕಾಡು, ಕೊಟ್ಟಾರಕ್ರಾಸ್ ಪ್ರದೇಶಗಳಿಗೆ ಎಂಸಿಎಫ್ ಲೈನ್ ಮೂಲಕ ನೀರು ಲಭ್ಯವಾಗುತ್ತಿದೆ.

ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳಿಲ್ಲ. ಪ್ರಶಾಂತ್‌ನಗರ, ಲೋಹಿತ್‌ನಗರ, ಗೊಲ್ಲಚ್ಚಿಲ್, ನೆಕ್ಕಿಲಗುಡ್ಡೆ ಪ್ರದೇಶಗಳಿಗೆ ಬೋರ್‌ವೆಲ್ ನೀರು ಸರಬರಾಜು ಆಗುತ್ತಿದೆ.

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಭಾಗ್



ದೇರೆಬೈಲು ದಕ್ಷಿಣ ವಾರ್ಡ್‌ಗೆ ನೀರು ಪೂರೈಸುವ ಮೇರಿಹಿಲ್ ಟ್ಯಾಂಕ್ ಬಳಿ ಜಲಸಿರಿ ಯೋಜನೆಯ ಹೊಸ ಟ್ಯಾಂಕ್ ನಿರ್ಮಾಣವಾಗುತ್ತಿದೆ.





ದೇರೆಬೈಲ್ ದಕ್ಷಿಣ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ. ಮೇರಿಹಿಲ್ ಸಹಿತ ನೀರಿನ ಟ್ಯಾಂಕ್‌ಗಳು ಭರ್ತಿಯಾಗದಿದ್ದರೆ ಪ್ರೆಶರ್ ಕಡಿಮೆಯಾಗಿ ಕೆಲವೆಡೆ ನೀರು ಪೂರೈಕೆ ಪ್ರಮಾಣ ಇಳಿಮುಖವಾಗಿದೆ. ಕೆಲವೆಡೆ ಮನೆಗಳ ನೀರಿನ ಕೊಟ್ಟಿ ಮಾತ್ರ ಭರ್ತಿಯಾಗುತ್ತಿದೆ. ಮನೆ ಮೇಲಿರುವ ಟ್ಯಾಂಕ್ ನೀರು ಹತ್ತಿತ್ತಿಲ್ಲ ಎಂಬ ದೂರುಗಳಿವೆ. ತುಂಬೆಯಲ್ಲಿ ಕೆಲವೊಮ್ಮೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡು ನೀರು ಸರಬರಾಜು ನಿಲ್ಲುತ್ತದೆ. ತುಂಬೆಯಿಂದ ನೀರು ಪೂರೈಕೆಯಾಗುವ ನೀರಿನಲ್ಲಿ ವ್ಯತ್ಯಯ ಉಂಟಾದರೆ ಕೆಲವೊಮ್ಮೆ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಆಗುತ್ತದೆ. ತಾಂತ್ರಿಕ ಸಮಸ್ಯೆ ಹೊರತುಪಡಿಸಿದರೆ ದೇರೈಬೈಲ್ ದಕ್ಷಿಣದಲ್ಲಿ ನೀರಿನ ಸಮಸ್ಯೆ ಕಾಡಿಲ್ಲ.

■ ಎಂ.ಶಶಿಧರ ಹೆಗ್ಡೆ, ದೇರೆಬೈಲು ದಕ್ಷಿಣ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಜಲಸಿರಿ : ಅರೆಬರೆ ಕಾಮಗಾರಿ

ದೇರೆಬೈಲು ದಕ್ಷಿಣ ವಾರ್ಡ್‌ನಲ್ಲಿ ನೀರು ಪೂರೈಕೆ ಸಂಬಂಧಿಸಿ ಜಲಸಿರಿ ಯೋಜನೆ ಪ್ರಗತಿಯಾಗಿಲ್ಲ. ಪೈಪ್‌ಲೈನ್ ಕಾಮಗಾರಿ ಬಹುತೇಕ ಕಡೆ ಆಗಿದೆ. ಆದರೆ, ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗಿಲ್ಲ. ಪೈಪ್ ಲೈನ್ ಅಳವಡಿಕೆಗಾಗಿ ರಸ್ತೆ ಅಗೆದ ಬಳಿಕ ಗುಂಡಿ ಮುಚ್ಚಿಲ್ಲ. ಅಲ್ಲಲ್ಲಿ ಅರ್ಧಂಬರ್ಧ ಕಾಮಗಾರಿ ಮಾತ್ರ ನಡೆಸಲಾಗಿದೆ. ಕಾಮಗಾರಿಗಾಗಿ ಗುಂಡಿ ಅಗೆದಲ್ಲಿ ಸಿಮೆಂಟ್, ಇಂಟರ್‌ಲಾಕ್ ಅಳವಡಿಕೆ ಮಾಡಲಾಗಿಲ್ಲ ಎಂಬುದು ಸ್ಥಳೀಯರ ಆರೋಪ. ಜಲಸಿರಿ ಯೋಜನೆಯಡಿ ನೆಕ್ಕಿಲಗುಡ್ಡೆಯಲ್ಲಿ 15 ಲಕ್ಷ ಲೀಟರ್ ಸಾಮರ್ಥ್ಯದ ಹೊಸ ಟ್ಯಾಂಕ್ ನಿರ್ಮಾಣವಾಗಿದೆ. ಆದರೆ, ಹೊಸ ಟ್ಯಾಂಕ್‌ಗೆ ನೀರು ಪೂರೈಕೆಗೆ ಪೂರಕ ವ್ಯವಸ್ಥೆಗಳು ಆಗಿಲ್ಲ.

ನಾಳೆ ವಾರ್ಡ್ -25
ದೇರೆಬೈಲು ಪಶ್ಚಿಮ ಪರಿಸರದ ಸ್ಥಿತಿಗತಿ

ಅತಿಕಾರಿಬೆಟ್ಟು ಗ್ರಾ.ಪಂ.ಗೆ ಗಾಂಧಿ ಗ್ರಾಮ ಪುರಸ್ಕಾರ

ಮುಲ್ಕಿ: ಅತಿಕಾರಿಬೆಟ್ಟು ಗ್ರಾಮ ಪಂಚಾಯತ್ 2024-25ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ಅತಿಕಾರಿಬೆಟ್ಟು ಗ್ರಾ.ಪಂ. ಮುಲ್ಕಿ ತಾಲೂಕು ಮತ್ತು ದ.ಕ. ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದು, ಮೈಸೂರು ವಿಭಾಗ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿದೆ. ಪ್ರಶಸ್ತಿ 10 ಲಕ್ಷ ರೂ. ನಗದು ಒಳಗೊಂಡಿದೆ.

ಅತಿಕಾರಿಬೆಟ್ಟು ಗ್ರಾಪಂ 2024-25ನೇ ಸಾಲಿನಲ್ಲಿ ಶೇ.100 ತೆರಿಗೆ ವಸೂಲಾತಿ, ಜಲಜೀವನ್ ಮಿಷನ್ ಯೋಜನೆಯ ಸಮರ್ಪಕ ಅನುಷ್ಠಾನ, ಗ್ರಾಮದ ಸ್ವಚ್ಛತೆಗಾಗಿ ಸ್ವಚ್ಛವಾಹಿನಿ ಖರೀದಿ, ಸುಸಜ್ಜಿತ ಸ್ವಚ್ಛಸಂಕೀರ್ಣ ಘಟಕ ನಿರ್ಮಾಣ, ಗ್ರಾಪಂ ಮಟ್ಟದ ಒಕ್ಕೂಟದೊಂದಿಗೆ ಒಡಂಬಡಿಕೆ ಮೂಲಕ ಘನತ್ಯಾಜ್ಯ ನಿರ್ವಹಣೆ, ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಉದ್ಯೋಗ ಚೀಟಿ ವಿತರಣೆ, ಕೂಸಿನ ಮನೆ ನಿರ್ವಹಣೆ, ವೈಯಕ್ತಿಕ ಹಾಗೂ ಸಾರ್ವಜನಿಕ ಕಾಮಗಾರಿಗಳ ಯಶಸ್ವಿ ಅನುಷ್ಠಾನ, ಮಾಸಿಕ ರೋಜ್ ಗಾರ್ ದಿನಾಚರಣೆ, ಸಾಮಾಜಿಕ ಲೆಕ್ಕಪರಿಶೋಧನಾ ಗ್ರಾಮಸಭೆಗಳ ಆಯೋಜನೆ, ಬೀದಿದೀಪಗಳ ನಿರ್ವಹಣೆ, ಮಕ್ಕಳಲ್ಲಿ ಓದುವ ಹವ್ಯಾಸ ಹೆಚ್ಚಿಸಲು ಸುಸಜ್ಜಿತ ಅರಿವು ಕೇಂದ್ರ, ಸಾರ್ವಜನಿಕ ಸ್ಮಶಾನ ಅಭಿವೃದ್ಧಿ ನರೇಗಾ ಮತ್ತು ಇತರ ಇಲಾಖಾ ಅನುದಾನದಡಿ ಸುಸಜ್ಜಿತ ಅಂಗನವಾಡಿ ಕಟ್ಟಡಗಳ ರಚನೆ, ಆರೋಗ್ಯ ಉಪಕೇಂದ್ರ ಮತ್ತು ಕ್ಷೇಮ ಕೇಂದ್ರದ ಮೂಲಕ ಎಲ್ಲ ಮಕ್ಕಳಿಗೆ ರೋಗ ನಿರೋಧಕ ಲಸಿಕೆ, ಸಾರ್ವಜನಿಕರಿಗೆ ಆರೋಗ್ಯ ತಪಾಸಣಾ ಶಿಬಿರ, ಗ್ರಾಮದ ಎಲ್ಲ ವಿಶೇಷಚೇತನರಿಗೆ ಸರಕಾರಿ ಸೌಲಭ್ಯ ನೀಡಿಕೆ, ಬಾಪೂಜಿ ಸೇವಾ ಕೇಂದ್ರದ ಮೂಲಕ ಗ್ರಾಮಸ್ಥರಿಗೆ ಜನನ ಪ್ರಮಾಣ ಪತ್ರ, 9/11ಎ, ಕಟ್ಟಡ ಲೈಸೆನ್ಸ್ ವ್ಯಾಪಾರ ಪರವಾನಗಿ, ನೀರಿನ ಸಂಪರ್ಕ ಸಹಿತ ಇತರ ಸೇವೆಗಳ ನೀಡಿಕೆ, ನಗದು ರಹಿತ ಪಾವತಿ ಉತ್ತೇಜಿಸಲು ಗ್ರಾಪಂನಲ್ಲಿ ಯುಪಿಐ, ಡೆಬಿಟ್ ಕಾರ್ಡ್ ಮೂಲಕ ತೆರಿಗೆ ವಸೂಲಾತಿ, ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿ ರಚನೆ, ಜಾಗೃತಿ ಶಿಬಿರಗಳ ಮೂಲಕ ಬಾಲ್ಯ ವಿವಾಹ ಹಾಗೂ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕ್ರಮ, ಗ್ರಾಪಂನಲ್ಲಿ ಗ್ರಾಮಸ್ಥರ ಸಹಭಾಗಿತ್ವವನ್ನು ಖಚಿತಪಡಿಸಲು ಗ್ರಾಮಸಭೆ, ಮಹಿಳಾ ಗ್ರಾಮಸಭೆ, ಪರಿಶಿಷ್ಟ ಜಾತಿ, ಪಂಗಡ ಕುಂದುಕೊರತೆ ಸಭೆ, ವಿಶೇಷಚೇತನ ಸಮನ್ವಯ ಗ್ರಾಮಸಭೆ, ಕೆಡಿಪಿ ಸಭೆ, ಸಾಮಾನ್ಯ ಸಭೆ, ಸಮಿತಿಗಳ ಸಭೆ, ಜಿಪಿಎಲ್‌ಎಫ್ ಒಕ್ಕೂಟದಲ್ಲಿ ಒಟ್ಟು 32 ಸಂಘಗಳಿಗೆ ಕೌಶಲ್ಯ ತರಬೇತಿ, ಮಾಸಿಕ ಸಂತೆ ಆಯೋಜನೆ. ಒಕ್ಕೂಟದ ಸದಸ್ಯರು, ಅಕ್ಕ ಸಂಜೀವಿನಿ ಅಂಗಡಿ ಮತ್ತು ಸ್ವಉದ್ಯೋಗ ಮೂಲಕ ಜೀವನೋಪಾಯ ಸಹಿತ ಅಂಶಗಳನ್ನು ಪರಿಗಣಿಸಿ ಗಾಂS ಗ್ರಾಮ ಪುರಸ್ಕಾರ ನೀಡಲಾಗಿದೆ.



ಸ್ವಯಂ ಆಡಳಿತ ಸಂಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಣೆ ಮಾಡಬೇಕು ಎಂಬ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗಾಂಧಿ ಗ್ರಾಮ ಪುರಸ್ಕಾರ ನೀಡುತ್ತಾ ಬಂದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಆರು ಆರೋಪಿಗಳ ಬಂಧನ

ಬೆಂಗಳೂರು: ಸಿಸಿಬಿ ವಿಶೇಷ ವಿಚಾರಣಾ ದಳವು ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದ ಜಾಲವನ್ನು ಭೇದಿಸಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ಖಾಲಿ ಇರುವ ಎಸ್‌ಡಿಎ, ಎಫ್‌ಡಿಎ, ಪ್ರೊಸೆಸ್ ಸರ್ವರ್, ಪೀವನ್ ಹಾಗೂ ಡ್ರೈವರ್ ಹುದ್ದೆಗಳನ್ನು ಕೊಡಿಸುವುದಾಗಿ ನಂಬಿಸಿ ಸುಮಾರು 450ಕ್ಕೂ ಹೆಚ್ಚು ಜನರಿಂದ ಹಣ ವಸೂಲಿ ಮಾಡಿದ್ದ ಆರು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ಒಟ್ಟು 38 ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಈ ವಂಚಕ ಜಾಲವು ಸಹಕಾರ ನಗರದಲ್ಲಿರುವ ದೀಕ್ಷಾ ಎಜುಕೇಶನ್ ಅಕಾಡೆಮಿ ಮತ್ತು ಆಶೀರ್ವಾದ್ ಎಂಟರ್‌ಪ್ರೈಸಸ್ ಕಚೇರಿಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿತ್ತು. ಉದ್ಯೋಗಾಕಾಂಕ್ಷಿಗಳನ್ನು ಸೆಳೆಯಲು ಏಜೆಂಟರುಗಳನ್ನು ನೇಮಿಸಿಕೊಂಡಿದ್ದ ಈ ತಂಡ, ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿಗಳನ್ನು ಆನ್‌ಲೈನ್ ಮತ್ತು ನಗದು ರೂಪದಲ್ಲಿ ಪಡೆದುಕೊಳ್ಳುತ್ತಿತ್ತು. ನಂಬಿಕೆ ಹುಟ್ಟಿಸಲು ಅಭ್ಯರ್ಥಿಗಳಿಂದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿಸಿಕೊಂಡು, ಗ್ರೀನ್‌ಶೀಟ್, ಎಂಬ ಫಾರ್ಮೆಟ್‌ನಲ್ಲಿ ಸಹಿ ಹಾಗೂ ಹೆಬ್ಬೆರಳಿನ ಗುರುತುಗಳನ್ನು ಪಡೆಯುತ್ತಿದ್ದರು.

ಈ ಜಾಲದ ಅಸಲಿಯತ್ತು ಏನೆಂದರೆ, ಅಭ್ಯರ್ಥಿಗಳಿಗೆ ನ್ಯಾಯಾಲಯದ ನಕಲಿ ಸಹಿ ಮತ್ತು ಸೀಲು ಇರುವ ಉದ್ಯೋಗ ಆಯ್ಕೆ ಪಟ್ಟಿ ಹಾಗೂ ಆದೇಶ ಪ್ರತಿಗಳನ್ನು ನೀಡಿ ವಂಚಿಸಲಾಗುತ್ತಿತ್ತು. ಈ ಸಂಬಂಧ ಸಿಸಿಬಿ ಮತ್ತು ಕೊಡಿಗೇಹಳ್ಳಿ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು ತನಿಖೆ ಚುರುಕುಗೊಂಡಿದೆ. ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇತರ ಸಹಚರರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಈ ಕಾರ್ಯಾಚರಣೆಯು ಅವರ ಪೊಲೀಸ್ ಆಯುಕ್ತ ಅಜಯ್ ಹಿಲೋರಿ ಮತ್ತು ಡಿಸಿಪಿ ಶ್ರೀಹರಿಬಾಬು ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದಿದೆ.

ರಾಮ ಬಾಣ



ಸರ್ಕಾರದಿಂದ ಜನಪರ ಕೆಲಸ: ಉಗ್ರಪ್ಪ

ದಾವಣಗೆರೆ: ಪ್ರಸಕ್ತ ಉಪಚುನಾವಣೆಯ ಫಲಿತಾಂಶವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರಲಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರವು ಸದಾ ಜನಪರ ಕೆಲಸ ಮಾಡುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಕೇವಲ ಮಾತಿನಲ್ಲಿ ಮರಳು ಮಾಡುವ ಮೂಲಕ ಮತ ಹಾಕಿಸಿಕೊಂಡು ಜನರನ್ನು ವಂಚಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಂಧನ ಬೆಲೆಗಳನ್ನು ಏರಿಸುತ್ತಲಿದೆ. ಕೋವಿಡ್ ಸಮಯದಲ್ಲಿ ಪಿಎಂ ಕೇರ್ ಫಂಡ್ ಮೂಲಕ ಸಾವಿರಾರು ಕೋಟಿ ರೂ. ಸಂಗ್ರಹಿಸಿದ್ದರೂ, ಅದರ ಯಾವುದೇ ಲೆಕ್ಕಾಚಾರ ಈವರೆಗೂ ಜನರಿಗೆ ಸಿಕ್ಕಿಲ್ಲ. ಅದಕ್ಕೆ ಆದಾಯ ತೆರಿಗೆ ಇಲಾಖೆಯಾಗಲಿ, ಇಡಿ ಯಾಗಲಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಮಳೆಗಾಲದಲ್ಲಿ ಜಾಗ್ರತೆ ಇರಲಿ: ರಾಜೇಂದ್ರ

ಬೆಂಗಳೂರು: ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆ ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಯಾವುದೇ ಕೆಲಸವನ್ನು ಪ್ರೀತಿಯಿಂದ ಮಾಡಿದಾಗ ಮಾತ್ರ ಪ್ರಗತಿ ಕಾಣಲು ಸಾಧ್ಯ
– ಕಿರಣ್ ಕೊಡ್ಲಿ

– ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬುದು ಹಳೆಯ ಗಾದೆ . ಕೆಲಸ ಸಿಗುವ ಆಸೆ, ಸಂಬಳದ ಮೇಲೆ ಪ್ರೀತಿ ಎಂಬುದು ಲೇಟೆಸ್ಟ್ ತಗಾದೆ!

ದಿನ ಭವಿಷ್ಯ

ಮೇಷ ಭಾವುಕ ಸನ್ನಿವೇಶ. ನಿಮ್ಮ ಮನಸ್ಸಿನ ದೌರ್ಬಲ್ಯ ಎಲ್ಲರಿಗೂ ತಿಳಿಯದಂತೆ ಎಚ್ಚರ ವಹಿಸಿ. ಕೌಟುಂಬಿಕ ಅಶಾಂತಿ ಹೆಚ್ಚಲು ಅವಕಾಶ ಕೊಡಬೇಡಿ.

ವೃಷಭ ನಿಮ್ಮ ಪ್ರಗತಿಗೆ ಅಡ್ಡಿ ತರುತ್ತಿರುವ ವಿಷಯ ಪರಿಹರಿಸಿಕೊಳ್ಳಿ. ನಿಮ್ಮ ಬಗ್ಗೆ ಕೆಲವರು ಈರ್ಷ್ಯೆ ತೋರುವರು. ಅವರಿಂದ ಟೀಕೆ ಕೇಳುವಿರಿ.

ಮಿಥುನ ಸ್ವಂತ ವ್ಯವಹಾರದಲ್ಲಿ ಎಚ್ಚರದಿಂದ ಹೆಜ್ಜೆ ಇಡಿ. ಸಮೀಪ ಬಂಧುಗಳ ಅಸಹಕಾರ ಎದುರಿಸುವಿರಿ. ಮನೆಯಲ್ಲಿ ಬಿಗು ವಾತಾವರಣ ಸಂಭವ.

ಕಟಕ ಕೆಲಸದ ಒತ್ತಡದಿಂದ ಹೊರಬಂದು ಕುಟುಂಬ ಸದಸ್ಯರ ಜತೆ ಕಾಲ ಕಳೆಯಿರಿ. ಅವರ ಸಂತೋಷಕ್ಕೂ ಗಮನ ಕೊಡಿ. ಧನವ್ಯಯ.

ಸಿಂಹ ಕಠಿಣವೆಂದು ಭಾವಿಸಿದ ಕಾರ್ಯ ಸುಲಭದಲ್ಲಿ ಪೂರ್ಣ. ಆದರೂ ಏನೋ ಕೊರಗು ಉಳಿಯಲಿದೆ. ಬಂಧು ಜತೆ ತಿಕ್ಕಾಟ ಸಂಭವ.

ಕನ್ಯಾ ಕಾಯುತ್ತಿದ್ದ ಅವಕಾಶವೊಂದು ಇಂದು ಸಿಗುವುದು. ಆದರೆ ಅದರಿಂದ ನಿಮಗೆ ಹೆಚ್ಚು ಲಾಭವಾಗದು. ಕೌಟುಂಬಿಕ ವೈಮನಸ್ಸು.

ತುಲಾ ಹೆಚ್ಚು ಉತ್ಸಾಹದ ದಿನ. ಸಣ್ಣ ವಿಷಯಕ್ಕೆ ಅತಿಯಾದ ಪ್ರಾಮುಖ್ಯತೆ ಕೊಡಬೇಡಿ. ಸಂಘರ್ಷಕ್ಕಿಂತ ಹೊಂದಾಣಿಕೆ ಒಳಿತು. ಆರ್ಥಿಕ ಉನ್ನತಿ.

ವೃಶ್ಚಿಕ ಹೊಸ ವ್ಯವಹಾರಕ್ಕೆ ಈಗಲೆ ಕೈಹಾಕದಿರಿ. ವಿಘ್ನಗಳು ಕಾಡಬಹುದು. ನಿಮ್ಮ ತಪ್ಪು ತಿದ್ದಿಕೊಳ್ಳಿ. ಟೀಕೆಗೆ ಅವಕಾಶ ಕೊಡಬೇಡಿ.

ಧನು ಗುರಿ ಸಾಧನೆಗೆ ಕೆಲವರು ಅಡ್ಡಗಾಲು ಹಾಕುವರು. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧುಗಳ ಜತೆ ಜಗಳವಾಡದಿರಿ.

ಮಕರ ವಿರೋಧಿಗಳ ಮನಸ್ಸನ್ನೂ ಇಂದು ಒಲಿಸಬಲ್ಲಿರಿ. ಇದು ನಿಮ್ಮ ವ್ಯವಹಾರವನ್ನು ಸುಲಲಿತಗೊಳಿಸಲಿದೆ. ಆರ್ಥಿಕ ಸ್ಥಿತಿ ಉನ್ನತಿ.

ಕುಂಭ ನಿಮ್ಮ ನಿಲುವಿನಲ್ಲಿ ಬದಲಾವಣೆ ತರುವ ಬೆಳವಣಿಗೆ. ನಿಮ್ಮ ಮೂಗಿನ ನೇರಕ್ಕೇ ವ್ಯವಹರಿಸಬೇಡಿ. ಇತರರ ಮಾತಿಗೂ ಬೆಲೆಯಿರಲಿ.

ಮೀನ ಕೆಲಸದ ಒತ್ತಡದಿಂದ ಮುಕ್ತಿ. ಸ್ವಲ್ಪ ಮಟ್ಟಿನ ನಿರಾಳತೆ. ಮನೆಯಲ್ಲೂ ಪೂರಕ ಬೆಳವಣಿಗೆ. ಮಕ್ಕಳ ಸಾಧನೆಯಿಂದ ತೃಪ್ತಿ. ಖರ್ಚು ಹೆಚ್ಚಬಹುದು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 7,4,2,5

ವಿದ್ಯುತ್-ಸೌರ ಸ್ಟವ್ ಬಳಸಿ

ಪುಟ 1 ➔ ಹೋಟೆಲ್, ಡಾಬಾ, ರೆಸ್ಟೋರೆಂಟ್, ಕ್ಯಾಂಟೀನ್, ಕೆಫೆ, ಬೇಕರಿ, ಸಮುದಾಯ ಅಡುಗೆ ಕೇಂದ್ರ, ಪಿ.ಜಿ, ವಸತಿನಿಲಯಗಳಿಗೆ 17,500 ಸಿಲಿಂಡರ್, ಬೀಜ ಸಂಸ್ಕರಣೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ 6000, ಇತರ ಆವಶ್ಯಕತೆ ಆಧಾರದ ಮೇಲೆ 563 ಸಿಲಿಂಡರ್ ಸೇರಿದಂತೆ ಒಟ್ಟು 29,463 ವಾಣಿಜ್ಯ ಸಿಲಿಂಡರ್ ನಿತ್ಯ ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಸರಣಿ ಅಪಘಾತ: ಚಾಲಕನಿಗೆ ಥಳಿತ

ನೆಲಮಂಗಲ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ– ಕುಣಿಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಸಂಜೆ ಸರಣಿ ಅಪಘಾತ ಸಂಭವಿಸಿದೆ. ಹಾಸನದಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಪುಷ್ಪಕ್ ಪ್ಲಸ್ ಇವಿ ಬಸ್ ಓವರ್ ಟೇಕ್ ಮಾಡಲು ಹೋಗಿ ಎರಡು ಕಾರುಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಒಂದು ಕಾರಿನ ಹಿಂಭಾಗ ನಜ್ಜುಗುಜ್ಜಾಗಿದ್ದು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಚಾಲಕ ಮತ್ತು ಉಳಿದ ವಾಹನಗಳ ಚಾಲಕರು, ಪ್ರಯಾಣಿಕರ ಮಧ್ಯೆ ವಾಗ್ವಾದ ನಡೆದಿದ್ದು, ಬಸ್ ಚಾಲಕನಿಗೆ ಥಳಿಸಿದ್ದಾರೆ. ಸಾಮಾನ್ಯವಾಗಿ ಭಾನುವಾರ ಊರಿನಿಂದ ಬೆಂಗಳೂರಿಗೆ ಬರುವ ವಾಹನಗಳ ಸಂಖ್ಯೆ ಈ ಹೆದ್ದಾರಿಯಲ್ಲಿ ಜಾಸ್ತಿ ಇರುತ್ತದೆ ಎಂದು ಸ್ಥಳೀಯರು ಕಿಡಿಕಾರಿದ್ದಾರೆ. ಚಾಲಕ ಮತ್ತು ಸವಾರರ ಮಧ್ಯೆ ಜಗಳ ನಡೆದ ಪರಿಣಾಮ ಹೆದ್ದಾರಿಯಲ್ಲಿ ಕೆಲವು ಗಂಟೆಗಳ ಕಾಲ ಕಿಲೋಮೀಟರ್‌ಗಟ್ಟಲ್ಲೇ ವಾಹನಗಳ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಸಮಿತಿ ರಚಿಸಿದ ಸರ್ಕಾರ | 30 ಲಕ್ಷ ರೂ. ಅನುದಾನ | 250 ಪುಟದ ಪುಸ್ತಕ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಕೃತಿ

ದೇವಿತಾ ಸಿ.ಎಸ್.

ದಿಗಂತ ವಿಶೇಷ

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ.

ಅಂಬೇಡ್ಕರ್ ಅವರ ಬರವಣಿಗೆ, ಆಲೋಚನಾ ಕ್ರಮದ ಅರಿವು ದೇಶಕ್ಕೆ ಎಷ್ಟು ಮುಖ್ಯವೆಂಬುದು ಇಂದು ಎಲ್ಲರಿಗೂ ಅರ್ಥವಾಗಿದೆ. ಕನ್ನಡಿಗರು ಮಹಾತ್ಮ ಗಾಂಧಿ ಅವರನ್ನು ತಿಳಿದಷ್ಟು ಅಂಬೇಡ್ಕರ್ ಬಗ್ಗೆ ತಿಳಿಯಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಹುಟ್ಟು, ಬೆಳವಣಿಗೆ, ಶಿಕ್ಷಣ, ವೃತ್ತಿ, ಸಾಮಾಜಿಕ ಹೋರಾಟ, ರಾಜಕೀಯ ಜೀವನ ಸೇರಿದಂತೆ ಅವರ ಜೀವಿತ ಕಾಲದಲ್ಲಿ ಮಾಡಿದ ಮಹತ್ವಪೂರ್ಣ ಸಾಧನೆಗಳು ಪುಸ್ತಕದಲ್ಲಿ ಇರಲಿವೆ.

ಸರ್ಕಾರದಿಂದಲೇ ಸಮಿತಿ ರಚನೆ: ಸರ್ಕಾರವೇ ಪುಸ್ತಕ ರಚನಾ ಸಮಿತಿ ರೂಪಿಸಿದ್ದು, ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಹಾಗೂ ಡಾ. ರವಿಕುಮಾರ್ ನೀಹಾ ಸಂಪಾದಕರಾಗಿ, ಇಂದೂಧರ ಹೊನ್ನಾಪುರ, ಡಾ. ಎಲ್.ಹನುಮಂತಯ್ಯ, ಡಾ. ಬಂಜಗೆರೆ ಜಯಪ್ರಕಾಶ್, ದು.ಸರಸ್ವತಿ ಅವರು ಸಲಹಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅವರ ಸಲಹೆ ಮೇರೆಗೆ 20 ವಿಷಯ ಆಯ್ಕೆ ಮಾಡಿಕೊಂಡು, ಯಾವ ಲೇಖಕರಿಂದ ಬರೆಸಬೇಕು ಎಂದು ತೀರ್ಮಾನಿಸಲಾಗುವುದು. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

20 ವಿಷಯ, 20 ಲೇಖನ

ಅಂಬೇಡ್ಕರ್ ಅವರು ಮಹಿಳೆಯರ ಸ್ವಾತಂತ್ರ್ಯ, ಸಮಾನ ಅವಕಾಶ, ಕಾರ್ಮಿಕರ ಕಲ್ಯಾಣಕ್ಕಾಗಿ ನೀಡಿದ ಕೊಡುಗೆ ಅನನ್ಯ. ಜತೆಗೆ, ಮಹಿಳಾ ಮೀಸಲಾತಿ ವಿಧೇಯಕ ಅಂಗೀಕಾರವಾಗದ ಕಾರಣ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡಿದ ಚೇತನ ಅಂಬೇಡ್ಕರ್ ವಿಷಯವಲ್ಲದೆ ಅವರ ಧಾರ್ಮಿಕ ನಿಲುವು, ಬೌದ್ಧ ಧಮ್ಮ ಸ್ವೀಕಾರ, ಸಾಮಾಜಿಕ ಸುಧಾರಣೆ, ಇತಿಹಾಸದ ದಾಖಲೆ, ರಾಜಕೀಯ, ಪತ್ರಿಕೋದ್ಯಮ ಜೀವನ ಆಧಾರದಲ್ಲಿ 20 ವಿಷಯ ಕುರಿತು 20 ಲೇಖನಗಳು ಈ ಪುಸ್ತಕದಲ್ಲಿರಲಿವೆ.

ಅಂಬೇಡ್ಕರ್ ಜಯಂತಿಗೆ ಲೋಕಾರ್ಪಣೆ



ಪುಸ್ತಕ ರಚನೆ ಕಾರ್ಯ ಚುರುಕುಗೊಳಿಸಲಾಗಿದ್ದು, 2026ರ ಏ.14 (ಅಂಬೇಡ್ಕರ್ ಜಯಂತಿ)ರಂದು ಲೋಕಾರ್ಪಣೆಗೊಳಿಸುವ ಉದ್ದೇಶವಿದೆ. ಅದೇ ವೇಳೆ ಪುಸ್ತಕದ ಡಿಜಿಟಲ್ ಆವೃತ್ತಿಯನ್ನೂ ಲೋಕಾರ್ಪಣೆಗೊಳಿಸಲು ಅಕಾಡೆಮಿ ನಿರ್ಧರಿಸಿದೆ.

10 ಸಾವಿರ ಪ್ರತಿ ಮುದ್ರಣ

ಒಂದೇ ಬಾರಿ ಪುಸ್ತಕದ 10 ಸಾವಿರ ಪ್ರತಿಗಳನ್ನು ಮುದ್ರಿಸಲು ನಿರ್ಧರಿಸಲಾಗಿದೆ. ಇವುಗಳನ್ನು ಜನರಿಗೆ ತಲುಪಿಸುವುದೇ ಮುಖ್ಯ ಉದ್ದೇಶವಾಗಿರುವುದರಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿ ಒದಗಿಸುವುದು ಅಥವಾ 20-30 ರೂ.ಗೆ ದರ ನಿಗದಿ ಮಾಡುವ ಆಲೋಚನೆಯಿದೆ.

ಅಂಬೇಡ್ಕರ್ ಕುರಿತ ಪ್ರಮುಖ ಅಂಶಗಳನ್ನು ಅತಿ ಸರಳ ಭಾಷೆಯಲ್ಲಿ ಪುಸ್ತಕದಲ್ಲಿ ಅಳವಡಿಸಲಾಗುವುದು. ಅಂಬೇಡ್ಕರ್ ಕುರಿತು ಎಷ್ಟು ಪುಸ್ತಕ ಬಂದರೂ ಕಡಿಮೆಯೇ. ಅದರಂತೆ, ಇದು ಪುಸ್ತಕ ರಚನೆಯಲ್ಲ, ಚಳವಳಿ.
■ **ಪ್ರೊ.ಎಲ್.ಎನ್. ಮುಕುಂದರಾಜ್,** ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಪರಪ್ಪನ ಜೈಲ್ ವಿಡಿಯೋ ಮೂರು ಸಿಬ್ಬಂದಿ ಅಮಾನತು

ಬೆಂಗಳೂರು: ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

ವಿಡಿಯೋ ವೈರಲ್ ಆದ ಬೆನ್ನಲ್ಲೇ ಡಿಜಿಪಿ ಅಲೋಕ್ ಕುಮಾರ್ ಜೈಲಿನ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶಿಸಿದ್ದಾರೆ. ಕೈದಿಗಳಿದ್ದ ಬ್ಯಾರಕ್ ನೋಡಿಕೊಳ್ಳುತ್ತಿದ್ದ ಶಿವಾನಂದ ಕರ್ಲಬಟ್ಟಿ, ನಿರಂಜನ್ ಎ. ಕಾಮತ್ ಮತ್ತು ಹನುಮಂತಪ್ಪ ಹಡಪದ್ ಅವರನ್ನು ಅಮಾನತುಗೊಳಿಸಿದ್ದಾರೆ.

ಮತ್ತೊಂದೆಡೆ ವಿಡಿಯೋ ವೈರಲ್ ಆಗುತ್ತಿದ್ದಂತೆ ಪೊಲೀಸ್ ಅಧಿಕಾರಿಗಳು ಜೈಲಿನ ಮೇಲೆ ದಾಳಿ ನಡೆಸಿ, 9 ಮೊಬೈಲ್‌ಗಳು ಮತ್ತು 6 ಸಿಮ್ ಕಾರ್ಡ್‌ಗಳು, ಇಯರ್‌ಬಡ್ಸ್, ಚಾರ್ಜರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಜೊತೆಗೆ, ಕೇಂದ್ರ ಕಾರಾಗೃಹದ 1ನೇ ಬ್ಯಾರಕ್‌ನಲ್ಲಿ ಪರಿಶೀಲನೆ ನಡೆಸಿದಾಗ ಡ್ರೇನೇಜ್ ಮಾರ್ಗದಲ್ಲಿ ಮೊಬೈಲ್‌ಗಳು ಪತ್ತೆಯಾಗಿವೆ. ಹಾಲಿನ ಪ್ಯಾಕೆಟ್‌ಗಳಲ್ಲಿ ಸುತ್ತಿ ಅಡಗಿಸಲಾಗಿದ್ದ ಮೊಬೈಲ್‌ಗಳನ್ನು ಅಧಿಕಾರಿಗಳು ಕೈದಿಗಳಿಂದ ಹೊರತೆಗೆಸಿದ್ದಾರೆ.

ಜೈಲಿನಲ್ಲಿ ಸುತ್ತಮುತ್ತಲಿನ ಕೆಲವು ಕಡೆಗಳಲ್ಲಿ ಏರ್‌ಟೆಲ್ ಸಿಗ್ನಲ್‌ಗಳು ಸಿಗುತ್ತಿರುವ ಮಾಹಿತಿ ಲಭ್ಯವಾಗಿದ್ದು, ಅದನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಜೈಲಾಧಿಕಾರಿಗಳೇ ಷಡ್ಯಂತ್ರ?: ಕಾರಾಗೃಹದಲ್ಲಿ ಅಲೋಕ್ ಕುಮಾರ್ ಅವರು ಕೈಗೊಂಡಿದ್ದ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಲ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಕೈದಿಗಳು ಮಾತ್ರವಲ್ಲದೆ, ಜೈಲಿನ ಅಧಿಕಾರಿಗಳೇ ಅಲೋಕ್ ಕುಮಾರ್ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದರು.

ಈ ಬೆನ್ನಲ್ಲೇ ಅದಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಉದ್ದೇಶ ದಿಂದ ಈ ವಿಡಿಯೋ ಮಾಡಿ ಹರಿಬಿಟ್ಟಿದ್ದಾರೆ. ಇದರಲ್ಲಿ ಜೈಲು ಸಿಬ್ಬಂದಿ ಕೈವಾಡವೂ ಇದೆ ಎಂಬುದು ತಿಳಿದುಬಂದಿದೆ.

ಏನಿದು ಪ್ರಕರಣ

ಕಳೆದ ಶನಿವಾರ ರಾತ್ರಿ 9 ಗಂಟೆ ಸುಮಾರಿಗೆ ವೆಬ್‌ಪೋರ್ಟಲ್‌ನಲ್ಲಿ ಪರಪ್ಪನ ಅಗ್ರಹಾರ ಜೈಲಿನಿಂದ ಚಿತ್ರೀಕರಿಸಿದ್ದಂತಹ ಐಪಿಎಲ್ ಮ್ಯಾಚ್ ಇದೆ ಎಂದು ಹೇಳಿವುದರ ಜೊತೆಗೆ ಜೈಲಿನಲ್ಲಿ ಮೊಬೈಲ್, ಟಿವಿ- ನೆಟ್ ಫ್ಲಿಕ್ಸ್ ಸೌಲಭ್ಯಗಳಿವೆ ಎಂಬ ಮೂರು ವಿಡಿಯೋಗಳನ್ನು ಅಪ್ಲೋಡ್ ಮಾಡಲಾಗಿತ್ತು. ಈ ಮೊಬೈಲ್‌ಗಳನ್ನು ಡಿಜಿಪಿ ಅಲೋಕ್ ಕುಮಾರ್ ಅವರೇ ತಂದು ಕೊಟ್ಟಿದ್ದಾರೆ ಎಂದು ವಿಡಿಯೋದಲ್ಲಿರುವ ವ್ಯಕ್ತಿಗಳು ಆರೋಪಿಸಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.

ಹಿಂದಿ ಕೈಬಿಟ್ಟದ್ದು ಸರಿಯಲ್ಲ

ಪುಟ 1 ➔ ಕಳೆದ ಹಲವು ದಶಕಗಳಿಂದ ದೇಶದಲ್ಲೇ ಮಾದರಿ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಹೊಂದಿರುವ ಕರ್ನಾಟಕದಲ್ಲಿ ಯಾವುದೇ ಪೂರ್ವಾಪರ ಚರ್ಚೆ, ಶಿಕ್ಷಣ ತಜ್ಞರ ಸಲಹೆ, ಪ್ರತಿಪಕ್ಷಗಳ ನಿಲುವು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಿಂದಿ ಭಾಷೆ ಕೈಬಿಡುವ ನಿರ್ಧಾರ ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ ಎಂದಿದ್ದಾರೆ.

ನಾವು ಕನ್ನಡ ಭಾಷೆಯಲ್ಲಿ ಕಲಿಕೆಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಕನ್ನಡ ನಮ್ಮ ಮಾತೃಭಾಷೆ. ಕನ್ನಡವು ನಮ್ಮ ಬೋಧನಾ ಭಾಷೆಯಾಗಿ, ಜಾಗತಿಕ ದೃಷ್ಟಿಕೋನದಿಂದ ಇಂಗ್ಲಿಷ್ ಕಲಿಕೆಗೂ ನಮ್ಮ ಅಭ್ಯಂತರವಿಲ್ಲ. ಹಾಗೆಯೇ ಕನ್ನಡಿಗರು ದೇಶದ ಅನೇಕ ರಾಜ್ಯಗಳಿಗೆ ಉದ್ಯೋಗ ಅರಸಿ ಹೋದಾಗ ಕನಿಷ್ಠ ಮಟ್ಟದ ಹಿಂದಿ ಭಾಷಾ ಜ್ಞಾನ ಇರಬೇಕಾಗುತ್ತದೆ. ಕೇಂದ್ರ ಸರ್ಕಾರದ ಉದ್ಯೋಗಗಳಿಗೆ ಸೇರ್ಪಡೆಗೊಳ್ಳುವ ಕರ್ನಾಟಕದ ಯುವ ಸಮೂಹವು ರಾಷ್ಟ್ರಮಟ್ಟದಲ್ಲಿ ಹಿಂದೆ ಬೀಳಬಾರದು ಎಂಬ ಕಾಳಜಿ ನಮ್ಮದು ಎಂದು ಅಭಿಪ್ರಾಯಿಸಿದ್ದಾರೆ.

ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಅನುಸರಿಸಲಾಗುತ್ತಿರುವ ತ್ರಿಭಾಷಾ ಸೂತ್ರವೂ ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್‌ನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿಯನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಆದರೂ ಹಿಂದಿ ಭಾಷೆಯನ್ನು ಕೈಬಿಡುವುದಾದರೆ ಇದರ ಬಗೆಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಎಲ್ಲ ಭಾಷೆಯ ಸಾಹಿತಿಗಳು ಸೇರಿದಂತೆ ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸುವ ಅಗತ್ಯವಿದೆ ಎಂದು ವಿಜಯೇಂದ್ರ ಹೇಳಿದ್ದಾರೆ.

ಕೇರಳ ಚುಕ್ಕಾಣಿ ನಮ್ದೇ

ಪುಟ 1 ➔ ಯುವಜನರು, ಮಹಿಳೆಯರು ಮತ್ತು ಕೃಷಿಕರು ಬಿಜೆಪಿಗೆ ಬೆಂಬಲವಾಗಿ ನಿಂತಿದ್ದಾರೆ ಎಂದು ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯನ್ನು ಮೋದಿ ಉಲ್ಲೇಖಿಸಿದ್ದಾರೆ.

ಕೇರಳದಲ್ಲಿ ಮಾತ್ರ ಬದ್ಧವೈರಿಗಳು: ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳು ಕೇರಳದಲ್ಲಿ ಮಾತ್ರ ಪರಸ್ಪರ ಬದ್ಧವೈರಿಗಳಂತೆ ಪೈಪೋಟಿ ನಡೆಸುತ್ತವೆ. ಆದರೆ ಕೇರಳ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಸ್ನೇಹ ಹೊಂದಿವೆ. ಕೇರಳ ಜನತೆಯ ಕಣ್ಣಿಗೆ ಮಣ್ಣೆರಚುವುದಕ್ಕಾಗಿ ಬದ್ಧವೈರಿಗಳಂತೆ ನಾಟಕವಾಡುತ್ತವೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಪರಸ್ಪರ ಬೈಯುತ್ತವೆ. ಇವೆರಡೂ ಬಣಗಳ ಬಗ್ಗೆ ಕೇರಳದ ಮಹಾಜನತೆ ಎಚ್ಚರದಿಂದ ಇರಬೇಕೆಂದು ಮೋದಿ ಹೇಳಿದ್ದಾರೆ.

ಭಯ ಹುಟ್ಟಿಸಿದೆ ಬಿಜೆಪಿ ಬೆಳವಣಿಗೆ: ಕೇರಳದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯು ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳಲ್ಲಿ ಭಯ ಹುಟ್ಟಿಸಿದೆ. ಬಿಜೆಪಿ ಏನಾದರೂ ಅಧಿಕಾರಕ್ಕೇರಿದರೆ ತಮ್ಮ ಕೆಟ್ಟ ಕೆಲಸಗಳೆಲ್ಲವೂ ಬಯಲಿಗೆಳೆಯುತ್ತಾರೆ ಎಂಬ ಭಯ ಇವೆರಡೂ ಬಣಗಳಿಗಿವೆ ಎಂದು ಮೋದಿ ಹೇಳಿದ್ದಾರೆ.

ಸಮರ್ಥ್ ಮತಯಾಚನೆ



ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಭಾನುವಾರ ಜಾಲಿನಗರ ಹಾಗೂ ಸುರೇಶ್ ನಗರ ಭಾಗಗಳಲ್ಲಿ ಕಾಲ್ನಡಿಗೆ ಮೂಲಕ ಮನೆ-ಮನೆಗೆ ತೆರಳಿ ಮತಯಾಚನೆ ನಡೆಸಿದರು.

ಈ ವೇಳೆ ಹಿರಿಯರೊಂದಿಗೆ ಸಮಾಲೋಚನೆ ನಡೆಸಿದ ಅವರು, ಹಿರಿಯರ ಅನುಭವ ಹಾಗೂ ಯುವಜನರ ಆಲೋಚನೆಗಳು ಒಟ್ಟಿಗೆ ಮೈದಳೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ. ನನ್ನ ತಾತನವರ ಮಾರ್ಗದರ್ಶನವೇ ನನಗೆ ಪ್ರೇರಣೆಯಾಗಿದೆ. ತಾತನವರು ಸಚಿವರು, ಸಂಸದರು ಹಾಗೂ ಶಾಸಕರಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಜನಮನದಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಅವರ ಆದರ್ಶಗಳನ್ನು ಅನುಸರಿಸಿ ನಾನು ಕೂಡ ಜನಸೇವೆಯಲ್ಲಿ ತೊಡಗಿದ್ದೇನೆ ಎಂದರು.

ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ತಾತನವರೇ ನನಗೆ ಸ್ಫೂರ್ತಿ. ಅವರಂತೆ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ನನಗೆ ಮತ ನೀಡಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ನೀಡಬೇಕು ಎಂದು ಅವರು ಮನವಿ ಮಾಡಿದರು.

ಭೂ ದಾಳಿ ನಡೆದರೆ, ಪ್ರತಿದಾಳಿಗೆ ಸಿದ್ಧ

ಪುಟ 1 ➔ ತಿಂಗಳಿನಿಂದ ಮುಂದುವರಿದಿರುವ ಈ ಯುದ್ಧದಲ್ಲಿ 3,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯಿಂದ ಯುದ್ಧ ಆರಂಭವಾಗಿ, ನಂತರ ಇರಾನ್ ಇಸ್ರೇಲ್ ಹಾಗೂ ಗಲ್ಫ್ ಪ್ರದೇಶದ ಅರಬ್ ರಾಷ್ಟ್ರಗಳ ಮೇಲೆ ಪ್ರತಿದಾಳಿ ನಡೆಸಿದೆ. ಇಸ್ರೇಲ್‌ನ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿ ಇರಾನ್ ಭಾನುವಾರ ಮತ್ತಷ್ಟು ದಾಳಿಗಳನ್ನು ನಡೆಸಿದೆ. ಇದೇ ವೇಳೆ ಟೆಹ್ರಾನ್ ನಗರದಲ್ಲಿ ಸ್ಫೋಟಗಳ ಶಬ್ದಗಳು ಕೇಳಿಬಂದಿವೆ.

ನಿರ್ಬಂಧ ಸಡಿಲಿಸಿದ ಇರಾನ್: ಈ ನಡುವೆ, ಹಾರ್ಮುಜ್ ಸಮುದ್ರ ಮಾರ್ಗದಲ್ಲಿ ಸಾಗುವ ವಾಣಿಜ್ಯ ಹಡಗುಗಳ ಮೇಲಿನ ಕೆಲವು ನಿರ್ಬಂಧಗಳನ್ನು ಇರಾನ್ ಸಡಿಲಿಸಿದೆ. ಪಾಕಿಸ್ತಾನದ ಧ್ವಜ ಹೊಂದಿರುವ 20 ಹಡಗುಗಳಿಗೆ ಸಂಚಾರಕ್ಕೆ ಅನುಮತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಈ ಮಾತುಕತೆಗಳು ಅಮೆರಿಕ ಮತ್ತು ಇರಾನ್ ನಡುವಿನ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರಿಯಾಗಿಲ್ಲ. ಯುದ್ಧ ನಿರ್ಣಾಯಕ ಹಂತ ತಲುಪಿದೆ ಎಂದು ಅಮೆರಿಕ ಹೇಳುತ್ತಿದ್ದರೂ, ಇರಾನ್ ನಾಯಕರು ಸಾರ್ವಜನಿಕವಾಗಿ ಮಾತುಕತೆಗಳನ್ನು ತಳ್ಳಿಹಾಕುತ್ತಿದ್ದಾರೆ. ಒಟ್ಟಿನಲ್ಲಿ, ಈ ಯುದ್ಧ ತೀವ್ರಗೊಳ್ಳುತ್ತಿದ್ದು, ರಾಜತಾಂತ್ರಿಕ ಪ್ರಯತ್ನಗಳು ಇನ್ನೂ ಫಲ ನೀಡಿಲ್ಲ. ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸಂಕೀರ್ಣವಾಗುವ ಸಾಧ್ಯತೆ ಇದೆ.

ಸಾವಿನ ಸಂಖ್ಯೆ ಹೆಚ್ಚಳ: ಈ ಯುದ್ಧದಲ್ಲಿ ಸಾವಿನ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಇರಾನ್‌ನ 1,900ಕ್ಕೂ ಹೆಚ್ಚು ಮಂದಿ, ಇಸ್ರೇಲ್ 19, ಲೆಬನಾನ್ 1,100 ಕ್ಕೂ ಹೆಚ್ಚು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ, ಗಲ್ಫ್ ರಾಷ್ಟ್ರಗಳಲ್ಲಿ 20 ಮತ್ತು ವೆಸ್ಟ್ ಬ್ಯಾಂಕ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಜಾತಿಗಣತಿ ವರದಿ ವಿಳಂಬಕ್ಕೆ ಒಳಮೀಸಲಾತಿ ಗೊಂದಲವೇ ಕಾರಣ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ಒಳಮೀಸಲಾತಿ ಗೊಂದಲ ಬಗೆಹರೆಯದ ಕಾರಣ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ನಡೆಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವರದಿ ವಿಳಂಬವಾಗುವ ಸಾಧ್ಯತೆ ಇದ್ದು, ಮೇ ತಿಂಗಳ ಒಳಗೆ ಸಮೀಕ್ಷೆ ವರದಿಯನ್ನು ಸರ್ಕಾರ ಸ್ವೀಕರಿಸುವುದು ಅನುಮಾನವಾಗಿದೆ.

ಪರಿಶಿಷ್ಟ ಜಾತಿಗಳಿಗೆ ಒಳಮೀಸಲು ಹಂಚಿಕೆ ಮಾಡುವುದು ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದ್ದು, ಮಾ.27ರಂದು ನಿಗದಿಯಾಗಿದ್ದ ವಿಶೇಷ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿತ್ತು. ಆದರೆ, ಉಪಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಕಾರಣ ಒಳಮೀಸಲಾತಿ ಘೋಷಣೆ ಮುಂದಕ್ಕೆ ಹೋಗಿರುವುದರಿಂದ ಜಾತಿಗಣತಿ ವರದಿ ಇನ್ನಷ್ಟು



ಮುಂದಕ್ಕೆ ಹೋಗಲಿದೆ.

ಈ ಹಿಂದೆ ಕಾಂತರಾಜ್ ಆಯೋಗ ಸಲ್ಲಿಸಿದ ವರದಿಯನ್ನು ಅನುಷ್ಠಾನಗೊಳಿಸಲು ಸಾಕಷ್ಟು ಕ್ರಮ ವಹಿಸಿದರೂ ಕೂಡಾ ಪ್ರಬಲ ಸಮುದಾಯಗಳ ವಿರೋಧದಿಂದ ಸ್ವೀಕರಿಸಲಾಗಲಿಲ್ಲ, ಇನ್ನೂ ಮಧುಸೂದನ್ ನಾಯ್ಕ ಅವರ ನೇತೃತ್ವದಲ್ಲಿ ನಡೆಸಿರುವ ವರದಿ ವಿಶ್ಲೇಷಣೆ ಹಂತದಲ್ಲಿದ್ದು, ಕೇಂದ್ರ ಸರ್ಕಾರದ ಜನಗಣತಿಯ ಪೂರ್ವದಲ್ಲೇ ಸ್ವೀಕರಿಸಿದರೆ ಉತ್ತಮ ಎಂದು ಹಿಂದುಳಿದ ನಾಯಕರು ಹೇಳಿದ್ದಾರೆ.

ಮಧುಸೂದನ್ ಆಯೋಗ ಸಲ್ಲಿಸಲಿರುವ ವರದಿಯು ಮುಂದಿನ ಎರಡು ದಶಕಗಳವರೆಗೆ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಹಾಗೂ ಸಾಮಾನ್ಯ ವರ್ಗದ ಜನರ ಜೀವನಮಟ್ಟ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಅರ್ಹತೆ ಸೇರಿದಂತೆ ಹಲವು ಮಹತ್ವದ ವಿಷಯಗಳು ವರದಿಯಲ್ಲಿ ಇವೆ. ಇದರ ಆಧಾರದ ಮೇಲೆ ಹಿಂದುಳಿದ ವರ್ಗಗಳ ಮೀಸಲಾತಿ ವರ್ಗೀಕರಣ ಮರು ಪ್ರತಿಷ್ಠಾಪನೆ ಆಗಲಿದೆ. ಆದರೆ, ಸದ್ಯದ ರಾಜಕೀಯ ಸ್ಥಿತಿಗತಿಯಲ್ಲಿ ವರದಿ ವಿಳಂಬ ಎಂದು ಹೇಳಲಾಗುತ್ತಿದೆ.

ಶೇ.90ರಷ್ಟು ಸಮೀಕ್ಷೆ: ಸೆ.21ರಿಂದ ನ.10 ರವರೆಗೆ 51 ದಿನಗಳ ಕಾಲ ರಾಜ್ಯಾದ್ಯಂತ 1.5 ಲಕ್ಷ ಶಿಕ್ಷಕರು ಹಾಗೂ ಸರ್ಕಾರಿ ನೌಕರರು ಸಮೀಕ್ಷೆ ನಡೆಸಿದ್ದು, ಶೇ.90ಕ್ಕೂ ಹೆಚ್ಚು ಗುರಿ ಸಾಧಿಸಲಾಗಿದೆ. ರಾಜ್ಯಾದ್ಯಂತ ಶೇ.97.51ರಷ್ಟು ಗುರಿ ತಲುಪಿದ್ದರೆ, ಜಿಬಿಎ ವ್ಯಾಪ್ತಿಯಲ್ಲಿ ಶೇ.60ರಷ್ಟು ಗುರಿ ಸಾಧನೆ ಆಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ. ರಾಜ್ಯದಲ್ಲಿ ಸುಮಾರು 6.50 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಸಮೀಕ್ಷೆ ವೇಳೆ ಶೇ.4.22 ಕುಟುಂಬಗಳು ಸಮೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದರೆ, 34.49 ಲಕ್ಷ ಮನೆಗಳು ಖಾಲಿ ಅಥವಾ ಬೀಗ ಹಾಕಿದ್ದವು. ಈ ಗಣತಿಗೆ ಸುಮಾರು 180 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ.

ವರದಿಯ ದತ್ತಾಂಶ ವಿಶ್ಲೇಷಣೆ

ಈಗಾಗಲೇ ಗಣತಿ ಕಾರ್ಯ ಮುಗಿದು 4 ತಿಂಗಳೇ ಗತಿಸಿದ್ದು, ಸಮೀಕ್ಷೆಯೊತ್ತರ ದತ್ತಾಂಶ ವಿಶ್ಲೇಷಣೆ ಕಾರ್ಯ ಪ್ರಗತಿಯಲ್ಲಿದೆ. ಆನ್‌ಲೈನ್ ಮೂಲಕವೇ ಗಣತಿ ಕಾರ್ಯ ಕೈಗೊಂಡಿದ್ದು, ಅಂಕಿ-ಸಂಖ್ಯೆಗಳ ವಿಶ್ಲೇಷಣೆ ನಡೆಸಿ, ಅವುಗಳ ಮೇಲೆ ವರದಿಯನ್ನು ಸಿದ್ಧಪಡಿಸುತ್ತಿದೆ ಆಯೋಗವು ತಿಳಿಸಿದೆ.



ಹಿಂದುಳಿದ ವರ್ಗಗಳ ಆಯೋಗವು ಈಗಾಗಲೇ ಸಮೀಕ್ಷೆ ಮುಗಿಸಿ. ಅಂಕಿ-ಅಂಶಗಳ ಅಧ್ಯಯನ ನಡೆಸಿದೆ. ವರದಿ ಬೇಗನೇ ಸರ್ಕಾರಕ್ಕೆ ಸಲ್ಲಿಕೆ ಆಗುವ ನಿರೀಕ್ಷೆ ಇದೆ. ವರದಿ ಬರುವ ಮೊದಲು ಈ ಬಗ್ಗೆ ಏನನ್ನೂ ಹೇಳಲಾರೆ.
■ **ಶಿವರಾಜ್ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ರಾಜ್ಯಾದ್ಯಂತ ಬೇಸಿಗೆ ಮಳೆ ಚೇತರಿಕೆ

ಬೆಂಗಳೂರು: ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚೇತರಿಕೆ ಕಂಡಿದೆ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2–3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ. ಕೆಲವೆಡೆ ಆಲಿಕಲ್ಲು ಮಳೆಯಾಗಿದ್ದರೆ, ಇನ್ನೂ ಕೆಲವೆಡೆ ಗುಡುಗು–ಸಿಡಿಲು ಸಹಿತ ಗಾಳಿ ಮಳೆಯಾಗುತ್ತಿದೆ. ಶನಿವಾರ ರಾತ್ರಿ ಮತ್ತು ಭಾನುವಾರ ರಾಜಧಾನಿ ಬೆಂಗಳೂರಿನಲ್ಲಿಯೂ ವರ್ಷಧಾರೆಯಾಗಿ ವಾತಾವರಣ ತಂಪಾಗಿದೆ. ಅಲ್ಲದೇ ರಾಜ್ಯದ ಕರಾವಳಿ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಹಲವೆಡೆ ಮಳೆ ಬಿದ್ದಿದೆ.

ಸಾಧಾರಣ ಮಳೆಯ ಸಂಭವ: ಹವಾಮಾನ ಮುನ್ಸೂಚನೆ ಪ್ರಕಾರ, ಏ.4ರವರೆಗೆ ರಾಜ್ಯದ ಹಲವೆಡೆ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆ. ಕೆಲವೆಡೆ ಸಂಜೆ ಹಾಗೂ ರಾತ್ರಿ ವೇಳೆ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ. ಒಂದೆರಡು ಕಡೆ ಬಿರುಗಾಳಿ, ಆಲಿಕಲ್ಲು ಸಹಿತ ಮಳೆಯಾಗುವ ಮುನ್ಸೂಚನೆಗಳಿವೆ. ಏ.2ರ ವರೆಗೆ ಕರಾವಳಿಯ ಮೂರು ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಅಥವಾ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ನಂತರದ ಎರಡು ದಿನ ಉಡುಪಿ ಮತ್ತ ದಕ್ಷಿಣ ಕನ್ನಡ ಜಿಲ್ಲೆಗಳ ಒಂದೆರಡು ಕಡೆ ಹಗುರ ಮಳೆ ಸುರಿಯುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಕಲಬುರಗಿ, ವಿಜಯಪುರ, ಬೀದರ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಂದೆರಡು ಕಡೆ ಸಾಧಾರಣ ಮಳೆ ಸುರಿಯಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಚಾಮರಾಜನಗರ, ಮೈಸೂರು, ಕೋಲಾರ, ತುಮಕೂರು, ಬೆಂಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಲವಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ರಾಜಮುಡಿ ಉತ್ಸವ



ಮೇಲುಕೋಟೆ ಚಲುವನಾರಾಯಣಸ್ವಾಮಿಗೆ ಭಾನುವಾರ ಮುಂಜಾನೆಯಲ್ಲಿ ರಾಜಮುಡಿ ಉತ್ಸವ ವೈಭವದಿಂದ ನೆರವೇರಿತು. ಮಳೆಯನ್ನೂ ಲೆಕ್ಕಿಸದೆ ದರ್ಶನಕ್ಕೆ ಸೇರಿದ್ದ ಭಕ್ತಸ್ತೋಮ.

ಸಮುದಾಯ ಚಿಕ್ಕದು ಸಾಧನೆ ದೊಡ್ಡದು

ಬೆಂಗಳೂರು: ವಿಶ್ವದಾದ್ಯಂತ ಅಂದಾಜು 4 ಲಕ್ಷ ಮಂದಿ ಹವ್ಯಕ ಬ್ರಾಹ್ಮಣರಿರುವ ಈ ಸಮಾಜವು ಅತೀ ದೊಡ್ಡ ಸಮುದಾಯವಲ್ಲ. ಆದರೆ, ಹವ್ಯಕರ ಸಾಧನೆ ಮಾತ್ರ ಗಗನಮುಖಿಯಾಗಿದೆ ಎಂದು ವಿಮರ್ಶಕ, ಕವಿ ಮತ್ತು ಪ್ರಬಂಧಕಾರ ಚಿಂತಾಮಣಿ ಕೊಡ್ಲೆಕೆರೆ ಹೇಳಿದರು.

ನಗರದ ಮಲ್ಲೇಶ್ವರದ ಶ್ರೀ ಅಖಿಲ ಹವ್ಯಕ ಮಹಾ ಸಭಾ ವತಿಯಿಂದ ಹವ್ಯಕ ಪತ್ರಿಕೆ ವಜ್ರಮಹೋತ್ಸವ ವಿಶೇಷಾಂಕ ಲೋಕಾರ್ಪಣೆ ಮತ್ತು ಸಂಸ್ಥಾಪನೋತ್ಸವ ಹವ್ಯಕ ವಿಶೇಷ ಪ್ರಶಸ್ತಿ, ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭವನ್ನು ಭಾನುವಾರ ಅವರು ಉದ್ಘಾಟಿಸಿದರು. ಕಡು ಬಡತನವನ್ನು ಕಂಡ, ಅತ್ಯಂತ ಸಣ್ಣ ಸಮುದಾಯವಾಗಿರುವ ಹವ್ಯಕರು ರಾಜಕೀಯ ವಾಗಿ ನಿರ್ಣಾಯಕರಲ್ಲ. ಆದರೂ, ಹಲವು ನಾಯಕರು ನಮ್ಮ ಸಮಾಜದಿಂದ ಬಂದಿದ್ದಾರೆ. ಕ್ರೀಡೆ, ಕಲಾ ಪ್ರಕಾರಗಳಲ್ಲಿ, ಯಕ್ಷಗಾನ ಹೀಗೆ ಅನೇಕ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆಯನ್ನು ಮಾಡಿದ್ದಾರೆ ಎಂದು ಉಲ್ಲೇಖಿಸಿದರು.

ಮಹಾಲಕ್ಷ್ಮಿ ಪುರ ಬ್ರಾಹ್ಮಣ ಸಭಾ ಅಧ್ಯಕ್ಷ ರಾಘವೇಂದ್ರ ಭಟ್ ಮಾತನಾಡಿ, ನಮ್ಮ ಸಂಸ್ಕೃತಿ, ಸಂಸ್ಕಾರಗಳೇ ನಮ್ಮ ಜೀವನದ ಮೂಲಾಧಾರ. ಬ್ರಾಹ್ಮಣರಿಗೆ ಶಾಸ್ತ್ರಜ್ಞಾನ, ಸಂಸ್ಕಾರ ಹಾಗೂ ಆಚರಣೆ ಗಳು ಬಹಳ ಮುಖ್ಯವಾಗಿವೆ. ಇವುಗಳ ಮೂಲಕ ಸಮಾಜದ ಉನ್ನತಿ ಮತ್ತು ಉತ್ತಮ ಜೀವನ ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ಹವ್ಯಕ ಪತ್ರಿಕೆಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದವರನ್ನು ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ, ಆರ್ಥಿಕ ತಜ್ಞ ಗೋಪಾಲಕೃಷ್ಣ ಹೆಗಡೆ ಸೇರಿದಂತೆ ಇತರರಿದ್ದರು.



ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ

ಹವ್ಯಕ ವಿಭೂಷಣ: ಮೂಡಂಬೈಲು ಗೋಪಾಲ ಕೃಷ್ಣ ಶಾಸ್ತ್ರಿ, ಎಸ್. ಶಂಭು ಭಟ್ ಕಡತೋಕ

ಹವ್ಯಕ ಭೂಷಣ: ನೀರ್ನಳ್ಳಿ ಗಣಪತಿ, ಡಾ.ವೈ.ವಿ. ಕೃಷ್ಣಮೂರ್ತಿ, ಉಮೇಶ ಬಂದಗದ್ದೆ

ಹವ್ಯಕ ಶ್ರೀ: ಪೂರ್ಣಿಮಾ ಕೆ.ಭಟ್, ಸುಚೇತನ ಭಟ್, ಆನಂದ ಹೆಗಡೆ, ಪ್ರತ್ಯೂಷ ಕುಮಾರ್

ಹವ್ಯಕ ಸೇವಾಶ್ರೀ: ಡಾ.ಬಿ.ವಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್, ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ

ಕಿರುಸುದ್ದಿ

ಸರ್ಕಾರದಿಂದ ಜನರಿಗೆ ಅನುಕೂಲ ಇಲ್ಲ: ಬಿವೈವಿ

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯದಿಂದ ಜನ ಬೇಸತ್ತಿದ್ದಾರೆ. ಸಿಎಂ ಸಿದ್ದರಾಮಯ್ಯರಿಂದ ರಾಜ್ಯಕ್ಕೆ ಯಾವುದೇ ಅನುಕೂಲವಾಗಿಲ್ಲ. ಪಂಚ ರಾಜ್ಯಗಳ ಚುನಾವಣೆ ನಂತರ ಹೈಕಮಾಂಡ್ ನಿರ್ಧಾರಕ್ಕೆ ಮಣಿಯುವ ಅನಿವಾರ್ಯತೆ ಯಲ್ಲಿರುವುದು ಅವರ ಮಾತಿನಿಂದಲೇ ಗೊತ್ತಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ದಿಕ್ಕು ಬದಲಾ ಯಿಸುವ ಶಕ್ತಿ ಪ್ರಸಕ್ತ ಉಪಚುನಾವಣೆಗೆ ಇದೆ. ಎರಡೂ ಉಪಚುನಾವಣೆಗಳಲ್ಲಿ ಜನಾದೇಶ ಬಿಜೆಪಿ ಪರವಾಗಿ ಬರಲಿದೆ ಎಂದರು.



ವೃದ್ಧನ ಹತ್ಯೆ ಮಾಡಿ ಸುಟ್ಟ ದುಷ್ಕರ್ಮಿಗಳು

ವಿಜಯಪುರ: ಜಿಲ್ಲೆಯ ಭೀಮಾತೀರದ ಇಂಡಿ ತಾಲೂಕಿನ ತೆನಹಳ್ಳಿ ಗ್ರಾಮದಲ್ಲಿ ದುಷ್ಕರ್ಮಿಗಳು ವೃದ್ಧನ ಬರ್ಬರ ಹತ್ಯೆಗೈದು, ಸುಟ್ಟು ಹಾಕಿರುವ ಘಟನೆ ನಡೆದಿದೆ. ಗುರುಬಸಯ್ಯ ರೇವಯ್ಯ ಹಿರೇಮಠ (72) ಮೃತಪಟ್ಟ ವೃದ್ಧ. ಗುರುಬಸಯ್ಯ ಈತನಿಗೆ ಹತ್ಯೆಗೈದು ಮುಖಕ್ಕೆ ಬೆಂಕಿ ಹಚ್ಚಿ ದುಷ್ಕರ್ಮಿಗಳು ಪರಾರಿಯಾಗಿದ್ದು, ಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಂಡಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಘಟನೆ ನಡೆದಿದೆ.

ಈಜಲು ತೆರಳಿದ್ದ ನಾಲ್ವರು ಮಕ್ಕಳು ಮೃತ್ಯು

ಯಾದಗಿರಿ: ಕೃಷಿ ಹೊಂಡದಲ್ಲಿ ಈಜುಲು ಹೋದ ನಾಲ್ವರು ಮಕ್ಕಳು ಮೃತಪಟ್ಟ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ನಗನೂರ ಗ್ರಾಮದಲ್ಲಿ ಭಾನುವಾರ ನಡೆದಿದೆ. ಕಿರಣ (6), ಬಸಮ್ಮ (11), ಶರತ್ (6), ಹನುಮೇಶ್ (7) ಮೃತಪಟ್ಟ ನತದೃಷ್ಟ ಮಕ್ಕಳು. ಶಾಲೆಗೆ ರಜೆ ಇದ್ದ ಕಾರಣಕ್ಕೆ ಮಕ್ಕಳು ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದರು. ಹೊಂಡದಲ್ಲಿ ನೀರು ಹೆಚ್ಚಿದ್ದ ಕಾರಣ ಹೊರಗೆ ಬರಲಾರದೆ ಮುಳುಗಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಪಾಲಕರ ಆಕ್ರಂದನ ಮುಗಿಲು ಮುಟ್ಟಿದೆ. ಕೆಂಭಾವಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆತ್ಮಹತ್ಯೆಗೆ ಯತ್ನ: ಇಬ್ಬರ ಸಾವು

ಆನೇಕಲ್: ಸಾಲ ಬಾಧೆ ತಾಳಲಾಗದೆ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ತಾಯಿ, ಮಗಳು ಮೃತರಾಗಿರುವ ಘಟನೆ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ಮಳ್ಳೇನ ಹಳ್ಳಿ ಗ್ರಾಮದಲ್ಲಿ ನಡೆದಿದೆ. ತಾಯಿ ಆಶಾ (50), ಮಗಳು ವರ್ಷಿತಾ (35) ಸ್ಥಳದಲ್ಲಿಯೇ ಮೃತರಾದವರು. ಪುತ್ರ ಮೋಹನ್ ಗೌಡ (27), ಹಾಗೂ ಮೊಮ್ಮಗ ಮಾಯನ್ ಗೌಡ (11) ಸ್ಥಿತಿ ಗಂಭೀರ ಸ್ಥಿತಿಯಲ್ಲಿರುವುದರಿಂದ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಮೋಹನ್‌ಗೌಡ ತನ್ನ ತಾಯಿ, ಅಕ್ಕ ಹಾಗೂ ಅಕ್ಕನ ಮಗನ ಕತ್ತು ಕೊಯ್ದು ಬಳಿಕ ತಾನೂ ಆತ್ಮಹತ್ಯೆಗೆ ಯತ್ನ ಮಾಡಿದ್ದಾನೆ ಎಂದು ಪ್ರಥಮಿಕವಾಗಿ ತಿಳಿದು ಬಂದಿದೆ. ಚೀಟಿ ವ್ಯವಹಾರ ಸೇರಿದಂತೆ ಬೇರೆ ಬೇರೆ ವ್ಯವಹಾರವನ್ನು ನಡೆಸುತ್ತಿದ್ದರು. ಮೋಹನ್ ಗೌಡ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡಿದ್ದ ರು ಎನ್ನಲಾಗಿದೆ. ಸಾಲಗಾರರ ಉಪಟಳದಿಂದ ಮನನೊಂದು ಮೋಹನ್‌ಗೌಡ ಈ ರೀತಿ ಮಾಡಿದ್ದಾನೆ ಎಂದು ಹೇಳಲಾಗಿದೆ ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಡ್ರಗ್ಸ್ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ: ಸಿದ್ಧರಾಮಯ್ಯ

ಮಾದಕವಸ್ತು ಮುಕ್ತ ರಾಜ್ಯ

ಮೈಸೂರು: ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನಡೆದ ಮೈಸೂರು ಘಟಕದ 46ನೇ ತಂಡದ ಸಿವಿಲ್ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು, ತರಬೇತಿ ಪೂರ್ಣಗೊಳಿಸಿದ ಎಲ್ಲ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾದಕವಸ್ತು ತಯಾರಕರು, ಮಾರಾಟ ಮಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರಸ್ತುತ ಸಮಾಜದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತಿವೆ. ಅದರಲ್ಲೂ ಇಂದು ಯುವಕ ಮತ್ತು ಯುವತಿಯರು ಹೆಚ್ಚಿನ ಪ್ರಮಾಣದಲ್ಲಿ ಮಾದಕವಸ್ತುಗಳಿಗೆ ದಾಸರಾಗಿರುವುದನ್ನು ಕಾಣಬಹುದಾಗಿದೆ. ಮಾದಕವಸ್ತು ಮುಕ್ತ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಸಮಾಜದಲ್ಲಿ ಕಾನೂನು ವ್ಯವಸ್ಥೆಗಳನ್ನು ಕಾಪಾಡಬೇಕಾದದ್ದು ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ ಎಂದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯವಿರಬೇಕು. ಹಾಗೂ ನಿರ್ಭಯವಾಗಿ ಬದುಕುವಂತಹ ವಾತಾವರಣವಿರಬೇಕು ಸಮಾಜದಲ್ಲಿ ಸಮಾನ ನ್ಯಾಯ ವಿತರಣೆ ಬಹಳ ಮುಖ್ಯ ಎಂದು ತಿಳಿಸಿದರು.

ತರಬೇತಿ ಸಮಯದಲ್ಲಿ ತಮಗೆ ಹೇಳಿ ಕೊಟ್ಟಿರುವ ವಿಷಯಗಳನ್ನು ಜೀವನದಲ್ಲಿ ಪಾಲನೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ ಇಂತಹ ಅಪರಾಧಗಳನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳಿಗೆ ಮೊದಲನೆಯದಾಗಿ ಧೈರ್ಯ ಇರಬೇಕು. ಧೈರ್ಯವನ್ನು ಪ್ರದರ್ಶಿಸುವಂತಹ ಕೆಲಸವನ್ನು ತಾವೆಲ್ಲರೂ ಮಾಡುತ್ತೀರಿ ಎಂಬ ನಂಬಿಕೆ ನಮಗಿದೆ. ಇಂದು 327 ಪೊಲೀಸ್ ಸೇವೆಗೆ ಸೇರ್ಪಡೆಯಾಗುತ್ತಿದ್ದೀರಿ. ನಾವು ಈ ವರ್ಷದ ಬಜೆಟ್‌ನಲ್ಲಿ ಹೇಳಿರುವ ಹಾಗೆ ಖಾಲಿ ಇರುವ 8000 ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಸರ್ಕಾರ ಸದಾ ಕಾಲ ನಿಮ್ಮ ಜತೆಗೆ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಸಚಿವ ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಪೊಲೀಸ್ ಮಹಾ ನಿರ್ದೇಶಕ ಡಾ.ಎಂ. ಎ. ಸಲೀಂ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ದೇವ ಜ್ಯೋತಿ ರೇ, ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ವಿಷ್ಣುವರ್ಧನ್, ಉಪನಿರ್ದೇಶಕ ಚನ್ನಬಸವಣ್ಣ ಹಾಗೂ ಹಿರಿಯ ಪೊಲೀಸ ಅಧಿಕಾರಿಗಳು ಇದ್ದರು.



ಪ್ರಾಮಾಣಿಕವಾಗಿ ಕೆಲಸ ಮಾಡಿ

ಪೊಲೀಸ್ ಇಲಾಖೆ ಎಷ್ಟೇ ಕಷ್ಟವಾದರೂ ನ್ಯಾಯ ವಿತರಣೆಯಲ್ಲಿ ನ್ಯಾಯವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಮಾಡಬೇಕು. ಯಾವುದೇ ಕಾರಣಕ್ಕೂ ನ್ಯಾಯ ವಿತರಣೆ ಮಾಡುವ ಕೆಲಸದಲ್ಲಿ ಯಾರ ಜತೆಯಲ್ಲೂ ರಾಜಿ ಆಗಬಾರದು ಹಾಗೂ ಆಸೆ ಆಮಿಷಗಳಿಗೆ ಬಲಿಯಾಗದೆ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಕಿವಿ ಮಾತು ಹೇಳಿದರು. ಇಂದು ನಿರ್ಗಮನ ಪಥ ಸಂಚಲನ ಕರ್ನಾಟಕ ಪೊಲೀಸ್ ಅಕಾಡೆಮಿ ಘಟಕದ 46ನೇ ತಂಡ ತರಬೇತಿಯನ್ನು ಪಡೆದು ಸೇವೆಗೆ ಸೇರುತ್ತಿರುವ ಸಂದರ್ಭ ಇದಾಗಿದೆ. ಪೊಲೀಸ್ ಎಂದರೆ ಶಿಸ್ತು, ಸಂಯಮ, ವಿನಯ, ಪ್ರಾಮಾಣಿಕತೆ ಹಾಗೂ ಮಾನವೀಯತೆ ಇರುವ ವ್ಯಕ್ತಿಗಳಾಗಿರಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಸಲ್ಲ: ಕಾಗೇರಿ

ಶಿರಸಿ: ಕರ್ನಾಟಕದ ಶಾಲಾ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ಕೈಗೊಂಡಿರುವ ಬದಲಾವಣೆಗಳು ಅತ್ಯಂತ ದುರದೃಷ್ಟಕರ ಮತ್ತು ವಿದ್ಯಾರ್ಥಿ ವಿರೋಧಿಯಾಗಿವೆ. ದಶಕಗಳಿಂದಲೂ ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಯಲ್ಲಿದ್ದ ತ್ರಿಭಾಷಾ ಸೂತ್ರಕ್ಕೆ ಕೊಡಲಿ ಪೆಟ್ಟು ನೀಡಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪನವರ ಅಪ್ರಬುದ್ಧ ನಿರ್ಧಾರವು ರಾಜ್ಯದ ಶೈಕ್ಷಣಿಕ ಘನತೆಗೆ ದೊಡ್ಡ ಧಕ್ಕೆ ತಂದಿದೆ ಎಂದು ಮಾಜಿ ಶಿಕ್ಷಣ ಸಚಿವರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ತೃತೀಯ ಭಾಷೆಯ ಅಂಕಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಕೇವಲ ಗ್ರೇಡ್ ಪದ್ಧತಿಗೆ ಸೀಮಿತಗೊಳಿಸಿರುವುದು ಮತ್ತು ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆಯನ್ನು ಸೃಷ್ಟಿಸುತ್ತಿದೆ. ನಮ್ಮ ರಾಜ್ಯದ ಮಕ್ಕಳು ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್ ಅನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿ ಅಥವಾ ಸಂಸ್ಕೃತವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಕಲಿಯುತ್ತಿದ್ದರು. ಆದರೆ, ಈಗ ತೃತೀಯ ಭಾಷೆಯು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಗೆ ತಲುಪಿದ್ದು, ಇದು ಮಕ್ಕಳ ಭಾಷಾ ಸಾಮರ್ಥ್ಯವನ್ನು ತೀವ್ರವಾಗಿ ಕುಂಠಿತಗೊಳಿಸಲಿದೆ ಎಂದಿದ್ದಾರೆ.

ಶಿಕ್ಷಣ ಇಲಾಖೆಯು ಕೇವಲ ಅಂಕಗಳ ಕಡಿತದ ಮೇಲೆ ಗಮನ ಹರಿಸುತ್ತಿದೆಯೇ ಹೊರತು, ಗುಣಮಟ್ಟದ ಕಲಿಕೆಯ ಮೇಲಲ್ಲ ಎಂಬುದು ಈ ನಿರ್ಧಾರದಿಂದ ಸ್ಪಷ್ಟವಾಗುತ್ತದೆ. ಸಾರ್ವಜನಿಕವಾಗಿ ಅಥವಾ ಶಿಕ್ಷಣ ತಜ್ಞರ ಜತೆ ಯಾವುದೇ ಪೂರ್ವಭಾವಿ ಚರ್ಚೆ ನಡೆಸದೆ, ಏಕಾಏಕಿ ಇಂತಹ ಮಹತ್ವದ ಬದಲಾವಣೆಗಳನ್ನು ಜಾರಿಗೊಳಿಸುತ್ತಿರುವುದು ಸಚಿವರ ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದರು.

ರಾಜಕೀಯಪ್ರಯೋಗ ಶಾಲೆಯಲ್ಲ

ಶಿಕ್ಷಣ ಕ್ಷೇತ್ರವು ರಾಜಕೀಯ ಪ್ರಯೋಗಶಾಲೆಯಲ್ಲ. ಒಬ್ಬ ಮಾಜಿ ಶಿಕ್ಷಣ ಸಚಿವನಾಗಿ ನಾನು ಈ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ಸಚಿವರ ಈ ಅಪ್ರಬುದ್ಧ ನಿರ್ಧಾರವು ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸುವಂತೆ ಮಾಡಲಿದೆ. ರಾಜ್ಯದ ಮುಖ್ಯಮಂತ್ರಿಗಳು ಇಂತಹ ಗಂಭೀರ ಶೈಕ್ಷಣಿಕ ವಿಚಾರಗಳ ಬಗ್ಗೆ ಗಮನಹರಿಸುವ ಬದಲು, ಕೇವಲ ಅಧಿಕಾರ ಹಸ್ತಾಂತರದ ಚಿಂತೆಯಲ್ಲೇ ಮುಳುಗಿರುವುದು ರಾಜ್ಯದ ದೌರ್ಭಾಗ್ಯವಾಗಿದೆ. ಸರ್ಕಾರವು ಕೂಡಲೇ ಈ ಆದೇಶವನ್ನು ರದ್ದುಗೊಳಿಸಬೇಕು ಹಾಗೂ ಭಾಷಾ ತಜ್ಞರು ಮತ್ತು ಸಾಹಿತಿಗಳ ಸಮ್ಮುಖದಲ್ಲಿ ಪಾರದರ್ಶಕ ಚರ್ಚೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಬೇಕೆಂದು ಎಂದರು.

ಬೆಳಗಾವಿ ರೈತನ ಸಾಧನೆ ಮೆಚ್ಚಿದ ಮೋದಿ

ಬೆಳಗಾವಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಗ್ರಾಮದ ರೈತ ಶಿವಲಿಂಗಪ್ಪ ಸಾತಪ್ಪ ಹುದ್ದಾರ ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇವರ ಸಾಧನೆಯ ಬಗ್ಗೆ ಪ್ರಧಾನಿ ಮೋದಿ ಅವರ ಮೆಚ್ಚುಗೆಯಿಂದ ಹುದ್ದಾರ ಕುಂಟುಂಬದಲ್ಲಿ ಸಂತಸ ಇಮ್ಮಡಿಗೊಂಡಿದೆ.

ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಮಟ್ಟ ಗ್ರಾಮದಲ್ಲಿ ಶಿವಲಿಂಗಪ್ಪ ತಮ್ಮ ಪುತ್ರ ರಾಜು ಅವರ ನೆರವಿನಿಂದ ತಮ್ಮ ಒಂದು ಎಕರೆಯಲ್ಲಿ ಕೃಷಿ ಹೊಂಡದಲ್ಲಿ ಬಯೋಪ್ಲಾಕ್ ತಂತ್ರಜ್ಞಾನ ಬಳಸಿ ಕುಚ್ಚು (ಮರಲ್) ಮೀನು ಸಾಕಾಣಿಕೆ ಮಾಡಿ, ಲಕ್ಷ ಲಕ್ಷ ಆದಾಯ ಗಳಿಸುತ್ತಿದ್ದಾರೆ.

ರೈತನ ಸಾಧನೆಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ, ಮನ್ ಕಿ ಬಾತ್‌ನಲ್ಲಿ ಶಿವಲಿಂಗಪ್ಪ ಹುದ್ದಾರ ಅವರ ಯಶಸ್ವಿ ಮೀನುಗಾರಿಕೆಯ ಸಾಧನೆಯ ಬಗ್ಗೆ ದೇಶಕ್ಕೆ ತಿಳಿಸಿದ್ದಾರೆ. ದೇಶದಲ್ಲಿರುವ ಎಲ್ಲ ರೈತರು ಇದೇ ರೀತಿಯಲ್ಲಿ ವಿಭಿನ್ನ ರೀತಿಯಲ್ಲಿ ಕೃಷಿ ಪ್ರಾರಂಭ ಮಾಡುವಂತೆ ಸಲಹೆ ನೀಡಿದರು. ಹೀಗೆ ಮಾಡುವುದರಿಂದ ಆರ್ಥಿಕವಾಗಿ ಸದೃಢರಾಗಬಹುದು. ಅಲ್ಲದೇ, ದೇಶದ ಆರ್ಥಿಕ ಶಕ್ತಿಗೂ ದೊಡ್ಡ ಕೊಡುಗೆ ನೀಡಬಹುದಾಗಿದೆ ಎಂದು ಸಲಹೆ ನೀಡಿದರು.

ಶಿವಲಿಂಗಪ್ಪ ಸಾತಪ್ಪ ಹುದ್ದಾರ ಅವರು ಸಾಂಪ್ರದಾಯಿಕ ಕೃಷಿಯ ಬದಲಿಗೆ ಬೇರೆ ಮಾರ್ಗವನ್ನು ಆಯ್ದುಕೊಂಡಿದ್ದಾರೆ. ಅವರು ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇದಕ್ಕಾಗಿ ತರಬೇತಿಯನ್ನೂ ಪಡೆದಿದ್ದಾರೆ. ಇದರಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ. ನಮ್ಮ ಆರ್ಥಿಕತೆಯನ್ನು ಬಲಿಷ್ಠಗೊಳಿಸಲು ಇವರೆಲ್ಲರ ಪ್ರಯತ್ನ ಪ್ರಶಂಸನೀಯ. ಸಮಾಜದಲ್ಲಿನ ಸಣ್ಣ ಸಣ್ಣ ಪ್ರಯತ್ನವೂ ಕೂಡ ದೊಡ್ಡ ಬದಲಾವಣೆ ತರುತ್ತದೆ ಎಂದು ಮೋದಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಧಾನಿಗಳು ನಮ್ಮ ಮೀನುಗಾರಿಕೆಯ ಬಗ್ಗೆ ಮನ್ ಕಿ ಬಾತ್‌ನಲ್ಲಿ ಮಾತನಾಡಿದ್ದಕ್ಕೆ ಬಹಳಷ್ಟು ಖುಷಿ ಆಗುತ್ತಿದೆ. ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ಆದರೆ, ನಮ್ಮ ಮೀನು ಸಾಕಾಣಿಕೆ ಸಾಧನೆ ಪ್ರಧಾನಿಗಳವರೆಗೂ ಮುಟ್ಟಿದೆ. ಇದು ನಮಗೆ ಇನ್ನಿಲ್ಲದ ಸಂತಸ ತಂದಿದೆ ಎಂದು ರೈತ ರಾಜು ತಿಳಿಸಿದರು.



ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು

ಕಲಬುರಗಿ: ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಗೆಲುವು ಸಾಧಿಸಲಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸೋಲಿನ ಕಹಿ ಅನುಭವವಾಗಲಿದೆ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ನಗರದ ಐವನ ಶಾಹಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆಯಲ್ಲಿ ಈ ಹಿಂದೆ ಅಲ್ಪ ಮತಗಳ ಅಂತರದಲ್ಲಿ ಸೋತಿದ್ದೇವೆ. ಈ ಬಾರಿ ಅದನ್ನು ಸರಿಪಡಿಸಲಿದ್ದೇವೆ. ಒಳಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೊಂದಲ ಸೃಷ್ಟಿಸಿದ್ದು, ಇದರಿಂದ ದಲಿತರು ಹಾಗೂ ಅಲ್ಪಸಂಖ್ಯಾತರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ದಾವಣಗೆರೆಯಲ್ಲಿ 70–80 ಸಾವಿರ ಮುಸ್ಲಿಂ ಸಮುದಾಯದವರಿದ್ದಾರೆ. ಈ ಬಾರಿ ಟಿಕೆಟ್ ಕೇಳಿದ್ದರೂ ನೀಡಿಲ್ಲ. ಬದಲಾಗಿ ಶ್ರೀಮಂತರಿಗೆ ಟಿಕೆಟ್ ನೀಡಿದ್ದಾರೆ. ಇದು ಆ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದ್ದು, ಈ ಬಾರಿ ಅವರು ಬಿಜೆಪಿಗೆ ಬೆಂಬಲ ನೀಡಲಿದ್ದಾರೆ ಎಂದು ಹೇಳಿದರು.

ಮೈಸೂರುನಲ್ಲಿ ಪತ್ತೆಯಾದ 12 ಕೋಟಿ ಮೌಲ್ಯದ ಮಾದಕ ವಸ್ತು ಕುರಿತು ಮಾತನಾಡಿ, ಅಧಿಕಾರದ ಮದ ಏರಿದೆ. ಜವಾಬ್ದಾರಿಯುತ ಆಡಳಿತ ಕಾಣುತ್ತಿಲ್ಲ. ಗೃಹ ಸಚಿವ ಪರಮೇಶ್ವರ ಅವರಂತು ಏನೆ ಕೇಳಿದರೂ, ನಾನು ತಿಳಿದುಕೊಂಡು ಮಾತನಾಡುತ್ತೇನೆ ಅಂತ ಹೇಳುತ್ತಾರೆ. ಉಡಾಫೆ ಉತ್ತರ ನೀಡುವ ಮೂಲಕ ಅಧಿಕಾರದ ಮದ ಜಾಸ್ತಿಯಾಗಿದೆ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಎಲ್ಲರೂ ಮದದ ರಾಜಕಾರಣ ಮಾಡುತ್ತಿದೆ ಎಂದರು.

ಮೋದಿ ‘ಧುರಂಧರ’ ನಾಯಕ

ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆದಿದೆ. ಹಾರ್ಮೋಜ್ ಜಲಸಂಧಿಯಿಂದ ಯಾವುದೇ ಹಡಗುಗಳು ಬರುತ್ತಿಲ್ಲ. ನಿನ್ನೆಯಷ್ಟೆ ಪಾಕಿಸ್ತಾನದ ಹಡಗನ್ನು ಹೊಡೆದುರುಳಿಸಿದ್ದಾರೆ. ಆದರೆ, ಭಾರತದ ಹಡಗನ್ನು ಸುರಕ್ಷಿತವಾಗಿ ಬಿಟ್ಟಿದ್ದಾರೆ. ಅವರೊಂದಿಗಿನ ನಮ್ಮ ಸಂಬಂಧ, ಒಳ್ಳೆಯ ಬಾಂಧವ್ಯ. ಸಂಯಮ ನಾಯಕತ್ವದಿಂದ ದೇಶದ ಸಮಸ್ಯೆಗಳನ್ನು ತಮ್ಮ ಬುದ್ಧಿವಂತಿಕೆಯಿಂದ ಎದುರಿಸುತ್ತಿದ್ದರೇ, ಮೋದಿ ಸರೆಂಡರ್ ಎಂದು ಹೇಳುವುದು ಎಷ್ಟು ಸರಿ. ಸಂಯಮ ಶರಣಾಗತಿ ಅಲ್ಲ. ಹೀಗಾಗಿ ಮೋದಿ ಇಸ್ ನಾಟ್ ಎ ಸರೆಂಡರ್ ನಾಯಕ, ಮೋದಿ ಇಸ್ ಎ ಧುರಂಧರ ನಾಯಕ. ಈ ಮಾತನ್ನು ದೇಶದ ಜನರು ಅರ್ಥ ಮಾಡಿಕೊಂಡಿದ್ದು, ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು ಎಂದರು.



“ಕಳೆದ ನಾಲ್ಕು ವರ್ಷಗಳಲ್ಲಿ ಎಸ್ಸಿಪಿ/ಟಿಎಸ್ಪಿಗೆ 1.58 ಲಕ್ಷ ಕೋಟಿ ಮೀಸಲಿಟ್ಟಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಅದರಲ್ಲಿ 78 ಸಾವಿರ ಕೋಟಿ ಹಣ ಬೇರೆ ಇಲಾಖೆಗಳಿಗೆ ವರ್ಗಾಯಿಸಲಾಗಿದೆ. ಉಳಿದ ಹಣದಲ್ಲಿ 52 ಸಾವಿರ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಕಡೆಗೆ ಬಳಸುವುದು ದಲಿತರಿಗೆ ಮಾಡಿದ ಅನ್ಯಾಯ.

■ ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ

ನೀರು ಬಂದಿತು ಜೀವ ಅರಳಿತು...

ಸೇವಾಗಾಥ ಕಥೆ-1

▸ ಮೇಘಾ ಪ್ರಮೋದ್

ಇದು ಡೋಂಗ್ರಿಪಾಡ ಎಂಬ ಹಳ್ಳಿಯಲ್ಲಿ ಏಳು ದಶಕಗಳ ಕಾಯುವಿಕೆ ಕೊನೆಗೊಂಡು ಹಳ್ಳಿಯ ಜನರು ಸಂತೋಷದಿಂದ ನಲಿದಾಡಿದ ಕಥೆ. ಮನೆ ಮನೆಗೂ ನೀರನ್ನು ತಲುಪಿಸುವ ಸೋಲಾರ್ ಪಂಪ್ ಅನ್ನು ತದೇಕ ಚಿತ್ತರಾಗಿ ದೃಷ್ಟಿಸಿ ನೋಡುತ್ತಿದ್ದ ಶಾಂತಾಬಾಯಿ ಖಂಜೋಡೆ ಅವರ ಕಣ್ಣೀರು ನಿಲ್ಲಲೇ ಇಲ್ಲ.

ಮುಂಬೈಯಿಂದ ಕೇವಲ 80 ಕಿಮೀ ದೂರದಲ್ಲಿರುವ ಪಾಲ್ಘರ್ ಜಿಲ್ಲೆಯ ಈ ಹಳ್ಳಿಯ ಜನರು ಕಳೆದ 72 ವರ್ಷಗಳಿಂದ ಕುಡಿಯುವ ನೀರಿನ ನಿರೀಕ್ಷೆಯಲ್ಲಿದ್ದರು. ಗರ್ಭಿಣಿ ಅಥವಾ 12 ವರ್ಷದ ಬಾಲಕಿಯೇ ಇರಬಹುದು, ಬೆಟ್ಟದ ಮೇಲೆ ಇರುವ ಡೊಂಗ್ರಿಪಾಡ ಹಳ್ಳಿಯಿಂದ ಉಬ್ಬು ತಗ್ಗಾದ ರಸ್ತೆಯಲ್ಲಿ ಒಂದೂವರೆ ಕಿಮೀ ನಷ್ಟು ದೂರದಲ್ಲಿ ಕೆಳಗೆ ಇದ್ದ ಬಾವಿಯಿಂದ ನೀರು ತರುವುದು ಅನಿವಾರ್ಯವಾಗಿತ್ತು.

ಹಾಗೆಯೇ ಮಳೆಗಾಲದಲ್ಲಂತೂ ಓಡಾಡುವ ರಸ್ತೆಯೂ ಮುಚ್ಚಿಹೋಗುತ್ತಿತ್ತು. ನೀರು ಇಲ್ಲದೇ, ವಿದ್ಯುತ್ ಇಲ್ಲದೇ, ಸರ್ಕಾರಿ ಶಾಲೆಯೂ ಇಲ್ಲದ 33 ಪರಿವಾರಗಳ ಈ ಸೇವಾಬಸ್ತಿಯಲ್ಲಿ ಕೇವಲ 7 ರೈತರು ತಮ್ಮ ಗದ್ದೆಗಳಲ್ಲಿ ಬೇಸಾಯ ಮಾಡಬಹುದಾಗಿತ್ತು. ಆದರೆ ಇಂದು ಈ ಕಥೆಯನ್ನು ಓದುತ್ತಿರುವ ಓದುಗರಿಗೆ ಆಶ್ಚರ್ಯವಾಗಬಹುದು...! ಇಂದು ಈ ಹಳ್ಳಿಯಲ್ಲಿ ಆಸ್ಟ್ರೋಟರ್ಫ್ ಆಟದ ಮೈದಾನವಿದೆ, ಮಹಿಳೆಯರಿಗೆ ಹೊಲಿಗೆ ಕಲಿಯಲು ತರಬೇತಿ ಕೇಂದ್ರವಿದೆ.

ಪುಟ್ಟ ಮಕ್ಕಳಿಗೆ ಮಾಧವ ಬಾಲ ಸಂಸ್ಕಾರ ಕೇಂದ್ರವಿದೆ ಹಾಗೂ ಕಂಪ್ಯೂಟರ್ ತರಬೇತಿಯನ್ನೂ ನೀಡಲಾಗುತ್ತಿದೆ, ಅಧ್ಯಯನಕ್ಕಾಗಿ ಒಂದು ಚಿಕ್ಕ ಪುಸ್ತಕಾಲಯವೂ ಇದೆ. ಹಾಗೆಯೇ, ಎಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ ಅದು ನೀರು. ಈಗ ಪ್ರತೀ ಎಂಟು ಮನೆಗಳ ಮಧ್ಯದಲ್ಲಿ ಒಂದುನಲ್ಲಿ ಇದೆ ಅಷ್ಟೇ ಅಲ್ಲ ಪ್ರತೀ ಮನೆಗೂ ವಿದ್ಯುತ್ ಪೂರೈಕೆ ಆಗುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ್ ಹೆಡ್ಗೇವಾರ್ ಅವರ ಸ್ಮರಣಾರ್ಥವಾಗಿ ಭಯಂದರ್‌ನಲ್ಲಿ ನಡೆಯುತ್ತಿರುವ ಕೇಶವ ಸೃಷ್ಟಿ ಎಂಬ ಬಹುಮುಖಿ ಪ್ರಕಲ್ಪದ ಮೂಲಕ ನಡೆಯುತ್ತಿರುವ ಗ್ರಾಮ ವಿಕಾಸ ಯೋಜನೆಯಿಂದ ಇವೆಲ್ಲ ಸಾಧ್ಯವಾಗಿದೆ. ಈ ವಿಕಾಸ ಯಾತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಗ್ರಾಮವಾಸಿಗರ ಸಹಾಯ ದೊರಕಿತು.

ನೀರಿನ ಟ್ಯಾಂಕ್‌ನಿಂದ ಮನೆಗಳಿಗೆ ಪೈಪ್‌ಲೈನ್ ಎಳೆಯುವುದರಿಂದ ಹಿಡಿದು ಸಮಾಜ ಮಂದಿರದ ನಿರ್ಮಾಣದ ತನಕ ರಾತ್ರಿ–ಹಗಲು ಎನ್ನದೇ ಶ್ರಮಸೇವೆ ಮಾಡುವ ಮೂಲಕ ಕಾರ್ಯಗಳನ್ನು ಪೂರ್ಣಗೊಳಿಸಿದರು. ಇಷ್ಟೇ ಅಲ್ಲದೆ ಅಭಿವೃದ್ಧಿಯು ಗ್ರಾಮವನ್ನು ಪ್ರವೇಶಿಸಿದಂತೆಲ್ಲ ಗ್ರಾಮಸ್ಥರ ಸಹಕಾರವೂ ಕೂಡ ಹೆಚ್ಚುತ್ತಾ ಹೋಯಿತು ಎಂದು ಡೊಂಗ್ರಿಪಾಡ ಗ್ರಾಮದ ವಿಕಾಸ ಯಾತ್ರೆಯ ಶಿಲ್ಪಿಯಾದ ಮುಂಬೈ ಮಹಾನಗರದ ಹಿಂದಿನ ಕಾರ್ಯವಾಹ ವಿಮಲ್ ಕೇಡಿಯಾ ಅವರು ಹೇಳುತ್ತಾರೆ. ಹಳ್ಳಿಯ ಜನ ಒಂದು ಸಮಿತಿಯನ್ನು ರಚಿಸಿ ಒಂದು ನಿಶ್ಚಿತ ಮೊತ್ತವನ್ನು ಈ ಎಲ್ಲಾ ಕೆಲಸಗಳಿಗಾಗಿ ಠೇವಣಿ ಮಾಡಲು ನಿರ್ಧರಿಸಿದರು. ಒಂದೂವರೆ ಕಿಮೀ ಕೆಳಗೆ ಇದ್ದ ಬಾವಿಯಿಂದ ನೀರಿನ ಟ್ಯಾಂಕ್ ತನಕ ಪೈಪ್ ಲೈನ್ ಹಾಗೂ ಮನೆ ಮನೆಗೂ ನೀರನ್ನು ತಲುಪಿಸುವ ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸುವ ಕೆಲಸವನ್ನು ಪುಣೆಯ ಗ್ರಾಮ್ ಉರ್ಜಾ ಎಂಬ ಖಾಸಗಿ ಕಂಪೆನಿಯು ಮಾಡಿತು.

ಈ ಪ್ರಮುಖ ವೆಚ್ಚದ ನಂತರ ಗ್ರಾಮವಾಸಿಗಳು ಕೇಶವ ಸೃಷ್ಟಿಯಿಂದ ಏನನ್ನೂ ತೆಗೆದುಕೊಳ್ಳಲಿಲ್ಲ, ನದಿಯಿಂದ ಹೊಲಗಳಿಗೆ ನೀರನ್ನು ಹಾಯಿಸುವ ವ್ಯವಸ್ಥೆ ಹಾಗು ಮುಂದಿನ ಎಲ್ಲಾ ನಿರ್ವಹಣೆಯ ವೆಚ್ಚವನ್ನು ಹಳ್ಳಿಗರೇ ಭರಿಸಲು ನಿರ್ಧರಿಸಿದರು. ಪ್ರಕೃತಿಯು ಡೊಂಗ್ರಿಪಾಡ ಗ್ರಾಮಕ್ಕೆ ಅಗಾಧವಾದ ಸೌಂದರ್ಯವನ್ನು ನೀಡಿತ್ತು.

ಪ್ರತಿಷ್ಠಿತ ಲೇಖಕರಾದ ರತನ್ ಶಾರದಾರವರು ಡೊಂಗ್ರಿಪಾಡದ ಈ ವಿಕಾಸಯಾತ್ರೆಗೆ ಅಕ್ಷರ ರೂಪ ನೀಡಲು ಅಲ್ಲಿಗೆ ಬಂದಾಗ, ಅವರ ಪತ್ನಿ ಶ್ಯಾಮಾಜಿ ಕುತೂಹಲದಿಂದ ಅಲ್ಲಿನ ಮಹಿಳೆಯರಲ್ಲಿ ನಿಮಗೆ ಮುಂದೆ ಇನ್ನೇನು ಬೇಕು? ಎಂದು ಕೇಳಿದಾಗ ಅಲ್ಲಿನ ವನವಾಸಿ ಪರಿವಾರಗಳು ನಮಗೆ ಏನು ಬೇಕಿತ್ತೋ ಅದೆಲ್ಲವೂ ಸಿಕ್ಕಿದೆ, ಇನ್ನು ನಮ್ಮ ಮುಂದಿನ ದಾರಿಯನ್ನು ನಾವೇ ನಿರ್ಧರಿಸುತ್ತೇವೆ ಎಂದು ಹೇಳಿದ ಈ ಒಂದು ಘಟನೆ ಡೊಂಗ್ರಿಪಾಡ ಗ್ರಾಮದ ಪರಿವರ್ತನೆಯನ್ನು ನಮಗೆ ಅರ್ಥ ಮಾಡಿಸುತ್ತದೆ.



ಬೆಟ್ಟೆನಹಳ್ಳಿ : ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

ದೇವನಹಳ್ಳಿ: ಶ್ರೀರಾಮನವಮಿ ಅನ್ನ ಪ್ರಸಾದ ಸ್ವೀಕರಿಸಿದ 200ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ತಾಲೂಕಿನ ಕುಂದಾಣ ಹೋಬಳಿ, ಜಾಲಿಗೆ ಗ್ರಾಪಂ ವ್ಯಾಪ್ತಿಯ ಬೆಟ್ಟೆನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಶ್ರೀರಾಮನವಮಿ ಹಿನ್ನೆಲೆಯಲ್ಲಿ ಪ್ರತಿವರ್ಷದಂತೆ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಕ್ತರಿಗೆ ಅನ್ನ ಪ್ರಸಾದ ವಿತರಣೆ ಮಾಡಲಾಯಿತು. ಗ್ರಾಮದ ಜನರು ಪ್ರಸಾದ ಸ್ವೀಕರಿಸಿದ ಕೆಲವು ಗಂಟೆಯಲ್ಲೇ ವಾಂತಿಭೇದಿ ಕಾಣಿಸಿಕೊಂಡು ತೀವ್ರವಾಗಿ ಅಸ್ವಸ್ಥಗೊಂಡರು. ಗ್ರಾಮದಿಂದ ಅಂಬುಲೆನ್ಸ್ ಮೂಲಕ ತೀವ್ರವಾಗಿ ಅಸ್ವಸ್ಥಗೊಂಡವರನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಯಿತು.



ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಲಕ್ಕಕೃಷ್ಣಾರೆಡ್ಡಿ ಅವರು ಗ್ರಾಮದಲ್ಲಿ ನಡೆದ ಶ್ರೀರಾಮನವಮಿ ಸಂದರ್ಭದಲ್ಲಿ ಆಹಾರ ತಯಾರಿಸಲಾಗಿದೆ. ಈ ಸಂದರ್ಭದಲ್ಲಿ ಪಾತ್ರೆಗಳಲ್ಲಿ ಉಂಟಾಗಿರುವ ವ್ಯತ್ಯಯದಿಂದಾಗಿ ಆಹಾರ ವಿಷವಾಗಿ ಪರಿಣಮಿಸಿದೆ ಎಂದು ತಿಳಿಸಿದ್ದಾರೆ. ಗ್ರಾಮದ ಅಸ್ವಸ್ಥಗೊಂಡವರನ್ನು ಖಾಸಗಿ ಮತ್ತು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಯಾವುದೇ ಆತಂಕವಿಲ್ಲ, ಎಲ್ಲರೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಸಂಪಾದಕೀಯ

ಕಳ್ಳರ ಮೊರೆಹೋದ ಇರಾನ್!

ಹೌತಿ ಭಯೋತ್ಪಾದಕರು ಅಧಿಕೃತವಾಗಿ ಮಧ್ಯಪ್ರಾಚ್ಯ ಯುದ್ಧದಲ್ಲಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ ಅನೇಕರ ಯುದ್ಧ ವಿಶ್ಲೇಷಣೆಗಳಿಗೆ ಅಸಲಿ ಉತ್ತರ ನೀಡಿದೆ. ಏಕೆಂದರೆ ಆರಂಭದಲ್ಲಿ ಅಮೆರಿಕಾದ ತೈಲದಾಸೆ, ಎಕನಾಮಿಕ್ ಹಿಟ್ಮನ್ ಗುಣ, ಇಸ್ರೇಲಿನ ಆಕ್ರಮಣಕಾರಿ ಸ್ವಭಾವ ಮುಂತಾದ ಕಾರಣಗಳನ್ನು ಕೊಡುತ್ತಿದ್ದವರಿಗೆ ಇದೀಗ ಹೌತಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ, ಈ ಯುದ್ಧವು ಜಿಹಾದ್ ಆಗಿ ಬದಲಾಗಿದೆ ಎಂದು ಜಗತ್ತು ಒಪ್ಪಿಕೊಳ್ಳಲೇಬೇಕಾಗಿದೆ.

ಜಗತ್ತಿನ ಅತ್ಯಂತ ಅಪಾಯಕಾರಿ ಭಯೋತ್ಪಾದಕ ಗುಂಪುಗಳಲ್ಲಿ ಯೆಮನ್‌ನ ಹೌತಿ ಒಂದು. ಇಡೀ ಜಗತ್ತು ಮತದ ಆಧಾರದಲ್ಲಿ ಆಡಳಿತಕ್ಕೊಳಪಡಬೇಕೆಂದು ನಂಬುವ ಕಟ್ಟರ್‌ಪಂಥೀಯ ಹೌತಿಗಳು ಶಸ್ತ್ರಾಸ್ತ್ರ ಹೋರಾಟವೊಂದೇ ಅದಕ್ಕೆ ಮಾರ್ಗ ಎನ್ನುತ್ತದೆ. ಅದಕ್ಕಾಗಿ ಅವರು ಮುಸ್ಲಿಮರನ್ನು ಹತ್ಯೆಗೈಯಲೂ ಹೇಸುವುದಿಲ್ಲ. ಯೆಮನ್ ಆಡಳಿತದ ವಿರುದ್ಧ ಹುಟ್ಟಿಕೊಂಡ ಈ ಸಂಘಟನೆಯನ್ನು ಆರಂಭದಿಂದಲೂ ಇರಾನ್ ಪೋಷಿಸಿತು. ಸ್ವತಃ ಇರಾನ್ ಅದನ್ನು ಆರಂಭಿಸಿತು ಎಂದು ಕೂಡ ಹೇಳಲಾಗುತ್ತದೆ. ಜೊತೆಗೆ ಮತ, ರಾಜತಾಂತ್ರಿಕತೆ, ಮಾನಸಿಕತೆಯಲ್ಲಿ ಅದು ಇರಾನಿನ ಪಡಿಯಚ್ಚು. ಹಿಂದೆ ಗಾಜಾ ಯುದ್ಧದಲ್ಲಿ ಹೌತಿಗಳು ಪೂರ್ಣ ಶಕ್ತಿಯನ್ನು ಹಾಕಿದ್ದರು. ಇಸ್ರೇಲಿಯರಿಂದ ಪೆಟ್ಟುತಿಂದರೂ ಇದೀಗ ಚೇತರಿಸಿಕೊಂಡಂತೆ ಮತ್ತೆ ಯುದ್ಧರಂಗಕ್ಕಿಳಿದಿದೆ. ಒಂದೆಡೆ ಮಹಾನ್ ರಾಜತಾಂತ್ರಿಕ ಮುಖವಾಡವನ್ನು ಹೊದ್ದು ಯುದ್ಧದಲ್ಲಿ ಜಿದ್ದಿನಿಂದ ಹೋರಾಟ ನಡೆಸುತ್ತಿರುವ ಇರಾನ್, ಇನ್ನೊಂದೆಡೆ ಅಂಥ ಇರಾನಿಗೆ ನೇರ ಬೆಂಬಲ ನೀಡುವ ತರಬೇತಿಯಿಲ್ಲದ, ಕೌಶಲ್ಯರಹಿತ ಜಿಹಾದಿಗಳು ಈ ಯುದ್ಧದ ಸ್ವರೂಪವನ್ನು ಮಾತ್ರವಲ್ಲ, ವ್ಯಾಖ್ಯಾನವನ್ನೂ ಬದಲಿಸಲಿದೆ. ಯೆಮನ್‌ಗಾಗಲೀ, ಹೌತಿಗಳಿಗಾಗಲೀ ಇಸ್ರೇಲ್ ಎಂದಿಗೂ ಕಂಟಕವಾಗಿರಲಿಲ್ಲ. ಇಸ್ರೇಲಿಗೆ ತಲೆಕೆಡಿಸಿಕೊಳ್ಳಲು ನೂರಾರು ಸಂಗತಿಗಳಿವೆ. ಆದರೆ ಹೌತಿಗಳು ಇಸ್ರೇಲಿನ ವಿರುದ್ಧ ಸದಾ ಕಾಲುಕೆರೆದು ಜಗಳಕ್ಕೆ ನಿಲ್ಲುತ್ತದೆ. ಅಮೆರಿಕದ ವಿರುದ್ಧ ಕೂಡ ಹೌತಿಗಳು ಹಿಂದಿನಿಂದಲೂ ಕೆಂಡಕಾರುತ್ತಲೇ ಬಂದಿದೆ. ಹಿಂದಿನಿಂದಲೂ ಹೌತಿಗಳದ್ದು 'ಡೆತ್ ಟು ಅಮೇರಿಕಾ, ಡೆತ್ ಟು ಇಸ್ರೇಲ್' ಎಂಬ ಘೋಷಣೆಯನ್ನು ಧ್ಯೇಯವಾಕ್ಯದಂತೆ ಪಾಲಿಸಿಕೊಂಡು ಬಂದಿರುವುದರಲ್ಲೇ ಅದರ ಮಾನಸಿಕತೆ ಎದ್ದು ಕಾಣುತ್ತದೆ. ಹೀಗೆ ಹೇಳಿಕೊಳ್ಳುವ ಹೌತಿಗಳು ಕೆಂಪು ಸಮುದ್ರದಲ್ಲಿ ಸಾಗುವ ವ್ಯಾಪಾರಿ ಹಡಗುಗಳ ಮೇಲೆ ದಾಳಿ ಮಾಡಿ ಸಂಪತ್ತನ್ನು ಸಂಗ್ರಹಿಸುತ್ತಿತ್ತು ಎಂದರೆ ಇವರನ್ನು ಕಡಲ್ಗಳ್ಳರೆನ್ನದೆ ಇನ್ನೇನನ್ನಬೇಕು? ಇಂಥವರು ಇಂದು ಇರಾನಿನ ಪರ ನಿಂತಿದ್ದಾರೆ. ಇರಾನಿಗೂ ಈಗ ಇಂಥವರ ಸಹವಾಸ ಬೇಕಿದೆ. ನೇರ ಯುದ್ಧದಲ್ಲಿ ಬಲಾಢ್ಯ ಪಡೆಗಳನ್ನು ಎದುರಿಸಲಾಗದ ಇರಾನ್ ಕಳ್ಳರ ಮೊರೆಹೋಗಿದೆ.

ಪ್ರಸಕ್ತ ಯುದ್ಧದಲ್ಲಿ ಭಾರತ ಯಾರ ಪರ ಎನ್ನುವುದನ್ನು ಸ್ಪಷ್ಟಪಡಿಸಬೇಕೆನ್ನುವುದು ಹುಚ್ಚುತನದ ಪ್ರಶ್ನೆ. ಎಲ್ಲೋ ನಡೆಯುವ ಯುದ್ಧದಲ್ಲಿ, ಅದರ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಮಾತ್ರ ಈಗ ತಟಸ್ಥ ದೇಶಗಳ ಮುಖ್ಯ ಉದ್ದೇಶವೇ ಹೊರತು, ಇತ್ತಂಡಗಳಲ್ಲಿ ಒಂದು ಬಣ ಸೇರಿ ಅದನ್ನು ವಿಶ್ವಯುದ್ಧದ ಮಟ್ಟಿಗೆ ಬೆಳೆಸುವುದಲ್ಲ. ಆದರೆ ಹೌತಿಗಳ ಸೇರ್ಪಡೆ ಯುದ್ಧವನ್ನು ರಾಕ್ಷಸಿತನಕ್ಕೆ ಕೊಂಡೊಯ್ಯುತ್ತದೆ ಎಂಬುದು ಸತ್ಯ.

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ಕೊಳೆಗೇರಿಯ ಮಕ್ಕಳಿಗೆ ಶಿಕ್ಷಣದ ಹಾದಿ ತೋರಿದ ರೂಬಲ್ ನಾಗಿಯ ಸಾಧನೆ ಆದರ್ಶನೀಯ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಅದು ಮುಂಬೈ ಮಹಾನಗರಿಯ ಕೊಲಬಾ ಕೊಳೆಗೇರಿಯಲ್ಲಿ ಸದ್ದಿಲ್ಲದೆ ನಡೆದ ಶಿಕ್ಷಣ ಕ್ರಾಂತಿ. 30 ವರ್ಷಗಳ ಹಿಂದೆ ಆ ಕೊಳೆಗೇರಿಯ ಮುರುಕು ಗುಡಿಸಲುಗಳಲ್ಲಿ ಹರಿದ ಬಟ್ಟೆ ತೊಟ್ಟು, ಎಣ್ಣೆ ಕಾಣದ ಕೆದರಿದ ತಲೆಗೂದಲು ಹರಡಿಕೊಂಡ ಮಕ್ಕಳಿಗೆ ಶಿಕ್ಷಣವೆಂಬುದು ಮರೀಚಿಕೆಯಾಗಿತ್ತು. ಪೋಷಕರೊಂದಿಗೆ ಮಕ್ಕಳೂ ಹೊಟ್ಟೆಪಾಡಿಗಾಗಿ ದುಡಿಯಲೇಬೇಕಿದ್ದ ಅನಿವಾರ್ಯತೆ, ಅಂತಹ ಕೆಟ್ಟ ಬಡತನ.

ಆದರೆ ಅಲ್ಲೊಂದು ಸದ್ದಿಲ್ಲದ ಶಿಕ್ಷಣ ಕ್ರಾಂತಿಯೇ ನಡೆದುಹೋಯಿತು. ಕೊಳೆಗೇರಿಯ ಮುರುಕು ಗುಡಿಸಲ ಗೋಡೆಗಳ ಮೇಲೆ ಬಣ್ಣದ ಚಿತ್ತಾರಗಳು ಕಂಗೊಳಿಸಿದವು. ಬಣ್ಣ ಬಳಿದ ಆ ಒಡಕಲು ಗೋಡೆಗಳ ಮೇಲೆ ಬರೆಯಲಾದ ವಿಜ್ಞಾನ, ಗಣಿತ, ಚರಿತ್ರೆ, ಭಾಷೆಯ ಪಾಠಗಳು, ವಿಜ್ಞಾನದ ಚಿತ್ರಗಳು ಅಲ್ಲಿನ ಶಿಕ್ಷಣ ವಂಚಿತ ಬಡಮಕ್ಕಳನ್ನು ಆಕರ್ಷಿಸಿದವು. ಸಣ್ಣ ಪುಟ್ಟ ಕೆಲಸಕ್ಕೆ ಹೋಗುತ್ತಿದ್ದ ಮಕ್ಕಳು ಆ ಗೋಡೆಗಳ ಕೆಳಗೇ ಕುಳಿತು ಶಿಕ್ಷಣದ ಓನಾಮ ಕಲಿಯತೊಡಗಿದರು. ಶಿಕ್ಷಣ ಕೇಂದ್ರ ಎಂಬ ನಿಶ್ಚಿತ ಸ್ಥಾನವೇ ಅಲ್ಲಿರಲಿಲ್ಲ. ಕೆಲವೆಡೆ ಆ ಕೊಳೆಗೇರಿಯ ಮನೆಗಳೇ ಶಾಲೆಗಳಾಗಿ ಬದಲಾಗುತ್ತಿತ್ತು. ಕ್ರಮೇಣ ಇಡೀ ಕೊಳೆಗೇರಿಯನ್ನು ಸ್ವಚ್ಛವಾಗಿಡುವ, ಕೊಳೆಕಸ ಗಲೀಜು ಇರದಂತೆ ನೋಡಿಕೊಳ್ಳುವ ಹೊಣೆಯನ್ನು ಇದೇ ಬಡಮಕ್ಕಳು ಖುಷಿಯಿಂದ ನಿರ್ವಹಿಸಿದರು. ಮಕ್ಕಳ ಈ ಶಿಕ್ಷಣ ಕೈಂಕರ್ಯಕ್ಕೆ ಪೋಷಕರೂ ಕ್ರಮೇಣ ಕೈಜೋಡಿಸಿದರು.

ಕೊಳೆಗೇರಿಯ ಆ ಮಕ್ಕಳ ಮನದಲ್ಲಿ ಶಿಕ್ಷಣ ಕಲಿಕೆಯ ಕನಸು ಬಿತ್ತಿ ಆಕರ್ಷಿಸಿ ಪ್ರೇರಣೆ ನೀಡಿದ್ದು ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್‌ಎನ್‌ಎಎಫ್) ಎಂಬ ಒಂದು ಸರ್ಕಾರೇತರ ಖಾಸಗಿ ಸಂಸ್ಥೆ. ವಾಸ್ತವವಾಗಿ ಅದೊಂದು ಕಲೆಗೆ ಸಂಬಂಧಿಸಿದ ಸಂಸ್ಥೆಯಾಗಿದ್ದರೂ ಕೊಳೆಗೇರಿ ಶಿಕ್ಷಣ ವಂಚಿತ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದ ಪರಿಣಾಮವೇ ಶಿಕ್ಷಣ ವಂಚಿತರು ಅಕ್ಷರವಂತರಾದರು. ಅನೇಕರು ವಿದ್ಯಾವಂತರಾದರು. ಶಿಕ್ಷಣವಂಚಿತ ಬಡಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕನಸು ಕಂಡು, ಅದನ್ನು ನನಸು ಮಾಡಿದವರು 45ರ ಹರೆಯದ ಜಮ್ಮು-ಕಾಶ್ಮೀರ ಮೂಲದ ರೂಬಲ್ ನಾಗಿ ಎಂಬ ಕಲಾವಿದೆ ಹಾಗೂ ಶಿಕ್ಷಣಪ್ರೇಮಿ.

ರೂಬಲ್ ನಾಗಿ ಹುಟ್ಟಿದ್ದು ಕಾಶ್ಮೀರ ಕಣಿವೆಯ ಒಂದು ಪುಟ್ಟ ಗ್ರಾಮದಲ್ಲಿ. ಆಕೆಯ ತಂದೆ ಕರ್ನಲ್ ಗ್ಯಾನ್‌ಸಿಂಗ್ ಸೂಡಾನ್, ತಾಯಿ ರಸ್ ವಿಂದರ್ ಕೌರ್. ಕರ್ನಲ್ ಗ್ಯಾನ್‌ಸಿಂಗ್ ಭಾರತೀಯ ಸೇನಾಪಡೆಯಲ್ಲಿ ಅಧಿಕಾರಿಯಾಗಿದ್ದರಿಂದ ಆಗಾಗ ವರ್ಗಾವಣೆ, ಹಾಗಾಗಿ ಬೇರೆ ಬೇರೆ ಸ್ಥಳಗಳಿಗೆ ಅಲೆದಾಟ. ಪುಟ್ಟ ಬಾಲಕಿಯಾಗಿದ್ದ ರೂಬೆಲ್‌ಗೆ ಹೀಗಾಗಿ ಇಡೀ ಭಾರತದ ವಿವಿಧೆಡೆಯ ಜನಜೀವನ, ರೀತಿನೀತಿ, ಸಂಸ್ಕೃತಿ ಪರಂಪರೆಯನ್ನು ಹತ್ತಿರದಿಂದ ನೋಡುವ, ತಿಳಿಯುವ ಅವಕಾಶ ಅಯಾಚಿತವಾಗಿಯೇ ದೊರಕಿತ್ತು. ರಾಜಕೀಯ ವಿಜ್ಞಾನದಲ್ಲಿ ಪದವಿ ಮುಗಿಸಲಾಗದಿದ್ದರೂ ಲಂಡನ್‌ನ ಪ್ರತಿಷ್ಠಿತ ಸ್ಲೇಡ್ ಸ್ಕೂಲ್ ಆಫ್ ಫೈನ್ ಆರ್ಟ್ಸ್ ಮತ್ತು ಸೊತೆಬೀನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್‌ನಲ್ಲಿ ಯುರೋಪಿಯನ್ ಕಲೆಯನ್ನು ಅಧ್ಯಯನ ಮಾಡಿದರು. ಮುಂಬೈನಲ್ಲಿ ತನ್ನದೇ ಆದ ರೂಬಲ್ ನಾಗಿ ಆರ್ಟ್ ಫೌಂಡೇಶನ್ ಪ್ರಾರಂಭಿಸಿದರು. ಈ ಸಂಸ್ಥೆಗೆ ಒಂದು ದಿನ ಚಿತ್ರಕಲೆ ವೀಕ್ಷಿಸಲು ಕೊಳೆಗೇರಿಯ ಹುಡುಗಿಯೊಬ್ಬಳು ಬಂದಿದ್ದಳು. ಆ ಹುಡುಗಿಗೆ ಕಲೆ ಎಂದರೆ ಏನೆಂದೇ ತಿಳಿದಿರಲಿಲ್ಲ. ತನ್ನ ಬಟ್ಟೆ ಗಲೀಜಾಗಿರುವುದೇ ಕಲೆ ಎಂದು ಆಕೆ ಭಾವಿಸಿದ್ದಿರಬಹುದು. ಕುತೂಹಲದಿಂದ ಬಣ್ಣದ ಚಿತ್ತಾರಗಳನ್ನು ನೋಡಲು ಬಂದಿದ್ದಳಷ್ಟೆ.

ಆದರೆ ರೂಬಲ್‌ಗೆ ಆ ಹುಡುಗಿಯನ್ನು ನೋಡಿದ ಬಳಿಕ ಮನದಲ್ಲಿ ಹೊಳೆದ ವಿಚಾರಗಳೇ ಬೇರೆ. ತನ್ನ ಕಲಾ ಸಂಸ್ಥೆ ಇರುವುದು ಕೇವಲ ವಿವಿಧ ಕಲಾವಿದರ ಚಿತ್ರಪ್ರದರ್ಶನಕ್ಕೆ ಅಷ್ಟೇ ಆಗಬಾರದು. ಕೊಳೆಗೇರಿಯ ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಮೂಡಿಸಲು ಈ ಕಲೆ ಮಾಧ್ಯಮವಾಗಬೇಕು ಎಂದುಕೊಂಡರು. ಇಂತಹುದೊಂದು ವಿಚಾರದ ಹುಳು ತಲೆಯಲ್ಲಿ ಹೊಕ್ಕಿದ್ದೇ ತಡ ಮತ್ತೆ ರೂಬಲ್ ಮರುಯೋಚಿಸಲಿಲ್ಲ. ಮುಂಬೈಯ ಕೊಲಾಲಾ ಕೊಳೆಗೇರಿಯನ್ನೇ ತನ್ನ ಕನಸನ್ನು ನನಸಾಗಿಸುವ ಮೊದಲ ತಾಣವನ್ನಾಗಿ ಮಾಡಿಕೊಂಡರು.. ಅಲ್ಲಾದರೋ ಬಹುತೇಕ ನಿವಾಸಿಗಳು ಬಟ್ಟೆ ಒಗೆದು ಒಣಗಿಸಿ, ಇಸ್ತ್ರಿ ಹಾಕಿಕೊಡುವ ದೋಭಿ ವೃತ್ತಿಯ ಮಂದಿ. ಅವರ ಮಕ್ಕಳು, ಹೆಂಗಸರು ಇನ್ನಾರದೋ ಮನೆಕೆಲಸ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ರೂಬೆಲ್ ಮೊದಲು ಅಲ್ಲಿನ ಒಂದು ಲಕ್ಷಕ್ಕೂ ಹೆಚ್ಚು ಗುಡಿಸಲುಗಳ ಗೋಡೆಗಳಿಗೆ ಬಣ್ಣ ಹೊಡೆದು ವಿವಿಧ ಬಗೆಯ ಚಿತ್ರ ಚಿತ್ತಾರಗಳನ್ನು ರಚಿಸಿದರು. ಬಣ್ಣ ಬಣ್ಣದ ಚಿತ್ತಾರಗಳ ಗೋಡೆಗಳನ್ನು ನೋಡಿ ಕುತೂಹಲದಿಂದ ಅಲ್ಲಿಗೆ ಬಂದ ಮಕ್ಕಳಿಗೆ ಕ್ರಮೇಣ ಅಕ್ಷರ ಕಲಿಸಿ, ಜೊತೆಗೆ ಗಣಿತ, ವಿಜ್ಞಾನ, ಇತಿಹಾಸದ ಸರಳ ಪಾಠಗಳನ್ನೂ ಶಿಕ್ಷಕರ ಮೂಲಕ ಕಲಿಸುವ ವ್ಯವಸ್ಥೆ ಮಾಡಿದರು. ನೋಡನೋಡುತ್ತಾ ಕಲಿಯುವ ಆಸಕ್ತಿ ಹೊಂದಿ ಬರುವವರ ಸಂಖ್ಯೆ ಬೆಳೆಯತೊಡಗಿತು.



ಆದರೆ ಇದೇನೂ ಹೇಳಿದಷ್ಟು ಸುಲಭವಾಗಿರಲಿಲ್ಲ. ಬಡತನ ರೇಖೆಗಿಂತ ಕೆಳಗಿದ್ದ ಅಲ್ಲಿನ ನಿವಾಸಿಗಳಿಗೆ ಎರಡು ಹೊತ್ತಿನ ಹಸಿವು ನೀಗಿಸಿಕೊಳ್ಳುವುದೇ ದೊಡ್ಡ ಸಾಹಸವಾಗಿತ್ತು. ಇದನ್ನರಿತ ರೂಬೆಲ್ ತನ್ನ ಸಂಸ್ಥೆಯ ಮೂಲಕ ಎಲ್ಲ ಮನೆಗಳಿಗೆ ಅಗತ್ಯ ರೇಶನ್ ಪದಾರ್ಥಗಳನ್ನು ಪೂರೈಕೆ ಮಾಡಿ ಮೊದಲು ಹಸಿವೆಯ ಚಿಂತೆಯನ್ನು ದೂರಗೊಳಿಸಿದರು. ಹೊಟ್ಟೆ ತುಂಬಿದ ಬಳಿಕ ಅಕ್ಷರ ಕಲಿಕೆ, ವಿಜ್ಞಾನ, ಗಣಿತ, ಇತಿಹಾಸ, ನಾಡು-ನುಡಿಯ ಬಗ್ಗೆ ವಿದ್ಯಾಭ್ಯಾಸ.

ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್‌ಎನ್‌ಎಎಫ್) ಇದೀಗ ದೇಶದಾದ್ಯಂತ 100ಕ್ಕೂ ಹೆಚ್ಚು ಶಿಕ್ಷಣ ವಂಚಿತ ಬಡ ಸಮುದಾಯಗಳು ವಾಸಿಸುವೆಡೆ 800ಕ್ಕೂ ಹೆಚ್ಚು ಕಲಿಕಾಕಾಂದ್ರ ಸ್ಥಾಪಿಸಿ ಅಕ್ಷರವಂಚಿತರನ್ನು ಸಾಕ್ಷರರಾಗಿ ರೂಪಿಸುವ ಅದ್ಭುತ ಕಾರ್ಯ ನಿರ್ವಹಿಸುತ್ತಿದೆ. ಆರ್‌ಎನ್‌ಎಎಫ್ ಕಲಿಕಾ ಕೇಂದ್ರಗಳೆಂದರೆ ಅಲ್ಲಿ ಬೆಂಚುಗಳಿಲ್ಲ. ಶಿಕ್ಷಕಿಗೆ ಕೂರಲು ಕುರ್ಚಿಯಿಲ್ಲ. ಅಲ್ಲಿಗೆ ಬರುವ ಮಕ್ಕಳಿಗೆ ಪೆನ್ಸಿಲ್ ಎಂದರೆ ಏನೆಂಬುದೇ ಗೊತ್ತಿಲ್ಲ. ಹರಕಲು ಚಾಪೆಗಳೇ ಮಕ್ಕಳಿಗೆ ಬೆಂಚು. ಆದರೆ ಅಲ್ಲಿ ಕಲಿಸಲಾಗುವ ಶಿಕ್ಷಣ ಮಾತ್ರ ಅತ್ಯಂತ ಸಮಗ್ರ, ಸಮೃದ್ಧ. ಸಾವಿರಾರು ಬಡಮಕ್ಕಳು ಸಾಕ್ಷರವಂತರಾಗಲು ರೂಬಲ್ ಸದ್ದಿಲ್ಲದೆ ಕೆಲಸ ಮಾಡಿದ್ದಾರೆ.

ರೂಬಲ್ ಅವರ ಈ ಸದ್ದಿಲ್ಲದ ಶಿಕ್ಷಣ ಕ್ರಾಂತಿ ಅದೆಷ್ಟು ಪ್ರಭಾವಿ ಹಾಗೂ ಪರಿಣಾಮಕಾರಿಯಾಗಿತ್ತೆಂದರೆ, ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಅಭಿರುಚಿ ಮೂಡಿಸಿದ ಮಹೋನ್ನತ ಕಾರ್ಯಕ್ಕಾಗಿ 2026ರ ಜಾಗತಿಕ ಶಿಕ್ಷಕ ಪ್ರಶಸ್ತಿ (Global Teacher Prize 2026) ಆಕೆಯನ್ನರಸಿಕೊಂಡು ಬಂದಿತ್ತು. ಅದೊಂದು ಶಿಕ್ಷಣ ರಂಗದ ನೊಬೆಲ್ ಪ್ರಶಸ್ತಿ ಎಂದೇ ಖ್ಯಾತವಾಗಿದೆ. ಆ ಪ್ರಶಸ್ತಿಗೆ ಭಾರತವೂ ಸೇರಿದಂತೆ 139 ದೇಶಗಳಿಂದ 5 ಸಹಸ್ರ ಅರ್ಜಿಗಳು ಬಂದಿದ್ದವು. ಆದರೆ ಕೊನೆಯ ಹಂತದಲ್ಲಿ ಆಯ್ಕೆಯಾಗಿದ್ದು ಆರ್‌ಎನ್‌ಎಎಫ್ ಸಂಸ್ಥೆ. ಆ ಪ್ರಶಸ್ತಿಯ ನಗದು ಮೊತ್ತವೇ ಬರೋಬ್ಬರಿ ಒಂದು ದಶಲಕ್ಷ ಅಮೆರಿಕನ್ ಡಾಲರ್ (ಸುಮಾರು 9,48,64,200 ರೂ.ಗಳು) ದುಬೈಯಲ್ಲಿ ಕಳೆದ ಫೆ. 5ರಂದು ವರ್ಲ್ಡ್ ಗವರ್ನ್‌ಮೆಂಟ್ಸ್ ಸಮ್ಮಿಟ್ ನಡೆದಿದ್ದಾಗ ದುಬೈಯ ಯುವರಾಜಕುಮಾರ ಶೇಖ್ ಹಮ್ದನ್ ಬಿನ್ ಮಹಮ್ಮದ್ ಬಿನ್ ರಶೀದ್ ಅಲ್ ಮುಕ್ತುಮ್ ಈ ಪ್ರಶಸ್ತಿ ವಿಜೇತೆ ರೂಬಲ್ ಹೆಸರನ್ನು ಘೋಷಿಸಿದಾಗ, ವೇದಿಕೆಯ ಮುಂಭಾಗದಲ್ಲಿದ್ದ ರೂಬಲ್ ಆನಂದಭಾಷ್ಪದಿಂದ ಎದೆತುಂಬಿ ಹೇಳಿದ್ದೇನು ಗೊತ್ತೆ: "India won. ಭಾರತ್ ಕಾ ವಿಜಯ್" (ಕನ್ನಡದ ಬೂಕರ್ ಪ್ರಶಸ್ತಿ ವಿಜೇತೆಯಿಂದ ಇಂತಹ ಪ್ರತಿಕ್ರಿಯೆ ಕೇಳಿಬಂದಿರಲಿಲ್ಲ. ತನ್ನ ಕೃತಿಯನ್ನು ಅನುವಾದಿಸಿದ ಸಹಲೇಖಕಿಯನ್ನೂ ಆಕೆ ಆ ಸಂದರ್ಭದಲ್ಲಿ ಸ್ಮರಿಸಿಕೊಂಡಿರಲಿಲ್ಲ. ಬಿಡಿ, ಆ ವಿಚಾರ ಬೇರೆ!). ಪ್ರಶಸ್ತಿ ಸ್ವೀಕರಿಸಿದ ರೂಬಲ್ ತನಗೆ ದೊರಕಿದ ಅಷ್ಟೂ ಪ್ರಶಸ್ತಿ ಮೊತ್ತವನ್ನು ಶಿಕ್ಷಣ ವಂಚಿತ ಬಡಮಕ್ಕಳ ಅಂಧಕಾರದ ಬದುಕಲ್ಲಿ ಬೆಳ್ಳಿರೇಖೆ ಮೂಡಿಸಲು ಬಳಸಿಕೊಳ್ಳುವುದಾಗಿ ಘೋಷಿಸಿದರು. ಆಕೆ ಆ ಉನ್ನತ ಪ್ರಶಸ್ತಿಗೆ ಎಷ್ಟು ಅರ್ಹಳು ಎನ್ನುವುದಕ್ಕೆ ಇದೊಂದೇ ನಿದರ್ಶನ ಸಾಕಲ್ಲವೆ?

ರೂಬಲ್ ಫೌಂಡೇಶನ್ ನೆರವಿನಿಂದ ಅಕ್ಷರವಂತರಾದ ಹಲವರು ಈಗ ಋಣ ತೀರಿಸುತ್ತಿದ್ದಾರೆ. ಮಯೂರ್ ಎಂಬ ಯುವಕ ತನ್ನದೇ ಸ್ವಂತ ಕಲಾ ತರಗತಿಗಳನ್ನು ನಡೆಸುವುದರ ಜೊತೆಗೆ ಸಣ್ಣ ಪ್ರಮಾಣದ ಮುದ್ರಣ ವ್ಯವಹಾರವನ್ನೂ ಆರಂಭಿಸಿದ್ದಾನೆ. 'ಕಲಿಕೆ ಎಂಬುದು ಎಲ್ಲಿ ಬೇಕಾದರೂ ಸಂಭವಿಸಬಹುದು. ಆದರೆ ನೀವು ಅದನ್ನು ಆಸಕ್ತಿಕರವಾಗಿಸಬೇಕು' ಎಂದು ಕಿವಿ ಮಾತು ಹೇಳುವ ರೂಬಲ್, "ಕೊಳೆಗೇರಿಗಳಲ್ಲಿ ಕಾರ್ಯನಿರ್ವಹಿಸುವಾಗ ಕೇವಲ ಮಕ್ಕಳೊಂದಿಗಷ್ಟೇ ಅಲ್ಲ, ಅಲ್ಲಿನ ಇಡೀ ನಿವಾಸಿಗಳೊಂದಿಗೆ ಉತ್ತಮ ಸಂಬಂಧಗಳನ್ನು ಬೆಸೆಯಬೇಕಾಗುತ್ತದೆ. ಯಾರಿಗೋ ಹಣದ ನೆರವು ಬೇಕಿರುತ್ತದೆ. ಇನ್ನಾರೋ ಮನೆಯಲ್ಲಿ ಆಹಾರ ಪದಾರ್ಥಗಳಿಲ್ಲದೆ ತೊಳಲಾಡುತ್ತಿರುತ್ತಾರೆ. ಮತ್ತಿನ್ನಾರೋ ಸಂಕಟದಲ್ಲಿರುತ್ತಾರೆ. ಇಂಥವರೆಲ್ಲರ ಅವಶ್ಯಕತೆಗಳನ್ನು ಸಕಾಲಕ್ಕೆ ಪೂರೈಸಿದಲ್ಲಿ ನಾವು ನಮ್ಮ ಕೆಲಸವನ್ನು ಸುಸೂತ್ರವಾಗಿ ಮುಂದುವರಿಸಬಹುದು" ಎಂದು ವಿವರಿಸುತ್ತಾರೆ. ಮನೆಗೆಲಸ ನಿರ್ವಹಿಸುವ ತಾಯಿಯೊಬ್ಬಳ ಏಳು ವರ್ಷದ ಮಗಳು ಖುಷಿಗೆ ಇಂತಹ ಶಾಲೆಗೆ ಬರುವುದೆಂದರೆ ಎಲ್ಲಿಲ್ಲದ ಖುಷಿ. ತಾನು ಹೀಗೆ ಓದಿ ಮುಂದೆ ಶಿಕ್ಷಕಿಯಾಗಬೇಕು ಎಂಬುದು ಆ ಪುಟ್ಟ ಖುಷಿಯ ಕನಸು. ಹೀಗೆ ಇಂತಹ ಕನಸುಗಳನ್ನು ಅದೆಷ್ಟೋ ಮಕ್ಕಳಲ್ಲಿ ರೂಬಲ್ ಬಿತ್ತುತ್ತಲೇ ಇದ್ದಾರೆ.

ಗ್ಲೋಬಲ್ ಟೀಚರ್ ಪ್ರಶಸ್ತಿಯನ್ನು 2017ರಿಂದ ವಾರ್ಕೆ ಫೌಂಡೇಶನ್ ಯುನೆಸ್ಕೋ ಸಂಸ್ಥೆಯ ಸಹಯೋಗದೊಂದಿಗೆ ನೀಡುತ್ತಾ ಬಂದಿದೆ. 2017ರಲ್ಲಿ ಮ್ಯಾಗಿ ಮೆಕ್ ಡೊನಾಲ್ಡ್(ಕೆನಡಾ), 2018ರಲ್ಲಿ ಆಡ್ರಿಯಾ ಝುಸಿರಕೊವ್ (ಇಂಗ್ಲೆಂಡ್), 2019ರಲ್ಲಿ ಪೀಟರ್ ಟಬಿಚಿ (ಕೆನ್ಯಾ) ಹಾಗೂ 2020ರಲ್ಲಿ ರಣಜಿತ್ ಸಿನ್ಹ್ ಡಿಸೇಲ್ (ಭಾರತ) ಮೊದಲಾದವರಿಗೆ ಈ ಪ್ರಶಸ್ತಿ ದೊರೆತಿತ್ತು.

ಶಿಕ್ಷಣದ ಕನಸು ಬಿತ್ತಿದ ರೂಬಲ್ ನಾಗಿ ಅವರಿಗೆ ನಮ್ಮೆಲ್ಲರ ಒಂದು ಶುಭಾಶಯ ಮೊಳಗಲಿ.

ಹರೆಯ ಮತ್ತು ಕೌಟುಂಬಿಕ ಪರಿಸರ

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಮನೆಯೇ ಮೊದಲ ಶಾಲೆ, ತಾಯಿಯೇ ಮೊದಲ ಗುರು ಎಂಬ ನಾಣ್ನುಡಿಯನ್ನು ಕೇಳಿದ್ದೇವಲ್ಲವೇ. ವ್ಯಕ್ತಿಯ ಕಲಿಕೆ, ಅವನ ಸರ್ವತೋಮುಖ ಅಭಿವೃದ್ಧಿಯಾಗಲು ಕುಟುಂಬದ ಪರಿಸರ ಅವಶ್ಯ. ಬಾಲ್ಯದಲ್ಲಿ ಹಿತವಾದ, ಪ್ರೀತಿ, ಮಮತೆಯಿಂದ ಕೂಡಿದ ಕೌಟುಂಬಿಕ ಪರಿಸರವು ಹರೆಯದಲ್ಲಿ ಜರುಗುವ ವ್ಯಕ್ತಿತ್ವ ವಿಕಸನಕ್ಕೆ, ಶೈಕ್ಷಣಿಕ ಸಾಧನೆಗೆ, ಎದುರಾಗುವ ಸವಾಲುಗಳನ್ನು ನಿಭಾಯಿಸಲು ಅವಶ್ಯ. ಪ್ರವಾಹದೋಪಾದಿಯಲ್ಲಿ ಎದುರಾಗುವ ಒತ್ತಡಗಳಿಗೆ ಪರಿಹಾರ ಕಂಡುಕೊಂಡು ನೆಮ್ಮದಿಯಿಂದ ಮುನ್ನಡೆಯಲು ಪೋಷಕರ ಬೆಂಬಲ ಬೇಕು. ಹರೆಯಕ್ಕೂ, ಕುಟುಂಬದ ಪರಿಸರಕ್ಕೂ ಇರುವ ನಿಕಟವಾದ ಸಂಬಂಧವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಹನ್ನೆರಡು ವರ್ಷದ ಒಂಭತ್ತನೇ ತರಗತಿಯ ವಿದ್ಯಾರ್ಥಿ ರಘು. ತರಗತಿಯಲ್ಲಿ ಚೆನ್ನಾಗಿ ಓದುತ್ತಿದ್ದ ರಘು, ಈಗ ಓದಿನಲ್ಲಿ ಹಿಂದುಳಿದಿದ್ದಾನೆ. ಒಮ್ಮೊಮ್ಮೆ ತರಗತಿಯಲ್ಲಿ ನಿದ್ದೆ ಹೋಗಿ, ಶಿಕ್ಷಕರಿಂದ ಬೈಸಿಕೊಂಡಿದ್ದೂ ಉಂಟು. ಓದಿನಲ್ಲಿ ನಿರಾಸಕ್ತಿ. ಮನೆಗೆ ಅತಿಥಿಗಳು ಬಂದರೆ, ಅವರೊಂದಿಗೆ ಬೆರೆಯುತ್ತಿದ್ದವನು, ಈಗ ಅತಿಥಿಗಳು ಬಂದಾಕ್ಷಣ ರೂಮಿನೊಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ರಘುವಿನ ಬದಲಾದ ವರ್ತನೆ ನೋಡಿದ ತಾಯಿ ರಮಾ, ರಘುವಿಗೆ ಪ್ರೀತಿಯ ಮಾತಿನಿಂದ ಹಾಗೆಲ್ಲಾ ಮಾಡಬಾರದು, ಚೆನ್ನಾಗಿ ಓದಿ ಬುದ್ಧಿವಂತನಾಗಬೇಕು ಎಂದರು. ಏನು ಹೇಳಿದರೂ ರಘುವಿನ ಅಸಭ್ಯ ನಡವಳಿಕೆ ದಿನೇದಿನೇ ಹೆಚ್ಚಾಗುತ್ತಾ ಬಂತು. ಮಗನು ಏಕೆ ಹೀಗೆ ಮಾಡುತ್ತಿದ್ದಾನೆಂದು ಸಲಹೆ ಕೇಳಲು ಮಗನನ್ನು ತಾಯಿ ಕರೆತಂದಿದ್ದರು.

ರಘುವಿನ ಕುಟುಂಬದ ಪರಿಸರದ ಕುರಿತು ಕೇಳಿದೆ. ಅದಕ್ಕೆ ತಾಯಿ ರಮಾ, "ಅದೇ



ಒಂದು ದೊಡ್ಡ ಸಮಸ್ಯೆ ಸಾರ್" ಎಂದರು. ಕುಡುಕ ತಂದೆ ಪಾನಮತ್ತರಾಗಿ ಮಧ್ಯರಾತ್ರಿ ಮನೆಗೆ ಬರುತ್ತಾರೆ. ಹೆಂಡತಿ ಮಕ್ಕಳನ್ನು ಹೀನಾಮಾನವಾಗಿ ಬಯ್ಯುತ್ತಾರೆ. ಮಗಳಿಗೆ ಮಧ್ಯ ರಾತ್ರಿಯವರೆಗೂ ಓದಿ ಪಾಠ ಒಪ್ಪಿಸಬೇಕೆಂದು ಕರ್ಕಶ ಕಂಠದಿಂದ ಕೂಗುತ್ತಾರೆ. ಒಂದು ವಿಧದಲ್ಲಿ ಮನೆ ಒಂದು ರಣರಂಗ ಎನ್ನಬಹುದು ಎಂದು ವಿವರಿಸಿದರು.

ಹತ್ತನೇ ತರಗತಿಯ ವಿದ್ಯಾರ್ಥಿನಿ ಸರೋಜಾ ಮೊದಲಿಗೆ ಚೆನ್ನಾಗಿ ಓದುತ್ತಿದ್ದವಳು, ಈಗ ಯಾಕೋ ಓದುವುದರಲ್ಲಿ ಆಸಕ್ತಿ ಕಳೆದುಕೊಂಡಿದ್ದಾಳೆ. ಅಣ್ಣ ರಾಜು ಸರೋಜಾಳಿಗಿಂತ ಹೆಚ್ಚು ಬುದ್ಧಿವಂತ. ಹಾಗಾಗಿ ತಾಯಿ ತಂದೆ ಇಬ್ಬರೂ ಅವಳಿಗೆ ಹೋಲಿಸಿ ಮಗನನ್ನು ಯಾವಾಗಲೂ ಹೊಗಳುತ್ತಿದ್ದರು. ಮಗಳಿಗೆ "ನೀನೂ ಇದ್ದೀಯ, ಮೊದಲು ಹೆಣ್ಣುಬೇಡ ಎಂದರೂ ಹುಟ್ಟಿದೆ. ಈಗ ನೋಡು, ನಿನ್ನನ್ನು ಯಾರೂ ಮಾತನಾಡಿಸುವುದಿಲ್ಲ. ಎಲ್ರೂ ನಿನ್ನ ಅಣ್ಣನನ್ನು ಹೊಗಳುತ್ತಾರೆ" ಎಂದು ದಿನನಿತ್ಯವೂ ಹೇಳುವುದನ್ನು ಕೇಳಿ, ತಾನು ನಿರುಪಯೋಗಿ, ಯಾರಿಗೂ ಬೇಡವಾದವಳು ಎಂಬ ಭಾವನೆ ಸರೋಜಳಿಗೆ ಉಂಟಾಯಿತು. ಅದಕ್ಕೆ ಏನು ಮಾಡಬೇಕೆಂದು ನೀವೇ ಹೇಳಿ ಸಾರ್ ಎಂದರು.

ಹಿತವಾದ, ಆತ್ಮೀಯತೆಯ ಮತ್ತು ಪ್ರೋತ್ಸಾಹದಿಂದ ಕೂಡಿದ ಮನೆಯ ವಾತಾವರಣವು ಹರೆಯದವರ ಬೆಳವಣಿಗೆಗೆ ಅಡಿಗಲ್ಲು. ಹೆಜ್ಜೆ ಹೆಜ್ಜೆಗೂ ಒತ್ತಡಗಳು ಆತಂಕವನ್ನುಂಟು ಮಾಡುತ್ತವೆ. ದೇಹದಲ್ಲಾಗುವ ಬದಲಾವಣೆಗಳು, ಮಾನಸಿಕವಾಗಿ ಪುಟಿದೇಳುವ ಪ್ರಶ್ನೆಗಳು, ಸಂದೇಹಗಳು, ಇತರರೊಂದಿಗಿನ ಒಡನಾಟ ಹೀಗೆ ಹಲವು ಸವಾಲುಗಳು ಎದುರಾಗುತ್ತವೆ. ತನ್ನ ಒತ್ತಡವನ್ನು ನೀಗಲು, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಲು ಆತ್ಮವಿಶ್ವಾಸ ಅವಶ್ಯ. ಇದಕ್ಕೆ ಅವಶ್ಯವಿರುವುದು ಕುಟುಂಬದಲ್ಲಿ ಪೋಷಕರ ಪ್ರೀತಿ ವಿಶ್ವಾಸದಿಂದ ಕೂಡಿದ ಮುಕ್ತ ಸಂವಹನ. ಹರೆಯದವರು ತಮ್ಮ ಸಂದೇಹಗಳನ್ನು ಇತರರೊಂದಿಗೆ ಕೇಳಿದರೆ, ಅವರು ನಗಬಹುದು, ಗೇಲಿ ಮಾಡಬಹುದು, ಅಯ್ಯೋ ಇಷ್ಟು ಸಣ್ಣದನ್ನು ಕೇಳುತ್ತಾನಲ್ಲ, ಇದು ಸಿಲ್ಲಿ ಎಂದು ಟೀಕೆ ಮಾಡಬಹುದು ಎಂದು ಭಾವಿಸಿ, ಸಂದೇಹಗಳನ್ನು ಹಂಚಿಕೊಳ್ಳಲು ಇಚ್ಛಿಸುವುದಿಲ್ಲ. ಪೋಷಕರು ಆತ್ಮೀಯತೆಯಿಂದ ಹರೆಯದವರೊಂದಿಗೆ ಕುಳಿತು, ಪ್ರೀತಿಯಿಂದ ಸಹಜವಾಗಿ ಅವರ ಸಂದೇಹಗಳ ಕುರಿತು ಕೇಳಬೇಕು. ಹರೆಯದವರ ವರ್ತನೆಯಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಅವರನ್ನು ಕೂರಿಸಿಕೊಂಡು, ಸಮಾಧಾನದಿಂದ ತಲೆ ನೇವರಿಸುತ್ತಾ ಕೇಳಿದಾಗ, ಹರೆಯದವರು ತಮ್ಮ ಆತಂಕ, ಒತ್ತಡಗಳನ್ನು ಮತ್ತು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಅವರು ಹೇಳುವುದನ್ನು ಆಲಿಸಿ, ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು. ಕಿರಿಯರ ಅನಿಸಿಕೆಗಳು ತಪ್ಪು ಎಂದು ಕಂಡುಬಂದಲ್ಲಿ ಒಳ್ಳೆಯ ಮಾತುಗಳಿಂದ ತಿದ್ದಬೇಕು.

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು. ಆತ್ಮೀಯ ಗೆಳೆಯರನ್ನು ಗಳಿಸುವಂತೆ ಪ್ರೋತ್ಸಾಹಿಸಬೇಕು. ಸಾಮಾಜಿಕ ಜಾಲತಾಣಗಳು ಮತ್ತು ಮೊಬೈಲ್ ಫೋನುಗಳ ಸಾಧಕ-ಬಾಧಕಗಳನ್ನು ವಿವರಿಸಿ, ಅವುಗಳ ಕುರಿತು ನಿರಂತರವಾಗಿ ಗಮನವಿಡಬೇಕು. ಮಿತಿಮೀರಿ ಉಪಯೋಗಿಸುವುದು ಒಳ್ಳೆಯದಲ್ಲ ಎಂದು ವಿವರಿಸಿ, ಮಕ್ಕಳ ಮನಸ್ಸನ್ನು ಗೆಲ್ಲಬೇಕು.

ಹರೆಯದವರು ಸ್ವತಂತ್ರರಾಗಲು ಯೋಚಿಸುತ್ತಾರೆ. ಇದಕ್ಕಾಗಿ ಪೋಷಕರ ಅವಲಂಬನೆಯಿಂದ ಹೊರಗೆ ಬರಲು ಪ್ರಯತ್ನಿಸುತ್ತಾರೆ. ಹರೆಯದವರು ಪೋಷಕರ ಸಲಹೆಗಳನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾರೆ. ನೀವು ಹೇಳುವುದನ್ನು ಕೇಳಲಾರೆ, ನಾನೇ ತೀರ್ಮಾನ ತೆಗೆದುಕೊಳ್ಳುತ್ತೇನೆ, ನೀವು ಸ್ವಲ್ಪ ಸುಮ್ಮನಿರಿ ಎಂದು ಒರಟಾಗಿ ಹೇಳಬಹುದು. ಇದರಿಂದ ಘರ್ಷಣೆಗಳಾಗುತ್ತವೆ. ಈ ವಿಧದ ನಡವಳಿಕೆಗಳು ಪೋಷಕರ ಮೇಲಿನ ದ್ವೇಷದಿಂದಲ್ಲ. 'ತನ್ನತನ'ವನ್ನು ಕಂಡುಕೊಂಡು ಸ್ವತಂತ್ರತೆಯನ್ನು ಸಾಧಿಸುವ ಯತ್ನ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಮಕ್ಕಳ ಅಭಿಪ್ರಾಯಗಳು ಸರಿ ಎನಿಸಿದರೆ ಅದನ್ನು ಒಪ್ಪಿಕೊಳ್ಳಬೇಕು. ಇದರಿಂದ ಹರೆಯದವರಿಗೆ ಪೋಷಕರಲ್ಲಿ ನಂಬಿಕೆ ಮತ್ತು ವಿಶ್ವಾಸಗಳು ಉಂಟಾಗುತ್ತದೆ. ಆತ್ಮೀಯತೆ ಮೂಡುತ್ತದೆ. ಅತಿಯಾದ ಕಟ್ಟುನಿಟ್ಟಿನ ಕ್ರಮಗಳಾಗಲೀ ಅಥವಾ ಅತಿಯಾದ ವಿನಯವಾಗಲೀ ಒಳ್ಳೆಯದಲ್ಲ.

ಹರೆಯದವರು ಪೋಷಕರ ನಡೆನುಡಿಗಳನ್ನು ಎಚ್ಚರದಿಂದ ಅವಲೋಕಿಸುತ್ತಿರುತ್ತಾರೆ. ಅವರು ಹೇಳುವ ಬುದ್ಧಿವಾದಗಳು, ಮಾತನಾಡುವ ಧಾಟಿ, ಅವರು ಮಾಡುವ ಟೀಕೆ ಟಿಪ್ಪಣಿಗಳನ್ನು ನೋಡುವ ಹರೆಯದವರು ಇನ್ನೊಂದು ಕಡೆ ಅವರ ನಡತೆಗಳನ್ನು ಗಮನಹರಿಸಿ ನೋಡುತ್ತಿರುತ್ತಾರೆ. ಹೇಳುವುದೆಲ್ಲಾ ಆಚಾರ, ಮಾಡುವುದೆಲ್ಲಾ ಅನಾಚಾರ ಎಂಬ ಹಾಗೆ ಪೋಷಕರು ಹೇಳುವುದೊಂದು, ಮಾಡುವುದೊಂದು ಆದರೆ, ಪೋಷಕರು ಹೇಳುವುದನ್ನು ಪಾಲಿಸುವುದಕ್ಕಿಂತ, ಅವರ ನಡತೆಯನ್ನು ಅನುಕರಿಸುತ್ತಾರೆ. ಪೋಷಕರ ನಡೆನುಡಿಗಳು ಮಕ್ಕಳಿಗೆ ಮಾದರಿಯಾಗಿರಬೇಕು. ಜೀವನದ ಮೌಲ್ಯಗಳಾದ ಸತ್ಯ, ಅಹಿಂಸೆ, ಪರೋಪಕಾರ ಮನೋಭಾವ, ಮೃದು ಮಾತುಗಳು ಸ್ನೇಹಪರತೆ ಇವುಗಳನ್ನು ಅನುಸರಿಸುವ ಪೋಷಕರು ಮಕ್ಕಳಿಗೆ ಮಾದರಿಯಾಗುತ್ತಾರೆ.

ಹರೆಯದ ಮಕ್ಕಳ ಕುರಿತು ಪೋಷಕರು ಸದಾ ಗಮನಿಸುತ್ತಿರಬೇಕು. ಇದರಲ್ಲಿ ಮಕ್ಕಳ ಸ್ನೇಹಿತರ ಕುರಿತು ಗಮನವಿಡುವುದು ಮುಖ್ಯವಾದದ್ದು. ಮಕ್ಕಳ ಗೆಳೆಯರನ್ನು ಕರೆದು ಮಾತನಾಡಿಸಿ, ಅವರು ಎಂಥವರೆಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅವರು ಆತ್ಮೀಯರಾಗಿ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿದ್ದಾರೆಂದೆನಿಸಿದರೆ ಒಳ್ಳೆಯದು. ಅದು ಇಲ್ಲ ಎನಿಸಿದರೆ ಹರೆಯದ ಮಕ್ಕಳೊಂದಿಗೆ ಕೂತು ತಮ್ಮ ಅನಿಸಿಕೆಗಳನ್ನು ತಿಳಿಸಿ, ಅಂತಹ ಗೆಳೆತನ ಮಾಡುವುದರಿಂದ ಆಗುವ ಸಾಧಕ ಬಾಧಕಗಳನ್ನು ಮೃದು ಮಾತುಗಳಿಂದ ವಿವರಿಸಬೇಕು. ಅದಕ್ಕೂ ಸಾಧ್ಯವಿಲ್ಲ ಎಂದರೆ ಆ ಕ್ಷಣದಲ್ಲಿ ಅವರೊಂದಿಗೆ ವಾದಕ್ಕಿಳಿಯಬಾರದು. ಸಾವಧಾನದಿಂದ ಸಮಯ ನೋಡಿ ಮಕ್ಕಳಿಗೆ ತಿಳಿ ಹೇಳಿ ಅವರ ಮನಪರಿವರ್ತನೆ ಮಾಡಬೇಕು.

ಸಾಮಾಜಿಕ ಪ್ರಜ್ಞೆ ಮತ್ತು ಜೀವನ ಕೌಶಲಗಳನ್ನು ಕಲಿಸುವ ಮೊದಲ ಶಾಲೆ ಕುಟುಂಬ. ಒಳ್ಳೆಯ ಜನರೊಂದಿಗೆ ಬೆರೆತು, ಆತ್ಮೀಯವಾಗಿ ಮಾತನಾಡಲು, ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು.

ಹಿತವಾದ ಕೌಟುಂಬಿಕ ವಾತಾವರಣ, ಪ್ರೀತಿಯ ಪೋಷಕ-ಹರೆಯದವರ ಸಂಬಂಧ ಮತ್ತು ಮುಕ್ತ ಸಂವಹನ ಎಷ್ಟು ಮಹತ್ವದ್ದು ಎಂಬುದು ಮೇಲಿನ ಅಂಶಗಳಿಂದ ಓದುಗರಿಗೆ ಅರ್ಥವಾಗಿರಲು ಸಾಕು.


'ಒಲೆ' ಹತ್ತಿ ಉರಿದೊಡೆ...

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಗ ಯಾವ ಡೈಲಾಗ್ ಹೆಚ್ಚು ಜನರನ್ನು ತನ್ನತ್ತ ಸೆಳೆಯಬಹುದು?' ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರವಾಗಿ ಈ ಕೆಳಗಿನ ಡೈಲಾಗ್‌ಗಳನ್ನು ಹೆಸರಿಸಬಹುದು. "ಅವನೊಳಗೆ ಒಂದು ಕಿಚ್ಚಿದೆ ಸರ್", "ಅಯ್ಯೋ ಅವನ ಮಾತುಗಳೋ ಬೆಂಕಿಯುಂಡೆ!", "ನೆನಪಿರಲಿ, ಬೆಂಕಿಯ ಜೊತೆಗೆ ಸರಸಬೇಡ". ಬೆಂಕಿ, ಜ್ವಾಲೆ, ಕಿಚ್ಚು, ಅಗ್ನಿ, ಕೆಂಡ, ಉರಿ ಇತ್ಯಾದಿ ಪದಗಳು ಎಲ್ಲಾದರೂ ಕೇಳಿಸಿದರೆ, ಒಮ್ಮೆಗೆ ಕಿವಿ ನೆಟ್ಟಗಾಗಲು ಕಾರಣವೂ ಇದೆ. ಅದುವೇ ಸದ್ಯದ ಯುದ್ಧೋನ್ಮಾದದ ಪರಿಸ್ಥಿತಿಯಿಂದಾಗಿ ಉಂಟಾಗಿರುವ 'ಗ್ಯಾಸ್ ಟ್ರಬಲ್'. ತನ್ಮೂಲಕ ಹೊಟ್ಟೆಗಷ್ಟೇ ಸೀಮಿತವಾಗಿದ್ದ ಗ್ಯಾಸ್‌ಟ್ರಬಲ್ ಸದ್ಯ ತಟ್ಟೆಗೂ ವಕ್ಕರಿಸಿದೆ. ಹೊಟ್ಟೆಯ ಗ್ಯಾಸ್ ಟ್ರಬಲ್ ಆಗಿದ್ದರೆ ಕೆಲವು ಗುಳಿಗೆ, ಸಿರಪ್‌ನಿಂದ ನಿಯಂತ್ರಣಕ್ಕೆ ತರಬಹುದಿತ್ತು. ಆದರೆ ಗ್ಯಾಸ್ ಟ್ರಬಲ್‌ಗೆ ಕಡಿವಾಣ ಹಾಕುವುದು ಕಷ್ಟ ಸಾಧ್ಯವೇ ಸೈ.

ಈ ಎಲ್ಲಾ ಬೆಳವಣಿಗೆಗಳನ್ನು ಸಮಗ್ರವಾಗಿ ಅವಲೋಕಿಸುತ್ತಿದ್ದರೆ ಸುಟ್ಟು ಭಸ್ಮ ಮಾಡುವ ಬೆಂಕಿಗಿಂತಲೂ ಬೇಯಿಸುವ, ಬಿಸಿಯೇರಿಸುವ, ಕಾವುಣ್ಣಿಸುವ ನಿಯಂತ್ರಿತ ಬೆಂಕಿಗೆ ಬೇಡಿಕೆ ಭಲೇ ಹೆಚ್ಚಾಗಿದೆ. ಇದನ್ನು ಒದಗಿಸುತ್ತಿದ್ದ ಗ್ಯಾಸ್ ಒಲೆಗಳು ಸಿಲಿಂಡರ್ ಇಂದು ಖಾಲಿ ಆದೀತೋ ನಾಳೆಯೋ, ಖಾಲಿಯಾದರೆ ಮತ್ತೆ ಎಂದು ಸಿಕ್ಕೀತೋ, ಬುಕ್ಕಿಂಗ್ ಆದೀತೋ ಇಲ್ಲವೋ ಎಂಬ 'ಡರ್' (ಭಯ)ನಲ್ಲಿ ನಲುಗುತ್ತಿವೆ. ಸುಮ್ಮನೆ ಅಡುಗೆ ಮನೆಯ ಕೌಂಟರ್‌ಟಾಪ್ ಒಳಗಡೆಯೋ, ಹೊರಗಡೆಯ ಪ್ರತ್ಯೇಕ ಲೋಹದ ಅಂಕಣದೊಳಗೋ, ಇನ್ನೆಲ್ಲೋ ಮರೆಯಲ್ಲಿ ಮೌನವಾಗಿ ಕೂತಿರುತ್ತಿದ್ದ ಈ ಕೆಂಬಣ್ಣದ ಹಮ್ಮೀರನಿಗೆ ಈಗ ಎಲ್ಲೆಲ್ಲೂ ಡಿಮ್ಯಾಂಡೋ ಡಿಮ್ಯಾಂಡ್! ಚಿನ್ನ, ಭೂಮಿ, ನಗದು ಸಾಕಷ್ಟು ಪ್ರಮಾಣದಲ್ಲಿ ಇರುವವರತ್ತ ಹುಬ್ಬೇರಿಸುವಂತೆ ನೋಡುತ್ತಿದ್ದ ಜನರು ಸದ್ಯ ಈಗ, ಗ್ಯಾಸ್ ಸಿಲಿಂಡರ್ ಸ್ಟಾಕ್ ಇಟ್ಟುಕೊಂಡವರತ್ತ ನೋಡುವಂತಾಗಿದೆ. 'ಸಿಲಿಂಡರ್ ಇದ್ದರೆ ಎಲ್ಲಿಂದಾದರೂ ನಮಗೊಂದು ಹೇಗೋ ಹೊಂದಿಸಿ ಕೊಡಿಸಿರಯ್ಯಾ?' ಎಂಬ ಭಿನ್ನಪಗಳನ್ನು ಮುಂದೆ ಮಾಡುವವರ ಸಂಖ್ಯೆಯಂತೂ ದಿನೇ ದಿನೇ ಹೆಚ್ಚುತ್ತಲೇ ಇದೆ. ಅದರ ಬಣ್ಣವೇನೋ ಕೆಂಪು ಹೌದು. ಹಾಗೆಯೇ ಕೆಂಪೆಂದರೆ ಡೇಂಜರ್‌ನ್ನು ಸಂಕೇತಿಸುವುದೂ ನಿಜವೇ. ಆದರೆ ಆ ಡೇಂಜರ್ ಅದರ ಕೊರತೆಯ ರೂಪದಲ್ಲಿ ಹೀಗೆ ಎರಗುತ್ತದೆ ಎಂದು ಬಹುಶಃ ಯಾರೂ ಭಾವಿಸಿಯೇ ಇರಲಿಕ್ಕಿಲ್ಲ.



ಗ್ಯಾಸ್ ಒಲೆಯ ಹಾಗೂ ಅದರ ಕರುಳಬಳ್ಳಿಯ ಸಂಬಂಧಿಯಂತಿರುವ ಸಿಲಿಂಡರ್ ಬಗ್ಗೆ ಹೀಗೆಲ್ಲ ಬಗೆ ಬಗೆಯ ಅಭಿಪ್ರಾಯಗಳನ್ನು ಹೊರಹೊಮ್ಮಿಸುತ್ತಾ, ಜನರು ಒಂದೇ ಸಮನೆ ಪರಿತಪಿಸುತ್ತಿರುವಾಗ, ಅಲ್ಲೊಂದು ಇಲ್ಲೊಂದು ಕಂಡುಬರುವ 'ಸೌದೆ ಒಲೆ'ಗಳು ಅಂದು ತಮ್ಮನ್ನು ಮರೆತು, ಈ ಗ್ಯಾಸ್ ಒಲೆಯನ್ನು ಮೆರೆಸಿದ್ದ ಇದೇ ಜನರನ್ನು ನೆನೆದು ಒಳಗೊಳಗೇ ಕುಹಕದ ನಗೆಯಾಡುತ್ತಿರಬಹುದು. ಬೇಕು ಬೇಕೆಂದ ರೀತಿಯಲ್ಲಿ ಬೆಂಕಿಯನ್ನು ಮೊಗೆ ಮೊಗೆದು ಪಾತ್ರೆಯ ತಳಕ್ಕೆ ಒಡ್ಡುತ್ತಿದ್ದ ಈ ಒಲೆಗಳೋ ಅದಕ್ಕೆ ಪ್ರತಿಯಾಗಿ ಬಯಸುತ್ತಿದ್ದುದು ಇಂಥ ದುಬಾರಿ ಸಿಲಿಂಡರ್‌ಗಳನ್ನಲ್ಲ, ಬದಲಾಗಿ ಉಚಿತವಾಗಿ ಇಲ್ಲವೇ ಅತ್ಯಂತ ಕಡಿಮೆ ಬೆಲೆಗೆ ದೊರಕುವ ಸೌದೆ ಉರ್ಫ್ ಕಟ್ಟಿಗೆಯನ್ನು. ಹಾಗೂ ಒಂದಷ್ಟು ಉಫ್... ಉಫ್... ಎಂದು ಊದುವ ಅಡುಗೆಯವರ ಉಸಿರನ್ನು ಅಷ್ಟೇ. ಈಗ ಮತ್ತೆ ಪುನಃ ಒಲೆಗಳಿಗೆ ಒಳ್ಳೆ ಕಾಲ ಬಂದಿದ್ದು, ಅವುಗಳೋ ಖುಷಿಯ ಲಹರಿಯಲ್ಲಿ 'ಕಾಲ ಮತ್ತೊಮ್ಮೆ ನಮಗಾಗಿ ಬಂದಿದೆ....' ಎಂದು ಹಾಡುತ್ತಲೂ ಇರಬಹುದು. ಇನ್ನು ಯಾರಾದರೂ ತಮ್ಮ ಪ್ರಿಯತಮೆಗೆ 'ಒಲವಿನ ಉಡುಗೊರೆ ಕೊಡಲೇ..?' ಎಂದು ರೊಮ್ಯಾಂಟಿಕ್ ಆಗಿ ಕೇಳಿದರೆ ಒಲವಿನ ಉಡುಗೊರೆಯಾಗಿ ಏನನ್ನಾದರೂ ಕೊಡುವುದಿದ್ದರೆ ಒಲೆಯನ್ನೇ(ಸೌದೆ) ಕೊಟ್ಟರೆ ಒಳ್ಳೆಯದಿತ್ತು ಎಂದೇ ಹೇಳಬಹುದು. ಅಷ್ಟರ ಮಟ್ಟಿಗೆ ಜನರು ಒಲೆಯೆಡೆಗೆ ತಮ್ಮ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ.

ಇಷ್ಟು ವರುಷಗಳು ಉರುಳಿದ ನಂತರ ಒಲೆಗಳ ಬದುಕು ಒಂಥರ ಪ್ರಜ್ವಲಮಯವಾಗಿದೆ ಎನ್ನುವುದನ್ನು ಅದರಲ್ಲಿ ಧಗಧಗಿಸಿ ಉರಿಯುತ್ತಿರುವ ಜ್ವಾಲೆಯನ್ನು ನೋಡಿಯೇ ಹೇಳಬಹುದು. ಹಾಗೆ ನೋಡಿದರೆ ಹಳ್ಳಿಗಳಲ್ಲಿ ಈಗಲೂ ಒಂದಿಲ್ಲೊಂದು ಮನೆಯಲ್ಲಿ ಒಲೆ ಇದ್ದೇ ಇರುತ್ತದೆ ಹಾಗೂ ಅದರಲ್ಲಿ ಉರಿ ಆಗಾಗ ಹೊತ್ತಿಕೊಳ್ಳುತ್ತಲೇ ಇರುತ್ತದೆ ಕೂಡಾ. ಆದರೆ ಸಿಟಿಗಳಲ್ಲೂ ಈ ಒಲೆಗಳು ಅಲ್ಲಲ್ಲಿ ತಲೆಯೆತ್ತುವಂತಾಗಿದ್ದು ಈ ಗ್ಯಾಸ್ ಟ್ರಬಲ್‌ನ ಕಾರಣದಿಂದ. ಗ್ಯಾಸ್‌ನ ಒಳಗಣ ಕಿಚ್ಚನ್ನು, ಇಂಡಕ್ಷನ್ ಒಳಗಣ ಕಿಚ್ಚನ್ನೆಲ್ಲಾ ಕಂಡು ಬಳಸಿ ಗೊತ್ತಿರುವ ಜನರು ಎಲ್ಲೋ ಮರದೊಳಗಣವೂ ಕಿಚ್ಚು ಇದ್ದೀತು ಎನ್ನುವುದನ್ನೇ ಮರೆತಿದ್ದರು, ಮತ್ತು ಈಗ ಇವರೆಲ್ಲಾ ಮರಳಿ ಮರದ ಒಳಗಣ ಕಿಚ್ಚನ್ನು ನೆಚ್ಚಿಕೊಳ್ಳುವತ್ತ ಹೆಜ್ಜೆ ಇಡುವಂತಾಗಿದೆ. ಮರ ಅಂದರೆ ಇಲ್ಲಿ ಸೌದೆ ಎಂದರ್ಥ. ಯುದ್ಧದಿಂದ ಸೌದಿ ದೇಶವೂ ಬಳಲುತ್ತಿದೆ. ಆದರೆ ಇಷ್ಟು ದೂರದಲ್ಲಿರುವ ನಮ್ಮ ದೇಶದ ಜನರೂ ಬಳಲುವಂತಾಗಿದೆ, ಅದು ಸೌದೆಯ ಕಾರಣಕ್ಕಾಗಿ. ಒಲೆಯ ಒಡಲೊಳಗೆ ಒಳ್ಳೆಯ ಜ್ವಾಲೆಯ ಅಲೆಯನ್ನು ಬೇಕಾದಷ್ಟು ಎಬ್ಬಿಸಲೋಸುಗ ಒಳ್ಳೆಯ ಸೌದೆಯನ್ನು ಹುಡುಕಿ ಬಳಲುತ್ತಿದ್ದಾರೆ. ಹಾಗೊಂದು ಸೌದೆಗೆ ಹೋಗುವ ಕಾಯಕವೆಂದೇ ಹಳ್ಳಿಯಲ್ಲಿತ್ತು. ತೀರಾ ಅವರಂತೆ ಕಾಡಿ ಗೆಲ್ಲ ಹೋಗಿ ಕಡಿದು ತರದೇ ಹೋದರೂ ಕೂಡಾ ಸಿಟಿಯ ಕೆಲವು ಹೋಟೆಲ್ ವ್ಯಾಪಾರಿಗಳು, ಪಿಜಿ ಮಾಲೀಕರು, ಹಾಸ್ಟೆಲ್ ನಡೆಸುವವರು ಒಳ್ಳೆಯ ಸೌದೆಯನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಸಿಕ್ಕ ಸಿಕ್ಕ ಸಣ್ಣಪುಟ್ಟ ಗಾಡಿಗಳಲ್ಲಿ ಅದನ್ನು ತುಂಬಿಸಿಕೊಂಡು ತಂದು ಬಳಸುತ್ತಿದ್ದಾರೆ.

ಈ ಬದಲಾವಣೆಯಿಂದ ಇನ್ನೊಂದು ಪ್ರಮುಖ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಇನ್ನು ಸಿಟಿಯ ಕ್ಯಾಂಟೀನ್, ಹೋಟೆಲ್, ಪಿಜಿ, ಹಾಸ್ಟಲ್‌ಗಳಲ್ಲಿ ಎಲ್ಲಲ್ಲೂ ಹಲ್ತಿ ಆಹಾರ. ಏಕೆಂದರೆ ನಾವೇ ಹೇಳಿಕೊಂಡು ಬಂದಿರುವುದು ಸೌದೆ ಒಲೆಯಲ್ಲಿ ತಯಾರಿಸಿದ ಅಡುಗೆ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು. ಎಲ್ಲೆಲ್ಲೂ ಗ್ಯಾಸ್ ಒಲೆ ಬಳಸಿ ಅಡುಗೆ ತಯಾರಿ ನಡೆಸುತ್ತಿದ್ದರೆ, ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಅದನ್ನೇ ಒಂದು ಬ್ರ್ಯಾಂಡ್ ರೀತಿ ಬೆಳೆಸಿಕೊಂಡವರಿಗೋ ಇದು ಒಂದು ರೀತಿಯ ಹಿನ್ನಡೆಯೇ ಸರಿ. ಈಗಲೂ ಅವರು ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಪ್ರಚಾರಕ್ಕೆ ಮುಂದಾದರೆ, "ಅಯ್ಯೋ ಸಾಕಯ್ಯ ಕಂಡಿದೀವಿ. ಈಗ ಎಲ್ಲೆಲ್ಲೂ ಗ್ಯಾಸ್ ಪ್ರಾಬ್ಲಮ್ ಹಾಗಾಗಿ ಬಹುತೇಕರು ಕಟ್ಟಿಗೆ ಬಳಸಿ ಒಲೆಯಲ್ಲೇ ಅಡುಗೆ ತಯಾರಿಸುತ್ತಿರುವುದು. ಅಂಥದ್ದರಲ್ಲಿ ನಿಂದೇನಯ್ಯಾ ಸ್ಪೆಷಲ್ಲು?" ಎಂದು ಮೂಗು ಮುರಿಯದೇ ಇರಲಾರರು. ಎಂಬಲ್ಲಿಗೆ ಆ ಬ್ರ್ಯಾಂಡ್‌ನ ಬುಡಕ್ಕೇ ಏಟು ನೀಡಿದಂತಾಗುತ್ತಿದೆ. ಇದನ್ನೆಲ್ಲಾ ಗಮನಿಸಿದರೆ 'ಒಲೆ ಹತ್ತಿ ಉರಿದಡೆ ನಿಲಬಹುದು; ಧರೆ ಹತ್ತಿ ಉರಿದೊಡೆ ನಿಲಲುಬಾರದು' ಎಂಬ ಶರಣರ ಮಾತು ಈ ಸನ್ನಿವೇಶಕ್ಕೂ ಪ್ರಸ್ತುತ ಎನಿಸುತ್ತದೆ. ಧರೆ ಹೊತ್ತಿದೆ ಯುದ್ಧದ ಕಾರಣಕ್ಕೆ. ಅಂದ ಮೇಲೆ ಈ ಬಗೆಯ ವಹಿವಾಟುಗಳನ್ನು ನಡೆಸುವವರು ನಿಲ್ಲುವುದಾದರೂ ಹೇಗೆ? ಅದಕ್ಕೆ ಪರ್ಯಾಯವೋ, ಪರಿಹಾರವೋ ಎಂಬಂತೆ ಈ ಒಲೆ ಹೊತ್ತಿ ಉರಿಯುವುದರಿಂದ ಅವರೆಲ್ಲ ಕೊಂಚ ಧೈರ್ಯ ಹಾಗೂ ಭರವಸೆಯಿಂದ ನಿಲ್ಲುವಂತಾಗಿದೆಯಲ್ಲ! ಒಲೆ ಹತ್ತಿ ಉರಿಯುವುದರ ಮಹತ್ವ ಈ ಮುಖೇನ ಎಲ್ಲರಿಗೂ ಮನದಟ್ಟಾಗುತ್ತಿದೆ.

ಈ ಸ್ಥಿತಿ ಇನ್ನೂ ಕೆಲವು ಸಮಯ ಮುಂದುವರಿದರೆ, ಮಹಾನಗರಗಳಲ್ಲಿ ಬೀದಿ ಬೀದಿಗಳಲ್ಲಿ ತಳ್ಳುಗಾಡಿಗಳ ಮೇಲೆ ಸೌದೆಯ ಸಣ್ಣ ಸಣ್ಣ ಕಟ್ಟುಗಳನ್ನು ಮಾಡಿಟ್ಟುಕೊಂಡು ಕರೆ ಕರೆದುಕೊಂಡು ಮಾರುತ್ತ ಬಂದರೂ ಬರಬಹುದು. ಎಲ್ಲೆಲ್ಲಿ ಗ್ಯಾಸ್ ಏಜೆನ್ಸಿ, ಪೆಟ್ರೋಲ್ ಬಂಕ್‌ಗಳಿವೆಯೋ ಅಲ್ಲೆಲ್ಲ 'ಸೌದೆ ಮಾರಾಟ ಕೇಂದ್ರ' ಎಂಬ ಹೊಸ ವಿಭಾಗ ಒಂದನ್ನು ತೆರೆದರೂ ತೆರೆಯಬಹುದು. ಇದಿಷ್ಟೇ ಅಲ್ಲದೇ ತಳ್ಳುಗಾಡಿಗಳ ಮೇಲೆ ಸಿದ್ಧ ಮಾದರಿಯ ಒಲೆಯನ್ನೇ ಇಟ್ಟು, ಚೆನ್ನಾಗಿ ಸೌದೆ ಹಾಕಿ ಉರಿಯುವಂತೆ ಮಾಡಿ, ಮನೆ ಮನೆಯ ಬೀದಿ, ಓಣಿಗಳಲ್ಲಿ ಬಂದು "ನಮ್ಮಲ್ಲಿ ವಿಶಲ್ ಕುಕ್ಕರ್ ಹೊಡೆಸಿಕೊಡಲಾಗುವುದು, ಸಾಂಬಾರ್ ಕುದಿಸಿಕೊಡಲಾಗುವುದು, ಅನ್ನ ಮಾಡಿಕೊಡಲಾಗುವುದು" ಎಂದೆಲ್ಲ ಕೂಗಿ ಕೂಗಿ ಕರೆಯಬಹುದು. ಇನ್ನೂ ಒಂದು ಸಾಧ್ಯತೆಯನ್ನೂ ನಾವು ಅಲ್ಲಗಳೆಯುವಂತಿಲ್ಲ. ಹೊಸ ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಈ ಒಲೆ ಹಾಗೂ ಅದರ ಹೊಗೆ ಹೊರಕ್ಕೆ ಹೋಗಲು ಚಿಮಣಿ ಇತ್ಯಾದಿ ವ್ಯವಸ್ಥೆಗಳನ್ನು ತಪ್ಪದೇ ಮಾಡಬಹುದು ಮತ್ತು ಅದನ್ನು ತಮ್ಮ ಕರಪತ್ರಗಳಲ್ಲಿ, 'ಇಲ್ಲಿ ಸುಸಜ್ಜಿತ ಸೌದೆ ಒಲೆ ವ್ಯವಸ್ಥೆ ಇದೆ ಎನ್ನುವುದನ್ನೂ ಸೇರಿಸಬಹುದು. ಈ ವಸತಿ ಸಮುಚ್ಚಯಗಳ ವ್ಲಾಗ್ ಮಾಡಿ ಎಲ್ಲರಿಗೂ ತೋರಿಸುವವರು, ಆ ಒಲೆಯನ್ನು ಪರಿ ಪರಿಯಾಗಿ ಝೂಮ್ ಮಾಡಿ ವೀಡಿಯೋದಲ್ಲಿ ಸೆರೆಹಿಡಿದು ತೋರಿಸಬಹುದು. ಇರಲಿ ಒಲೆಗಳು ಎಂಥಾ ಒಳ್ಳೆಯ ಕಾಲ ಬಂತಲ್ಲಪ್ಪಾ ಎಂದು ಹುಬ್ಬೇರಿಸಲಡ್ಡಿಯಿಲ್ಲ.

ಓವರ್‌ಡೋಸ್: ಹೀಗೆ ಇನ್ನೂ ಒಂದಷ್ಟು ದಿನ ಕಾಸ್ ನೀಡಿದರೂ ಕ್ಲಪ್ತ ಸಮಯಕ್ಕೆ ಗ್ಯಾಸ್ ಸಿಲಿಂಡರ್ ಸಿಗದೇ ಹೋದರೆ ಆಗ 'ಗ್ಯಾಸ್ ಇದ್ದೋನೇ ಬಾಸ್'.

ಕಿರು ಸುದ್ದಿ

ಮನೆಯೊಳಗೆ ವ್ಯಕ್ತಿಯ ಮೃತದೇಹ ಪತ್ತೆ

ಕಾಸರಗೋಡು: ಕುತ್ತಿಕೋಲ್ ಪಂಚಾಯತ್‌ನ ವೆಳ್ಳಾಲದಲ್ಲಿ ವ್ಯಕ್ತಿಯೋರ್ವರ ಮೃತದೇಹ ಮನೆಯೊಳಗೆ ನೇಣು ಬಿಗಿದ ಸ್ಥಿತಿಯಲ್ಲಿ ಶುಕ್ರವಾರ ಬೆಳಗ್ಗೆ ಪತ್ತೆಯಾಗಿದೆ. ವೆಳಾಲ ಹೌಸ್‌ನ ದಿ.ಶಂಕರನ್ ಎಂಬವರ ಪುತ್ರ ವಿನೋದ್ (32) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಕೂಡಲೇ ಬೇಡಕ್ಕ ಪೊಲೀಸರು ಆಗಮಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಾವಿಗೆ ಕಾರಣ ತಿಳಿದುಬಂದಿಲ್ಲ.

ಉಪಚುನಾವಣೆ ಉಸ್ತುವಾರಿಯಾಗಿ ಬಿ.ಎಸ್.ಆನಂದ್ ನೇಮಕ

ಮಡಿಕೇರಿ : ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಉಸ್ತುವಾರಿಯಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ, ಸೋಮವಾರಪೇಟೆ ತಾಲ್ಲೂಕಿನ ಕುಸುಬೂರು ಗ್ರಾಮದ ಕೆಂಚಮ್ಮನ ಬಾಣೆಯ ಬಿ.ಎಸ್.ಆನಂದ್ ನೇಮಕಗೊಂಡಿದ್ದಾರೆ.



ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಬಿ.ಎಸ್. ಆನಂದ್ ಅವರನ್ನು ನೇಮಕ ಮಾಡಿ ದಾವಣಗೆರೆಗೆ ನಿಯೋಜಿಸಿದ್ದಾರೆ. ದಾವಣಗೆರೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಏ.9 ರಂದು ನಡೆಯಲಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಧನಂಜಯ, ದೇರಾಜೆ, ಬೊಟ್ಟಮನೆ, ಸಜಿಪನಡು ಬಂಟ್ವಾಳ (ತಾ)
2. ಶ್ರೀ ವ್ಯಾಘ್ರ ಚಾಮುಂಡೇಶ್ವರೀ ಸೇವಾ ಬಳಗ, ಕಾಂಬೋಡಿ, ಶ್ರೀ ಉಗ್ಗೆದಲ್ತಾಯ ದೈವಸ್ಥಾನದ ಬಳಿ, ಕೂರಿಯಾಳ, ಬಂಟ್ವಾಳ
3. ಬಿ. ಶ್ರೀಧರ ರಾವ್, ಅಗರಮೇಲು ರೋಡ್, ಇಡ್ಯಾ, ಸುರತ್ಕಲ್
4. ಸುಧಾಕರ ಕೆ.ಟಿ. ಮತ್ತು ಪತ್ನಿ, ಕೆಂಜಿಲ, ಇರಾ, ಬಂಟ್ವಾಳ (ತಾ).
5. ಇ.ಎನ್. ಶಿವಾನಂದ, ಉತ್ತೋಳಲು, ವಾಟೆಹಳ್ಳಿ, ಅರೇಹಳ್ಳಿ, ಬೇಲೂರು, ಹಾಸನ
6. ಬಿ. ವಿಶುಕುಮಾರ್ ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ, ಪಡುಕುತ್ಯಾರು, ವಯಾ ಕಾಪು
7. ವಸಂತ ಶೆಟ್ಟಿಗಾರ್, ಅಂಗರ ಗುಡ್ಡೆ ಹೌಸ್, ಶ್ರೀ ರಾಮ ಮಂದಿರದ ಬಳಿ, ಕೆಂಚನಕೆರೆ, ಮುಲ್ಕಿ

ಶ್ರೀ ಧರ್ಮಸ್ಥಳ ಮೇಳ

ಕಾರ್ಮಾರು ಮಾನ್ಯದಲ್ಲಿ
ಶ್ರೀ ಮಹಾವಿಷ್ಣು ಭಕ್ತವೃಂದ, ಕಾರ್ಮಾರು, ಮಾನ್ಯ

ಶ್ರೀ ಸಾಲಿಗ್ರಾಮ ಮೇಳ

ಸೊಪ್ಪಿನಮಲ್ಲಿಯಲ್ಲಿ
ಸಂಪೂರ್ಣ ನಾಗಶ್ರೀ

ಶ್ರೀ ಪೆರ್ಡೂರು ಮೇಳ

ಗೇರುಸೊಪ್ಪದಲ್ಲಿ
ಕೃಷ್ಣದರ್ಶನ, ದೇವಿದರ್ಶನ, ರಾಮದರ್ಶನ,

ಶ್ರೀ ಹನುಮಗಿರಿ ಮೇಳ

ಗುಂಡ್ಮಿ-ಸಾಸ್ತಾನದಲ್ಲಿ

ಶ್ರೀ ಪಾವಂಜೆ ಮೇಳ

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ
ಶ್ರೀ ದೇವಿ ಮಹಾತ್ಮೆ

ನಿಧನ ಸುದ್ದಿ

ಅನ್ನಚಂಡ ಗಣಪತಿ ದಿನೇಶ್



ನಾಪೋಕ್ಲು: ಇಲ್ಲಿಗೆ ಸಮೀಪದ ಹೊದವಾಡ ಗ್ರಾಮದ ನಿವಾಸಿ ಅನ್ನಚಂಡ ಗಣಪತಿ ದಿನೇಶ್ (52) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಗೀತಾ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಚೆಟ್ಟಿನೆರವನ ಕುಶಾಲಪ್ಪ



ನಾಪೋಕ್ಲು : ಇಲ್ಲಿಗೆ ಸಮೀಪದ ಬಲ್ಲಮಾವಟಿ ನೆಲಜಿ ಗ್ರಾಮದ ನಿವಾಸಿ ಚೆಟ್ಟಿನೆರವನ ಕುಶಾಲಪ್ಪ (ಸಾಬು 69) ಶನಿವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ವಾರಿಜಾ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

ತುಳುನಾಡಿನ ಬೆಳ್ಳಾರೆಯ ಅನಾವರಣ: 1837ರ ಮರೆತುಹೋದ ಕಿಡಿ ಮತ್ತು ಪರಂಪರೆ ಸಂರಕ್ಷಣೆಯ ಹಾದಿ

'ಮಾರ್ಚ್ 30, 1837ರಂದು ಬೆಳ್ಳಾರೆಯಲ್ಲಿ ಕಂದಾಯ ದಾಖಲೆಗಳು ಬೆಂಕಿಗಾಹುತಿಯಾದವು. ಆ ಹೊಗೆ ಕೇವಲ ಒಂದು ಹೋರಾಟದ ಸಂಕೇತವಾಗಿರಲಿಲ್ಲ, ಬದಲಾಗಿ ವಸಾಹತುಶಾಹಿ ದಬ್ಬಾಳಿಕೆಗೆ ಜನರ ಸ್ವಾಭಿಮಾನವನ್ನು ಅಳಿಸಿಹಾಕಲು ಬಿಡದಿರುವ ದೃಢ ನಿರ್ಧಾರವಾಗಿತ್ತು'

ತನ್ನ ಬೇರುಗಳನ್ನು ಮರೆತ ಸಮಾಜವು ಅಡಿಪಾಯವಿಲ್ಲದ ಮರದಂತೆಯೇ ಸರಿ. ವೇಗವಾಗಿ ಬೆಳೆಯುತ್ತಿರುವ ಇಂದಿನ ಆಧುನಿಕ ಜಗತ್ತಿನಲ್ಲಿ, ಯುವಜನತೆ ಜಾಗತಿಕ ಕನಸುಗಳ ಬೆನ್ನೇರಿ ಭವಿಷ್ಯದತ್ತ ಮುಖಮಾಡಿದ್ದಾರೆ. ಪ್ರಗತಿ ಮತ್ತು ಆಧುನಿಕತೆ ಅತ್ಯಗತ್ಯವಾದರೂ, ನಿಜವಾದ ಸಬಲೀಕರಣವು ನಾವು ನಡೆಯುವ ಮಣ್ಣಿನ ಚರಿತ್ರೆಯನ್ನು, ನಮ್ಮ ಪೂರ್ವಜರ ಹೆಜ್ಜೆಗುರುತುಗಳನ್ನು ಅರ್ಥಮಾಡಿಕೊಳ್ಳುವುದರಿಂದ ಮಾತ್ರ ಬರುತ್ತದೆ. ಇತಿಹಾಸವೆಂದರೆ ಕೇವಲ ದಿನಾಂಕಗಳು ಮತ್ತು ಯುದ್ಧಗಳ ಒಣ ಪಟ್ಟಿಯಲ್ಲ; ಅದು ನಮ್ಮ ಪೂರ್ವಜರ ಎದೆಯ ಬಡಿತ, ಅವರ ಹೋರಾಟಗಳು ಮತ್ತು ಸ್ವತಂತ್ರ ಜಗತ್ತಿನ ಬಗ್ಗೆ ಅವರಿಗಿದ್ದ ದೃಷ್ಟಿಕೋನ. ವಿದ್ಯಾವಂತ ಯುವಜನತೆ ಸ್ಥಳೀಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ, ಅವರು ಕೇವಲ ಕಥೆಗಳನ್ನು ಓದುವುದಿಲ್ಲ, ಬದಲಾಗಿ ತಮ್ಮದೇ ಅಸ್ತಿತ್ವದ ಮೂಲವನ್ನು ಕಂಡುಕೊಳ್ಳುತ್ತಾರೆ. ಅಸ್ತಿತ್ವದ ಮತ್ತು ಅಸ್ಮಿತೆಯ ಈ ಹುಡುಕಾಟವೇ ನಮ್ಮದೇ ತುಳುನಾಡಿನ, ಹೆಚ್ಚು ಬೆಳಕು ಕಾಣದ ಒಂದು ಐತಿಹಾಸಿಕ ಅಧ್ಯಾಯದತ್ತ ನಮ್ಮನ್ನು ಕರೆದೊಯ್ಯುತ್ತದೆ. ಸುಳ್ಯದ ಪ್ರಶಾಂತ, ಗ್ರಾಮೀಣ ವಾತಾವರಣದಲ್ಲಿ, ಸ್ಥಳೀಯ ಪೊಲೀಸ್ ಠಾಣೆಯ ಗೋಡೆಗಳ ನಡುವೆ ಇತಿಹಾಸದ ಒಂದು ಅಗಾಧವಾದ ತುಣುಕು ನಿದ್ರಿಸುತ್ತಿದೆ. ಪ್ರತಿ ಚುನಾವಣೆ ಬಂದಾಗಲೂ ಒಂದು ಕುತೂಹಲಕಾರಿ ಸಂಪ್ರದಾಯ ನಡೆಯುತ್ತದೆ: ಈ ಭಾಗದ ಕುಟುಂಬಗಳು ತಮ್ಮ ಪೂರ್ವಜರ ಕಾಲದ ಬಂದೂಕುಗಳನ್ನು ಠಾಣೆಗೆ ಒಪ್ಪಿಸಲು ಬರುತ್ತಾರೆ. ಸಾಮಾನ್ಯರ ಕಣ್ಣಿಗೆ, ಇದು ಕೇವಲ ನಾಗರಿಕ ನಿಯಮ ಪಾಲನೆ ಅಥವಾ ವಸಾಹತುಶಾಹಿ ಕಾಲದ ಶಸ್ತ್ರಾಸ್ತ್ರ ನಿಷೇಧದ ಮುಂದುವರಿದ ಭಾಗವಾಗಿ ಕಾಣಬಹುದು. ಐತಿಹಾಸಿಕವಾಗಿ, ಸುಳ್ಯವನ್ನು ಯಾವಾಗಲೂ ಅಭಿವೃದ್ಧಿಯ ಮುಖ್ಯವಾಹಿನಿಯಿಂದ ದೂರವಿರುವ ಒಂದು ಒಳನಾಡು, ದುರ್ಗಮ ಪ್ರದೇಶ ಎಂದೇ ಪರಿಗಣಿಸಲಾಗಿತ್ತು. ಆದರೆ, 1837ರ ಘಟನೆಗಳು ಸಾಬೀತುಪಡಿಸುವುದೇನೆಂದರೆ, ಇಂತಹ ಭೌಗೋಳಿಕ ಅಂತರವಿದ್ದರೂ, ಇಲ್ಲಿನ ಜನರಲ್ಲಿ ಸ್ವಾತಂತ್ರ್ಯ, ಒಗ್ಗಟ್ಟು ಮತ್ತು ಅಚಲವಾದ 'ಸ್ವಾಭಿಮಾನ' ಅಂತರ್ಗತವಾಗಿತ್ತು. ಅನ್ಯಾಯದ ವಿರುದ್ಧ ನಿಲ್ಲುವುದು ಅವರ ಇತಿಹಾಸದ ಕೇವಲ ಒಂದು ಅಧ್ಯಾಯವಲ್ಲ; ಅದು ಈ ಮಣ್ಣಿನ ಗುಣ ಮತ್ತು ಇಲ್ಲಿನ ಜನರ ಅಸ್ತಿತ್ವದ ಮೂಲ ಗುರುತು. ಸುಳ್ಯದ ಮಣ್ಣಿನ ನೈಜ ಪರಿಚಯವಿರುವವರಿಗೆ, ಬಂದೂಕುಗಳು ಕೇವಲ ಶಸ್ತ್ರಾಸ್ತ್ರಗಳಲ್ಲ; ಅವು ಐತಿಹಾಸಿಕ ಕುರುಹುಗಳು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಭಾರತದ ಮೊಟ್ಟಮೊದಲ ಸಂಘಟಿತ ಪ್ರತಿರೋಧದ ಮೂಕ ಸಾಕ್ಷಿಗಳು. ಗತಕಾಲವನ್ನು ಅರ್ಥಮಾಡಿಕೊಳ್ಳುವುದು ಕೇವಲ ನೆನಪಿಸಿಕೊಳ್ಳುವ ಪ್ರಕ್ರಿಯೆಯಲ್ಲ, ಅದು ನಮ್ಮ ವರ್ತಮಾನಕ್ಕೆ ಅದರ ಪ್ರಸ್ತುತತೆಯನ್ನು ಪ್ರತಿಪಾದಿಸುವ ಹೆಜ್ಜೆ. ಇಂದು, ಶಿಕ್ಷಣವು ಪ್ರಜಾಸತ್ತಾತ್ಮಕವಾಗಿ ಎಲ್ಲರಿಗೂ ಸುಲಭವಾಗಿ ದೊರೆಯುತ್ತಿರುವಾಗ, ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ನಮ್ಮನ್ನು ಕಾಡುತ್ತಿದ್ದ ಕೇವಲ ಬದುಕುಳಿಯುವ ಹೋರಾಟಗಳಿಗೆ ನಾವು ಸೀಮಿತವಾಗಿಲ್ಲ. ಇತಿಹಾಸವನ್ನು ಹಿಂತಿರುಗಿ ನೋಡುವ ಸೌಭಾಗ್ಯ ಮತ್ತು ಜವಾಬ್ದಾರಿ ಎರಡೂ ನಮಗಿದೆ. ಜಾತಿ – ಧರ್ಮ ಹಿನ್ನೆಲೆಗಳನ್ನು ಮೀರಿ, ವಿದ್ಯಾವಂತ ಯುವಜನತೆ ತಮ್ಮ ತಾಯ್ನಾಡಿನ ನೈಜ ಮತ್ತು ವಾಸ್ತವಿಕ ಐತಿಹಾಸಿಕ ಕೊಡುಗೆಗಳನ್ನು ಹೊರತರುವ ಅದ್ವಿತೀಯ ಸ್ಥಾನದಲ್ಲಿದ್ದಾರೆ. ಜ್ಞಾನದ ಈ ಪ್ರಜಾಸತ್ತಾತ್ಮಕತೆಯೇ ಮಾರ್ಚ್ ತಿಂಗಳನ್ನು ನಾವು ಮರುಪರಿಶೀಲಿಸುವಂತೆ ಪ್ರೇರೇಪಿಸುತ್ತದೆ. ಭಾರತದ ಸ್ವಾತಂತ್ರ್ಯ ಚಳುವಳಿಗೆ ಸಾಮಾನ್ಯ ನಾಗರಿಕರ ಒಟ್ಟು ಕೊಡುಗೆಯನ್ನು ಪರಿಗಣಿಸಿದಾಗ ಮಾರ್ಚ್ ತಿಂಗಳು ಅತ್ಯಂತ ಮಹತ್ವದ್ದಾಗಿದೆ. ಪಠ್ಯಪುಸ್ತಕಗಳು 1857ರ ಸಿಪಾಯಿ ದಂಗೆಯನ್ನೇ ಎತ್ತಿ ತೋರಿಸುತ್ತಾವಾದರೂ, ಸಂಘಟಿತ ವಸಾಹತುಶಾಹಿ ವಿರೋಧಿ ಪ್ರತಿರೋಧದ ನಿಜವಾದ ಆರಂಭವು ಎರಡು ದಶಕಗಳ ಹಿಂದೆಯೇ ಘಟಿಸಿತ್ತು. ತುಳುನಾಡಿನ ಸಣ್ಣ ಪಟ್ಟಣ ಬೆಳ್ಳಾರೆಯಲ್ಲಿ ಇದು ಶುರುವಾಗಿ, 1837ರ ಅಮರ ಸುಳ್ಯ ಸ್ವಾತಂತ್ರ್ಯ ಸಂಗ್ರಾಮವಾಗಿ ರೂಪುಗೊಂಡಿತು.



ಪ್ರತಿರೋಧಕ್ಕೂ ಮುನ್ನ ಮಾತುಕತೆ: 1837ರ ಮುನ್ನುಡಿ

ಇತಿಹಾಸವು ಸಾಮಾನ್ಯವಾಗಿ ವಸಾಹತುಶಾಹಿ ವಿರೋಧಿ ದಂಗೆಗಳನ್ನು ಹಳ್ಳಿಗರ ಹಠಾತ್ ಸಿಟ್ಟು ಅಥವಾ ಹತಾಶೆಯಿಂದ ಹುಟ್ಟಿದ ಹಿಂಸಾಚಾರ ಎಂದು ಚಿತ್ರಿಸುತ್ತದೆ. ಆದರೆ, ಅಂದಿನ ಬ್ರಿಟಿಷ್ ದಾಖಲೆಗಳೇ ಸುಳ್ಯದ ಜನರ ಬಗೆಗಿನ ಈ ತಪ್ಪು ಕಲ್ಪನೆಯನ್ನು ವಸ್ತುನಿಷ್ಠವಾಗಿ ಅಳಿಸಿಹಾಕುತ್ತವೆ. ಅಮರ ಸುಳ್ಯದ ಹೋರಾಟದಲ್ಲಿ ಎದ್ದು ಕಾಣುವ ಅಂಶವೆಂದರೆ, ಶಸ್ತ್ರಾಸ್ತ್ರಗಳನ್ನು ಹಿಡಿದು ಕಚೇರಿಗಳ ಮೇಲೆ ದಾಳಿ ಮಾಡಿದ್ದಷ್ಟೇ ಅಲ್ಲ, ಆ ನಿರ್ಧಾರದ ಹಿಂದಿದ್ದ ಅಗಾಧವಾದ ವಿವೇಚನೆ ಮತ್ತು ಒಗ್ಗಟ್ಟು. 1834 – 1835ರ ಅವಧಿಯಲ್ಲಿ, ಅಂದರೆ ಅಸಮಾಧಾನವು ಸಂಗ್ರಾಮವಾಗಿ ಸ್ಫೋಟಗೊಳ್ಳುವ ವರ್ಷಗಳ ಮುಂಚೆಯೇ, ಈ ಮಣ್ಣಿನ ಮಕ್ಕಳು ನೇರವಾಗಿ ಶಸ್ತ್ರ ಹಿಡಿಯಲಿಲ್ಲ. ಬದಲಿಗೆ, ಮುಂಬರುವ ಸಾಮಾಜಿಕ-ಆರ್ಥಿಕ ವಿಪತ್ತನ್ನು ತಡೆಯಲು ಮತ್ತು ಪರಸ್ಪರ ಶಾಂತಿಯುತ ಒಪ್ಪಂದಕ್ಕೆ ಬರಲು ಒಂದು ನಿಯೋಗವನ್ನು ರಚಿಸಿ, ಆಗಿನ ಗವರ್ನರ್ – ಜನರಲ್ ವಿಲಿಯಂ ಬೆಂಟಿಂಕ್ ಜೊತೆ ಮಾತುಕತೆ ನಡೆಸಲು ನೇರವಾಗಿ ಕಲ್ಕತ್ತಾಗೆ ಕಳುಹಿಸಲಾಗಿತ್ತು! ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಹೊಸದಾಗಿ ಹೇರಿದ "ಸ್ಥಿರ ಗರಿಷ್ಠ ವಾರ್ಷಿಕ ನಗದು ಕಂದಾಯ" ನೀತಿಯೇ ಈ ಬಿಕ್ಕಟ್ಟಿಗೆ ಕಾರಣವಾಗಿತ್ತು. ಹಿಂದಿನ ಕಂದಾಯ ವ್ಯವಸ್ಥೆಗಳಿಗಿಂತ ಭಿನ್ನವಾಗಿ, ಈ ಕ್ರೂರ ನೀತಿಯು ಸುಳ್ಯ ಮತ್ತು ಪುತ್ತೂರು ಪ್ರದೇಶಗಳ ಕೃಷಿ ಇಳುವರಿಯನ್ನು ಲೆಕ್ಕಿಸದೆ ನಿಗದಿತ ನಗದು ತೆರಿಗೆಯನ್ನು ಪಾವತಿಸುವಂತೆ ಒತ್ತಾಯಿಸಿತು. ಕೃಷಿಯ ವಾಸ್ತವಿಕ ಸ್ಥಿತಿಗೂ ಕಂದಾಯಕ್ಕೂ ಸಂಬಂಧವೇ ಇಲ್ಲದಂತೆ ಮಾಡಿ, ಆರ್ಥಿಕ ಶೋಷಣೆಯನ್ನು ಅಸ್ತ್ರವಾಗಿಸಿಕೊಂಡ ನೀತಿ ಇದಾಗಿತ್ತು. 1836ರಲ್ಲಿ ಭೀಕರವಾದ ಎಂಟು ತಿಂಗಳ ಬರಗಾಲ ಈ ಪ್ರದೇಶವನ್ನು ಅಪ್ಪಳಿಸಿದಾಗ, ಬೆಳೆ ನಾಶವಾಯಿತು ಮತ್ತು ಆಹಾರದ ದಾಸ್ತಾನು ಖಾಲಿಯಾಯಿತು. ಜನತೆ ಹಸಿವಿನಿಂದ ಕಂಗೆಟ್ಟರು, ಆದರೂ ವಸಾಹತುಶಾಹಿ ಆಡಳಿತ ಮಾತ್ರ ಕರುಣೆಯಿಲ್ಲದೆ ಹಣ ಮತ್ತು ಕೃಷಿ ಉತ್ಪನ್ನಗಳ ವಸೂಲಿಯನ್ನು ತೀವ್ರಗೊಳಿಸಿತು. ಕೊಲ್ಕತ್ತಾಗೆ ಹೋಗಿದ್ದ ಶಾಂತಿಯುತ ನಿಯೋಗ ಈ ದುರಂತವನ್ನು ತಪ್ಪಿಸಲೇ ಪ್ರಯತ್ನಿಸಿತ್ತು. ಆದರೆ, ಮಾತುಕತೆ ವಿಫಲವಾಗಿ, ಶೋಷಣೆ ಮಿತಿಮೀರಿದಾಗ, ಬದುಕುಳಿಯಲು ಬೇರೆಯದೇ ಭಾಷೆಯ ಅಗತ್ಯವಿದೆ ಎಂಬುದನ್ನು ಜನರು ಅರಿತುಕೊಂಡರು.

ಮಾರ್ಚ್ 30, 1837: ಬಂಗಲೆ ಗುಡ್ಡೆಯಲ್ಲಿ ಹೊತ್ತಿದ ಕಿಡಿ

ಬೆಳ್ಳಾರೆಯ ಮಧ್ಯಭಾಗದಲ್ಲಿರುವ 'ಬಂಗಲೆ ಗುಡ್ಡೆ' ಆ ಕಾಲದ ವಸಾಹತುಶಾಹಿ ಆಡಳಿತದ ಪ್ರಮುಖ ಕೇಂದ್ರವಾಗಿತ್ತು. 1837ರ ವೇಳೆಗೆ, ಇದು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಖಜಾನೆ ಮತ್ತು ಉಪ-ಜಿಲ್ಲಾ ಕಚೇರಿಯಾಗಿತ್ತು. ವಾರ್ಷಿಕ ಕಂದಾಯ ಪಾವತಿಯ ದಿನದಂದು ಸ್ಥಳೀಯರು ಒಂದು ಯೋಜಿತ ಸಂಗ್ರಾಮವನ್ನು ಪ್ರಾರಂಭಿಸಿದ್ದು ಇಲ್ಲೇ. ಅವರು ಧೈರ್ಯವಾಗಿ ಕಚೇರಿಯನ್ನು ವಶಪಡಿಸಿಕೊಂಡರು, ರೂ. 13,000 ಕಂದಾಯದ ಹಣವನ್ನು ವಶಕ್ಕೆ ಪಡೆದರು, ಮತ್ತು ಅದಕ್ಕಿಂತ ಮುಖ್ಯವಾಗಿ, ಕಂದಾಯದ ದಾಖಲೆಗಳನ್ನು ಸುಟ್ಟುಹಾಕಿದರು. ಇದೊಂದು ಅತಿರೇಕದ ಗಲಭೆಯಾಗಿರಲಿಲ್ಲ; ಇದು ವಸಾಹತುಶಾಹಿ ಅಧಿಕಾರವನ್ನು ಧಿಕ್ಕರಿಸುವ ಒಂದು ಕಾರ್ಯತಂತ್ರ ಮತ್ತು ಸಾಂಕೇತಿಕ ನಡೆಯಾಗಿತ್ತು. ದಾಖಲೆಗಳ ದಹನವು ಅನ್ಯಾಯದ ಆಡಳಿತ ವ್ಯವಸ್ಥೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸ್ಪಷ್ಟ ಸಂದೇಶವಾಗಿತ್ತು. ಸಂಘಟಿತ ಹೋರಾಟವನ್ನು ಅವಲಂಬಿಸಿದ್ದ ನಂತರದ ಚಳುವಳಿಗಳಿಗಿಂತ ಭಿನ್ನವಾಗಿ, ಅಮರ ಸುಳ್ಯ ಚಳುವಳಿಯು ಊರಿನವರಿಂದಲೇ ಸಹಜವಾಗಿ ಹುಟ್ಟಿಕೊಂಡಿತು. ನ್ಯಾಯದ ಪರವಾದ ಈ ಹೋರಾಟ ರೈತರು, ಸ್ಥಳೀಯ ನಾಯಕರು ಮತ್ತು ಈಸ್ಟ್ ಇಂಡಿಯಾ ಕಂಪನಿಯ ಕೆಳಹಂತದ ಉದ್ಯೋಗಿಗಳನ್ನೂ ಒಂದುಗೂಡಿಸಿತು. ಬೆಳ್ಳಾರೆಯ ಯಶಸ್ಸಿನಿಂದ ಪ್ರೇರಿತರಾದ ಸ್ವಾತಂತ್ರ್ಯ ಹೋರಾಟಗಾರರು ಮುಂದೆ ಸಾಗಿದರು. ಏಪ್ರಿಲ್ 3, 1837 ರ ಹೊತ್ತಿಗೆ, ಅವರು ಮಂಗಳೂರು ಬಂದರು ಪಟ್ಟಣದ ಕಡೆಗೆ ಹೆಜ್ಜೆ ಹಾಕುತ್ತಿದ್ದಂತೆ ಈ ಹೋರಾಟವು ಇಡೀ ಪ್ರದೇಶದಾದ್ಯಂತ ವ್ಯಾಪಿಸಿತು. ಅವರ ದಾಳಿಗೆ ವಸಾಹತುಶಾಹಿ ಪಡೆಗಳು ತತ್ತರಿಸಿದವು. ಯುರೋಪಿಯನ್ ನಿವಾಸಿಗಳು ಪಲಾಯನ ಮಾಡಿದರು, ಕಂಪನಿಯ ಧ್ವಜವನ್ನು ಕೆಳಗಿಳಿಸಲಾಯಿತು ಮತ್ತು 13 ದಿನಗಳ ಕಾಲ, ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಸ್ವಾಯತ್ತತೆಯನ್ನು ಯಶಸ್ವಿಯಾಗಿ ಮರಳಿ ಪಡೆದರು. ಈ ಒಗ್ಗಟ್ಟಿನ ಹೋರಾಟದ ಧೈರ್ಯ ಬ್ರಿಟಿಷ್ ಅಧಿಕಾರಿಗಳನ್ನು ಬೆಚ್ಚಿಬೀಳಿಸಿತು. ಈ ಘಟನೆಯನ್ನು ಕಣ್ಣಾರೆ ಕಂಡ ಕ್ಯಾಪ್ಟನ್ ನೆವಿಲ್ ಬರ್ಟ್ಸಾಲ್ ತನ್ನ ಆಶ್ಚರ್ಯವನ್ನು ಹೀಗೆ ವ್ಯಕ್ತಪಡಿಸಿದ್ದಾನೆ: 'ಬೆಳ್ಳಾರೆ ಮತ್ತು ಸುಳ್ಯದ ಕಾಡುಗಳಲ್ಲಿ ಮರಗಳಂತೆ ಬಂದೂಕುಗಳು ಬೆಳೆಯುತ್ತಿದ್ದವೋ ಅಥವಾ ಹೋರಾಟಗಾರರ ನಾಯಕ ನೆಲಕ್ಕೆ ಕಾಲು ಕುಟ್ಟಿ ಧೂಳಿನಿಂದಲೇ ಸೈನ್ಯವನ್ನು ಸೃಷ್ಟಿಸಿದನೋ ಅನಿಸುವಂತಿತ್ತು!' ಕೇವಲ ದಬ್ಬಾಳಿಕೆಗೆ ಒಳಗಾದ, ಮೌನವಾದ ಸಮುದಾಯ ಎಂದು ಬ್ರಿಟಿಷರು ಅಹಂಕಾರದಿಂದ ಭಾವಿಸಿದ್ದ ಜಾಗದಿಂದ ಇಂತಹ ಉನ್ನತ ಮಟ್ಟದ, ಸಂಘಟಿತ ಹೋರಾಟವೆದ್ದದ್ದು ಅವರ ದಿಗ್ಭ್ರಮೆಗೆ ಕಾರಣವಾಗಿತ್ತು.

ಪ್ರತಿರೋಧದ ಪ್ರತಿಧ್ವನಿ: ಪಿಸುಮಾತುಗಳಲ್ಲಿ ಉಳಿದುಕೊಂಡ ಪರಂಪರೆ

ಸಹಜವಾಗಿಯೇ ಸಾಮ್ರಾಜ್ಯಶಾಹಿ ತನ್ನ ಪ್ರತಿದಾಳಿ ನಡೆಸಿತು. ಕಣ್ಣಾನೂರು ಮತ್ತು ಬಾಂಬೆಯಿಂದ ಬಂದ ಬ್ರಿಟಿಷ್ ಹೆಚ್ಚುವರಿ ಪಡೆಗಳು ಏಪ್ರಿಲ್ ಮಧ್ಯಭಾಗದ ವೇಳೆಗೆ ಈ ಹೋರಾಟವನ್ನು ಹತ್ತಿಕ್ಕಿದವು. ನಾಯಕರನ್ನು ಗಲ್ಲಿಗೇರಿಸಲಾಯಿತು, ಹಳ್ಳಿಗಳನ್ನು ಬಲವಂತವಾಗಿ ಶಾಂತಗೊಳಿಸಲಾಯಿತು ಮತ್ತು ಈ ಚಳುವಳಿಯ ಬಗ್ಗೆ ಯಾವುದೇ ರೀತಿಯ ಸಾರ್ವಜನಿಕ ಚರ್ಚೆಯನ್ನು ಅಧಿಕೃತವಾಗಿ ನಿಷೇಧಿಸಲಾಯಿತು. ಆದರೆ ಸತ್ಯದ ತಳಹದಿಯಿರುವ ಪರಂಪರೆಯನ್ನು ಯಾವುದೇ ಕಾನೂನಿನಿಂದ ಅಳಿಸಿಹಾಕಲು ಸಾಧ್ಯವಿಲ್ಲ. ಘಟನೆಯ ಚರ್ಚೆಯನ್ನು ನಿಷೇಧಿಸಿದ ಬ್ರಿಟಿಷರಿಗೆ, ಅವರ ಈ ದಬ್ಬಾಳಿಕೆಯ ಮೌನವೇ ಹೋರಾಟದ ಇತಿಹಾಸವನ್ನು ಒಂದು ದಂತಕಥೆಯಾಗಿ ಬೆಳೆಸುತ್ತದೆ ಎಂಬ ಅರಿವಿರಲಿಲ್ಲ. 1837ರ ಇತಿಹಾಸವು ಮೌಖಿಕ ಪರಂಪರೆಯ ಆಶ್ರಯವನ್ನು ಪಡೆಯಿತು. ಬೆಳ್ಳಾರೆಯ ಪ್ರತಿರೋಧದ ಕಥೆಗಳು ಹಿರಿಯರ ಪಿಸುಮಾತುಗಳಲ್ಲಿ ಚಿಗುರೊಡೆದು, ಸಾಂಸ್ಕೃತಿಕ ಸ್ಮೃತಿಯ ಶಾಶ್ವತ ಸಂಕೇತಗಳಾಗಿ ಬೆಳೆದವು. ಇಂದಿಗೂ ಆ ಪಿಸುಮಾತುಗಳು ಪ್ರತಿಧ್ವನಿಸುತ್ತವೆ. ಊಟದ ಸಮಯದಲ್ಲಿ ಅಜ್ಜಿಯೊಬ್ಬಳು ಆತುರದಿಂದ ಕೇಳುವ– 'ನಿಕ್ಕ್ ದಾನೆ ದಂಡ್‌ಗ್ ಪೋಯರೆ ಉಂಡಾ?' (ನೀನೂ ದಂಡಿಗೆ/ಯುದ್ಧಕ್ಕೆ ಹೋಗಬೇಕಾಗಿದೆಯಾ?) ಎಂಬ ಪ್ರಶ್ನೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಡೆಯಾದ ಆ 'ದಂಡಿ'ನ ನೆನಪಿದೆ. ಚಿತೆಗೆ ಬೆಂಕಿ ಇಡುವ ಮುನ್ನ ಎರಡು ಸುತ್ತು ಗುಂಡು ಹಾರಿಸುವ ಗಾಂಭೀರ್ಯದ ಸಂಪ್ರದಾಯದಲ್ಲಿ, ಸುಳ್ಯದ ಆ ಶೌರ್ಯದ ಗತಕಾಲಕ್ಕೆ ಸಲ್ಲಿಸುವ ಗೌರವದ ಪ್ರತಿಧ್ವನಿಯಿದೆ.

ಪರಂಪರೆಯ ಸಂರಕ್ಷಣೆ: ಮುಂದಿನ ಹಾದಿ

ಏಪ್ರಿಲ್ 3, 2018ರಂದು, ಸ್ಥಳೀಯ ಚುನಾವಣೆಗಾಗಿ ಬೆಳ್ಳಾರೆ ಪೊಲೀಸ್ ಠಾಣೆಗೆ ಒಪ್ಪಿಸುವ ಮುನ್ನ, ತಂದೆಯವರು ಅತ್ಯಂತ ಪ್ರೀತಿಯಿಂದ ಜೋಡಿ ನಳಿಕೆಯ ಬಂದೂಕನ್ನು ಶುಚಿಗೊಳಿಸುತ್ತಿದ್ದಾಗ, ನನಗೊಂದು ವಿಚಾರ ಹೊಳೆಯಿತು. ನಮ್ಮ ಪೂರ್ವಜರ ಪ್ರತಿರೋಧದ ಆಯುಧಗಳು ಇಂದಿಗೂ ಉಳಿದುಕೊಂಡಿವೆ, ಆದರೆ ಅವರ ತ್ಯಾಗದ ನೈಜ, ವಾಸ್ತವಿಕ ಇತಿಹಾಸ ಮಾತ್ರ ಸಂಶೋಧನಾ ಕಪಾಟುಗಳಲ್ಲಿ ಧೂಳು ಹಿಡಿಯುತ್ತಿದೆ. ಈ ಅರಿವೇ 'ರಿಕಾಲಿಂಗ್ ಅಮರ ಸುಳ್ಯ' ಪುಸ್ತಕ ಬರೆಯಲು ಮತ್ತು ಮುಂದೆ 'ಅಮರ ಸುಳ್ಯ ಹೆರಿಟೇಜ್ ಫೌಂಡೇಶನ್ (ರಿ.)' ಸ್ಥಾಪನೆಗೆ ಕಾರಣವಾಯಿತು. 'ಜ್ಞಾನ-ಆಧಾರಿತ ಪರಂಪರೆ – ಸಂರಕ್ಷಣೆ' ಎಂಬ ಧ್ಯೇಯವಾಕ್ಯದೊಂದಿಗೆ ಮುನ್ನಡೆಯುತ್ತಿರುವ ಈ ಫೌಂಡೇಶನ್‌ನ ಮೂಲ ನಂಬಿಕೆಯೆಂದರೆ, ಇತಿಹಾಸವನ್ನು ವಿಭಜನೆಯ ಅಸ್ತ್ರವಾಗಿ ಬಳಸಬಾರದು, ಬದಲಿಗೆ ಸಾಮೂಹಿಕ ಸಬಲೀಕರಣದ ಸೇತುವೆಯಾಗಿ ಬಳಸಬೇಕು. ನಾವು ಇಂದು ತೀವ್ರವಾದ ಧ್ರುವೀಕರಣ ಮತ್ತು ಅವಕಾಶವಾದಿ ಸಂಘರ್ಷಗಳ ಕಾಲದಲ್ಲಿ ಬದುಕುತ್ತಿದ್ದೇವೆ. ಪ್ರಾದೇಶಿಕ ಅಥವಾ ಕೋಮುವಾದಿ ಬಣಗಳ ಬಲೆಗೆ ಬೀಳುವುದು ತುಂಬಾ ಸುಲಭ. ಆದರೆ ನಾವು ಅಮರ ಸುಳ್ಯ ಸ್ವಾತಂತ್ರ್ಯ ಚಳುವಳಿಯತ್ತ ತಿರುಗಿ ನೋಡಿದಾಗ, ಶಾಂತಿಗಾಗಿ ಪ್ರಯತ್ನಿಸಿದ ಒಂದು ನಿಯೋಗವನ್ನು ಮತ್ತು ಆ ಶಾಂತಿಯನ್ನು ನಿರಾಕರಿಸಿದಾಗ ಒಗ್ಗಟ್ಟಿನಿಂದ ನಿಂತ ವೈವಿಧ್ಯಮಯ ಜನತೆಯನ್ನು ನಾವು ಕಾಣುತ್ತೇವೆ. ಇಂದಿನ ಯುವಜನತೆ ತಾವು ಪಡೆಯುವ ಶಿಕ್ಷಣದ ನೈಜ ಮೌಲ್ಯಕ್ಕಾಗಿ ನಿಲ್ಲಬೇಕು. ಭಾರತದ ಸಾಮೂಹಿಕ ಇತಿಹಾಸದ ಕಡೆಗಣಿಸಲ್ಪಟ್ಟ ಇಂತಹ ಅಮೂಲ್ಯವಾದ ತುಣುಕುಗಳನ್ನು ಅಗೆದು ತೆಗೆಯಲು ಮತ್ತು ವಾಸ್ತವ ಆಧಾರಿತ ದತ್ತಾಂಶಗಳನ್ನು ಮುಂದಿಡಲು ಅವರು ಶ್ರಮಿಸಬೇಕು. ನೆಲದ ಕಥೆಗಳನ್ನು ಹಂಚಿಕೊಳ್ಳುವ ಮೂಲಕ, ನಮ್ಮ ದೇಶದ ಅಡಿಪಾಯವನ್ನು ನಿರ್ಮಿಸಿದ ಅಸಂಖ್ಯಾತ, ಎಲೆಮರೆಯ ಕಾಯಿಯಂತಿರುವ ತ್ಯಾಗಬಲಿದಾನಗಳನ್ನು ನಾವು ಸ್ಮರಿಸಿಕೊಳ್ಳುತ್ತೇವೆ – ಇದು 'ವೈವಿಧ್ಯತೆಯಲ್ಲಿ ಏಕತೆ'ಯಿಂದಲೇ ವ್ಯಾಖ್ಯಾನಿಸಲ್ಪಟ್ಟ ರಾಷ್ಟ್ರ.

ಪರಂಪರೆಯ ಸಂರಕ್ಷಣೆ ಎಂದರೆ ಕೇವಲ ಹಳೆಯ ಕಟ್ಟಡಗಳು ಅಥವಾ ವಸ್ತುಗಳನ್ನು ಕಾಪಾಡುವುದಲ್ಲ; ಅದು ಪ್ರತಿರೋಧ, ಸ್ಥೈರ್ಯ ಮತ್ತು ಒಗ್ಗಟ್ಟಿನ ಮನೋಭಾವವನ್ನು ನಮ್ಮೊಳಗೆ ಉಳಿಸಿಕೊಳ್ಳುವುದು. ಸುಳ್ಯದ ಹಾಗೂ ಇಡೀ ನಾಡಿನ ಯುವಜನತೆಗೆ, ಅಮರ ಸುಳ್ಯ ಹೋರಾಟವು ತಮ್ಮ ಮಣ್ಣಿನ ಬಗೆಗಿನ ಜವಾಬ್ದಾರಿಯ ಅತಿ ದೊಡ್ಡ ಪಾಠವಾಗಿದೆ. ಆಧುನಿಕತೆ ಮತ್ತು ಸಂಪ್ರದಾಯಗಳ ಕವಲುದಾರಿಯಲ್ಲಿ ನಿಂತಿರುವ ನಾವು, ಕೇವಲ ಇತಿಹಾಸದ ಓದುಗರಾಗದೆ, ನಮ್ಮ ಪೂರ್ವಜರ ಆ 'ಸ್ವಾಭಿಮಾನ'ದ ದೀವಿಗೆಯನ್ನು ಮುನ್ನಡೆಸುವ ಕಾವಲುಗಾರರಾಗೋಣ. 1837ರ ಆ ಬಲಿದಾನಗಳು ಕಾಲದ ಗರ್ಭದಲ್ಲಿ ಕಳೆದುಹೋಗಲು ಬಿಡದೆ, ಮುಂದಿನ ತಲೆಮಾರುಗಳಿಗೆ ದಾರಿದೀಪವಾಗುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ನಾವಿಂದು ಬಂಗಲೆ ಗುಡ್ಡೆಯ ಸುತ್ತಮುತ್ತಲಿನ ರಸ್ತೆಗಳಲ್ಲಿ ನಡೆಯುವಾಗ ಅಥವಾ ಪೂರ್ವಜರ ಶಸ್ತ್ರಾಸ್ತ್ರಗಳನ್ನು ಠಾಣೆಗೆ ಒಪ್ಪಿಸುವಾಗ, ನಮ್ಮ ಮುಂದೊಂದು ಆಯ್ಕೆಯಿದೆ. ನಾವು ಈ ಇತಿಹಾಸವನ್ನು ಕತ್ತಲಲ್ಲೇ ಉಳಿಯಲು ಬಿಡಬಹುದು, ಅಥವಾ ಅವನ್ನು ಬೆಳಕಿಗೆ ತರಬಹುದು.

ನಿಮ್ಮನ್ನೇ ನೀವು ಕೇಳಿಕೊಳ್ಳಿ – ನಿಮ್ಮ ಸ್ವಂತ ಮಣ್ಣಿನಲ್ಲಿ ಯಾವ ಇತಿಹಾಸ ಹೂತುಹೋಗಿದೆ? ಮತ್ತು ಅದಕ್ಕಿಂತ ಮುಖ್ಯವಾಗಿ, ಜ್ಞಾನದ ಯಾವ ಜ್ವಾಲೆಗಳು ನಿಮ್ಮ ಕಿಡಿಗಾಗಿ ಕಾಯುತ್ತಿವೆ?

ಬರಹ: ಅನಿಂದಿತ್ ಕೆ. ಎಸ್.
ಲೇಖಕರು: 'ರಿಕಾಲಿಂಗ್ ಅಮರ ಸುಳ್ಯ', ಅಧ್ಯಕ್ಷರು, ಅಮರ ಸುಳ್ಯ ಹೆರಿಟೇಜ್ ಫೌಂಡೇಶನ್

ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸಭಾಂಗಣಕ್ಕೆ ಶಿಲಾನ್ಯಾಸ

ಉಪ್ಪಿನಂಗಡಿ: ವಿದ್ಯಾರ್ಥಿಗಳು ಸಾಧಿಸುವ ಛಲದಿಂದ ನಿರಂತರ ಶ್ರಮಿಸಬೇಕು. ಅಸಾಧ್ಯವಾದ್ದುದ್ದನ್ನು ಸಾಧಿಸುವ ಬಗ್ಗೆ ಕನಸು ಕಾಣಬೇಕು, ಆ ಮೂಲಕ ಗುರಿ ತಲುಪಲು ಪರಿಶ್ರಮಿಸಬೇಕು, ಹಾಗಾದಾಗ ಮಾತ್ರ ತಮ್ಮ ಕಲಿಕೆ ಸಾರ್ಥಕವಾಗುತ್ತದೆ ಮತ್ತು ಜೀವನದಲ್ಲಿ ಏನಾದರೊಂದು ಸಾಧನೆ ಮಾಡಲು ಸಾಧ್ಯ ಎಂದು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.



ಅವರು ಮಾ.28ರಂದು ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನ ಸಭಾಂಗಣ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿ, ಈ ಕಾಲೇಜಿನ ಬಹು ಕಾಲದ ಬೇಡಿಕೆಗೆ ಅನುಗುಣವಾಗಿ ಸರ್ಕಾರ 2 ಕೋಟಿ ರೂಪಾಯಿ ಮಂಜೂರು ಮಾಡಿದೆ, ಕೆಲ ಅಂತಸ್ಥಿನಲ್ಲಿ ಸಭಾಂಗಣ ಮಾಡಿಕೊಂಡು, ಮುಂದೆ ಮೊದಲ ಮಹಡಿಯಲ್ಲಿ ತರಗತಿ ಕೊಠಡಿ ಮಾಡಲು ಅವಕಾಶ ಇದೆ, ಕಾಲೇಜ್ ವತಿಯಿಂದ ಬೇಡಿಕೆ ಪಟ್ಟಿ ಮಾಡಿ ಕೊಟ್ಟರೆ ಇನ್ನಷ್ಟು ಅನುದಾನ ದೊರಕಿಸಿ ಕೊಡಬಹುದು ಎಂದರು.

ಕಾಲೇಜ್ ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಚಂದ್ರಹಾಸ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪುತ್ತೂರು ತಾಲ್ಲೂಕು ಅಧ್ಯಕ್ಷ ಉಮಾನಾಥ ಶೆಟ್ಟಿ, ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯು.ಟಿ. ತೌಸೀಫ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಇಸ್ಮಾಯಿಲ್ ಇಕ್ಬಾಲ್, ವಿನ್ಸೆಂಟ್ ಫೆರ್ನಾಂಡಿಸ್, ಶಬ್ಬೀರ್ ಕೆಂಪಿ, ನಝೀರ್ ಮಠ, ಸವಿತಾ ಹರೀಶ್ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಚಾರ್ಯ ರವಿರಾಜ್ ಸ್ವಾಗತಿಸಿ, ಉಪನ್ಯಾಸಕ ಹರಿಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

ಅಪ್ರಾಪ್ತ ವಯಸ್ಸಿನ ಬಾಲಕಿಗೆ ಕಿರುಕುಳ ಪ್ರಕರಣ

ಆರೋಪಿಗೆ ನಾಲ್ಕು ವರ್ಷ ಜೈಲು ಶಿಕ್ಷೆ

ಮಂಗಳೂರು: ಅಪ್ರಾಪ್ತ ವಯಸ್ಸಿನ ಬಾಲಕಿಯೋರ್ವಳು ಆಕೆಯ ಪರಿಚಿತನ ಜತೆ ಇದ್ದಾಗ ಫೊಟೋ ತೆಗೆದು ಬಳಿಕ ಬಾಲಕಿಯನ್ನು ಹಿಂಬಾಲಿಸಿ ಆಕೆಯನ್ನು ಬ್ಲ್ಯಾಕ್ ಮೇಲ್ ಮಾಡಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ ಮಂಗಳೂರಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್ ಟಿ ಎಸ್ ಸಿ 2 (ಪೋಕ್ಸೊ) ನ್ಯಾಯಾಲಯದ ನ್ಯಾಯಾಧೀಶರಾದ ಮಾನು ಕೆ.ಎಸ್ ಅವರು 4 ವರ್ಷ, 6 ತಿಂಗಳು ಕಠಿನ ಸಜೆ ವಿಧಿಸಿ ತೀರ್ಪು ನೀಡಿದ್ದಾರೆ.

ಬಜಪೆ ಶಾಂತಿಗುಡ್ಡೆ ನಿವಾಸಿ ಮೊಹಮ್ಮದ್ ಸಫ್ವಾನ್ ಆಲಿಯಾಸ್ ಸಫ್ವಾನ್ (32) ಶಿಕ್ಷೆಗೊಳಗಾದ ಆರೋಪಿ.

ಸೋಮೇಶ್ವರದ 15 ವರ್ಷದ ಬಾಲಕಿಯನ್ನು ಪರಿಚಿತನೋರ್ವ 2025 ರ ಮಾ.30 ರಂದು ಕದ್ರಿ ಪಾರ್ಕ್ ಗೆ ಕರೆದುಕೊಂಡು ಹೋಗಿದ್ದ. ಅಲ್ಲಿ ಅವರಿಬ್ಬರು ಜತೆಯಾಗಿ ಕುಳಿತಿದ್ದಾಗ ಆರೋಪಿ ಸಫ್ವಾನ್ ಬಂದು ಫೊಟೋ ಕ್ಲಿಕ್ಕಿಸಿದ್ದ. ಅನಂತರ ಬಾಲಕಿ ಮನೆ ಕಡೆಗೆ ಹೊರಟಾಗ ಆಕೆಯನ್ನು ಸ್ಕೂಟರ್ ನಲ್ಲಿ ಹಿಂಬಾಲಿಸಿಕೊಂಡು ಹೋಗಿದ್ದ. ದಾರಿ ಮಧ್ಯೆ ಆಕೆಯನ್ನುದ್ದೇಶಿಸಿ ನಿನ್ನ ಫೊಟೋ ನನ್ನ ಬಳಿ ಇದೆ. ಇದನ್ನು ತಂದೆಗೆ ಹೇಳಬೇಕಾ ಎಂದು ಕೇಳಿದ್ದ. ಬಾಲಕಿ ಮುಂದೆ ನಡೆದುಕೊಂಡು ಹೋದಾಗ ಆಕೆಯ ಕೈ ಹಿಡಿದು ಆಕೆಯ ಫ್ಲ್ಯಾಟ್‌ನ ಕಟ್ಟಡಕ್ಕೆ ತೆರಳಿ ಅಲ್ಲಿ ಕಟ್ಟಡದ ಮೇಲೆ ಹತ್ತುವಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ. ಅನಂತರ ಆಕೆಯ ತಮ್ಮ ಬರುವ ಶಬ್ದ ಕೇಳಿ ಆರೋಪಿ ಅಲ್ಲಿಂದ ಪರಾರಿಯಾಗಿದ್ದ. ನಡೆದ ವಿಷಯವನ್ನು ಬಾಲಕಿ ಮನೆಯವರಿಗೆ ತಿಳಿಸಿದ್ದಳು. ಅದರಂತೆ ಪ್ರಕರಣ ದಾಖಲಾಗಿತ್ತು. ಪಾಂಡೇಶ್ವರ ಮಹಿಳಾ ಠಾಣೆಯ ಇನ್ಸ್ ಪೆಕ್ಟರ್ ಬಾಲಕೃಷ್ಣ ಎಚ್. ಎನ್. ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಗೆ ಪೋಕ್ಸೊ ಕಾಯಿದೆಯ ಕಲಂ 8 ಮತ್ತು ಬಿಎನ್ ಎಸ್ ಕಲಂ 75(1) ಅಡಿಯಲ್ಲಿ 3 ವರ್ಷ ಕಠಿನ ಸಜೆ, 15,000 ರೂ. ದಂಡ, ಒಂದು ವೇಳೆ ದಂಡ ಪಾವತಿಸಲು ವಿಫಲನಾದರೆ ಹೆಚ್ಚುವರಿ 2 ತಿಂಗಳ ಸಾಮಾನ್ಯ ಸಜೆ, ಬಿಎನ್‌ಎಸ್ ಕಲಂ 78ರ ಅಡಿಯಲ್ಲಿ 1 ವರ್ಷ 6 ತಿಂಗಳ ಸಾಮಾನ್ಯ ಸಜೆ, 5,000 ರೂ. ದಂಡ, ಒಂದು ವೇಳೆ ದಂಡ ಪಾವತಿಸಲು ವಿಫಲನಾದರೆ ಹೆಚ್ಚುವರಿ 1 ತಿಂಗಳ ಸಾಮಾನ್ಯ ಸಜೆ ವಿಧಿಸಿ ತೀರ್ಪು ನೀಡಿದ್ದಾರೆ.

ದಂಡದ ಮೊತ್ತದಿಂದ 20,000 ರೂ. ಹಾಗೂ ಹೆಚ್ಚುವರಿ 30,000 ರೂ.ಗಳನ್ನು ಸಂತ್ರಸ್ತೆಯಾದ ಬಾಲಕಿಗೆ ಪರಿಹಾರವಾಗಿ ನೀಡಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದ್ದಾರೆ.

ಪ್ರಾಸಿಕ್ಯೂಷನ್ ಪರವಾಗಿ ಪೋಕ್ಸೊ ವಿಶೇಷ ಸರಕಾರಿ ಅಭಿಯೋಜಕಿ ಸಹನಾದೇವಿ ಬೋಳೂರು ವಾದ ಮಂಡಿಸಿ ಸಾಕ್ಷ್ಯ ವಿಚಾರಣೆ ನಡೆಸಿದ್ದರು.

ಎನ್.ಡಿ.ಪಿ.ಎಸ್. ಕಾಯಿದೆಯ ಕುರಿತ ಮಾಹಿತಿ ಕಾರ್ಯಾಗಾರ

ಎನ್‌ಡಿಪಿಎಸ್ ಪ್ರಕರಣಗಳ ಅಪರಾಧಿಗಳಿಗೆ ಶಿಕ್ಷೆ ಅತ್ಯಗತ್ಯ: ಸರಿತಾ ಡಿ.

ಪುತ್ತೂರು: ಮಾದಕ ದ್ರವ್ಯಗಳ ಬಳಕೆಯಿಂದ ಮುಖ್ಯವಾಗಿ ಯುವ ಸಮುದಾಯ ದಿನದಿಂದ ಕಷ್ಟಕ್ಕೆ ಸಿಲುಕುತ್ತಿದೆ. ಎನ್‌ಡಿಪಿಎಸ್ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಮಾತ್ರ ಬುದ್ಧಿ ಬರುತ್ತದೆ. ಈ ಕಾರಣದಿಂದ ಇಂತಹ ಪ್ರಕರಣಗಳ ತನಿಖೆ ಸಮರ್ಪಕವಾಗಿ ನಡೆದು ಅಪರಾಧಿಗಳಿಗೆ ಶಿಕ್ಷೆ ಕೊಡಿಸುವ ಅನಿವಾರ್ಯತೆ ಇದೆ ಎಂದು ಪುತ್ತೂರು ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶೆ ಸರಿತಾ ಡಿ. ಹೇಳಿದರು.



ಅಭಿಯೋಜನಾ ಇಲಾಖೆ ಮಂಗಳೂರು ವಿಭಾಗ ಹಾಗೂ ದ.ಕ. ಜಿಲ್ಲಾ ಪೊಲೀಸ್ ಸಹಭಾಗಿತ್ವದಲ್ಲಿ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ನಟರಾಜ ವೇದಿಕೆಯಲ್ಲಿ ಹಮ್ಮಿಕೊಳ್ಳಲಾದ ಎನ್.ಡಿ.ಪಿ.ಎಸ್. ಕಾಯಿದೆಯ ಕುರಿತ ಮಾಹಿತಿ ಕಾರ್ಯಾಗಾರವನ್ನು ಅವರು ಉದ್ಘಾಟಿಸಿದರು.

ಎನ್‌ಡಿಪಿಎಸ್ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖಾ ಕ್ರಮ ಸರಿಯಾಗಿ ಆಗುತ್ತಿಲ್ಲ. ಹಲವು ಲೂಪ್ ಹೋಲ್ ಕಾಣಸುತ್ತಿದೆ. ತನಿಖೆ ನಡೆಸುವವರು ಈ ಕಾಯಿದೆಯ ಕುರಿತು ಸಮರ್ಪಕ ಮಾಹಿತಿ ತಿಳಿದುಕೊಂಡಿರಬೇಕು. ಆರೋಪಿಯ ಬಂಧನವಾಗಿ 24 ಗಂಟೆಯಲ್ಲಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸುವುದು ಸೇರಿದಂತೆ ಎಲ್ಲ ತನಿಖಾ ಕ್ರಮಗಳನ್ನು ಸಮರ್ಪಕವಾಗಿ ಮಾಡಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಽಶ ದೇವರಾಜ್ ವೈ.ಎಚ್. ಮಾತನಾಡಿ, ಜಿಲ್ಲೆಯಲ್ಲಿ ಎನ್‌ಡಿಪಿಎಸ್ ಪ್ರಕರಣಗಳು ಹೆಚ್ಚಾಗುತ್ತಿವೆ. ಆರೋಪಿಗಳ ಬಂಧನವಾಗಿ ಸಮರ್ಪಕ ತನಿಖಾ ಕ್ರಮ ಮಾಡಿದರೆ ಅಪರಾಧಿಗಳಿಗೆ ಶಿಕ್ಷೆ ಕೊಡಿಸಲು ಸಾಧ್ಯವಿದೆ. ಅಪರಾಧಿಗಳಿಗೆ 100 ಶೇ. ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಹಾಗೂ ನ್ಯಾಯಾಂಗ ಗಮನಹರಿಸಬೇಕು ಎಂದರು.

ದ.ಕ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಲ್ ಕುಮಾರ್ ಎಸ್. ಭೂಮರೆಡ್ಡಿ ಮಾತನಾಡಿ, ದೇಶದಲ್ಲಿ ಶೇ.60ಕ್ಕಿಂತ ಹೆಚ್ಚು ಇರುವ ಯುವ ಜನತೆಗೆ ಸರಿಯಾದ ಮಾರ್ಗದರ್ಶನ, ದಿಕ್ಸೂಚಿ ಇದ್ದರೆ ಅವರ ಭವಿಷ್ಯ ಉಜ್ವಲವಾಗಿ ಬೆಳೆಯುತ್ತದೆ. ವ್ಯಸನ, ಮಾದಕ ವಸ್ತುಗಳ ಬಳಕೆ ಇಂದು ಯುವ ಜನತೆಗೆ ಕಂಟಕವಾಗಿ ಪರಿಣಮಿಸುತ್ತಿದೆ. ನಶಾ ಮುಕ್ತ ಅಭಿಯಾನ, ಡ್ರಗ್ ಫ್ರೀ ಅಭಿಯಾನಗಳು ನಡೆಯುತ್ತಿದ್ದರೂ ಪೊಲೀಸ್, ನ್ಯಾಯವಾದಿಗಳ ಸಮನ್ವಯದ ಪ್ರಯತ್ನದ ಮೂಲಕ ನಿಯಂತ್ರಣ ಪ್ರಯತ್ನ ಸಾಗಬೇಕು. ಇದಕ್ಕಾಗಿ ಕಾನೂನಾತ್ಮಕವಾಗಿ ಎಡವದಂತೆ ನೋಡಿಕೊಳ್ಳಬೇಕು ಎಂದರು.

ತನಿಖೆ ಸಮರ್ಪಕವಾಗಿರ ಬೇಕು

ಎನ್‌ಡಿಪಿಎಸ್, ಐಪಿಸಿ ಕಾಯಿದೆಗಳ ಮಧ್ಯೆ ವ್ಯತ್ಯಾಸವಿದೆ. ಎನ್‌ಡಿಪಿಎಸ್ ಕಾಯಿದೆಯ ವಿಶೇಷ ಅಧ್ಯಯನ ನಡೆಸಬೇಕು. ತನಿಖೆಯ ಸಂದರ್ಭದಲ್ಲಿ ಇದರಲ್ಲಿರುವ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು. ಮಾಹಿತಿ ಬಂದಲ್ಲಿಂದ ಚಾರ್ಜ್‌ಶೀಟ್ ಆಗುವ ತನಕವೂ ತನಿಖೆ ಸಮರ್ಪಕವಾಗಿರಬೇಕು. ಇಂತಹ ಕೇಸಿನ ಸೋಲು-ಗೆಲುವು ತನಿಖಾಧಿಕಾರಿಯ ಕೈಯಲ್ಲಿರುತ್ತದೆ.
■ ಶಿವಪ್ರಸಾದ್ ಆಳ್ವ ಕೆ.

ಅಧ್ಯಕ್ಷತೆ ವಹಿಸಿದ್ದ ಅಭಿಯೋಜನಾ ಇಲಾಖೆ ಮಂಗಳೂರು ವಿಭಾಗ ಹಿರಿಯ ಕಾನೂನು ಅಧಿಕಾರಿ ಶಿವಪ್ರಸಾದ್ ಆಳ್ವ ಕೆ., ಅಪರಾಧಗಳಿಗೆ ನ್ಯಾಯಾಂಗದಲ್ಲಿ ಶಿಕ್ಷೆ ಆದರೆ ಅಪರಾಧ ಮಾಡುವವರು ಹಿಂಜರಿಯಬಹುದು. ಎನ್‌ಡಿಪಿಎಸ್ ಪ್ರಕರಣಗಳನ್ನು ದಂಧೆ, ಉದ್ಯೋಗವಾಗಿ ಮಾಡುವವರಿದ್ದಾರೆ. ಪ್ರಮುಖವಾಗಿ ಮುಗ್ಧ ಮಕ್ಕಳೇ ಪ್ರಮುಖವಾಗಿ ಬಲಿಯಾಗುತ್ತಿದ್ದಾರೆ. ಇದನ್ನು ಬುಡದಿಂದಲೇ ಇದನ್ನು ನಿಯಂತ್ರಿಸುವ ಅಗತ್ಯವಿದೆ ಎಂದರು.

5ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ಸರಕಾರಿ ಅಭಿಯೋಜಕಿ ಜಯಂತಿ ಕೆ. ಭಟ್ ಪ್ರಾಸ್ತಾವಿಸಿ, ಜಿಲ್ಲೆಯಲ್ಲಿ ಎನ್‌ಡಿಪಿಎಸ್ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಪೊಲೀಸ್ ಅಧಿಕಾರಿಗಳು ಹಾಗೂ ಸರಕಾರಿ ಅಭಿಯೋಜಕರು ಇನ್ನಷ್ಟು ಅಪ್ಡೇಟ್ ಆಗಬೇಕು ಮತ್ತು ಅಪರಾಧಗಳಿಗೆ ಶಿಕ್ಷೆ ಆಗಬೇಕೆಂಬ ಕಾರಣದಿಂದ ಪ್ರಾಯೋಗಿಕವಾಗಿ ಕಾರ್ಯಾಗಾರ ಆಯೋಜಿಸಲಾಗುತ್ತಿದೆ ಎಂದರು.

ವಿಶೇಷ ಸರಕಾರಿ ಅಭಿಯೋಜಕ (ಪೋಕ್ಸೋ) ಕುದ್ರಿಯ ಪುಷ್ಪರಾಜ ಅಡ್ಯಂತಾಯ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರ ನಡೆಸಿದರು. ಅಭಿಯೋಜನಾ ಇಲಾಖೆ ಮಂಗಳೂರು ವಿಭಾಗ ಹಿರಿಯ ಕಾನೂನು ಅಧಿಕಾರಿ ಶಿವಪ್ರಸಾದ್ ಆಳ್ವ ಕೆ. ಅವರನ್ನು ಸನ್ಮಾನಿಸಿ ಗೌರವಿಸಲಾಯಿತಯು. ಪ್ರಧಾನ ಸಿವಿಲ್ ನ್ಯಾಯಾಧೀಶ ಶಿವಣ್ಣ ಎಚ್.ಆರ್., ಬಂಟ್ವಾಳ ಎಎಸ್ಪಿ ಯಶ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪುತ್ತೂರು ನಗರ ಠಾಣೆ ಇನ್‌ಸ್ಪೆಕ್ಟರ್ ಜಾನ್ಸನ್ ಡಿ'ಸೋಜ ವಂದಿಸಿದರು. ಸಂಚಾರ ಪೊಲೀಸ್ ಠಾಣೆಯ ದಿನೇಶ್ ಕಡಮಜಲು ಹಾಗೂ ಸಹಾಯಕ ಸರಕಾರಿ ಅಭಿಯೋಜಕಿ ಕವಿತಾ ಕಾರ್ಯಕ್ರಮ ನಿರ್ವಹಿಸಿದರು.

ಅಮ್ಮನ 100ನೇ ಹುಟ್ಟು ಹಬ್ಬ : ಹುಟ್ಟೂರಲ್ಲಿ ವಿದ್ಯಾಸಂಸ್ಥೆ ಸ್ಥಾಪಿಸಿದ ಶಿಕ್ಷಕ...

ಏ. 14ರಂದು ಅಜೆಕಾರ್ 'ಜ್ಞಾನಸುಧಾ' ಲೋಕಾರ್ಪಣೆ...

▸ ಗಣೇಶ್ ನಾಯಕ್, ಸಾಣೂರು



ಕಾರ್ಕಳ : ತಮ್ಮ ಜನ್ಮದಾತರ ಸವಿನೆನಪಿಗಾಗಿ ಶಾಲೆಯನ್ನು ನಿರ್ಮಿಸಿ ತಾಯಿಯ ಮೇಲಿನ ಪ್ರೀತಿಯ ಋಣಭಾವ ಮೆರೆದಿದ್ದಾರೆ. ತನ್ನೂರಿನ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದಿಂದ ವಂಚಿರಾಗಬಾರದೆಂಬ ಉದ್ದೇಶದಿಂದ, ಬಡ ವಿದ್ಯಾರ್ಥಿಗಳಿಗೂ ಅತ್ಯಾಧುನಿಕ ಸೌಲಭ್ಯದೊಂದಿಗೆ ಉಚಿತ ಶಿಕ್ಷಣ ನೀಡಬೇಕೆಂಬ ಕಾಳಜಿಯಿಂದ ಸುಸ ಜ್ಜಿತ, ಸುಂದರವಾಗಿ ಕನಸಿನ ವಿದ್ಯಾಮಂದಿರವೊಂದು ನಿರ್ಮಾಣವಾಗುತ್ತಿದೆ. ಹೌದು ಇದು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಅಜೆಕಾರಿನಲ್ಲಿ ನಿರ್ಮಾಣವಾಗುತ್ತಿರುವ ಶಾಲೆ..

ಕಳೆದ 15 ವರ್ಷಗಳಿಂದ ಮೌಲ್ಯಾಧಾರಿತ ಶಿಕ್ಷಣ





ನೀಡುವುದರೊಂದಿಗೆ ಅನೇಕ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನಗಳನ್ನು ನೀಡುತ್ತಾ ಬಂದಿರುವ ಅಜೆಕಾರ್ ಪದ್ಮ ಗೋಪಾಲ್ ಶಿಕ್ಷಣ ಟ್ರಸ್ಟ್ ವತಿಯಿಂದ ಅಜೆಕಾರು ಪದ್ಮನಗರದಲ್ಲಿ 4ನೇ ಕ್ಯಾಂಪಸ್ ನಿರ್ಮಾಣಗೊಳ್ಳುತ್ತಿದೆ.

ಕಾರ್ಕಳದ ಗಣಿತ ನಗರದಲ್ಲಿ ಜ್ಞಾನಸುಧಾ ಸಂಸ್ಥೆಯನ್ನು ಕಟ್ಟಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿರುವ ಡಾ. ಸುಧಾಕರ್ ಶೆಟ್ಟಿ ಅವರೇ ಇದರ ರೂವಾರಿ.

ಹುಟ್ಟೂರಿನ ವಿದ್ಯಾರ್ಥಿಗಳಿಗಾಗಿ ಅಜೆಕಾರು ಪದ್ಮ ನಗರದಲ್ಲಿ ಸಕಲ ಸೌಕರ್ಯದೊಂದಿಗೆ 9ನೇ ತರಗತಿ ಯಿಂದ ಉಚಿತ ಶಿಕ್ಷಣ ಕೊಡುವ ಮಹತ್ವಾಕಾಂಕ್ಷಿ ಯೋಜನೆ ಯೊಂದಿಗೆ ಅಮ್ಮನ 100ನೇ ಹುಟ್ಟುಹಬ್ಬವನ್ನು ಸಾರ್ಥಕ ಪಡಿಸುತ್ತಿದ್ದಾರೆ.

ಇದಲ್ಲದೆ ವಿದ್ಯಾರ್ಥಿಗಳಲ್ಲಿ ಹಾಗೂ ತನ್ನೂರಿನ ಮಹಾಜನತೆಗೆ ಆಧ್ಯಾತ್ಮಿಕ ಚಿಂತನೆ ಮತ್ತು ಜೀವನೋತ್ಸವವನ್ನು ತುಂಬುವ ಉದ್ದೇಶದಿಂದ ಶಾಲೆಯ ಆವರಣದಲ್ಲಿ ಭವ್ಯವಾದ ಶ್ರೀ ಮಹಾಗಣಪತಿ ದೇವಸ್ಥಾನವನ್ನು ನಿರ್ಮಿಸುತ್ತಿದ್ದಾರೆ.

ಸಮಾಜ ಸೇವೆ... ವಿದ್ಯಾರ್ಥಿ ವೇತನ... ಉಚಿತ ಶಿಕ್ಷಣ

ಸಂಸ್ಥಾಪಕರ ದಿನ, ಜ್ಞಾನಗೀತೋತ್ಸವ ಮತ್ತು ವಿವಿಧ ಸಂದರ್ಭಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
ಬೋರ್ಡ್ ಪರೀಕ್ಷೆಯ 6 ವಿಷಯಗಳಲ್ಲಿ ಯಾವುದಾದರೂ ಒಂದರಲ್ಲಿ 100/100 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಗೌರವಿಸಲಾಗುತ್ತಿದೆ. ಕಾರ್ಕಳ ತಾಲೂಕಿನಿಂದ 10 ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ.97 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸುವ ಮೂಲಕ ಶಾಲೆಯಲ್ಲಿ ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳು, ಸಂಸ್ಥೆಯು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು, ಕಾರ್ಕಳ ತಾಲೂಕಿನ ಹಳ್ಳಿಗಳ ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ಸಿಬ್ಬಂದಿ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ.

ಏಪ್ರಿಲ್ 10ರಿಂದ 14ರ ವರೆಗೆ ನಡೆಯಲಿರುವ ಶ್ರೀ ಮಹಾಗಣಪತಿ ದೇವರ ಪ್ರತಿಷ್ಠಾಪನೆ ಹಾಗೂ ಅಷ್ಟಬಂಧ ಬ್ರಹ್ಮಕಲಶೋತ್ಸವವು ಇದಕ್ಕೆ ಸಾಕ್ಷಿ ಆಗಲಿದೆ. ತಾಯಿ ಬಗ್ಗೆ ಇರಬೇಕಾದ ಪ್ರೀತಿ, ಅಂತಃಕರಣ, ಮಮತೆಯ ಕಲ್ಪನೆ ನಿಜವಾಗಿಯೂ ಇಲ್ಲಿ ಅದ್ಭುತವಾಗಿ ಅನಾವರಣಗೊಂಡಿದೆ.

ಸಮಾಜ ಕಲ್ಯಾಣ ಕಾರ್ಯಕ್ರಮಗಳು

ರಾಷ್ಟ್ರೀಯ ರಕ್ಷಣಾ ನಿಧಿಗೆ ಪ್ರತಿ ವರ್ಷ ದೇಣಿಗೆಯನ್ನು ನೀಡಲಾಗತ್ತಿದೆ. ಕಾರ್ಕಳದ ರೋಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರತಿಯೊಬ್ಬ ಡಯಾಲಿಸಿಸ್ ರೋಗಿಗೆ ಜ್ಞಾನಸುಧಾ ರಿಯಾಯಿತಿ ರೂ. 300 ನೀಡಲಾಗುತ್ತಿದೆ ಹಾಗೂ ಇಲ್ಲಿನ ಕಣ್ಣಿನ ವಿಭಾಗಕ್ಕೆ ರೂ 20 ಲಕ್ಷಗಳ ದೇಣಿಗೆ ನೀಡಲಾಗಿದೆ.

2023ರಲ್ಲಿ ಸಂಸ್ಥೆಯು ಅಜೆಕಾರ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆಂಬ್ಯುಲೆನ್ಸ್ ಅನ್ನು ತುರ್ತು ಚಿಕಿತ್ಸೆಗಾಗಿ ನೀಡಿದೆ.

ಸ್ಥಾಪಕರ ದಿನದ ಸಂದರ್ಭದಲ್ಲಿ, ಪ್ರತಿ ವರ್ಷ ಆಗಸ್ಟ್ 21ರಂದು 'ರಕ್ತದಾನ ಶಿಬಿರ'ವನ್ನು ಆಯೋಜಿಸಲಾಗುತ್ತದೆ.

ಪ್ರತಿ ವರ್ಷ ಅಕ್ಟೋಬರ್ 2ರಂದು ಗಾಂಧಿ ಜಯಂತಿಯಂದು ಸ್ವಚ್ಛತಾ ಅಭಿಯಾನವನ್ನು ಆಯೋಜಿಸಲಾಗುತ್ತದೆ. ಈ ದಿನದಂದು ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸರ್ಕಾರಿ ಆಸ್ಪತ್ರೆಗಳು, ಅನಾಥಾಶ್ರಮಗಳು ಮತ್ತು ವಿಶೇಷ ಚೇತನ ಮಕ್ಕಳ ಶಾಲೆಗಳಿಗೆ ಭೇಟಿ ನೀಡಿ ಹಣ್ಣಿನ ಬಟ್ಟಲುಗಳನ್ನು ವಿತರಿಸುತ್ತಾರೆ.

ಕಾರ್ಕಳ ರೋಟರಿ ಆಸ್ಪತ್ರೆಗೆ 50 ನಿರ್ಗತಿಕರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಾಗಿ ದೇಣಿಗೆ.

ಕೋವಿಡ್ –19 ಸಾಂಕ್ರಾಮಿಕ ಸಮಯದಲ್ಲಿ 150 ಜನರಿಗೆ ಕ್ವಾರಂಟೈನ್‌ನಲ್ಲಿ ವಸತಿ ಸೌಕರ್ಯವನ್ನು ಒದಗಿಸಲಾಗಿತ್ತು ಮತ್ತು ಸಾಂಕ್ರಾಮಿಕ ಸಮಯದಲ್ಲಿ ಕಾರ್ಕಳದಿಂದ ಉಡುಪಿಗೆ ಪ್ರಯಾಣಿಸಲು ವೈದ್ಯಕೀಯ ಸಿಬ್ಬಂದಿಗೆ ಉಚಿತ ಬಸ್ ಸೌಲಭ್ಯವನ್ನು ಒದಗಿಸಲಾಗಿತ್ತು..... ಹೀಗೆ ಹಲವು ಸಮಾಜ ಸೇವಾ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತಾ ಬಂದಿದೆ.

ಜ್ಞಾನಸುಧಾ ಬಗ್ಗೆ.....

ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ಕಾರ್ಕಳ ಗಣಿತನಗರದಲ್ಲಿರುವ ಜ್ಞಾನಸುಧಾ ಪಿಯು ಕಾಲೇಜನ್ನು 2011-12ನೇ ಶೈಕ್ಷಣಿಕ ವರ್ಷದಲ್ಲಿ ಸ್ಥಾಪಿಸಲಾಗಿದೆ. ಉಡುಪಿಯಲ್ಲಿ ಹಾಗೂ ಮಣಿಪಾಲದಲ್ಲಿ ಹಸಿರ ರಾಶಿಯ ನಡುವೆ ಶ್ವೇತವರ್ಣದಲ್ಲಿ ಕಂಗೊಳಿಸುತ್ತಿರುವ ಜ್ಞಾನಸುಧಾ ಸಂಸ್ಥೆಯು ಜ್ಞಾನ – ಸಂಶೋಧನೆ – ಮೌಲ್ಯ ಎಂಬ ತತ್ವದ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಶಿಕ್ಷಣವನ್ನು ಒದಗಿಸುತ್ತಿದೆ. ಅಜೆಕಾರ್ ಪದ್ಮ ಗೋಪಾಲ್ ಶಿಕ್ಷಣ ಟ್ರಸ್ಟ್, ಕಾರ್ಕಳ ತಾಲೂಕಿನ ಅಜೆಕಾರ್ ನಲ್ಲಿ ಎಂಬ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿಬೆಳೆದ ಡಾ. ಸುಧಾಕರ್ ಶೆಟ್ಟಿ (ಎಂ.ಎಸ್ಸಿ., ಪಿಎಚ್‌ಡಿ) ಅವರು ಸ್ಥಾಪಿಸಿದ ಸಾರ್ವಜನಿಕ ಶಿಕ್ಷಣ ಟ್ರಸ್ಟ್ ಇದಾಗಿದೆ.

ಡಾ. ಸುಧಾಕರ್ ಶೆಟ್ಟಿ ಅವರು ಸುರತ್ಕಲ್‌ನ ಎನ್ ಐಟಿಕೆಯಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ ಮತ್ತು ಅನೇಕ ವಿದ್ಯಾರ್ಥಿಗಳಿಗೆ ಎಂ.ಫಿಲ್ ಮತ್ತು ಸಂಶೋಧನೆಗೆ ಮಾರ್ಗದರ್ಶನ ನೀಡಿದ್ದಾರೆ. ಅಲ್ಲದೆ, ಅವರು ರಾಷ್ಟ್ರೀಯ/ ಅಂತಾರಾಷ್ಟ್ರೀಯ ರೆಫರಿಡ್ ಜರ್ನಲ್‌ಗಳಲ್ಲಿ ಅನೇಕ ಗಣಿತ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ ಮತ್ತು ಭಾರತ ಮತ್ತು ವಿದೇಶಗಳಲ್ಲಿನ ಅನೇಕ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ.

ಡಾ. ಅವರು ಕೆಸಿಇಟಿ, ಎಐಇಇಇ, ಐಐಟಿ-ಜೆಇಇಗಾಗಿ ಅನೇಕ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ ಮತ್ತು ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಭಾರತದಲ್ಲಿ ಮಾತ್ರವಲ್ಲದೆ ದೇಶದ ಹೊರಗೆ ಸಹ ಬಹುತೇಕ ಎಲ್ಲಾ ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹೀಗಾಗಿ ಅವರು ಯುವ ವಿದ್ಯಾರ್ಥಿ ಸಮುದಾಯಕ್ಕೆ ಆದರ್ಶ ಮಾರ್ಗದರ್ಶಕರಾಗಿದ್ದಾರೆ.

ಕಠಿಣ ಪರಿಶ್ರಮ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸುವ ಆಂತರಿಕ ಪ್ರೇರಣೆಯ ಈ ಯಶಸ್ಸು ಡಾ. ಶೆಟ್ಟಿ ಅವರನ್ನು 'ಕಾರ್ಕಳ ಜ್ಞಾನ ಸುಧಾ ಕಾಲೇಜ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಲು ಪ್ರೇರೇಪಿಸಿದೆ ಮತ್ತು ಆ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದೆ.ಇದು ಅವರ ವ್ಯಕ್ತಿತ್ವವನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿದೆ.

ಶಿಕ್ಷಕರು ಮತ್ತು ಪೋಷಕರನ್ನು ಅರ್ಥಮಾಡಿಕೊಳ್ಳುವ ಮತ್ತು ಗೌರವಿಸುವ ವಿದ್ಯಾರ್ಥಿಗಳು ಖಂಡಿತವಾಗಿಯೂ ತಮ್ಮ ಜೀವನದಲ್ಲಿ ಉನ್ನತ ಸ್ಥಾನಕ್ಕೆ ಬರುತ್ತಾರೆ.

ಜ್ಞಾನಸುಧಾದಲ್ಲಿ ತರಬೇತಿಯು ಪರೀಕ್ಷಾ ಉದ್ದೇಶಕ್ಕಾಗಿ ಮಾತ್ರ ಸಂಭವಿಸುವುದಿಲ್ಲ, ಇದು ವಿದ್ಯಾರ್ಥಿಗಳ ಜೀವನಕ್ಕಾಗಿ. ತಮ್ಮ ಪೋಷಕರು ಮತ್ತು ಶಿಕ್ಷಕರ ಬಗ್ಗೆ ಹೆಚ್ಚಿನ ಗೌರವವನ್ನು ಹೊಂದಿರುವ ಅದ್ಭುತ, ಪ್ರಾಮಾಣಿಕ ಮತ್ತು ಸ್ವಯಂ ಶಿಸ್ತಿನ ವಿದ್ಯಾರ್ಥಿಗಳನ್ನು ಹೊಂದಿದೆ. ಇದರ ಗುಣಮಟ್ಟದ ಶಿಕ್ಷಣವು ಹಿಂದಿನ ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷಗಳ ವಾರ್ಷಿಕ ಮತ್ತು ವಿವಿಧ ಪ್ರವೇಶ ಪರೀಕ್ಷೆಗಳ ವಿಷಯದಲ್ಲಿ ಅದ್ಭುತ ಫಲಿತಾಂಶಗಳಿಂದ ಸಾಬೀತಾಗಿದೆ.

ದ.ಕ. ಜಿಲ್ಲೆಯ ವಿವಿಧೆಡೆ 'ಗರಿಗಳ ಭಾನುವಾರ'

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಚರ್ಚ್‌ಗಳಲ್ಲಿ ಶ್ರದ್ಧಾ ಭಕ್ತಿಯಿಂದ ಗರಿಗಳ ಭಾನುವಾರ ಆಚರಿಸಲಾಯಿತು.

ಯೇಸು ಕ್ರಿಸ್ತರು ಶಿಲುಬೆಗೆ ಏರುವ ಒಂದು ವಾರದ ಮೊದಲು ಅಂದಿನ ಜೆರೋಸಲೆಂ ಪಟ್ಟಣವನ್ನು ಯೇಸುಕ್ರಿಸ್ತರು ಪ್ರವೇಶಿಸುವಾಗ ಯಹೂದಿ ಸಮುದಾಯದವರು ಆಲಿವ್ ಮರದ ಗರಿಗಳಿಂದದಾರಿಯನ್ನುಶೃಂಗರಿಸಿಕೊಂಡು ಅವರನ್ನು ಬರಮಾಡಿಕೊಳ್ಳಲಾಯಿತು ಎನ್ನುವ ನಂಬಿಕೆಯ ಮೇಲೆ ಪಾಮ್ ಸಂಡೇ ಆಚರಣೆ ಪ್ರತಿ ವರ್ಷ ನಡೆಯುತ್ತದೆ. ವಿಶೇಷವಾಗಿ ಕ್ರೈಸ್ತರು ಆಚರಿಸುವ ಕಪ್ಪು ತಿಂಗಳ ಕೊನೆ ವಾರದಲ್ಲಿ ಪವಿತ್ರವಾರದ ಆರಂಭದ ದಿನದಂದು ಕ್ರೈಸ್ತರು ಗರಿಗಳ ಭಾನುವಾರ ಎಂದು ಆಚರಿಸುತ್ತಾರೆ.

ನಗರದ ರೊಸಾರಿಯೋ ಚರ್ಚ್, ಮಿಲಾಗ್ರಿಸ್ ಚರ್ಚ್, ಲೇಡಿಹಿಲ್ ಚರ್ಚ್, ಅಶೋಕ ನಗರ ಚರ್ಚ್, ಬಿಜೈ ಚರ್ಚ್, ಬಿಕರ್ನಕಟ್ಟೆ ಬಾಲಯೇಸು ಮಂದಿರ, ಕೂಳೂರು ಚರ್ಚ್ ಸೇರಿದಂತೆ ಮಂಗಳೂರು ಧರ್ಮಪ್ರಾಂತ್ಯದ ಎಲ್ಲ ಚರ್ಚ್‌ಗಳಲ್ಲಿ ಗರಿಗಳ ಹಬ್ಬದ ಆಚರಿಸುವ ಮೂಲಕ ಕ್ರೈಸ್ತರು ಮುಂದೆ ಬರುವ ಪವಿತ್ರ



ಗುರುವಾರ, ಶುಭ ಶುಕ್ರವಾರ(ಗುಡ್ ಫ್ರೈಡೇ), ಪುನರುತ್ಥಾನದ ಶನಿವಾರ ಹಾಗೂ ಈಸ್ಟರ್ ಹಬ್ಬಕ್ಕೆ ಪೂರ್ವ ಸಿದ್ಧತೆಯನ್ನು ಮಾಡಿಕೊಂಡರು. ವಿಶೇಷವಾಗಿ ಧರ್ಮಗುರುಗಳು ಚರ್ಚ್‌ಗಳಲ್ಲಿ ಪವಿತ್ರ ಕೃತಜ್ಞತಾ ಪೂಜೆಯ ಮೊದಲು ಗರಿಗಳನ್ನು ಪವಿತ್ರ ನೀರಿನಿಂದ ಶುದ್ಧೀಕರಿಸಿದಬಳಿಕಗರಿಗಳಪೂಜೆಯನ್ನು ಮಾಡಿ ವಾಳೆಗಳ ಗುರಿಕಾರರ ಮೂಲಕ ಕಥೋಲಿಕ್ ಕುಟುಂಬಗಳಿಗೆ ಗರಿಗಳನ್ನು ಹಂಚಿದರು. ಈ ಗರಿಗಳನ್ನು ಪಡೆದು ಕ್ರೈಸ್ತ ಸಮುದಾಯದವರು ಶಿಲುಬೆ ಪ್ರತಿರೂಪ ರಚಿಸಿ ಮನೆಯಲ್ಲಿಟ್ಟುಕೊಳ್ಳುತ್ತಾರೆ.

'ಧರ್ಮಗುರುಗಳು ಬೈಬಲ್‌ನಲ್ಲಿರುವ ಯೇಸುವಿನ ಜೆರುಸಲೆಂ ಪ್ರವೇಶದ ಸನ್ನಿವೇಶವನ್ನು ಸ್ಮರಿಸುತ್ತಾರೆ ಹಾಗೂ ಸಂದೇಶ ನೀಡುತ್ತಾರೆ. ಯೇಸು ಕ್ರಿಸ್ತರಿಗೆ ಶಿಲುಬೆಯ ಶಿಕ್ಷೆ ಶಿಕ್ಷೆ ವಿಧಿಸುವಲ್ಲಿಂದ ಹಿಡಿದು ಅವರು ಶಿಲುಬೆಗೇರಿ ಅಲ್ಲಿ ಮರಣ ಹೊಂದಿ ಅವರ ದೇಹವನ್ನು ಸಮಾಧಿ ಮಾಡುವಲ್ಲಿ ವರೆಗಿನ ಕಥಾನಕವನ್ನು ಬೈಬಲ್‌ನಿಂದ ವಾಚಿಸಲಾಗುತ್ತದೆ. ಇದರ ಆಧಾರದಲ್ಲಿ ಅಂದಿನ ವಿಶೇಷ ಪ್ರವಚನ ನಡೆಯುತ್ತದೆ ಎಂದು ಮಂಗಳೂರಿನ ಲೇಡಿಹಿಲ್ ಚರ್ಚ್‌ನ ಪ್ರಧಾನ ಧರ್ಮಗುರು ಫಾ. ಬೆಂಜಮಿನ್ ಪಿಂಟೋ ಅವರು ಗರಿಗಳ ಭಾನುವಾರದ ಕುರಿತು ತಿಳಿಸಿದ್ದಾರೆ.

ಶಾರದಾ ವಿದ್ಯಾಲಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರದ ಸಮಾರೋಪ



ಮಂಗಳೂರು: ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮವು ವಿದ್ಯಾಲಯದ ಧ್ಯಾನಮಂದಿರ ಸಭಾಂಗಣದಲ್ಲಿ ನೆರವೇರಿತು.

ಸ್ಕೌಟ್ಸ್-ಗೈಡ್ಸ್‌ನ ಎ.ಎಲ್.ಟಿ. ಜಯವಂತಿ ಸೋನ್ಸ್, ಶಿಬಿರಾರ್ಥಿಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ಧ್ಯೇಯೋದ್ದೇಶಗಳ ಬಗ್ಗೆ ವಿವರಿಸಿ ಬದುಕಿನಲ್ಲಿ ಪ್ರೇರಣಾರ್ಥಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ತಿಳಿಸಿದರು.

ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ.ಪುರಾಣಿಕರು ಸಭಾಧ್ಯಕ್ಷತೆ ವಹಿಸಿದ್ದರು. ವಿದ್ಯಾ ಸಂಸ್ಥೆಗಳ ನಿರ್ದೇಶಕ ಹಾಗೂ ವಿಶ್ವಸ್ಥರಾದ ಸಮೀರ್ ಪುರಾಣಿಕ್, ಶಾರದಾ ವಿದ್ಯಾಲಯದ ಪ್ರಾಂಶುಪಾಲರುಗಳಾದ ಚಂದ್ರಿಕಾ ಭಂಡಾರಿ, ದಯಾನಂದ ಕಟೀಲ್, ಉಪ-ಪ್ರಾಂಶುಪಾಲೆ ಕೆ. ಲಕ್ಷ್ಮೀ ಪೈ ಉಪಸ್ಥಿತರಿದ್ದರು.

ವಿದ್ಯಾಲಯದ ಗೈಡ್ಸ್ ಕ್ಯಾಪ್ಟನ್‌ಗಳು ಮತ್ತು ಸ್ಕೌಟ್ ಮಾಸ್ಟರ್‌ಗಳು ಕಾರ್ಯಕ್ರಮ ಸಂಯೋಜಿಸಿದರು. ಸಂಗೀತ, ನೃತ್ಯ, ಕಿರುಪ್ರಹಸನ ಇತ್ಯಾದಿ ವೈವಿಧ್ಯಮಯ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-48) ಡ್ರಾ ಮಾರ್ಚ್ 29ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MU 422635 (PALAKKAD)
Consolation Prize Rs.5,000/-
MN 422635 MO 422635 MP 422635 MR 422635
MS 422635 MT 422635 MV 422635 MW 422635
MX 422635 MY 422635 MZ 422635
2nd Prize Rs.25,00,000/- [25 Lakhs]
MX 806042 (ERNAKULAM)
3rd Prize Rs.5,00,000/- [5 Lakhs]
MX 345079 (KANHANGAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0393 0584 0658 1511 2117 3897 3985 4181 6094 6101
7009 7565 8347 8369 8650 9287 9463 9841 9847
5th Prize Rs.2,000/-
1761 3168 4783 5074 5726 8009
6th Prize Rs.1,000/-
0107 0423 0741 1154 1245 1363 1437 1467 1593 1946
2138 2152 2284 3319 3422 3981 6419 6660 7573 7926
8665 9244 9356 9443 9845
7th Prize Rs.500/-
0061 0072 0307 0382 0462 0490 0642 1078 1137 1203
1312 1550 1592 1609 1810 1962 1977 2240 2285 2387
2419 2450 2453 2596 2611 2685 2809 2830 2833 2928
2938 2952 3437 3611 3671 3695 3758 3785 3948 4289
4430 4445 4524 4539 4673 4817 4847 5128 5169 5245
5452 5460 5781 6132 6170 6226 6371 6380 6385 6742
6765 7267 7848 7956 7978 8402 8784 8919 9285 9310
9342 9459 9613 9616 9642 9762
8th Prize Rs.200/-
0173 0279 0395 0707 0743 0811 1039 1063 1150 1793
1909 1910 1925 1990 2043 2181 2478 2515 2517 2594
2638 2729 3017 3075 3230 3469 3488 3707 3801 3905
3921 4002 4078 4215 4362 4379 4392 4403 4420 4504
4537 4566 4627 4661 4686 4731 4750 5084 5271 5524
5690 5733 6140 6193 6758 6900 7007 7084 7090 7154
7177 7184 7283 7294 7345 7433 7521 7549 7759 7872
7923 8115 8196 8214 8229 8242 8274 8366 8427 8436
8659 8899 8953 9003 9117 9121 9213 9366 9714 9742
9803 9863
9th Prize Rs.100/-
0012 0051 0093 0116 0131 0140 0209 0283 0376 0422
0480 0696 0945 1035 1062 1142 1143 1159 1163 1164
1252 1287 1304 1393 1479 1510 1584 1694 1702 1725
1788 1803 1821 1905 1916 2097 2245 2260 2297 2325
2393 2433 2435 2663 2712 2716 2737 2812 2821 3062
3115 3162 3364 3372 3374 3390 3431 3517 3549 3578
3596 3687 3866 3902 3910 4008 4131 4246 4266 4325
4360 4395 4457 4635 4646 4697 4747 4839 4841 4873
4968 5327 5330 5422 5493 5575 5674 5703 5937 6012
6028 6030 6177 6201 6248 6311 6470 6553 6585 6614
6647 6722 6807 6862 6935 7038 7100 7171 7222 7229
7251 7269 7364 7464 7474 7637 7717 7787 7895 7930
7955 7980 7997 8131 8152 8169 8344 8383 8543 8579
8632 8702 8704 8730 8808 8850 8877 8891 8921 8989
8990 9005 9193 9222 9227 9330 9446 9492 9743 9861

'ಡೆನ್ನಾನ ಡೆನ್ನನ 2026'ರ ಟೈಟಲ್ ಸಾಂಗ್ ಬಿಡುಗಡೆ

ಪೊಳಲಿ: ಯುವವಾಹಿನಿ ಕೇಂದ್ರ ಸಮಿತಿಯ ಆಶ್ರಯದಲ್ಲಿ ಹಾಗೂ ಬಂಟ್ವಾಳ ಘಟಕದ ಸಹಕಾರದಲ್ಲಿ ಏ.19 ರಂದು ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿರುವ ಯುವವಾಹಿನಿ ಅಂತರ್‌ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ ಡೆನ್ನನ 2026'ರ ಟೈಟಲ್ ಸಾಂಗ್‌ನ್ನು ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಬಿಡುಗಡೆಗೊಳಿಸಲಾಯಿತು.

ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಭುವನೇಶ್ ಪಚ್ಚಿನಡ್ಕ ಅವರು ಈ ಟೈಟಲ್ ಸಾಂಗ್ ಬಿಡುಗಡೆಗೊಳಿಸಿ ಶುಭಹಾರೈಸಿದರು.

ಅಧ್ಯಕ್ಷತೆಯನ್ನು ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು ವಹಿಸಿದ್ದರು.

ಈ ಸಂದರ್ಭದಲ್ಲಿ ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷರಾದ ಅಶೋಕ್ ಕುಮಾರ್ ಪಡ್ಪು, ಡೆನ್ನಾನ ಸಂಚಾಲಕ ಶ್ರೀನಿವಾಸ ಪೂಜಾರಿ ಮೆಲ್ಕಾರ್, ರಕ್ತೇಶ್ವರೀ ದೇವಿ ದೇವಸ್ಥಾನದ ಟ್ರಸ್ಟೀ



ವಿಶ್ವನಾಥ ಬಿ, ಬಂಟ್ವಾಳ ಉಪ ತಹಶಿಲ್ದಾರರಾದ ನವೀನ್ ಕುಮಾರ್, ವಕೀಲರಾದ ಚಿದಾನಂದ ಕಡೇಶಿವಾಲಯ, ತುಂಬೆ ಬಿಲ್ಲವ ಸಂಘದ ಅಧ್ಯಕ್ಷರಾದ ಗಣೇಶ್ ಸುವರ್ಣ ತುಂಬೆ, ಯುವವಾಹಿನಿ ಕೇಂದ್ರ ಸಮಿತಿಯ ಉಪಾಧ್ಯಕ್ಷರಾದ ಸುರೇಶ್ ಪೂಜಾರಿ, ಪ್ರಧಾನ ಕಾರ್ಯದರ್ಶಿ ರೇಖಾ ಗೋಪಾಲ್, ಜತೆ ಕಾರ್ಯದರ್ಶಿ ಹರೀಶ್ ಕೋಟ್ಯಾನ್ ಕುದನೆ, ಸಾಂಸ್ಕೃತಿಕ ನಿರ್ದೇಶಕರಾದ ದಿನೇಶ್ ಸುವರ್ಣ ರಾಯಿ, ವಿವಿಧ ಸಮಿತಿ ಪ್ರಮುಖರಾದ ಶಿವಪ್ರಸಾದ್ ನೂಚಿಲ, ಭವಾನಿ ಕೆ, ನಾಗೇಶ್ ಪೂಜಾರಿ ಮಾಣಿ, ನಿರಂಜನ್, ನವೀನ್ ಕಾರಾಜೆ, ಮಧುಸೂದನ್ ಮದ್ವ, ಲೋಹಿತ್ ಕನಪಾದೆ, ನಿಕೇಶ್ ಕೋಟ್ಯಾನ್, ಶೈಲೇಶ್ ಕುಚ್ಚಿಗುಡ್ಡೆ, ಸತೀಶ್ ಬಾಯಿಲ, ಉದಯ ಮೇನಾಡು, ಮಲ್ಲಿಕಾ ಪಚ್ಚಿನಡ್ಕ, ಸತೀಶ್ ಪೂಜಾರಿ ಕೊಪ್ಪರಿಗೆ, ಬಿ. ಶ್ರೀಧರ್ ಅಮೀನ್ ಮೊದಲಾದವರು ಉಪಸ್ಥಿತರಿದ್ದರು.

ಪಾಲಿಬೆಟ್ಟ ಬಳಿ ಹುಲಿಯ ದರ್ಶನ

ಮಡಿಕೇರಿ: ಕೊಡಗು ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಹುಲಿಗಳ ಸಂಚಾರ ದಿನೇದಿನೇ ಹೆಚ್ಚುತ್ತಿದ್ದು, ಶನಿವಾರ ಪಾಲಿಬೆಟ್ಟ ಸಮೀಪದ ಕೈಮಕಾಡು ಭಾಗದ ಎಸ್ಟೇಟ್ ಪ್ರದೇಶದಲ್ಲಿ ಹುಲಿಯೊಂದು ಗೋಚರಿಸಿದೆ. ಈ ಘಟನೆ ತೋಟದ ಕಾರ್ಮಿಕರಲ್ಲಿ ಭಯ ಉಂಟು ಮಾಡಿದೆ.

ಶನಿವಾರ ಬೆಳಗ್ಗೆ ಸೌದೆಗೆಂದು ತೋಟದೊಳಗೆ ತೆರಳಿದ್ದ ಕೆಲ ಕಾರ್ಮಿಕರು ಏಕಾಏಕಿ ಹುಲಿಯ ಘರ್ಜನೆ ಕೇಳಿ ಭಯದಿಂದ ಅಲ್ಲಿಂದ ಪರಾರಿಯಾಗಿದ್ದಾರೆ. ಈ ಘಟನೆ ಬಳಿಕ ಕಾರ್ಮಿಕರು ಕೆಲಸಕ್ಕೆ ತೆರಳಲು ಹಿಂಜರಿಯುತ್ತಿದ್ದು, ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಘಟನೆಯ ಮಾಹಿತಿ ತಿಳಿದ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶೋಧ ಕಾರ್ಯ ಆರಂಭಿಸಿದ್ದಾರೆ.

ಹುಲಿಯ ಚಲನವಲನ ಪತ್ತೆಹಚ್ಚಲು ಸಿಬ್ಬಂದಿಗಳ ತಂಡಗಳು ಎಸ್ಟೇಟ್ ಪ್ರದೇಶದಲ್ಲಿ ಪರಿಶೀಲನೆ ನಡೆಸುತ್ತಿದ್ದು, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ವೇಳೆ, ತೋಟದ ಕಾರ್ಮಿಕರು ಮತ್ತು ಗ್ರಾಮಸ್ಥರು ಭಯಭೀತರಾಗಿದ್ದು, ಮಕ್ಕಳನ್ನು ಹೊರಗೆ ಬಿಡದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದಾರೆ. ಅರಣ್ಯ ಇಲಾಖೆ ಕೂಡಾ ಜನರಿಗೆ ಎಚ್ಚರಿಕೆ ನೀಡಿದ್ದು, ಒಬ್ಬಂಟಿಯಾಗಿ ತೋಟ ಪ್ರದೇಶಗಳಿಗೆ ತೆರಳದಂತೆ ಸೂಚನೆ ನೀಡಿದೆ.

ಇತ್ತೀಚೆಗೆ ಮಡಿಕೇರಿ ನಗರದ ಹೊರವಲಯದ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿಯ ಓಡಾಟ ಕಂಡು ಬಂದಿತ್ತು. ಕಾಡಾನೆ ಹಾಗೂ ಡ್ರೋಣ್ ನೆರವಿನಿಂದ ಹುಲಿಗಾಗಿ ಶೋಧ ನಡೆಸಿದರೂ ಪತ್ತೆಯಾಗಿರಲಿಲ್ಲ. ಅದೇ ಸಂದರ್ಭ ಪೊನ್ನಂಪೇಟೆ ಸಮೀಪದ ಕಿರುಗೂರು ಗ್ರಾಮದಲ್ಲಿ ಹುಲಿಯೊಂದು ಕರುವನ್ನು ಬಲಿ ತೆಗೆದುಕೊಂಡಿತ್ತು.

ಭಂಡಾರ್ಕಾರ್ಸ್ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಡಾ. ಎಚ್. ಎಸ್. ಶೆಟ್ಟಿ ಅಭಿಮತ

ಜೀವನದ ಯಶಸ್ಸಿನಲ್ಲಿ ನೈತಿಕ ಮೌಲ್ಯಗಳ ಪಾತ್ರ ಬಹು ದೊಡ್ಡದು

ಕುಂದಾಪುರ: ನೈತಿಕತೆ, ನಿರಂತರ ಕಲಿಯುವಿಕೆ ಮತ್ತು ಜೀವನ ಮೌಲ್ಯಗಳು ಸುಸಂಬದ್ಧ ಮತ್ತು ಸಂತೋಷದ ಬದುಕಿಗೆ ಆಧಾರಸ್ತಂಭ ಎಂದು ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಇದರ ಅಧ್ಯಕ್ಷ ಡಾ. ಎಚ್. ಎಸ್. ಶೆಟ್ಟಿ ಹೇಳಿದರು.

ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದ ಯಶಸ್ಸಿನಲ್ಲಿ ನೈತಿಕ ಮೌಲ್ಯಗಳ ಪಾತ್ರ ಬಹುದೊಡ್ಡದು. ಪ್ರತಿ ಸಂದೇಶಗಳು, ಅನುಭಗಳು, ಜ್ಞಾನ ಇವೆಲ್ಲವೂ ಮನುಷ್ಯನ ವ್ಯಕ್ತಿತ್ವವನ್ನು ಬದಲಾಯಿಸುವ ಅತ್ಯುತ್ತಮ ಸಾಧನಗಳು. ಇದರಿಂದ ಕೌಟುಂಬಿಕ, ಸಾಮಾಜಿಕ ಜೀವನ ಚೆನ್ನಾಗಿರುತ್ತದೆ. ಅಲ್ಲದೇ ರಾಷ್ಟ್ರದ ಬೆಳವಣಿಗೆಯಲ್ಲಿ ನಮ್ಮ ಕೊಡುಗೆಯನ್ನು ಅತ್ಯುತ್ತಮ ರೀತಿಯಲ್ಲಿ ನೀಡಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತದ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳು ಯುವಜನತೆಯ ಓದುವಿಕೆ, ಜ್ಞಾನ ಮತ್ತು ಅನುಭವಗಳ



ಆಳವನ್ನು ಕಸಿದುಕೊಳ್ಳುವ ಭೀತಿ ಎದುರಾಗಿದೆ ಎಂದು ವಿಷಾದಿಸಿದರು. ಆದರೂ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ದೇಶ ಇನ್ನೂ ಅಭಿವೃದ್ಧಿಯಾಗಬೇಕಿದೆ. ಅಂದರೆ ಸರ್ವತೋಮುಖ ಬೆಳವಣಿಗೆಗೆ ಯುವಜನರು ಕೊಡುಗೆ ಇನ್ನೂ ಬೇಕಿದೆ ಎಂದು ಹೇಳಿದರು.

ಭಂಡಾರ್ಕಾರ್ಸ್ ಕಾಲೇಜಿನ ವಿಶ್ವಸ್ಥ ಮಂಡಳಿಯ ಉಪಾಧ್ಯಕ್ಷ ಕೆ.ಶಾಂತಾರಾಮ ಪ್ರಭು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ಣಾಟಕ ಬ್ಯಾಂಕ್ ಮಂಗಳೂರು ಇದರ ಮುಖ್ಯ ಕಚೇರಿಯ ಮುಖ್ಯ ವ್ಯವಹಾರಿಕ ಅಧಿಕಾರಿ ಚಂದ್ರಶೇಖರ್ ಶುಭಾಶಂಸನೆಗೈದರು. ಭಂಡಾರ್ಕಾರ್ಸ್ ಕಾಲೇಜಿನ ವಿಶ್ವಸ್ಥ ಮಂಡಳಿಯ ಸದಸ್ಯ ಕೆ.ದೇವದಾಸ್ ಕಾಮತ್, ರಾಜೇಂದ್ರ ತೋಳಾರ್ ಉಪಸ್ಥಿತರಿದ್ದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಮೀನಾಕ್ಷಿ ಎನ್. ಎಸ್. ಮತ್ತು ಡಾಕ್ಟರೇಟ್ ಪದವಿ ಪಡೆದ ಡಾ.ಶರಣ್ ಎಸ್.ಜೆ, ರ್‍ಯಾಂಕ್ ವಿದ್ಯಾರ್ಥಿಗಳಾದ ಶ್ರಾವ್ಯ ಎಸ್. ಅಡಿಗ (6ನೇ ರ್‍ಯಾಂಕ್, ಬಿ.ಬಿ.ಎ), ಶ್ರಾವ್ಯ ಶೆಣೈ (ಎಂಟನೇ ರ್‍ಯಾಂಕ್, ಬಿ.ಸಿ.ಎ), ರಕ್ಷಿತಾ (ಒಂಬತ್ತನೇ ರ್‍ಯಾಂಕ್, ಬಿ.ಸಿ.ಎ) ಮತ್ತು ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ಕಾಲೇಜಿನ ಆಂತರಿಕ ಗುಣಮಟ್ಟ ಮತ್ತು ಭರವಸೆ ಕೋಶದ ಸಂಯೋಜಕ ಪ್ರೊ. ಸತ್ಯನಾರಾಯಣ ಸ್ವಾಗತಿಸಿದರು. ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಾರ್ಷಿಕ ವರದಿ ವಾಚಿಸಿದರು. ಉಪನ್ಯಾಸಕಿಯರಾದ ಶೈಲಾ ರಾಮಚಂದ್ರ ಮತ್ತು ಸ್ನೇಹ ಎಸ್. ಅತಿಥಿಗಳನ್ನು ಪರಿಚಯಿಸಿ, ಹರ್ಷಿತಾ, ವಿದ್ಯಾರಾಣಿ, ದಿವ್ಯಾ ವಿದ್ಯಾರ್ಥಿವೇತನ ವಿಜೇತ ಮತ್ತು ಸಾಧಕ ವಿದ್ಯಾರ್ಥಿಗಳ ಪಟ್ಟಿ ವಾಚಿಸಿದರು. ವಿಜಯಲಕ್ಷ್ಮೀ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ. ಶ್ರೀನಿಧಿ ವಂದಿಸಿದರು.

ಕಿರುಸುದ್ದಿ

ಮನ್ ಕೀ ಬಾತ್ ವೀಕ್ಷಿಸಿದ ಶಾಸಕ ಕೋಟ್ಯಾನ್



ಮೂಡುಬಿದಿರೆ: ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮವನ್ನು ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಸ್ವಗೃಹದಲ್ಲಿ ವೀಕ್ಷಿಸಿದರು. 2014 ಅಕ್ಟೋಬರ್ ನಿಂದ ಈ ಕಾರ್ಯಕ್ರಮ ತನ್ನ ಪ್ರಸಾರ ಆರಂಭಿಸಿದ್ದು ಪ್ರತಿ ತಿಂಗಳ ಕೊನೆಯ ಭಾನುವಾರ ಮನ್ ಕೀ ಬಾತ್ ಕಾರ್ಯಕ್ರಮ ಪ್ರಸಾರವಾಗುತ್ತಿದೆ.

ದೂರದರ್ಶನ ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಮುಖ್ಯವಾಗಿ ಹಿಂದಿ (ಇತರ ಭಾಷೆಗಳಲ್ಲೂ ಅನುವಾದ ಲಭ್ಯ) ಪ್ರಸಾರವಾಗುವಂತಹ ಕಾರ್ಯಕ್ರಮ ಇದಾಗಿದ್ದು, ಆರಂಭದಿಂದಲೂ ಇದನ್ನು ಕೇಳುವುದಾಗಿ ಶಾಸಕ ಕೋಟ್ಯಾನ್ ಹೇಳಿದ್ದಾರೆ. ದೇಶದ ಕಟ್ಟಕಡೆಯ ವ್ಯಕ್ತಿಯನ್ನು ತಲುಪುವ ನಿಟ್ಟಿನಲ್ಲಿ ಪ್ರಧಾನಿ ಮೋದಿಯವರು ಮನ್ ಕೀ ಬಾತ್ ನಡೆಸುತ್ತಿದ್ದಾರೆ. ಇಂತಹ ಅದ್ಭುತ ಚಿಂತನೆ ಬೇರೆ ಯಾರಿಗೂ ಬರಲು ಸಾಧ್ಯವೇ ಇಲ್ಲ. ಇದರಿಂದಾಗಿ ದೇಶದ ಪ್ರಗತಿಯ ಜೊತೆಗೆ, ಹಲವಾರು ವಿಚಾರಗಳು ಸುಲಭವಾಗಿ ಜನತೆಗೆ ತಲುಪಿದಂತಾಗುತ್ತದೆ ಎಂದು ಕೋಟ್ಯಾನ್ ವ್ಯಾಖ್ಯಾನಿಸಿದ್ದಾರೆ.

ಕುಂದಾಪುರ: ಗರಿಗಳ ಭಾನುವಾರ ಆಚರಣೆ

ಕುಂದಾಪುರ: ಜಿಲ್ಲೆಯ ಹಿರಿಯ ಕುಂದಾಪುರದ ರೋಜರಿ ಮಾತಾ ಇಗರ್ಜಿಯಲ್ಲಿ ಗರಿಗಳ ಭಾನುವಾರ ಆಚರಣೆ ಭಕ್ತಿಪೂರ್ವಕವಾಗಿ ಭಾನುವಾರ ನಡೆಯಿತು. ಚರ್ಚಿನ ಧರ್ಮಗುರು ಪೌಲ್ ರೇಗೊ ಅವರು ಚರ್ಚಿನ ಎದುರುಗಡೆ ಗರಿಗಳ ಸಂಸ್ಕಾರದ ಪ್ರಾರ್ಥನ ವಿಧಿಯನ್ನು ನೇರವೇರಿಸಿದರು, ಗರಿಗಳನ್ನು ಆಶೀರ್ವದಿಸಿ ಪ್ರಾರ್ಥನಾ ವಿಧಿಯನ್ನು ನಡೆಸಿಕೊಟ್ಟರು. ನಂತರ ಗರಿಗಳ ಮೆರವಣಿಗೆಯ ಮೂಲಕ ಚರ್ಚಿನೊಳಗೆ ಪ್ರವೇಶಿಸಿ ಪವಿತ್ರ ಬಲಿದಾನವನ್ನು ಭಕ್ತರೊಂದಿಗೆ ಅರ್ಪಿಸಲಾಯಿತು. ತ್ಯಾಗದ ಹೊರತು ಮುಕ್ತಿಯಿಲ್ಲ, ಶಿಲುಭೆಯ ಹೊರತು ಮುಕುಟವಿಲ್ಲ ಎಂದು ಸಂದೇಶ ನೀಡಿ, ಯೇಸು ಕ್ರಿಸ್ತರು ತನ್ನನ್ನು ತಾನೆ ಬಲಿದಾನಕ್ಕೆ ಸಿದ್ಧವಾಗಿ ಜೆರುಸಲೇಮ್ ನಗರಕ್ಕೆ ನಗರಕ್ಕೆ ಪ್ರವೇಶ ಮಾಡುವಾಗ ಅವರ ಹಿಂಬಾಲಕರು, ಒಲೀವ್ ಗಿಡದ ಗರಿಗಳನ್ನು ತೆಗೆದುಕೊಂಡು ಜಯಕಾರ ಹಾಕಿ ಸ್ವಾಗತಿಸಿದ್ದರು, ಹಾಗೇ ನಾವು ಗರಿಗಳ ಭಾನುವಾರದ ಮೂಲಕ ಪವಿತ್ರ ವಾರ ಆರಂಭಿಸೋಣ ಎಂದು ಧರ್ಮಗುರು ಪೌಲ್ ರೇಗೊ ಕರೆ ನೀಡಿದರು.

ಡಾ.ಕಾರಂತರ ಶಿಷ್ಯೆ ಮಾಲಿನಿ ಮಲ್ಯರ ತೃತೀಯ ವರ್ಷದ ಸಂಸ್ಮರಣೆ

ಕೋಟ: ಡಾ ಕೋಟ ಶಿವರಾಮ ಕಾರಂತರ ಶಿಷ್ಯೆ, ದಿ.ಮಾಲಿನಿ ಮಲ್ಯರ ಸಂಸ್ಮರಣಾ ಕಾರ್ಯಕ್ರಮ ಡಾ ಶಿವರಾಮ ಕಾರಂತ ಸ್ಟಡಿ ಮತ್ತು ಸಂಶೋಧನಾ ಸೆಂಟರ್ '' ಮಾನಸ'' ಸಾಲಿಗ್ರಾಮದಲ್ಲಿ ಗಣ್ಯರ ಸಮ್ಮುಖದಲ್ಲಿ ಮಾ.28ರಂದು ಜರಗಿತು. ಮುಖ್ಯ ಅತಿಥಿಯಾಗಿ ಗೆಳೆಯರ ಬಳಗದ ಕೆ. ತಾರಾನಾಥ ಹೊಳ್ಳ, ಪುಷ್ಪನಮನಗೈದು,ಡಾ ಕಾರಂತರ ನೆನಪು ಕಾಡಿನ ಹಸಿರು ಇರುವವರೆಗೂ ಸಮುದ್ರದ ಶಬ್ದ ನಿಲ್ಲುವವರೆಗೂ, ಪಣ ತೊಟ್ಟು ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸಿ, ಸರ್ವರ ಪ್ರಶಂಸೆಗೆ ಪಾತ್ರರಾದ ಧೀಮಂತ ಮಹಿಳೆ ಮಾಲಿನಿ ಮಲ್ಯರಾಗಿದ್ದಾರೆ ಎಂದರು. ಸಭೆಯಲ್ಲಿ ಗಣ್ಯರು ಮಲ್ಯರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಸಂಸ್ಥೆಯ ಅಧ್ಯಕ್ಷ ಬಿ.ಎಂ ಗುರುರಾಜ ರಾವ್ , ಕಾರ್ಯದರ್ಶಿ ನಾರಾಯಣ ಆಚಾರ್ಯ ಟ್ರಸ್ಟಿನ ವಿಶ್ವಸ್ಥರಾದ ನಾರಾಯಣ ಶೆಣೈ, ಸಂದೀಪ್ ಶೆಟ್ಟಿ,ಕೆ. ಪಂಜು ಪೂಜಾರಿ, ಉದ್ಯಮಿ ಮಾಧವ ಪೈ, ಪ್ರಸನ್ನ ಉರಾಳ ಹಾಗೂ ಸಂಗೀತಾ , ರಂಜನಿ ಉಪಸ್ಥಿತರಿದ್ದರು.

ಪಾಂಡೇಶ್ವರ ಸ್ನೇಹ ಸಂಜೀವಿನಿಯಿಂದ ಮಹಿಳಾದಿನಾಚರಣೆ

ಕೋಟ: ಪಾಂಡೇಶ್ವರ ಗ್ರಾಮಪಂಚಾಯತ್‌ನಲ್ಲಿ ಪಂಚಾಯತ್ ಸ್ನೇಹ ಸಂಜೀವಿನಿ ಒಕ್ಕೂಟ ,ಅರಿವು ಕೇಂದ್ರ ಡಿಜಿಟಲ್ ಗ್ರಂಥಾಲಯ ಪಾಂಡೇಶ್ವರ ಇವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮ ಇತ್ತೀಚಿಗೆ ಆಯೋಜಿಸಿತು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಯಾಗಿ ಸಹನಾ ಹೆಬ್ಬಾರ್ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಸೀತಾ ಸಂಜೀವಿನಿ ತಾಲೂಕು ಒಕ್ಕೂಟದ ಅಧ್ಯಕ್ಷೆ ಕಲಾವತಿ ಅಶೋಕ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಂದನಾ, ಕಾರ್ಯದರ್ಶಿ ವಿಜಯ, ಒಕ್ಕೂಟದ ಅಧ್ಯಕ್ಷೆ ಸುಜಾತಾ ವೆಂಕಟೇಶ್, ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ ನಡೆಸಿ ಬಹುಮಾನ ನೀಡಲಾಯಿತು. ಗ್ರಂಥಾಲಯ ಮೇಲ್ವಿಚಾರಕಿ ಜ್ಯೋತಿ ಕೃಷ್ಣ ಸ್ವಾಗತಿಸಿ, ಕೃಷಿ ಸಖಿ ರಮ್ಯಾ ರಮೇಶ್ ವಂದಿಸಿದರು. ಎಂ.ಬಿ.ಕೆ ಉಷಾ ಗಣೇಶ್ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.



ಹೊಸದಿಲ್ಲಿಯಲ್ಲಿ ನಡೆದ ಅಖಿಲ ಭಾರತ ನಾಗರಿಕ ಸೇವೆಗಳ ನೌಕರರ ರಾಷ್ಟ್ರ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯ ಶಾಸ್ತ್ರೀಯ ನೃತ್ಯ ವಿಭಾಗದಲ್ಲಿ ಸೋಮವಾರಪೇಟೆ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಮಿಲನಾ ಕೆ. ಭರತ್ ಅವರು ಬೆಳ್ಳಿ ಪದಕ ಪಡೆದಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಇವರಿಗೆ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ನಿರ್ದೇಶಕಿ ನವಪ್ರೀತ್ ಕೌರ್ ಬಹುಮಾನ ವಿತರಿಸಿದರು. ವೀರಾಜಪೇಟೆಯ ಗುರು ವಿದ್ವಾನ್ ರಾಜೇಶ್ ಆಚಾರ್ಯ ಅವರ ಮಾರ್ಗದರ್ಶನದಲ್ಲಿ ಮಿಲನಾ ಅವರು ನೃತ್ಯ ಪ್ರದರ್ಶನ ನೀಡಿದ್ದರು.

ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ-ಅಭಿವೃದ್ಧಿ ಕಾರ್ಯ ಕುಂಠಿತವಾಗಲ್ಲ: ಸಚಿವ ಸುರೇಶ

ಬೆಳ್ತಂಗಡಿ: ಮಹಾನಗರ ಪಾಲಿಕೆಗಳಲ್ಲಿನ ವಾರ್ಡುಗಳಿಗೆ ಸರ್ಕಾರದ ಆದೇಶದಂತೆ ನಿಗದಿಪಡಿಸಿರುವ ಮೀಸಲಾತಿ ಮಾರ್ಗಸೂಚಿಯನ್ನು ಅನುಸರಿಸುತ್ತಿದ್ದು, ಪ್ರಸ್ತುತ ಮಂಗಳೂರು ಮಹಾನಗರ ಪಾಲಿಕೆಯಲ್ಲಿನ ಚುನಾವಣೆಗಳಿಗಾಗಿ ಸರ್ಕಾರದಿಂದ ವಾರ್ಡುವಾರು ಮೀಸಲಾತಿಯನ್ನು ನಿಗದಿಪಡಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ತಿಳಿಸಿದ್ದಾರೆ..

ವಿಧಾನ ಪರಿಷತ್ತಿನಲ್ಲಿ ಸದಸ್ಯ ಪ್ರತಾಪಸಿಂಹ ನಾಯಕ್ ಉಜಿರೆ ಅವರು ಮಂಗಳೂರು ಮಹಾನಗರ ಪಾಲಿಕೆಯ ಐದು ವರ್ಷದ ಈಗಾಗಲೇ ಮುಕ್ತಾಯಗೊಂಡು, ಸಾಕಷ್ಟು ಸಮಯ ಕಳೆದಿದ್ದರೂ ಚುನಾವಣೆ ನಡೆಯದಿರುವುದರಿಂದ, ಪ್ರತೀ ವರ್ಷ ಕೇಂದ್ರ ಸರ್ಕಾರದಿಂದ ಬರುತ್ತಿದ್ದ ಕೋಟ್ಯಂತರ ರೂ. ಅನುದಾನವನ್ನು ಕಳೆದುಕೊಳ್ಳುವುದರ ಜೊತೆಗೆ ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆಯಾಗುತ್ತಿರುವುದನ್ನು ಚುಕ್ಕೆ ಪ್ರಶ್ನೆಯ ಮೂಲಕ ಪ್ರಶ್ನಿಸಿದ್ದರು.

ಉತ್ತರಿಸಿದ ಸಚಿವರು ಅವಧಿ ಮುಕ್ತಾಯಗೊಂಡಿರುವ ಮಹಾನಗರ ಪಾಲಿಕೆಗಳಲ್ಲಿ ಮುಂದಿನ ಚುನಾವಣೆ ಕ್ರಮಗಳಿಗೆ ಅನುಕೂಲವಾಗುವಂತೆ ಮೀಸಲಾತಿಯನ್ವಯ ಚುನಾವಣೆಗಳನ್ನು ನಿಗದಿತ ನಡೆಸುವುದಕ್ಕಾಗಿ ಹೊಸದಾಗಿ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬರುವವರೆಗೂ ಅನುದಾನದ ಸಮಸ್ಯೆ ಉಂಟಾಗದಂತೆ ದಿನನಿತ್ಯದ ಕಾರ್ಯನಿರ್ವಹಣೆ ಮಾಡಲು ಹಾಗೂ ಆಡಳಿತ ಹಿತದೃಷ್ಟಿಯಿಂದ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಮತ್ತು ಈ ಮೂಲಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ-ಅಭಿವೃದ್ಧಿ ಕಾರ್ಯಗಳು ಕುಂಠಿತವಾಗದಂತೆ ಕ್ರಮವಹಿಸಲಾಗಿದೆ ಎಂದರು.

ಮಂಗಳೂರು ಪಾಲಿಕೆಗೆ ಜಿಲ್ಲಾಧಿಕಾರಿಯವರನ್ನು ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಇಲ್ಲಿನ ವಾರ್ಡುಗಳಿಗೆ ಸರ್ಕಾರದ ಆದೇಶದಂತೆ ನಿಗದಿಪಡಿಸಿರುವ ಮೀಸಲಾತಿ ಮಾರ್ಗಸೂಚಿಯನ್ನು ಅನುಸರಿಸುತ್ತಿದ್ದು, ಪ್ರಸ್ತುತ ಪಾಲಿಕೆ ಚುನಾವಣೆಗಾಗಿ ಸರ್ಕಾರದಿಂದ ವಾರ್ಡುವಾರು ಮೀಸಲಾತಿಯನ್ನು ನಿಗದಿಪಡಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಸಚಿವರು ತಿಳಿಸಿದರು.

ಫಲನೀಡಿತು ಹೊಸದಿಗಂತದ 'ಅಶಕ್ತ ಕುಟುಂಬಕ್ಕೆ ಬೇಕಿದೆ ಆಧಾರ' ವರದಿ

130 ದಿನದಲ್ಲಿ ಕೈ ಸೇರಿತು ದಾಖಲೆ

ಸುಳ್ಯ: ಸುಳ್ಯ ತಾಲೂಕು ಕಲ್ಮಡ್ಕ ಗ್ರಾಮದ ಕಾಚಿಲ ಎಂಬಲ್ಲಿನ 'ಅಶಕ್ತ ಕುಟುಂಬಕ್ಕೆ ಬೇಕಿದೆ ಆಧಾರ' ಎಂಬ ತಲೆ ಬರಹದಲ್ಲಿ ವಿಶೇಷ ವರದಿ ಹೊಸದಿಗಂತ ಪತ್ರಿಕೆಯಲ್ಲಿ ಪ್ರಕಟಗೊಂಡ ಬಳಿಕ ಕುಟುಂಬಕ್ಕೆ ಕರ್ನಾಟಕಉಚ್ಚನ್ಯಾಯಾಲಯಆದೇಶ ಹಿನ್ನಲೆಯಲ್ಲಿ ಸುಳ್ಯ ನ್ಯಾಯಾಲಯದ ಕಾನೂನು ಸೇವಾ ಪ್ರಾಧಿಕಾರ ಅಧ್ಯಕ್ಷರ ಮೇಲುಸ್ತುವಾರಿಯಲ್ಲಿ 130 ದಿನಗಳಲ್ಲಿ ಸಂಪೂರ್ಣ ದಾಖಲೆಗಳು ಕೈ ಸೇರಿವೆ.

ಕಲ್ಮಡ್ಕ ಗ್ರಾಮದ ಕಾಚಿಲದ ಅಶಕ್ತ ರುಕ್ಮಿಣಿ ಮತ್ತು ಕುಟುಂಬಕ್ಕೆ ಆಧಾರ್, ಪಡಿತರ ಚೀಟಿ, ಹಾಗೂ ಮತದಾರ ಗುರುತಿನ ಚೀಟಿ ಲಭ್ಯವಿರಲಿಲ್ಲ. ಜತೆಗೆ ಅನಾರೋಗ್ಯದಲ್ಲಿ ಕಂಗೆಟ್ಟಿದ್ದ ಈ ಕುಟುಂಬದ ಮನಕಲಕುವ ವರದಿಯನ್ನು ಹೊಸದಿಗಂತ ನ.17 ರಂದು ವಿಸ್ತ್ರತವಾಗಿ ಪ್ರಕಟಿಸಿ ಅಶಕ್ತ ಕುಟುಂಬದ ಬಗ್ಗೆ ಬೆಳಕುವ ಚೆಲ್ಲುವ ಪ್ರಯತ್ನ ನಡೆಸಲಾಗಿತ್ತು.

ಹೈಕೋರ್ಟ್ ಸೂಚನೆ

ಕರ್ನಾಟಕ ಉಚ್ಚನ್ಯಾಯಾಲಯ ನೇರವಾಗಿಪ್ರಕರಣವನ್ನುಕೈಗೆತ್ತಿಕೊಂಡು ಸುಳ್ಯ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಕರಣವನ್ನು ಪರಿಶೀಲನೆ ಮತ್ತು ಸೌಲಭ್ಯ ಕಲ್ಪಿಸಿಕೊಡಲು ಸೂಚನೆ ನೀಡಿದ ಹಿನ್ನಲೆಯಲ್ಲಿ ಅದೇ ದಿನ ಸಂಜೆಯಾಗುತ್ತಲೆ ಸುಳ್ಯ ನ್ಯಾಯಾಲಯದ ನ್ಯಾಯಾಧೀಶರು ಪ್ಯಾನಲ್ ವಕೀಲರು ಮತ್ತು ಸಿಬ್ಬಂದಿ ಜೊತೆಗೆ ತೆರಳಿ ಸ್ಥಳ ಪರಿಶೀಲನೆ ನಡೆಸಿ ತುರ್ತು ಸ್ಪಂದಿಸಲು ಆದೇಶ ಹೊರಡಿಸಿದ್ದರು. ಆ ಬಳಿಕ ಓರ್ವ ಪ್ರಜೆಗೆ ತಮ್ಮ ಇರುವಿಕೆಯ ಗುರುತಿನ ಚೀಟಿಯಾದ ಆಧಾರ್ ಕಾರ್ಡ್, ಮತದಾರ ಗುರುತಿನ ಚೀಟಿ 130 ದಿನಗಳಲ್ಲಿ ಲಭಿಸಿದೆ. ಪಡಿತರ ಸೌಲಭ್ಯಕ್ಕಾಗಿ ಪಡಿತರ ಚೀಟಿಯನ್ನು ಮಾ.27ರಂದು ಆಹಾರ ಇಲಾಖೆ ನೀಡುವಲ್ಲಿ ಸಫಲವಾಗಿದೆ.





ನಿರಂತರ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ದಾಖಲೆಗಳನ್ನು ಸೃಷ್ಟಿಸಿ ಅವುಗಳ ಮೂಲಕ ಅಶಕ್ತ ಕುಟುಂಬಕ್ಕೆ ಇದೀಗ ಸಾಮಾಜಿಕ ಭದ್ರತೆಯಾದ ಪಿಂಚಣಿ ಯೋಜನೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಅಂಚೆ ಇಲಾಖೆಯಲ್ಲಿ ಖಾತೆ ತೆರೆದು ಪ್ರಕ್ರಿಯೆ ಆರಂಭಿಸಲಾಗಿದೆ. ಅತೀ ಅವಶ್ಯಕವಾದ ಆಧಾರ್, ಪಡಿತರ ಚೀಟಿ ಮತ್ತು ಮತದಾರ ಗುರುತಿನ ಚೀಟಿ ಈಗಾಗಲೇ ಕೈ ಸೇರಿದ್ದು, ಮುಂದೆ ಸರಕಾರದ ಎಲ್ಲಾ ಸೌಲಭ್ಯಗಳು ದೊರಕಲು ಅನುಕೂಲವಾಗಿ ಅಶಕ್ತ ಕುಟುಂಬ ಇದೀಗ ನಿಟ್ಟುಸಿರು ಬಿಡುವಂತಾಗಿದೆ.

ಕೃತಜ್ಞತೆ

ನಮಗೆ ಒಂದು ಹೊತ್ತಿನ ಊಟಕ್ಕೆ ಇಲ್ಲದ ಇದ್ದ ಸ್ಥಿತಿಯ ವರದಿ ಪ್ರಕಟಿಸುವುದರ ಜೊತೆಗೆ ನಮ್ಮನ್ನು ಸಂಪೂರ್ಣವಾಗಿ ಕಚೇರಿಗಳಿಗೆ ಕರೆದೊಯ್ದ ಭವಾನಿ ಬೊಮ್ಮೆಟ್ಟಿ ಮತ್ತು ಎಲ್ಲಾ ಪ್ರಕ್ರಿಯೆಗಳಿಗೆ ನೆರವಾದ ಸುಳ್ಯ ನ್ಯಾಯಾಲಯದ ನ್ಯಾಯಾಧೀಶರಾದ ಮೋಹನ್ ಬಾಬು, ಪ್ಯಾನಲ್ ವಕೀಲ ಚಂದ್ರಶೇಖರ ಉದ್ದಂತಡ್ಕ, ನ್ಯಾಯಾಲಯದ ಸಿಬ್ಬಂದಿ ಐಶ್ವರ್ಯ ಹಾಗೂ ಪೊಲೀಸ್, ಪಂಚಾಯತ್ ರಾಜ್ ಮತ್ತು ಕಂದಾಯ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಫಲಾನುಭವಿ ಮಹಿಳೆ ರುಕ್ಮಿಣಿ ಹೇಳಿದ್ದಾರೆ.

ಸಹಕಾರಕ್ಕೆ ಸಲಾಂ

ಹೊಸದಿಗಂತದಲ್ಲಿ ವರದಿ ಪ್ರಕಟವಾಗುತ್ತಿದ್ದಂತೆ ನ್ಯಾಯಾಧೀಶರು ಸ್ಥಳ ಭೇಟಿ ನಡೆಸಿ ಖಡಕ್ ಸೂಚನೆ ನೀಡಿದ್ದರು. ಬೆನ್ನಲ್ಲೇ ಭವಾನಿ ಬೊಮ್ಮೆಟ್ಟಿ ಅವರು ತನ್ನದೇ ಕುಟುಂಬದ ಸದಸ್ಯ ಎಂಬಂತೆ ಅಶಕ್ತ ಕುಟುಂಬದ ಆಧಾರ್ ಸೃಜಿಸಲು ಜಿಲ್ಲಾಧಿಕಾರಿ ಕಚೇರಿ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಕಂದಾಯ ಇಲಾಖೆ ಸೇರಿದಂತೆ ಇತರೆಡೆಗಳಲ್ಲಿ ತಾನೇ ಖುದ್ದಾಗಿ ಕರೆದೊಯ್ದು ಊಟ ತಿಂಡಿಗಳನ್ನು ನೀಡಿ ಅಶಕ್ತ ಕುಟುಂಬಕ್ಕೆ ಸಂಪೂರ್ಣವಾಗಿ ಸಹಕಾರಿಯಾಗಿದ್ದರು. ಇವರಿಗೆ ಬೆನ್ನೆಲುಬುಗಳಾಗಿ ಸಹಕಾರಿ ಸಂಘದ ಅಧ್ಯಕ್ಷ ಉದಯ ಕುಮಾರ್ ಬೆಟ್ಟ ಹಾಗೂ ಮುಖಂಡ ಗಫೂರ್ ಕಲ್ಮಡ್ಕ ಸಂಪೂರ್ಣವಾಗಿ ಸಹಕರಿಸಿದ್ದಾರೆ. ಜೊತೆಗೆ ಈ ವರದಿಯನ್ನು ಪ್ರಕಟಿಸಿ ಅಶಕ್ತ ಕುಟುಂಬಕ್ಕೆ ನೆರವಾದ ಹೊಸದಿಗಂತ ದೈನಿಕ ಪತ್ರಿಕೆಗೆ ಕುಟುಂಬ ಹಾಗೂ ಇಡೀ ಅಶಕ್ತ ಕುಟುಂಬದ ಜೊತೆಗೆ ನಿಂತು ಸಂಪೂರ್ಣವಾಗಿ ಓಡಾಡಿದ ಭವಾನಿ ಬೊಮ್ಮೆಟ್ಟಿಗೆ ಗ್ರಾಮವೇ ನಮೋ ಎನ್ನುತ್ತಿದೆ.

ಗ್ಯಾರಂಟಿ ಯೋಜನೆ ಮತ್ತಷ್ಟು ಪ್ರಗತಿ ಸಾಧಿಸಿ: ಮೋಹನ್ ದಾಸ್

ಮಡಿಕೇರಿ: ಪಂಚ ಗ್ಯಾರಂಟಿ ಯೋಜನೆಯ ಎಲ್ಲಾ ಪ್ರಯೋಜನಗಳು ಫಲಾನುಭವಿಗಳಿಗೆ ದೊರಕಬೇಕಾದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕು ಎಂದು ಗ್ಯಾರಂಟಿ ಯೋಜನಾ ಅನುಷ್ಠಾನ ತಾಲೂಕು ಸಮಿತಿ ಅಧ್ಯಕ್ಷ ಎಂ.ಜಿ.ಮೋಹನ್ ದಾಸ್ ಅವರು ಹೇಳಿದ್ದಾರೆ. ನಗರದ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ನಡೆದ ಮಡಿಕೇರಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ಮಡಿಕೇರಿ ತಾಲೂಕಿನಲ್ಲಿ ಒಟ್ಟು 38,271 ಪಡಿತರ ಚೀಟಿದಾರರು ಇದ್ದು, ಇವರಿಗೆ ಈಗಾಗಲೇ ಪ್ರಸ್ತುತ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳಲ್ಲಿ ವಿಳಾಸ ಬದಲಾವಣೆ, ಹೆಸರು ಸೇರ್ಪಡೆ ಮತ್ತು ಹೆಸರು ತೆಗೆದು ಹಾಕುವುದಕ್ಕೆ ಅರ್ಜಿ ಸಲ್ಲಿಸಲು ಮಾ.31 ರ ವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಆಹಾರ ನಿರೀಕ್ಷಕಿ ವೀಣಾ ಅವರು ಸಭೆಗೆ ಮಾಹಿತಿ ನೀಡಿದರು.

ಮಡಿಕೇರಿ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸೀತಾಲಕ್ಷ್ಮಿ ಅವರು ಮಾತನಾಡಿ, ಮಡಿಕೇರಿ ತಾಲೂಕಿನಲ್ಲಿ ಶೇಕಡಾವಾರು ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಪ್ರಭು ರೈ, ಬಿ.ಜಿ.ಕುಟ್ಟಪ್ಪ, ತಾ.ಪಂ.ಇಒ ಶೇಖರ್, ಫ್ಯಾನ್ಸಿ ಪಾರ್ವತಿ, ರಾಜೇಶ್ವರಿ, ಸೆಸ್ಕ್ ಎಇಇ ವಿನಯ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

'ತುಳುನಾಡ ವೈಭವ' ಅಂತರ್ ಕಾಲೇಜು ಮಟ್ಟದ ಸ್ಪರ್ಧೆ

ಎಸ್‌ಡಿಎಂ, ಗೋವಿಂದ ದಾಸ್ ಸಾಧನೆ



ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು ಇದರ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಆಶ್ರಯದಲ್ಲಿ ಆಯೋಜಿಸಲಾದ 'ಸೃಜನ 2026– ಸೇವೆಯಿಂದ ಕ್ರಿಯಾಶೀಲತೆ – ತುಳುನಾಡ ವೈಭವ' ಅಂತರ್ ಕಾಲೇಜು ಮಟ್ಟದ ಸ್ಪರ್ಧೆಯಲ್ಲಿ ಸಮಗ್ರ ತಂಡ ಪ್ರಶಸ್ತಿ ಪ್ರಥಮ ಸ್ಥಾನವನ್ನು ಮಂಗಳೂರಿನ ಎಸ್‌ಡಿಎಂ ಕಾಲೇಜು, ದ್ವಿತೀಯ ಸ್ಥಾನವನ್ನು ಸುರತ್ಕಲ್ ಗೋವಿಂದ ದಾಸ್ ಕಾಲೇಜು ಗಳಿಸಿತು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಡಾ. ಶೇಷಪ್ಪ ಕೆ., ಶಿಕ್ಷಣವು ಕೇವಲ ಪುಸ್ತಕ ಜ್ಞಾನಕ್ಕೆ ಸೀಮಿತವಾಗದೆ, ಜೀವನ ಮೌಲ್ಯಗಳನ್ನು ಅರಿಯುವ ದಿಕ್ಕಿನಲ್ಲಿ ಸಾಗಬೇಕು. ಈ ನಿಟ್ಟಿನಲ್ಲಿ ಕೆನರಾ ಕಾಲೇಜಿನ ರಾಷ್ಟ್ರೀಯ ಯೋಜನೆಯ ಚಟುವಟಿಕೆಗಳು ವಿಶ್ವವಿದ್ಯಾಲಯ ಮಟ್ಟಕ್ಕೆ ಮಾದರಿಯಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿಎ ವಾಮನ ಕಾಮತ್ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಸಾಧನೆಗೆ ಮಾತ್ರ ಸೀಮಿತವಾಗದೇ, ವ್ಯಕ್ತಿತ್ವ ವಿಕಸನ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಂಸ್ಥೆಯ ಸಂಚಾಲಕ ಸಿಎ ಎಂ. ಜಗನ್ನಾಥ್ ಕಾಮತ್, ವ್ಯವಸ್ಥಾಪಕ ಶಿವಾನಂದ ಶೆಣೈ, ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ., ಸಿಬ್ಬಂದಿ ಕ್ಷೇಮಪಾಲನಾ ಸಂಯೋಜಕಿ ವಾಣಿ ಯು. ಎಸ್., ಎನ್ ಎಸ್ಎಸ್ ಸಂಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀನಿಧಿ ಸೃಜನ 2026ರ ಕಾರ್ಯಕ್ರಮದ ಸಮಗ್ರ ವರದಿಯನ್ನು ವಾಚಿಸಿದರು. ವಿವಿಧ ಸೃಜನಾತ್ಮಕ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮಾರೂರು ಹೊಸಂಗಡಿ ಶ್ರೀ ಗೋಪಾಲಕೃಷ್ಣ ಕೊಡಮಣಿತ್ತಾಯ ದೇವಸ್ಥಾನ

ಬ್ರಹ್ಮಕಲಶ ಆಮಂತ್ರಣ ಬಿಡುಗಡೆ

ಮೂಡುಬಿದಿರೆ: ಸಮಗ್ರವಾಗಿ ನವೀಕರಣಗೊಳ್ಳುತ್ತಿರುವ ಮಾರೂರು ಹೊಸಂಗಡಿ ಶ್ರೀ ಗೋಪಾಲಕೃಷ್ಣ ಕೊಡಮಣಿತ್ತಾಯ ದೇವಸ್ಥಾನದಲ್ಲಿ ಏ. 26ರಿಂದ ಮೇ 1ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವವು ಅತ್ಯಂತ ವೈಭವದಿಂದ ಜರಗಲಿದ್ದು ಬ್ರಹ್ಮಕಲಶೋತ್ಸವದ ಆಮಂತ್ರಣ ಪತ್ರಿಕೆಯನ್ನು ಶ್ರೀ ದೇವಸ್ಥಾನದ ಸನ್ನಿಧಾನದಲ್ಲಿ ಮಾ. 29ರಂದು ಬಿಡುಗಡೆ ಮಾಡಲಾಯಿತು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರೂ ಆಗಿರುವ ಶ್ರೀ ಕ್ಷೇತ್ರ ಪಡ್ಯಾರಬೆಟ್ಟದ ಧರ್ಮದರ್ಶಿ ಎ. ಜೀವಂಧರ್ ಕುಮಾರ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಕೆ. ಶ್ರೀಪತಿ ಭಟ್, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮತ್ತು ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಮಾರೂರುಗುತ್ತು ಶಂಭು ಎನ್. ಶೆಟ್ಟಿ, ದೇವಸ್ಥಾನದ ಆಡಳಿತ ಮೊಕ್ತೇಸರ ಹೊಸಂಗಡಿ ಅರಮನೆ ಸಂಪತ್ ಕುಮಾರ್ ಶೆಟ್ಟಿ, ಹೊಸಂಗಡಿ ಅರಮನೆ ಸುಕುಮಾರ ಶೆಟ್ಟಿ, ದೇವಸ್ಥಾನದ ಪ್ರಧಾನ ಅರ್ಚಕ ವೇದಮೂರ್ತಿ ವೆಂಕಟರಾಜ ಆಸ್ರಣ್ಣ, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ವೇದಮೂರ್ತಿ ರಾಮದಾಸ ಆಸ್ರಣ್ಣ, ಪ್ರಸನ್ನ ಆಸ್ರಣ್ಣ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ರವಿಪ್ರಸಾದ್ ಕೆ. ಶೆಟ್ಟಿ, ಉಭಯ ಸಮಿತಿಗಳ ಪದಾಧಿಕಾರಿಗಳಾದ ಶ್ರೀಧರ ಕೆ. ಕೆಮ್ಮಾರ್, ಶಂಕರ ಎ. ಕೋಟ್ಯಾನ್, ಸುನಿಲ್ ಕುಮಾರ್ ಶೆಟ್ಟಿ, ಸುಶಾಂತ್ ಕರ್ಕೇರಾ, ಪುಚ್ಚಮೊಗರು ಬಾವಗುತ್ತು ಪ್ರದೀಪ್ ಚಂದ್ರ ಜೈನ್, ಸಂಗಡಿಗುತ್ತು ಜಯರಾಜ ಬಲ್ಲವ, ಹೊಸಮನೆಗುತ್ತು ದಿಲೀಪ್ ಕುಮಾರ್ ಶೆಟ್ಟಿ, ಮಿತ್ತಬೆಟ್ಟುಗುತ್ತು ಸುಧಾಕರ ಶೆಟ್ಟಿ, ಪೆರಿಂಜೆ ಬಡಕೋಡಿ ಶ್ರೀಪತಿ ಭಟ್, ಸ್ವಾಗತ ಸಮಿತಿ ಅಧ್ಯಕ್ಷ ರಮೇಶ್ ಎಸ್. ಶೆಟ್ಟಿ ಮಾರ್ನಾಡ್, ಸಂಚಾಲಕ ಸುರೇಶ್ ಕೋಟ್ಯಾನ್, ಕಲಶ ಸಮಿತಿ ಅಧ್ಯಕ್ಷ ಜಿ.ಕೆ. ಭಟ್ ಕಲ್ಲಬೆಟ್ಟು, ಗಣೇಶ್ ರಾವ್ ಲಾಡಿ ಮತ್ತಿತರರು ಉಪಸ್ಥಿತರಿದ್ದರು.



» ಏ. 26ರಿಂದ ಮೇ 1ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವವು ಅತ್ಯಂತ ವೈಭವದಿಂದ ಜರಗಲಿದೆ.

ನಾಲ್ನಾಡ್ ಕಪ್ ಅಂತರ ಗ್ರಾಮ ಹಾಕಿ ಪಂದ್ಯಾವಳಿ

ನಾಪೋಕ್ಲು ಬ್ಲೂ, ಯುವಕಪಾಡಿ ಮರಂದೋಡ, ಕುಂಜಿಲತಂಡಗಳ ಮುನ್ನಡೆ

ನಾಪೋಕ್ಲು: ಸಮೀಪದ ಬಲ್ಲಮಾವಟಿ ಗ್ರಾಮದ ನೇತಾಜಿ ಪ್ರೌಢಶಾಲೆಯ ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದ ನಾಲ್ನಾಡ್ ಅಂತರ ಗ್ರಾಮ ಹಾಕಿ ಪಂದ್ಯಾವಳಿಯ ಭಾನುವಾರದ ಪಂದ್ಯಗಳಲ್ಲಿ ನಾಪೋಕ್ಲು ಬ್ಲೂ, ಯುವಕಪಾಡಿ ಮರಂದೋಡ, ಕುಂಜಿಲ ಹಾಗೂ ನಾಪೋಕ್ಲು ಬ್ಲೂ ತಂಡಗಳು ಮುನ್ನಡೆ ಸಾಧಿಸಿದವು.

ದೊಡ್ಡ ಪುಲಿಕೋಟು ಮತ್ತು ಯುವಕಪಾಡಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಯುವಕಪಾಡಿ ತಂಡವು ದೊಡ್ಡಪುಲಿಕೋಟು ತಂಡದ ವಿರುದ್ಧ 3– 1 ಅಂತರದಿಂದ ಜಯ ಸಾಧಿಸಿ ಮುನ್ನಡೆ ಗಳಿಸಿತು. ದೊಡ್ಡ ಪುಲಿಕೋಟು ಪರವಾಗಿ ಅನೀಶ್. ಯುವಕಪಾಡಿ ತಂಡ ಪರವಾಗಿ ದಿಲನ್, ಹೇಮಂತ್, ಬೋಪಣ್ಣ ತಲಾ ಒಂದೊಂದು ಗೋಲನ್ನು ಗಳಿಸಿದರು. ಮರಂದೊಡ ಮತ್ತು ನಾಲಡಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮರಂದೊಡ ತಂಡವು ನಾಲಡಿ ತಂಡದ ವಿರುದ್ಧ 2–0 ಅಂತರದ ಜಯ ಸಾಧಿಸಿತು. ಮರಂದೋಡ ತಂಡದ ಪರವಾಗಿ ಆಟಗಾರರಾದ ಬಿದ್ದಪ್ಪ ಮತ್ತು ಚಿನ್ನಪ್ಪ ತಲಾ ಒಂದು ಗೋಲು ಗಳಿಸಿದರು.



ಎಡಿಕೇರಿ ಪ್ರಸನ್ನ ಮತ್ತು ನಾಲ್ನಾಡು ಅಂತರ ಗ್ರಾಮ ಹಾಕಿ ಉತ್ಸವದ ಪದಾಧಿಕಾರಿಗಳು. ನಿರ್ದೇಶಕರು.

ಪೇರೂರು ಮತ್ತು ಕುಂಜಿಲ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಕುಂಜಿಲ ತಂಡವು 4–0 ಅಂತರದಿಂದ ಪೇರೂರು ತಂಡದ ವಿರುದ್ಧ ಜಯ ಸಾಧಿಸಿತು. ಕುಂಜಿಲ ತಂಡದ ಆಟಗಾರರಾದ ನಾಚಪ್ಪ , ಕಾರ್ಯಪ್ಪ , ಕಿರಣ್ ಮತ್ತು ಡಿವಿನ್ ತಲಾ ಒಂದು ಗೋಲು ಗಳಿಸಿದರು. ಬಲ್ಲಮಾವಟಿ ವೈಟ್ ಮತ್ತು ನಾಪೋಕ್ಲು (ಬ್ಲೂ) ತಂಡಗಳ ನಡುವೆ ನಡೆದ ಪಂದ್ಯದಲ್ಲಿ ನಾಪೋಕ್ಲು ಎ ತಂಡ ಭರ್ಜರಿ ಏಳು ಗೋಲುಗಳ ಜಯ ಸಾಧಿಸಿತು. ಕಳೆದ ವರ್ಷದ ಚಾಂಪಿಯನ್ ಬಲ್ಲಮಾವಟಿ ವೈಟ್ ತಂಡ ಯಾವುದೇ ಗೋಲು ಗಳಿಸಲು ಶಕ್ತವಾಗಲಿಲ್ಲ. ನಾಪೋಕ್ಲು ಪರ ಆಕಾಶ್, ಪುನೀತ್, ನಾಚಪ್ಪ, ಅವನೀಶ್, ಕಾಳಪ್ಪ, ಸುಬ್ರಮಣಿ, ಮತ್ತು ನಿರುಪ್ ತಲಾ ಒಂದೊಂದು ಗೋಲು ಭಾರಿಸಿದರು.

ಇಂದಿನ ಪಂದ್ಯಗಳು

- 9 ಗಂಟೆಗೆ ಬೇತು- ನೆಲಜಿ
- 10 ಗಂಟೆಗೆ ಕೊಳಕೇರಿ -ಯುವ ಕಪಾಡಿ
- 11 ಗಂಟೆಗೆ ಬಲ್ಲಮಾವಟಿ ಬ್ಲೂ - ಮರಂದೋಡ
- 12 ಗಂಟೆಗೆ ಬಲ್ಲಮಾವಟಿ ವೈಟ್ - ಕುಂಜಿಲ
- 1 ಗಂಟೆಗೆ ಪೇರೂರು - ನಾಪೋಕ್ಲು-ಎ

ಬೇತು ಮತ್ತು ನಾಪೋಕ್ಲುಬ್ಲೂ ತಂಡಗಳನಡುವೆ ನಡೆದ ಪಂದ್ಯದಲ್ಲಿ ನಾಪೋಕ್ಲು ಬ್ಲೂ ತಂಡವು ಬೇತು ತಂಡದ ವಿರುದ್ಧ 3 –2 ಅಂತರದಿಂದ ಗೆಲುವು ಸಾಧಿಸಿತು.

ದಿನದ ಮೊದಲ ಪಂದ್ಯವನ್ನು ಉದ್ಘಾಟಿಸಿದ ಉದ್ಯಮಿ, ದಾನಿ ಹಾಗೂ ಪಂದ್ಯಾವಳಿಯ ಪ್ರಾಯೋಜಕರಾದ ಎಡಿಕೇರಿ ಪ್ರಸನ್ನ ಮಾತನಾಡಿ, ಕೊಡಗಿನಲ್ಲಿ ಹಾಕಿ ಕ್ರೀಡೆ ಪ್ರಸಿದ್ಧಿ ಪಡೆದಿದೆ. ಈ ಕ್ರೀಡೆಯು ಎಲ್ಲಾ ಸಮಾಜ ಬಾಂಧವರನ್ನುಒಗ್ಗೂಡಿಸುತ್ತದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಹಾಕಿ ಕ್ರೀಡೆ ನಡೆಯುತ್ತಿದ್ದರೂ ಬಲ್ಲಮಾವಟಿ ಗ್ರಾಮದಲ್ಲಿ 10 ಗ್ರಾಮಗಳ ಕ್ರೀಡಾಪಟುಗಳನ್ನು ಒಗ್ಗೂಡಿಸಿ ಕ್ರೀಡೆಯನ್ನು ಆಯೋಜಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಈ ಕ್ರೀಡಾಕೂಟ ಜನಾಂಗಬಾಂಧವರು ಒಗ್ಗೂಡಿಸಲು ಸಹಕಾರಿಯಾಗಿದೆ ಎಂದರು.

ನಾಲ್ನಾಡ್ ಹಾಕಿ ಕ್ಲಬ್ ಅಧ್ಯಕ್ಷ ಕರವಂಡ ಸುರೇಶ್ ಮತ್ತು ಪದಾಧಿಕಾರಿಗಳು ಹಾಗೂ ನಿರ್ದೇಶಕರು ಮತ್ತು ಕ್ರೀಡಾ ಪ್ರೇಮಿಗಳು ಪಾಲ್ಗೊಂಡಿದ್ದರು.



ವೀಕ್ಷಕ ವಿವರಣೆಗಾರರಾಗಿ ಅಜ್ಜೆಟ್ಟಿರ ವಿಕ್ರಂ, ಕರವಂಡ ಸೀಮಾ ಗಣಪತಿ ಕಾರ್ಯ ನಿರ್ವಹಿಸಿದರು. ಟೂರ್ನಿ ಡೈರೆಕ್ಟರ್ ಕರವಂಡ ಅಪ್ಪಣ್ಣ, ತೀರ್ಪುಗಾರರಾಗಿ ಬೊಳ್ಳಚಂಡ ನಾಣಯ್ಯ, ಚೈಯಂಡ ಅಪ್ಪಚ್ಚು, ಪಟ್ರಪಂಡ ಮಂದಣ್ಣ, ಕೊಳುವಂಡ ಚಂಗಪ್ಪ, ಕುಪ್ಪಂಡ ದಿಲನ್, ಅನ್ನಡಿಯಂಡ ಪೊನ್ನಪ್ಪ , ತಾಂತ್ರಿಕ ಸಮಿತಿ ವಿನೋದ್ (ಜೆಸಿಬಿ) ಇವರುಗಳು ನಿರ್ವಹಿಸಿದರು.

ಕಿರುಸುದ್ದಿ

ನೀರಿನ ಟ್ಯಾಂಕ್ ಒದಗಿಸಿದ ಶಾಸಕ ಪೊನ್ನಣ್ಣ



• **ಮಡಿಕೇರಿ:** ಈ ಬಾರಿಯ ಬೇಸಿಗೆ ಕಾಲದಲ್ಲಿ ಸಾರ್ವಜನಿಕರು ನೀರಿನ ಅಭಾವದಿಂದ ಬಳಲಬಾರದೆಂಬ ಸದುದ್ದೇಶದಿಂದ ತಮ್ಮ ವೈಯಕ್ತಿಕ ಅನುದಾನದಲ್ಲಿ 28 ಲಕ್ಷ ರೂ.ವೆಚ್ಚದಲ್ಲಿ ಕಲ್ಪಿಸಲಾಗಿರುವ ತುರ್ತು ನೀರಿನ ಸೌಲಭ್ಯದ ಟ್ಯಾಂಕರ್‌ಗೆ ಶಾಸಕ ಹಾಗೂ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಭಾನುವಾರ ಚಾಲನೆ ನೀಡಿದರು. ಪೊನ್ನಂಪೇಟೆಯಲ್ಲಿ ಟ್ಯಾಂಕರ್ ವಾಹನವನ್ನು ಉದ್ಘಾಟಿಸಿ ಶುಭ ಹಾರೈಸಿ ಮಾತನಾಡಿದ ಶಾಸಕರು, ತೀವ್ರ ಬೇಸಿಗೆಯಿಂದ ನೀರಿನ ಅಭಾವ ತಲೆದೋರಿದ್ದು, ಸಾರ್ವಜನಿಕರಿಗೆ ನೀರಿನ ಅಭಾವ ಉಂಟಾಗದಂತೆ ನೋಡಿಕೊಳ್ಳಲು ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಹೆಲ್ಮೆಟ್ ಧರಿಸದೆ ಪ್ರಯಾಣ: 2.70 ಕೋ. ರೂ. ದಂಡ ವಸೂಲು

• **ಕಾಸರಗೋಡು:** ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸುವವರನು ಪತ್ತೆಹಚ್ಚಲು ಕೇರಳದಲ್ಲಿ ಪೊಲೀಸ್ ಹಾಗೂ ಸಾರಿಗೆ ಇಲಾಖೆ ತೀವ್ರ ಕಾರ್ಯಾಚರಣೆ ಆರಂಭಿಸಿದೆ. ಅದರಂತೆ ಒಂದು ವಾರ ನಡೆಸಿದ ಕಾರ್ಯಾಚರಣೆಯಲ್ಲಿ 51,604 ಕಾನೂನು ಉಲ್ಲಂಘನೆ ಪತ್ತೆಹಚ್ಚಲಾಗಿದೆ. ಇ ಮೂಲಕ 2,70,51,150 ಕೋಟಿ ರೂಪಾಯಿ ದಂಡ ವಸೂಲು ಮಾಡಲಾಗಿದೆ. 'ಹೆಲ್ಮೆಟ್ ಆನ್ ಸೇಫ್ ರೈಡ್' ಎಂಬ ಹೆಸರಿನಲ್ಲಿ ಆರಂಭಿಸಿದ ಕಾರ್ಯಾಚರಣೆಯಲ್ಲಿ 1,13,011 ದ್ವಿಚಕ್ರ ವಾಹನಗಳನ್ನು ತಪಾಸಣೆ ನಡೆಸಲಾಗಿದೆ.

ಮಾ. 31ಕ್ಕೆ 'ಮಂಥನ' ವೈಚಾರಿಕ ಚಿಂತನಾಗೋಷ್ಠಿ

• **ಉಡುಪಿ:** ನಗರದ ಚಿಂತನಾ ಚಾವಡಿ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಉಡುಪಿ ಘಟಕದ ಜಂಟಿ ಆಶ್ರಯದಲ್ಲಿ ಮಾಸಿಕ ವೈಚಾರಿಕ ಚಿಂತನೆ ಕಾರ್ಯಕ್ರಮ ಮಂಥನ'ವು ಮಾರ್ಚ್ 31ರ ಮಂಗಳವಾರದಂದು ಆಯೋಜನೆಗೊಂಡಿದೆ. ಅಂದು ಸಂಜೆ 5.30ಕ್ಕೆ ಉಡುಪಿಯ ಕಲ್ಪನಾ ಟಾಕೀಸ್ ಎದುರಿನ ಸಂಘ ಕಾರ್ಯಾಲಯ 'ಕೇಶವ ನಿಲಯ'ದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪ್ರಖ್ಯಾತ ಸಂಸ್ಕ ತಿ ಚಿಂತಕರು ಹಾಗೂ ಉಡುಪಿ ಪ್ರಜ್ಞಾನಮ್ ಟ್ರಸ್ಟ್‌ನ ಟ್ರಸ್ಟಿಗಳಾದ ಜಿ.ಪಿ. ಪ್ರಭಾಕರ್ ತುಮರಿ ಅವರು ಮುಖ್ಯ ವಕ್ತಾರರಾಗಿ ಭಾಗವಹಿಸಲಿದ್ದಾರೆ. 'ಸಮಾಜದಲ್ಲಿ ಹಿಂದುತ್ವದ ಪರಿಕಲ್ಪನೆ: ಸಾಂವಿಧಾನಿಕ ನೆಲೆಯಲ್ಲಿ ಮರುಚಿಂತನೆ' ಎಂಬ ವಿಷಯದ ಕುರಿತು ವಕ್ತಾರರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಈ ಬೌದ್ಧಿಕ ಮಂಥನದ ಪ್ರಯೋಜನ ಪಡೆದುಕೊಳ್ಳಬೇಕಾಗಿ ಆಯೋಜಕರು ವಿನಂತಿಸಿದ್ದಾರೆ.

ಕಲ್ಲಿನಿಂದ ಹಲ್ಲೆ, ಪ್ರಕರಣ ದಾಖಲು

• **ಕೊಣಾಜೆ:** ನೀರಿನ ತೋಡನ್ನು ಮುಚ್ಚಿದ ವಿಷಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊರ್ವ ನೆರೆಮನೆಯವರಿಗೆ ಕಲ್ಲಿನಿಂದ ಹಲ್ಲೆ ನಡೆಸಿರುವ ಬಗ್ಗೆ ಕೊಣಾಜೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕೊಣಾಜೆ ಪೊಲೀಸ್ ಠಾಣಾ ವ್ಯಾಪ್ತಿಯ ಅಂಬ್ಲಮೊಗರು ಗ್ರಾಮದ ಪಟ್ಲಮೊಗರು ಎಂಬಲ್ಲಿ ಭಾನುವಾರದಂದು ಘಟನೆ ನಡೆದಿದೆ. ಪಟ್ಲಮೊಗರು ನಿವಾಸಿ ನಾಗೇಶ್ ಶೇಣವ ಹಲ್ಲೆ ನಡೆಸಿರುವ ವ್ಯಕ್ತಿಯಾಗಿದ್ದು, ನೆರೆಮನೆಯ ಬೇಬಿ (56), ಅವರ ಪುತ್ರ ರವಿರಾಜ್ ಮತ್ತು ಸೊಸೆ ವರ್ಷಾ ಎಂಬವರು ಹಲ್ಲೆಗೊಳಗಾದವರು. ಭಾನುವಾರ ಬೆಳಿಗ್ಗೆ 8.30 ರ ಸುಮಾರಿಗೆ ನಾಗೇಶ್ ಶೇಣವ ತನ್ನ ಅಂಗಳದಲ್ಲಿ ಹಲವು ವರ್ಷಗಳಿಂದ ಹಾದುಹೋಗುವ , ಪಂಚಾಯತ್ ನಿರ್ಮಿಸಿದ್ದಂತಹ ಮಳೆ ನೀರಿನ ತೋಡಿನ ಛೇಂಬರನ್ನು ಅಗೆದು, ಇಟ್ಟಿಗೆಯಿಂದ ಮುಚ್ಚಿದ್ದು, ಇದನ್ನು ನೆರೆಮನೆಯ ರವಿರಾಜ್ ಅವರು ಪ್ರಶ್ನಿಸಿದ್ದಾರೆ ಎನ್ನಲಾಗಿದೆ. ಈ ವೇಳೆ ನಾಗೇಶ್ ಶೇಣವ ಅವರ ಕೆನ್ನೆಗೆ ಹೊಡೆದು ಹಲ್ಲೆ ನಡೆಸಿದ್ದಾರೆ. ಇದನ್ನು ತಡೆಯಲು ಮುಂದಾದ ಬೇಬಿ ಅವರಿಗೆ ಕಲ್ಲನ್ನು ಕಾಲಿಗೆ ಎಸೆದು ಗಂಭೀರ ರೀತಿಯಲ್ಲಿ ಹಲ್ಲೆ ನಡೆಸಿದ್ದಾನೆ. ಅದನ್ನು ಪ್ರಶ್ನಿಸಿದ ಸೊಸೆ ವರ್ಷಾ ಅವರ ಮೇಲೂ ಕಲ್ಲಿನಿಂದ ಹಲ್ಲೆಯನ್ನು ನಡೆಸಿದ್ದಾನೆ. ಈ ಕುರಿತು ಕೊಣಾಜೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನಂತೆ ಬಿಎನ್ ಎಸ್ ಆಕ್ಟ್ ನಡಿ ಪ್ರಕರಣ ದಾಖಲಾಗಿದೆ.

ಕಲ್ಲಂಗಡಿ ಹಣ್ಣು ಸಾಗಾಟದ ಟೆಂಪೋ ಪಲ್ಟಿ

• **ಮೂಡುಬಿದಿರೆ :** ಕಾರ್ಕಳದಿಂದ ಮೂಡುಬಿದಿರೆ ಕಡೆಗೆ ಕಲ್ಲಂಗಡಿ ಹಣ್ಣುಗಳನ್ನು ತುಂಬಿಸಿಕೊಂಡು ಬರುತ್ತಿದ್ದ ಮಿನಿ ಟೆಂಪೋವೊಂದು ಕೆಸರುಗದ್ದೆ ಬಳಿ ರೋಲ್ ಆಗಿ ಮಗುಚಿಬಿದ್ದು ಹಣ್ಣುಗಳು ಚೆಲ್ಲಾಪಿಲ್ಲಿಯಾಗಿ ರಸ್ತೆ ಬಿದ್ದ ಘಟನೆ ಭಾನುವಾರ ಸಂಜೆ ವೇಳೆಗೆ ನಡೆದಿದೆ. ವಾಹನದಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪಣಂಬೂರು ಹೆದ್ದಾರಿ ಬದಿ ಮಣ್ಣು ಹಾಕಿ ಅಪಘಾತ' ವಾಹನ ಸವಾರರಲ್ಲಿ ಆತಂಕ

• **ಪಣಂಬೂರು:** ಸಮೀಪದ ಪಣಂಬೂರು ಹೆದ್ದಾರಿ ಬದಿಯಲ್ಲಿ ಸಮತಟ್ಟು ಮಾಡಲು ಮಣ್ಣು ಹಾಕಿರುವುದರಿಂದ ವಾಹನ ಸವಾರರು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಶನಿವಾರ ಇನೋವಾ ಕಾರು ನಿಯಂತ್ರಣ ತಪ್ಪಿ ಹೆದ್ದಾರಿ ಬದಿಯ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಚಾಲಕನಿಗೆ ಹಣೆ ಕೈಗೆ ಗಾಯವಾಗಿದ್ದು, ಕಾರು ಹಾನಿಗೊಂಡಿದೆ. ಮಣ್ಣು ರಸ್ತೆ ಮೇಲೆ ಬಿದ್ದಿರುವುದರಿಂದ ಘನ ವಾಹನ ಮಣ್ಣಿನ ಮೇಲೆ ಚಲಿಸಿ ರಾಡಿ ಎದ್ದು ಹೋಗಿದೆ. ಸಣ್ಣ-ಪುಟ್ಟ ಅಪಘಾತಗಳು ಹೆಚ್ಚಾಗಿದ್ದು, ಸ್ಥಳೀಯರು ಹಾಗೂ ಪ್ರಯಾಣಿಕರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಹೆದ್ದಾರಿ ಬದಿಯಲ್ಲಿ ಸುರಕ್ಷತಾ ಕ್ರಮಗಳಿಲ್ಲದೆ ಮಣ್ಣು ಹಾಕಿರುವುದರಿಂದ ರಾತ್ರಿ ವೇಳೆಯಲ್ಲಿ ಈ ಮಣ್ಣು ಸ್ಪಷ್ಟವಾಗಿ ಕಾಣಿಸದ ಕಾರಣ ವಾಹನ ನಿಯಂತ್ರಣ ತಪ್ಪಿ ಬಿದ್ದುಕೊಳ್ಳುವ ಘಟನೆಗಳು ಸಂಭವಿಸುತ್ತಿವೆ. ವಿಶೇಷವಾಗಿ ಎರಡು ಚಕ್ರ ವಾಹನ ಸವಾರರು ಹೆಚ್ಚು ಅಪಾಯಕ್ಕೆ ಒಳಗಾಗುತ್ತಿದ್ದಾರೆ. ವಾಹನ ಸವಾರರ ಜೀವಕ್ಕೆ ಹಾನಿ ಉಂಟಾಗುವ ಮುನ್ನ ಅಧಿಕಾರಿಗಳು ತ್ವರಿತವಾಗಿ ಸಮಸ್ಯೆ ಪರಿಹರಿಸಬೇಕಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಭಾನುವಾರ ಮಂಜೇಶ್ವರ ಮಂಡಲದ ವಿವಿಧ ದೇವಾಲಯಗಳಿಗೆ ತೆರಳಿ ದೈವ ದೇವರ ದರ್ಶನ ಪಡೆದರು. ಅಲ್ಲದೆ ಹಲವೆಡೆಗಳಲ್ಲಿ ಮತಯಾಚನೆ ನಡೆಸಿದರು.



ಕಾಸರಗೋಡು ನೆಲ್ಲಿಕುಂಜೆ ಫಿರ್ದೌಸ್ ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಕಾಸರಗೋಡು ವಿಧಾನಸಭಾ ಕ್ಷೇತ್ರದ ಐಕ್ಯರಂಗ ಒಕ್ಕೂಟದ ಕುಟುಂಬ ಸಂಗಮವನ್ನು ಕಾಸರಗೋಡು ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಉದ್ಘಾಟಿಸಿ ಮಾತನಾಡಿದರು.



ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಕಾಸರಗೋಡು ನಗರಸಭಾ ವ್ಯಾಪ್ತಿಯ ಕೊರಕ್ಕೋಡು, ಗುಡ್ಡೆ ವಾರ್ಡ್‌ಗಳಲ್ಲಿ ಪರ್ಯಟನೆ ನಡೆಸಿದರು. ಗುಡ್ಡೆ ಶ್ರೀ ಅಯ್ಯಪ್ಪ ಭಜನಾ ಮಂದಿರದ ಸುತ್ತಲಿನ ಗೋಡೆಗಳ ಮೇಲೆ ಬರೆಯುವ ಮೂಲಕ ಪ್ರಚಾರ ಕೈಗೊಂಡರು.

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕಂಡುಬರುತ್ತಿದೆ ಜಿದ್ದಾಜಿದ್ದಿನ ತ್ರಿಕೋನ ಸ್ಪರ್ಧೆ

ಗೆಲುವಿನ ವಿಶ್ವಾಸದಲ್ಲಿ ಇಲ್ಲಿ ಅಭ್ಯರ್ಥಿಗಳು

• **ಮಂಜೇಶ್ವರ:** ಉತ್ತರ ಕೇರಳದ ತುತ್ತತುದಿಯ ಭಾಗವಾದ ಮಂಜೇಶ್ವರ ವಿಧಾನಸಭಾ ಕ್ಷೇತ್ರ ಚುನಾವಣೆಯ ಅಂಗವಾಗಿ ಈ ಬಾರಿ ಪ್ರಬಲ ತ್ರಿಕೋನ ಸ್ಪರ್ಧೆ ಗೋಚರಿಸುತ್ತಿದೆ. ಮಾತ್ರವಲ್ಲದೆ ಪ್ರಮುಖ ಮೂರು ಮಂದಿ ಅಭ್ಯರ್ಥಿಗಳಾದ ಎನ್‌ಡಿಎ ಮೈತ್ರಿಕೂಟದ ಬಿಜೆಪಿಯ ಕೆ.ಸುರೇಂದ್ರನ್, ಐಕ್ಯರಂಗ ಒಕ್ಕೂಟದ ಮುಸ್ಲಿಂಲೀಗ್‌ನ ಎ.ಕೆ. ಎಂ.ಅಶ್ರಫ್, ಎಡರಂಗ ಒಕ್ಕೂಟದ ಸಿಪಿಎಂನ ಕೆ.ಆರ್.ಜಯಾನಂದ ಅವರು ಗೆಲುವಿನ ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಏಪ್ರಿಲ್ 9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಭಾಗವಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಮುಖ ಮೂರು ಮಂದಿ ಅಭ್ಯರ್ಥಿಗಳು ನಿರಂತರ ಪ್ರಚಾರ ಕಾರ್ಯಗಳಲ್ಲಿ ತೊಡಗಿದ್ದಾರೆ. ಬಿಜೆಪಿ ಅಭ್ಯರ್ಥಿ, ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ, ಸಮರ್ಥ ನಾಯಕ ಎಂದೇ ಗುರುತಿಸಲಾದ ಕೆ.ಸುರೇಂದ್ರನ್ ಅವರು ಮಂಜೇಶ್ವರ ಮಂಡಲದಲ್ಲಿ ಚುನಾವಣಾ ದಿನಾಂಕ ಘೋಷಣೆಯಾಗುವುದಕ್ಕಿಂತ ಮೊದಲು ಪ್ರಚಾರ ಕಾರ್ಯಕ್ಕೆ ಧುಮುಕಿದ್ದು, ಬಹುತೇಕ ಮನೆಗಳ ಸಂಪರ್ಕ ಹೊಂದಬೇಕೆಂಬ ಆಶಯದಲ್ಲಿದ್ದಾರೆ. ಮುಸ್ಲಿಂಲೀಗ್‌ನ ಅಭ್ಯರ್ಥಿ, ಹಾಲಿ ಶಾಸಕ ಎ.ಕೆ.ಎಂ.ಅಶ್ರಫ್ ಮಂಡಲದಾದ್ಯಂತ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ.





ಕೆ.ಸುರೇಂದ್ರನ್ ಎ.ಕೆ.ಎಂ.ಅಶ್ರಫ್ ಕೆ.ಆರ್.ಜಯಾನಂದ

ಮಂಜೇಶ್ವರ ಮಂಡಲದಲ್ಲಿ ಒಟ್ಟು 11 ಮಂದಿ ಅಭ್ಯರ್ಥಿಗಳು

ಮಂಜೇಶ್ವರ ಮಂಡಲದಲ್ಲಿ ಒಟ್ಟು 11 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಅವರಲ್ಲಿ ಮೂರು ಮಂದಿ ಮಾತ್ರ ಪ್ರಮುಖರಾಗಿದ್ದು, ಉಳಿದ ಅಭ್ಯರ್ಥಿಗಳೂ ಪ್ರಚಾರ ರಂಗದಲ್ಲಿದ್ದಾರೆ. ಬಿಜೆಪಿಯಿಂದ ಕೆ.ಸುರೇಂದ್ರನ್, ಮುಸ್ಲಿಂಲೀಗ್‌ನಿಂದ ಎ.ಕೆ.ಎಂ.ಅಶ್ರಫ್, ಸಿಪಿಎಂನಿಂದ ಕೆ.ಆರ್.ಜಯಾನಂದ, ಬಹುಜನ ಸಮಾಜ ಪಕ್ಷದಿಂದ ಸಂಜೀವ ಹಾಗೂ ಸ್ವತಂತ್ರ ಉಮೇದುವಾರರಾಗಿ ಕಣ್ಣೂರು ಅಬ್ದುಲ್ಲ ಮಾಸ್ಟರ್, ಅಬ್ದುಲ್ ಲತೀಫ್, ಜೇನ್ ಲವಿನಾ ಮೊಂತೆರೋ, ಜೋನ್ ಡಿಸೋಜಾ, ಮುಹಮ್ಮದ್ ಅಶ್ರಫ್, ಮುಹಮ್ಮದ್ ಅಶ್ರಫ್ ಕೆ.ಎ., ಡಿ.ಸುರೇಂದ್ರನ್ ನಾಯರ್ ಸ್ಪರ್ಧಾಕಣದಲ್ಲಿದ್ದಾರೆ.

ಮಂಜೇಶ್ವರ ಮಂಡಲದಲ್ಲಿ ಬದಲಾವಣೆ ನಿರೀಕ್ಷೆ

ಈ ಬಾರಿಯ ಚುನಾವಣೆಯಲ್ಲಿ ಪರಿಸ್ಥಿತಿ ಭಿನ್ನವಾಗಿದ್ದು ಮತದಾರರು ಭಾರೀ ಬದಲಾವಣೆ ಬಯಸಿರುವುದು ಗೋಚರಿಸುತ್ತಿದೆ.ವಿಶೇಷವಾಗಿ ಮಂಜೇಶ್ವರ ಕ್ಷೇತ್ರ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದ್ದು, ಈ ವರೆಗೆ ಪ್ರತಿನಿಧಿಸಿದವರು ಕ್ಷೇತ್ರದಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಸಾಧಿಸಲು ವಿಫಲರಾಗಿದ್ದಾರೆ ಎಂಬ ತೀವ್ರ ಅಸಮಾಧಾನ ಕ್ಷೇತ್ರದ ಮತದಾರರಲ್ಲಿದೆ. ಈ ಹಿನ್ನೆಲೆಯಲ್ಲಿ ಮಂಜೇಶ್ವರ ಮಂಡಲದ ಮತದಾರರು ಬದಲಾವಣೆಯ ಸಂಕಲ್ಪ ತೊಟ್ಟಂತೆ ಕಂಡುಬರುತ್ತಿದೆ. ಇದೇ ವೇಳೆ ಎಸ್‌ಡಿಪಿಐ ಅಭ್ಯರ್ಥಿ ತನ್ನ ನಾಮಪತ್ರವನ್ನು ಹಿಂತೆಗೆದು ಐಕ್ಯ ರಂಗ ಅಭ್ಯರ್ಥಿಗೆ ನೆರವಾಗಲು ಮುಂದಾಗಿದೆ ಎಂಬ ಆರೋಪವೆದ್ದಿದ್ದು, ಜೊತೆಗೆ ಸಿಪಿಎಂ ಪಕ್ಷದಿಂದ ಅಡ್ಡ ಮತದಾನದ ಲೆಕ್ಕಾಚಾರಗಳು ನಡೆಯುತ್ತಿವೆ. ಅನೇಕ ಮುಸ್ಲಿಮರು ಬಹಿರಂಗವಾಗಿ ಬಿಜೆಪಿಗೆ ಬೆಂಬಲ ಘೋಷಿಸಿರುವ ಕುತೂಹಲಕಾರಿ ಬೆಳವಣಿಗೆಯೂ ನಡೆದಿದೆ. ಏನೇ ಆದರೂ ಈ ವಿಧಾನಸಬಾ ಚುನಾವಣೆಯು ಮಂಜೇಶ್ವರ ಮಂಡಲದಲ್ಲಿ ಒಂದು ನಿರ್ಣಾಯಕ ಘಟ್ಟವಾಗಿದ್ದು, ಪ್ರಬಲ ಅಭ್ಯರ್ಥಿ ಆಗಿರುವ ಕೆ.ಸುರೇಂದ್ರನ್ ಅವರ ಗೆಲುವಿಗಾಗಿ ಎನ್‌ಡಿಎ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ.

ಸಿಪಿಎಂ ಅಭ್ಯರ್ಥಿಯಾದ ಜಿಲ್ಲಾ ಸೆಕ್ರೆಟರಿಯೇಟ್ ಸದಸ್ಯ ಕೆ.ಆರ್. ಜಯಾನಂದ ವಿವಿಧ ಸಭೆಗಳನ್ನು ನಡೆಸಿ ಮತದಾರರನ್ನು ಸೆಳೆಯುವತ್ತ ಚಿತ್ತ ಹರಿಸಿದ್ದಾರೆ.

ಕ್ಷೇತ್ರದ ರಾಜಕೀಯ ಇತಿಹಾಸ

ಮಂಜೇಶ್ವರ ಮಂಡಲದಲ್ಲಿ ಅತೀ ಹೆಚ್ಚು ಬಾರಿ ಗೆಲುವು ಸಾಧಿಸಿದವರು ಮಾಜಿ ಸಚಿವರಾಗಿದ್ದ ಚೆರ್ಕಳಂ ಅಬ್ದುಲ್ಲ ಅವರು. ಮುಸ್ಲಿಂಲೀಗ್‌ನಿಂದ ಅವರು ಸತತವಾಗಿ ನಾಲ್ಕು ಬಾರಿ ಶಾಸಕರಾಗಿದ್ದರು. 1987ರಿಂದ 2001ರ ವರೆಗೆ 19 ವರ್ಷಗಳ ಕಾಲ ಮಂಜೇಶ್ವರವನ್ನು ಪ್ರತಿನಿಧಿಸಿ ದಾಖಲೆ ನಿರ್ಮಿಸಿದ್ದರು. ಪಿ.ಬಿ.ಅಬ್ದುಲ್ ರಜಾಕ್ ಅವರು 2011 ಮತ್ತು 2026ರ ಚುನಾವಣೆಯಲ್ಲಿ ಸತತವಾಗಿ ಗೆಲುವು ಸಾಧಿಸಿದ್ದರು. ಆದರೆ 2018ರಲ್ಲಿ ಶಾಸಕರಾಗಿದ್ದಾಗಲೇ ಅವರು ನಿಧನ ಹೊಂದಿದರು.

1987ರಲ್ಲಿ ಮೊದಲ ಬಾರಿಗೆ ಮಂಜೇಶ್ವರ ಮಂಡಲದಲ್ಲಿ ಮುಸ್ಲಿಂಲೀಗ್ ಗೆಲುವು ಸಾಧಿಸಿತು. ಚೆರ್ಕಳಂ ಅಬ್ದುಲ್ಲ ಮೊದಲ ಮುಸ್ಲಿಂಲೀಗ್ ಶಾಸಕರಾದರು. ಅವರು 2001ರಿಂದ 2004ರ ವರೆಗೆ ಎ.ಕೆ.ಆ್ಯಂಟನಿ ನೇತೃತ್ವದ ಯುಡಿಎಫ್ ಸರಕಾರದಲ್ಲಿ ಸ್ಥಳೀಯಾಡಳಿತ ಇಲಾಖೆ ಸಚಿವರಾಗಿದ್ದರು.

2006ರಲ್ಲಿ ಸಿಪಿಎಂನ ಸಿ.ಎಚ್.ಕುಂಞಂಬು ಅವರು ಚೆರ್ಕಳಂ ಅಬ್ದುಲ್ಲರನ್ನು ಸೋಲಿಸಿ ಶಾಸಕರಾದರು. ಆದರೆ 2011ರಲ್ಲಿ ಮತ್ತೆ ಮುಸ್ಲಿಂಲೀಗ್ ಜಯ ಗಳಿಸಿತು. 2011ರಲ್ಲಿ ಮುಸ್ಲಿಂಲೀಗ್‌ನ ಪಿ.ಬಿ.ಅಬ್ದುಲ್ ರಜಾಕ್, 2019ರಲ್ಲಿ ಮುಸ್ಲಿಂಲೀಗ್‌ನ ಎಂ.ಸಿ.ಖಮರುದ್ದೀನ್, 2021ರಲ್ಲಿ ಮುಸ್ಲಿಂಲೀಗ್‌ನ ಎ.ಕೆ.ಎಂ.ಅಶ್ರಫ್ ಶಾಸಕರಾಗಿ ಆಯ್ಕೆಯಾದರು.

2,30,113 ಮತದಾರರು

ಇದೇ ವೇಳೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,30,113 ಮಂದಿ ಮತದಾರರಿದ್ದಾರೆ. ಅದರಲ್ಲಿ 1,15,801 ಪುರುಷರು ಮತ್ತು 1,14,312 ಮಂದಿ ಮಹಿಳೆಯರು ಒಳಗೊಂಡಿದ್ದಾರೆ.

ಮಧೂರು: ಯುಡಿಎಫ್ ಚುನಾವಣಾ ಕಚೇರಿ ಉದ್ಘಾಟನೆ



• **ಕಾಸರಗೋಡು:** ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರ ಗೆಲುವಿಗಾಗಿ ಶ್ರಮಿಸುವ ನಿಟ್ಟಿನಲ್ಲಿ ಮಧೂರು ಪಂಚಾಯತ್ ಯುಡಿಎಫ್ ಚುನಾವಣಾ ಸಮಿತಿ ಕಚೇರಿಯನ್ನು ಮುಸ್ಲಿಂಲೀಗ್ ಜಿಲ್ಲಾ ಕೋಶಾಧಿಕಾರಿ ಮುನೀರ್ ಹಾಜಿ ಕಂಬಾರು ಉಳಿಯತ್ತಡ್ಕದಲ್ಲಿ ಭಾನುವಾರ ಉದ್ಘಾಟಿಸಿದರು.

ಪಂಚಾಯತ್ ಯುಡಿಎಫ್ ಸಮಿತಿ ಅಧ್ಯಕ್ಷ ವಕೀಲ ಶಂಸುದ್ದೀನ್ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಮಹಮೂದ್ ವಟ್ಟಕ್ಕಾಡ್ ಸ್ವಾಗತಿಸಿ, ಹಬೀಬ್ ಚೆಟ್ಟುಂಕುಳಿ ಧನ್ಯವಾದವಿತ್ತರು.

ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ, ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಖಾಲಿದ್, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ರಾಜೀವ್ ಎಂ.ನಂಬಿಯಾರ್, ಜಯರಾಜ್ ಕೆ.ಪಿ., ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಉಷಾ ಅರ್ಜುನನ್ ತಾಯಲಂಗಾಡಿ, ಮುತಾಳಿ ಪಾರೆಕಟ್ಟೆ, ಟಿ.ಇ.ಮುಕ್ತಾರ್, ಮಜೀದ್ ಪಟ್ಲ, ಮಜೀದ್ ಪಡಿಂಞಾರ್, ಯು.ಸಹದಾಜಿ, ಅಬ್ದುಸ್ಸಫ, ರಫೀಕ್ ಉಳಿಯತ್ತಡ್ಕ, ಎಂ.ಎ.ಖಲೀಲ್, ಅಬ್ದುಲ್ ಕರೀಂ ಪಟ್ಲ, ಅರ್ಜುನನ್ ತಾಯಲಂಗಾಡಿ, ಧರ್ಮೇರ, ಸಾದಿಕ್ ಕೊಲ್ಲಂಗಾನ, ಅಬ್ದುಸ್ಸಮದ್ ಎಸ್.ಪಿ.ನಗರ, ನಗರಸಭಾ ಸ್ಥಾಯೀ ಸಮಿತಿ ಅಧ್ಯಕ್ಷ ಶರಫ್ ಮುಂತಾದವರು ಮಾತನಾಡಿದರು.



ಸಂಸದ ತೇಜಸ್ವಿ ಸೂರ್ಯ ಎಡನೀರು ಮಠಕ್ಕೆ ಭೇಟಿ



• **ಕಾಸರಗೋಡು:** ಭಾರತೀಯ ಜನತಾ ಯುವಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ಶನಿವಾರ ಶ್ರೀಮದ್ ಎಡನೀರು ಮಠಕ್ಕೆ ಭೇಟಿ ನೀಡಿದರು. ಈ ಸಂದರ್ಭ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಶೀರ್ವಾದ ಪಡೆದು ಸಮಾಲೋಚನೆ ನಡೆಸಿದರು.

ಕಾಸರಗೋಡು ವಿಧಾನ ಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಅಶ್ವಿನಿ ಎಂ.ಎಲ್. ಅವರ ಚುನಾವಣಾ ಪ್ರಚಾರದ ಅಂಗವಾಗಿ ಬದಿಯಡ್ಕದಲ್ಲಿ ಆಯೋಜಿಸಲಾಗಿದ್ದ ರೋಡ್ ಶೋ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು ಅಭ್ಯರ್ಥಿ ಮತ್ತು ಪಕ್ಷದ ನಾಯಕರ ಜೊತೆ ಎಡನೀರು ಮಠಕ್ಕೆ ಭೇಟಿ ನೀಡಿದರು. ಶ್ರೀ ಮಠದ ವತಿಯಿಂದ ಅವರನ್ನು ಮಠದ ವ್ಯವಸ್ಥಾಪಕ ರಾಜೇಂದ್ರ ಕಲ್ಲೂರಾಯ ಸ್ವಾಗತಿಸಿ ಬರಮಾಡಿಕೊಂಡರು. ಬಳಿಕ ಸಮಕಾಲೀನ ರಾಜಕೀಯ ಬೆಳವಣಿಗೆ ಹಾಗೂ ಚುನಾವಣೆ ಕುರಿತು ಶ್ರೀಗಳ ಜೊತೆ ಅವರು ಮಾತನಾಡಿದರು. ಈ ಸಂದರ್ಭ ಶ್ರೀ ಶಂಕರಾಚಾರ್ಯ ತೋಟಕಾಚಾರ್ಯ ಪರಂಪರೆಯ ಎಡನೀರು ಮಠದ ಮುದ್ರಾಂಕಿತ ಶೇಷವಸ್ತ್ರ ಸಹಿತ ಪ್ರಸಾದವನ್ನಿತ್ತು ಗೌರವಿಸಲಾಯಿತು. ಬಿಜೆಪಿ ರಾಜ್ಯ ಸಮಿತಿ ಸದಸ್ಯ ರವೀಶ ತಂತ್ರಿ ಕುಂಟಾರು, ಪ್ರಮುಖರಾದ ಮಹೇಶ ವಳಕ್ಕುಂಜ, ಸುಕುಮಾರ ಕುದ್ರೆಪ್ಪಾಡಿ ಮೊದಲಾದವರು ಈ ಸಂದರ್ಭ ಹಾಜರಿದ್ದರು.

ತೀರ ಪ್ರದೇಶದ ಜನರನ್ನು ಸರಕಾರ ಅವಗಣಿಸುತ್ತಿದೆ: ಮನುಲಾಲ್ ಮೇಲತ್

• **ಕಾಸರಗೋಡು:** ಕಡಲ ತೀರ ಪ್ರದೇಶದ ಜನರೊಂದಿಗೆ ಸರಕಾರವು ಅವಗಣನೆ ತೋರಿಸುತ್ತಿದೆ ಎಂದು ಎನ್‌ಡಿಎ ಉದುಮ ಮಂಡಲ ಅಭ್ಯರ್ಥಿ ಮನುಲಾಲ್ ಮೇಲತ್ ಆರೋಪಿಸಿದ್ದಾರೆ.



ಜಿಲ್ಲೆಯ ಸಮುದ್ರ ತೀರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸಂರಕ್ಷಣೆಗಾಗಿ ಶಾಶ್ವತ ಪರಿಹಾರ ಒದಗಿಸಬೇಕೆಂದು ಹಲವು ಬಾರಿ ಮನವಿ ಮಾಡಿಕೊಂಡರೂ ಈ ಬಗ್ಗೆ ಸರಕಾರವು ಯಾವುದೇ ಕ್ರಮಕೈಗೊಳ್ಳಲಿಲ್ಲ. ಕಳೆದ ಮಳೆಗಾಲದಲ್ಲಿ ರಾಜ್ಯ ಹೆದ್ದಾರಿಯ ತೃಕ್ಕನ್ನಾಡ್ ಪ್ರದೇಶದಲ್ಲಿ 30 ಮೀಟರ್ ನಷ್ಟು ತೀರ ಪ್ರದೇಶವನ್ನು ಸಮುದ್ರವು ಆವರಿಸಿತ್ತು. ಇದರಿಂದ ಮೀನು ಕಾರ್ಮಿಕರ ಪ್ರತಿಭಟನೆಯಿಂದಾಗಿ ಸ್ಥಳೀಯಾಡಳಿತ ಇಲಾಖೆ ತಾತ್ಕಾಲಿಕವಾಗಿ ಭಿತ್ತಿ ನಿರ್ಮಿಸುವ ಕೆಲಸ ಆರಂಭಿಸಿರುವುದು. ಇದೊಂದು ತಾತ್ಕಾಲಿಕ ಪರಿಹಾರ ಮಾತ್ರವಾಗಿದೆ. ಇದುವರೆಗೆ ಶಾಶ್ವತ ಪರಿಹಾರ ಕಲ್ಪಿಸಲಾಗಿಲ್ಲ ಎಂದು ಮನುಲಾಲ್ ಮೇಲತ್ ಹೇಳಿದರು.

ಚುನಾವಣಾ ಪ್ರಚಾರಾರ್ಥ ತೃಕ್ಕನ್ನಾಡ್ ಕಡಪ್ಪುರ ಪ್ರದೇಶದ ಜನರೊಂದಿಗೆ ಅವರು ಮಾತನಾಡುತ್ತಿದ್ದರು.

ಎನ್‌ಡಿಎ ಜಯ ಗಳಿಸಿದರೆ ಏಮ್ಸ್ ನಿಶ್ಚಿತ: ಅಶ್ವಿನಿ ಭರವಸೆ



• **ಕಾಸರಗೋಡು:** ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಜಯ ಗಳಿಸಿದರೆ ಏಮ್ಸ್ ಆಸ್ಪತ್ರೆಯನ್ನು ಕಾಸರಗೋಡಿನಲ್ಲಿ ಸ್ಥಾಪಿಸಲಾಗುವುದು ಎಂದು ಎನ್‌ಡಿಎ ಅಭ್ಯರ್ಥಿಯಾದ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಭರವಸೆ ನೀಡಿದ್ದಾರೆ. ಆರೋಗ್ಯ ರಂಗದಲ್ಲಿ ತೀರಾ ಹಿಂದುಳಿದಿರುವ ಕಾಸರಗೋಡು ಮಂಡಲಕ್ಕೆ ಏಮ್ಸ್ ಆಸ್ಪತ್ರೆ ಅತೀ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರದ ಜೊತೆ ಸಮಾಲೋಚಿಸಲಾಗುವುದು ಎಂದು ಅವರು ನುಡಿದರು.

ಮೊಗ್ರಾಲ್ ಪುತ್ತೂರು ಪಂಚಾಯತ್‌ನ ಮೂರು ಬೂತ್‌ಗಳನ್ನು ಹೊಂದಿರುವ ಶಕ್ತಿ ಕೇಂದ್ರ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಸರಕಾರವು ರಾಜ್ಯಕ್ಕೆ ಏಮ್ಸ್ ಆಸ್ಪತ್ರೆ ಯೋಜನೆಯನ್ನು ತರುವಲ್ಲಿ ವಿಫಲವಾಗಿದೆ. ಈ ಮೂಲಕ ರಾಜ್ಯದ ಜನರನ್ನು ವಂಚಿಸಲಾಗಿದ್ದು ಮಾತ್ರವಲ್ಲದೆ ರೋಗಿಗಳ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ರಾಜ್ಯದಲ್ಲೇ ಅತೀ ಹೆಚ್ಚು ಭೂಮಿ ಕಾಸರಗೋಡು ಜಿಲ್ಲೆಯಲ್ಲಿ ಲಭ್ಯವಿದೆ. ಆದರೂ ಕಾಸರಗೋಡಿಗೆ ಏಮ್ಸ್ ಆಸ್ಪತ್ರೆಯನ್ನು ಮಂಜೂರುಗೊಳಿಸುವಲ್ಲಿ ಎಡರಂಗ ಸರಕಾರವು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದು ಜನರು ಆಕ್ರೋಶಕ್ಕೀಡಾಗುವಂತೆ ಮಾಡಿದೆ ಎಂದು ಎಂ.ಎಲ್.ಅಶ್ವಿನಿ ಹೇಳಿದರು.

ಎಂಡೋಸಲ್ಫಾನ್ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾಸರಗೋಡು ಜಿಲ್ಲೆಯಲ್ಲಿ ಹತ್ತು ವರ್ಷಗಳಲ್ಲಿಯೂ ಸಾರ್ವಜನಿಕ ವಲಯದಲ್ಲಿ ಮಂಜೂರಾದ ವೈದ್ಯಕೀಯ ಕಾಲೇಜು ಕಟ್ಟಡವನ್ನು ಪೂರ್ಣರೂಪದಲ್ಲಿ ತೆರೆದುಕೊಡಲು ಸಾಧ್ಯವಾಗದಿರುವುದಕ್ಕೆ ಅವರು ಕಟು ಟೀಕೆ ವ್ಯಕ್ತಪಡಿಸಿದರು.

ಕೊಡೆತ್ತೂರು ಗುತ್ತುವಿನಲ್ಲಿ ಗಮನಸೆಳೆಯಿತು ಗುತ್ತುಗೊಂಜಿ ಕಲತ ಸುತ್ತು ವಿಶಿಷ್ಟ ಕಾರ್ಯಕ್ರಮ



• **ಕಿನ್ನಿಗೋಳಿ:** ಮಂಗಳೂರಿನ ತುಲುವೆರೆ ಕಲ ಸಂಘಟನೆಯವರು ಕೊಡೆತ್ತೂರು ಗುತ್ತುವಿನಲ್ಲಿ ಗುತ್ತುಗೊಂಜಿ ಕಲತ ಸುತ್ತು ಆಯೋಜಿಸಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಗುತ್ತಿನಾರ್ ನಿತಿನ್ ಶೆಟ್ಟಿ, ಕೊಡೆತ್ತೂರುಗುತ್ತುವಿನ ಹಿರಿಮೆಯ ಬಗ್ಗೆ ಮಾಹಿತಿ ನೀಡಿದರು.

ತುಳುವರ ಗುತ್ತಿನ ಮಾತನಾಡಿದ ಸಂಸ್ಕ ತಿ-ಬದುಕಿನ ಬಗ್ಗೆ ಜಾನಪದ ಚಿಂತಕ ವಿಜೇತ್ ಎಂ. ಶೆಟ್ಟಿ ಮಂಜನಾಡಿ ಹಿಂದಿನ ಕಾಲದಲ್ಲಿ ಗುತ್ತೆಂದರೆ ನ್ಯಾಯಾಲಯ ಇದ್ದಂತೆ. ಸಮಸ್ಯೆಗಳನ್ನು ಪಂಚಾಯಿತಿ ಮೂಲಕ ಪರಿಹರಿಸುತ್ತಿದ್ದ ಸ್ಥಳವದು. ಊರ ಮುಖಂಡರುಧಾರ್ಮಿಕ ಕಾರ್ಯಕ್ರಮಗಳ ನೇತೃತ್ವ ವಹಿಸುತ್ತಿದ್ದರು ಎಂದರು.

ತುಳುವೆರೆ ಕಲದ ಅಧ್ಯಕ್ಷೆ ಗೀತಾ ಲಕ್ಷ್ಮೀಶ್, ಸಾಹಿತಿ ಮುದ್ದು ಮೂಡುಬೆಳ್ಳೆ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ದಾಮೋದರ ಶೆಟ್ಟಿ, ಜೈತುಳುನಾಡ್ ಸಂಸ್ಥೆಯ ನಿಕಟಪೂರ್ವಾಧ್ಯಕ್ಷ ಉದಯ ಪೂಂಜ ವೇದಿಕೆಯಲ್ಲಿದ್ದರು.

ಎಚ್.ಕೆ. ನಯನಾಡು ನಿರೂಪಿಸಿದರು. ಚಂದ್ರಹಾಸ ಕುಂಬಾರ ಸ್ವಾಗತಿಸಿದರು. ರಾಜೇಶ್ ಶೆಟ್ಟಿ ವಂದಿಸಿದರು.

ಇಪ್ಪತ್ತಕ್ಕೂ ಹೆಚ್ಚು ಕವಿಗಳು ಗುತ್ತು, ಪರಿಸರವನ್ನು ವೀಕ್ಷಿಸಿ, ಕವನಗಳನ್ನು ರಚಿಸಿದರು. ಒಬ್ಬೊಬ್ಬರು ಒಂದಿಷ್ಟು ಸಾಲು ಬರೆದು ಅದನ್ನು ಮತ್ತೊಬ್ಬರು ಮುಂದುವರಿಸುವ ವಿಶಿಷ್ಟ ಕವಿತಾ ಬಂಡಿ ಯಶಸ್ವಿಯಾಯಿತು.

ಕ್ಯೊಲ ಪದವಿನಲ್ಲಿ ಗುಡ್ಡಕ್ಕೆ ಬೆಂಕಿ



• **ಕಡಬ:** ಕ್ಯೊಲ ಗ್ರಾಮದ ಕೊಲ್ಯ ನೀಡೇಲು ಬಳಿಯ ಪದವು ಎಂಬಲ್ಲಿ ಗುಡ್ಡಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಅಪಾರ ನಷ್ಟ ಉಂಟಾದ ಘಟನೆ ಭಾನುವಾರ ಸಂಭವಿಸಿದೆ. ಮಧ್ಯಾಹ್ನದ ವೇಳೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಪರಿಸರದ ಐದಾರು ಎಕರೆ ಪ್ರದೇಶವನ್ನು ಬೆಂಕಿ ಆವರಿಸಿಕೊಂಡಿತು. ಅದರಿಂದಾಗಿ ಗಿಡಗಂಟಿಗಳು, ಗೇರು ನಿಗಮದ ಗೇರು ಮರಗಳು ಸುಟ್ಟು ಕರಕಲಾಗಿವೆ. ಘಟನೆಯಿಂದಾಗಿ ಅಪಾರ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳೀಯರು ಹಾಗೂ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೆಂಜ್ ಕ್ಯಾಪ್



ಇಶಾನ್ ಕಿಶನ್
80
ರನ್

ಪರ್ಪಲ್ ಕ್ಯಾಪ್



ಜೇಕಬ್ ಡಫಿ
3
ವಿಕೆಟ್

ಕಿರುಸುದ್ದಿ

ಆರ್ಮ್ ರೆಸ್ಲಿಂಗ್: ರಾಷ್ಟ್ರಮಟ್ಟಕ್ಕೆ ಪ್ರತಿಭೆಗಳ ಆಯ್ಕೆ



ಬೆಂಗಳೂರು: ಕರ್ನಾಟಕ ಆರ್ಮ್ ರೆಸ್ಲಿಂಗ್ ಸಂಸ್ಥೆ (ಕೆಎಸ್‌ಎಎ) ಭಾನುವಾರದಂದು ಕೋರಮಂಗಲದ ನೆಕ್ಸಸ್ ಮಾಲ್‌ನಲ್ಲಿ 'ಕರ್ನಾಟಕ ರಾಜ್ಯ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್ ಆಯೋಜಿಸಿತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಪ್ರಮುಖ ಕ್ರೀಡಾಪಟುಗಳು ಈ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ಶಕ್ತಿ ಪ್ರದರ್ಶಿಸಿದರು. ಈ ಕ್ರೀಡಾಕೂಟವು ಕೇವಲ ರಾಜ್ಯಮಟ್ಟದ ಗೆಲುವಿಗಾಗಿ ಮಾತ್ರವಲ್ಲದೆ, 2026ರ ಜೂನ್‌ನಲ್ಲಿ ನಡೆಯಲಿರುವ 'ಅಖಿಲ ಭಾರತ ರಾಷ್ಟ್ರೀಯ ಚಾಂಪಿಯನ್ ಶಿಪ್'ಗೆ ಅರ್ಹತಾ ಸುತ್ತಾಗಿ ಕಾರ್ಯ ನಿರ್ವಹಿಸಿದೆ.

ಜಾಗತಿಕ ವೇದಿಕೆಗೆ ಹಾದಿ: ರಾಷ್ಟ್ರೀಯ ಮಟ್ಟದಲ್ಲಿ ಜಯಗಳಿಸುವ ಕ್ರೀಡಾಪಟುಗಳು ಅಂತರಾಷ್ಟ್ರೀಯ ಆರ್ಮ್ ರೆಸ್ಲಿಂಗ್ ಒಕ್ಕೂಟದ (ಐಎಫ್‌ಎ) ಆಶ್ರಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ 'ವಿಶ್ವ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್ 2026'ರಲ್ಲಿ ಭಾರತವನ್ನು ಪ್ರತಿನಿಧಿಸುವ ಸುವರ್ಣಾವಕಾಶವನ್ನು ಪಡೆಯಲಿದ್ದಾರೆ. ಕಳೆದ ವರ್ಷ ಅಜೆರ್ಬೈಜಾನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತವು 3 ಚಿನ್ನ ಮತ್ತು 2 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿರುವುದು ಇಲ್ಲಿ ಗಮನಿಸಬೇಕಾಗಿದೆ.

ವೀಕ್ಷಕ ವಿವರಣೆ ವೇಳೆ ಅಶ್ವಿನ್, ಸೆಹ್ವಾಗ್ ನಡುವೆ ಗೊಂದಲ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದ ವೇಳೆ ಹಿಂದಿ ವೀಕ್ಷಕ ವಿವರಕರಾದ ರವಿಚಂದ್ರನ್ ಅಶ್ವಿನ್ ಹಾಗೂ ವಿರೇಂದ್ರ ಸೆಹ್ವಾಗ್ ನಡುವೆ ವಾಗ್ವಾದ ನಡೆಯಿತು. ಹರಾಜಿಗೂ ಮುನ್ನ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ನಿವೃತ್ತರಾದ ಅಶ್ವಿನ್ ಇದೇ ಮೊದಲ ಬಾರಿಗೆ ಪಂದ್ಯಾವಳಿಯಲ್ಲಿ ವೀಕ್ಷಕ ವಿವರಕರಾಗಿ ಪದಾರ್ಪಣೆ ಮಾಡಿದ್ದಾರೆ. ಹೈದರಾಬಾದ್ ಹಾಗೂ ಬೆಂಗಳೂರು ನಡುವಿನ ಪಂದ್ಯಕ್ಕೂ ಮುನ್ನ ಉಭಯ ತಂಡಗಳಲ್ಲಿ ಆಕಾಶ್ ಚೋಪ್ರಾ ಪಂದ್ಯಕ್ಕೂ ಮುನ್ನ ಯಾರ ಮೇಲೆ ಒತ್ತಡವಿದೆ ಎಂಬ ಪ್ರಶ್ನೆಯಿಟ್ಟರು. ಅದಕ್ಕೆ ಉತ್ತರವಾಗಿ ವಿರೇಂದ್ರ ಸೆಹ್ವಾಗ್, ಒತ್ತಡ ಪೂರ್ತಿ ಅಶ್ವಿನ್ ಮೇಲಿದೆ, ಅವರು ಹೊಸತಾಗಿ ಬಂದಿದ್ದಾರೆ ಎಂದರು. ಅಶ್ವಿನ್ ನಾನೂ ಪಂದ್ಯದ ಬಗ್ಗೆ ಪ್ರೆಡಿಕ್ಷನ್ ಮಾಡಿದ್ದೇನೆ ಎಂದರು. ಅದಕ್ಕೆ ಸೆಹ್ವಾಗ್ ಪ್ರೆಡಿಕ್ಷನ್ ನೀವು ನಾಯಕರಿದ್ದಾಗಲೂ ಡ್ರೆಸ್ಸಿಂಗ್ ರೂಂನಲ್ಲಿ ಮಾಡಿರುವುದು ನೆನಪಿದೆ ಎಂದರು. ವೈಯಕ್ತಿಕವಾಗಿ ಮಾತನಾಡುತ್ತಾ ಸೆಹ್ವಾಗ್, ನಾನು ಅಶ್ವಿನ್ ಒಂದೆ ತಂಡದಲ್ಲಿದ್ದಾಗ ಅಶ್ವಿನ್ ತಂಡದಲ್ಲಿ ಆಫ್ ಸ್ಪಿನ್ನರ್ ಬಂದಿದ್ದಾರೆ ಏನು ಮಾಡಲಿ ಎಂದು ಕೇಳಿದ್ದರು ಅದಕ್ಕೆ ನಾನು ಮೊದಲ ಬಾಲ್‌ನಿಂದಲೇ ಸ್ಪಿನ್ ಮಾಡಿ ಎಂದಿದ್ದೆ ಆದಾಗ್ಯೂ ವಿಕೆಟುಗಳು ಬೀಳಲೇ ಇಲ್ಲ ಎಂದು ಕಾಲೆಳೆದರು. ಅದಕ್ಕೆ ಉತ್ತರಿಸಿದ ಅಶ್ವಿನ್ ವಿಕೆಟ್ ಬಿದ್ದಿತ್ತು. ಅದು ಕೂಡ ಆಫ್ ಸ್ಪಿನ್ನರ್‌ಗೆ ಎಂದು ನೆನಪಿಸಿಕೊಟ್ಟರು. ಕಾಮೆಂಟ್ರಿ ವೇಳೆ ಭಾರೀ ಗೊಂದಲ ಉಂಟಾಯಿತು.

ಬಾಕ್ಸಿಂಗ್‌ಗೆ ಕೋಮ್ ವಾಪಸ್?

ಹೊಸದಿಲ್ಲಿ: ಒಲಿಂಪಿಕ್ ಕಂಚು ಪದಕ ವಿಜೇತೆ ಹಾಗೂ ಆರು ಬಾರಿ ವಿಶ್ವ ಚಾಂಪಿಯನ್ ಎಂ.ಸಿ. ಮೇರಿ ಕೋಮ್ ವೃತ್ತಿಪರ ಬಾಕ್ಸಿಂಗ್‌ಗೆ ಪ್ರವೇಶಿಸುವ ಕುರಿತು ಚಿಂತನೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ. 43 ವರ್ಷದ ಮೇರಿ ಕೋಮ್, 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚು ಪದಕ ಗೆದ್ದು, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಬಾಕ್ಸರ್ ಆಗಿದ್ದರು. ಈಗ ಅಮೆಚೂರ್ ಬಾಕ್ಸಿಂಗ್‌ನಲ್ಲಿ ವಯೋಮಿತಿ ಮೀರಿರುವ ಕಾರಣ ಹೊಸ ಅವಕಾಶಗಳತ್ತ ಗಮನ ಹರಿಸಿದ್ದಾರೆ. ನನ್ನ ಸಾಧನೆಗಳಲ್ಲಿ ಆರು ವಿಶ್ವ ಚಾಂಪಿಯನ್‌ಶಿಪ್ ಗೆಲುವು ಅತ್ಯಂತ ವಿಶೇಷ. ಈಗ ವಯೋಮಿತಿ ಕಾರಣದಿಂದ ಅಮೆಚೂರ್ ವಿಭಾಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

2ನೇ ಪಂದ್ಯದಲ್ಲಿ ಕೆಕೆಆರ್ 220/4 | ಮುಂಬೈಗೆ ಶಾರ್ದೂಲ್ ಆಸರೆ | ರಘುವಂಶಿ ಅರ್ಧ ಶತಕ

ಮಿಂಚಿದ ರಹಾನೆ: ಮುಂಬೈಗೆ ಕಠಿಣ ಗುರಿ

ಮುಂಬೈ: ಅಜಿಂಕ್ಯಾ ರಹಾನೆ, ಫಿನ್ ಆಲೆನ್ ಮತ್ತು ಅಂಗ್ರಿಶ್ ರಘುವಂಶಿ ಅವರ ಸ್ಫೋಟಕ ಬ್ಯಾಟಿಂಗ್‌ಗೆ ರಿಂಕು ಸಿಂಗ್ ಅವರ ಫಿನಿಶಿಂಗ್ ಟಚ್ ಸಿಕ್ಕ ನಂತರ ಶಾರ್ದೂಲ್ ಠಾಕೂರ್ ಅವರ ಮಾರಕ ದಾಳಿ ಹೊರತಾಗ್ಯೂ ಮುಂಬೈ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತಾ ದೊಡ್ಡ ಸ್ಕೋರ್ ಕಲೆಹಾಕಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಹಾಗೂ ಕೆಕೆಆರ್ ತಂಡಗಳು ಮುಖಾಮುಖಿ ಯಾಗಿವೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 4 ವಿಕೆಟ್ ನಷ್ಟಕ್ಕೆ ಬರೋಬ್ಬರಿ 220 ರನ್ ಗಳಿಸಿದೆ. ರಹಾನೆ 40 ಬಾಲ್‌ಗಳಲ್ಲಿ 5 ಸಿಕ್ಸರ್ ಹಾಗೂ 3 ಬೌಂಡರಿಗಳೊಂದಿಗೆ 67 ರನ್ ಗಳಿಸಿ ಬೆಸ್ಟ್ ಸ್ಕೋರರ್ ಆದರು. ಆಲೆನ್ ಸ್ಫೋಟಕ ಆರಂಭ ಒದಗಿಸಿದರು. ರಘುವಂಶಿ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದರು. ರಿಂಕು ಅತ್ಯುತ್ತಮ ಫಿನಿಶಿಂಗ್ ನೀಡಿದರು. ಮುಂಬೈ ಪರ ಶಾರ್ದೂಲ್ ಠಾಕೂರ್ 3 ವಿಕೆಟ್ ಕಿತ್ತಿ ಮಿಂಚಿದರು.

300 ಪಂದ್ಯಗಳನ್ನಾಡಿದ ಮುಂಬೈ

ಮುಂಬೈ ಇಂಡಿಯನ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಇತಿಹಾಸದಲ್ಲಿ 300 ಪಂದ್ಯಗಳನ್ನಾಡಿದ ಏಕೈಕ ತಂಡ ಅನ್ನಿಸಿಕೊಂಡಿತು. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಎರಡನೇ ಪಂದ್ಯದ ಮೂಲಕ 2026ರ ಅಭಿಯಾನ ಆರಂಭಿಸಿರುವ ಮುಂಬೈ, ಐಪಿಎಲ್ ಇತಿಹಾಸದ 300ನೇ ಪಂದ್ಯವಾಡಿತು. 2008ರಿಂದ ಇಲ್ಲಿಯವರೆಗೂ ತಂಡ ಪ್ರತಿಯೊಂದು ಆವೃತ್ತಿಯಲ್ಲಿ ಪ್ರಮುಖ ಆಟವಾಡಿದೆ. ಇದಲ್ಲದೆ ಹಲವು ಬಾರಿ ಪ್ಲೇಆಫ್ ಆಡಿದೆ. ಐದು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಎಲ್ಲಾ ಪಂದ್ಯಗಳನ್ನು ಕೂಡಿಸಿ ಲೆಕ್ಕಿಸಿದರೆ ಮುಂಬೈ 300 ಪಂದ್ಯಗಳನ್ನು ಪೂರೈಸಿದೆ.





ಕೆಕೆಆರ್‌ಗೆ ಸ್ಫೋಟಕ ಆರಂಭ

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಕೆಕೆಆರ್‌ಗೆ ಭರ್ಜರಿ ಆರಂಭ ದೊರೆಯಿತು. ಅನಿರೀಕ್ಷಿತ ವಾಗಿ ನರೈನ್ ಬದಲಿಗೆ ನಾಯಕ ಅಜಿಂಕ್ಯಾ ರಹಾನೆ ಮತ್ತು ಸ್ಫೋಟಕ ಬ್ಯಾಟರ್ ಫಿನ್ ಆಲೆನ್ ಕಣಕ್ಕಿಳಿದರು. ಯಥಾಸ್ಥಿತಿ ಆರಂಭಿಕ ಓವರ್‌ನಲ್ಲಿ ಆಲೆನ್ ದಂಡಿಸಲಾರಂಭಿಸಿದರು. ಸೆಟ್ ಆಗಬೇಕಾದ ಸಮಯವೂ ತೆಗೆದುಕೊಳ್ಳದ ರಹಾನೆ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮುಂಬೈಗೆ ಆರಂಭಿಕ ಒತ್ತಡ ಹೇರಿದರು. ಇಬ್ಬರ ಆಟಕ್ಕೆ ಮುಂಬೈ ತತ್ತರಿಸಿ ಹೋದಂತೆ 5.2 ಓವರ್ ವೇಳೆ 69ಕ್ಕೇರಿತ್ತು. ಆಲೆನ್ ಕ್ಯಾಚ್ ಆದರು. ರಹಾನೆ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಈ ಬಾರಿಯ ಅತ್ಯಂತ ದುಬಾರಿ ಆಟಗಾರ ಕ್ಯಾಮ್ರನ್ ಗ್ರೀನ್ ಕೂಡ ರಹಾನೆ ಆಟಕ್ಕೆ ಹೊಂದಿಕೊಂಡರು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಉದ್ದೇಶದಿಂದ ಬಂದ ಗ್ರೀನ್ ಬಾನೆತ್ತರದ ಸಿಕ್ಸರ್ ಮತ್ತು ಬೌಂಡರಿ ಬಾರಿಸುವಷ್ಟರಲ್ಲಿ ಸುಸ್ತಾದರು. ಪವರ್‌ಪ್ಲೇನಲ್ಲಿ 78 ರನ್ ಗಳಿಸಿದ್ದ ಕೆಕೆಆರ್, ರಹಾನೆ ಅರ್ಭಟಕ್ಕೆ ತತ್ತರಿಸಿದಂತಾಯಿತು. ಮಧ್ಯಮ ಕ್ರಮಾಂಕದಲ್ಲಿ ಅಂಗ್ರಿಶ್ ರಘುವಂಶಿ ಸ್ಫೋಟಕ ಅರ್ಧಶತಕ ಬಾರಿಸಿದರು. ಸ್ಲಾಗ್ ಓವರ್‌ಗಳ ವರೆಗೆ ವಿಕೆಟ್ ಕಾಯ್ದುಕೊಂಡ ಅವರು, ದಂಡಿಸುವ ಕೆಲಸಕ್ಕೆ ಮುಂದಾದರು. ಆಡಿದ 29 ಬಾಲ್‌ಗಳಲ್ಲಿ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಇತ್ತ ಬೇಕಾಗಿದ್ದ ಫಿನಿಶಿಂಗ್ ಟಚ್ ನೀಡುವಲ್ಲಿ ರಿಂಕು ಸಿಂಗ್ ಯಶ ಕಂಡರು. ಹೆಚ್ಚಿನ ಸಮಯ ಸಿಂಗಲ್‌ಗಳಿಗೆ ಕೊಡದ ಅವರು 21 ಬಾಲ್‌ಗಳಲ್ಲಿ ಅಜೇಯ 33 ರನ್ ಗಳಿಸಿ ಮಿಂಚಿದರು.

ಶಾರ್ದೂಲ್ ಸ್ಟ್ರೈಕ್

ಮುಂಬೈಗೆ ಬೇಕಾದಗಲೆಲ್ಲಾ ಶಾರ್ದೂಲ್ ಠಾಕೂರ್ ವಿಕೆಟ್ ತಂದುಕೊಟ್ಟರು. ಪವರ್‌ಪ್ಲೇನ 6ನೇ ಓವರ್ ಮಾಡಲು ಬಂದ ಅವರು, ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಆಲೆನ್ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. 9ನೇ ಓವರ್ ಮಾಡಲು ಬಂದಾಗ ಗ್ರೀನ್ ವಿಕೆಟ್ ಪಡೆದರು. 14ನೇ ಓವರ್‌ನಲ್ಲಿ ಅರ್ಧಶತಕ ಪೂರೈಸಿಕೊಂಡು ಭರ್ಜರಿ ಬ್ಯಾಟಿಂಗ್ ಮಾಡುತ್ತಿದ್ದ ರಹಾನೆ ವಿಕೆಟ್ ಪಡೆದು ಆಪತ್ಬಾಂಧವರಾಗಿ ಕಾಣಿಸಿಕೊಂಡರು.



ಮೊದಲ ಬಾರಿಗೆ ಸಂಜು ಎದುರಿಸಲಿರುವ ಆರ್‌ಆರ್

ಚೆನ್ನೈ-ರಾಜಸ್ಥಾನ ಫೈಟ್ ಇಂದು

» ಮೊದಲ ಪಂದ್ಯಕ್ಕಿಲ್ಲ ಡೆವಾಲ್ಡ್ ಬ್ರೇವಿಸ್

ಗುವಾಹಟಿ: ಮಹೇಂದ್ರ ಸಿಂಗ್ ಧೋನಿ ಇಲ್ಲದೆ ಕಣಕ್ಕಿಳಿಯುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ನೂತನ ನಾಯಕನೊಂದಿಗೆ ಆಡುತ್ತಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಸೋಮವಾರದ ಸೂಪರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹರಾಜಿಗೂ ಮುನ್ನ ನಡೆದ ಟ್ರೇಡಿಂಗ್‌ಗಳಲ್ಲಿ ಉಭಯ ತಂಡಗಳು ಮುಖ್ಯವಾದ ಡೀಲ್ ಮಾಡಿಕೊಂಡಿದ್ದವು. ಕಳೆದ ವರ್ಷದ ವರೆಗೂ ಚೆನ್ನೈ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಳ್ಳುತ್ತಿದ್ದ ರವೀಂದ್ರ ಜಡೇಜಾ ಈ ಬಾರಿ ರಾಜಸ್ಥಾನ ತಂಡದಲ್ಲಿ ಆಡುತ್ತಿದ್ದಾರೆ. ಇತ್ತ ರಾಜಸ್ಥಾನ ತಂಡದ ನಾಯಕರಾಗಿದ್ದ ಸಂಜು ಸ್ಯಾಮ್ಸನ್ ಚೆನ್ನೈ ಪರ ಕಣಕ್ಕಿಳಿಯಲಿದ್ದು ಉಭಯ ತಂಡಗಳ ನಡುವಿನ ಕಾಳಗ ಕ್ರಿಕೆಟ್ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ. ಟ್ರೇಡಿಂಗ್ ಪ್ರಕಾರ ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿದ್ದ ಸ್ಯಾಮ್ ಕರ್ರನ್ ಕೂಡ ರಾಜಸ್ಥಾನ ಪರ ಆಡಬೇಕಿತ್ತು. ಆದರೆ ಅವರು ಗಾಯಗೊಂಡ ನಿಟ್ಟಿನಲ್ಲಿ ಸಾಧ್ಯವಾಗುತ್ತಿಲ್ಲ. ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ.



2019ರ ನಂತರ ಮೊದಲ ಬಾರಿಗೆ ಧೋನಿ ಇಲ್ಲ

ಸಮಸ್ತ ಕ್ರಿಕೆಟ್ ಅಭಿಮಾನಿಗಳು ಮಹೇಂದ್ರ ಸಿಂಗ್ ಧೋನಿಗಾಗಿ ಕಾಯುತ್ತಾರೆ. ಐಪಿಎಲ್ ಬಂದ ತಕ್ಷಣಕ್ಕೆ ಧೋನಿ ಅಭಿಮಾನಿಗಳಲ್ಲಿ ಮಂದಹಾಸ ಸೃಷ್ಟಿಯಾಗುತ್ತದೆ. ಆದರೆ ಈ ಬಾರಿ ಆ ಮಂದಹಾಸ ಮಂಕಾಗಿದ್ದು, ಗಾಯದ ಕಾರಣದಿಂದ ಧೋನಿ ಆರಂಭಿಕ 6 ಪಂದ್ಯಗಳನ್ನು ಆಡುತ್ತಿಲ್ಲ. ವರದಿಗಳ ಪ್ರಕಾರ ಅವರು ಚಿಕಿತ್ಸೆ ಪಡೆಯುತ್ತಿದ್ದು, ಗುವಾಹಟಿಗೆ ತಂಡದೊಂದಿಗೆ ಪ್ರಯಾಣಿಸಿಲ್ಲ. 2019ರ ಮುಂಬೈ ಹಾಗೂ ಚೆನ್ನೈ ವಿರುದ್ಧದ ಪಂದ್ಯಕ್ಕೆ ಧೋನಿ ಕೊನೆಯ ಬಾರಿ ಅಲಭ್ಯರಾಗಿದ್ದರು. ಈ ನಂತರ ಪ್ರತಿಯೊಂದು ಆವೃತ್ತಿಯಲ್ಲೂ ಧೋನಿ ಕಣಕ್ಕಿಳಿದಿದ್ದಾರೆ.





ಚೆನ್ನೈಗೆ ಯುವಕರ ಬಲ

ಕಳೆದ ಆವೃತ್ತಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಆಗಲೇ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿತ್ತು. ಆಯುಷ್ ಮಾತ್ರೆ ಹಾಗೂ ಉರ್ವಿಲ್ ಪಟೇಲ್ ಅಂತವರನ್ನು ಆಯ್ಕೆ ಮಾಡಿಕೊಂಡಿತ್ತು. ಈ ನಡುವೆ ಸಂಜು ಸ್ಯಾಮ್ಸನ್ ಅವರನ್ನು ಟ್ರೇಡ್ ಮಾಡಿಕೊಂಡಿದೆ. ಗಾಯಕ್ವಾಡ್ ಕೂಡ ತಂಡದ ನಾಯಕತ್ವ ನಿಭಾಯಿಸಲು ಸಜ್ಜಾಗಿದ್ದಾರೆ. ಹರಾಜಿನಲ್ಲಿ ಕಾರ್ತಿಕ್ ಶರ್ಮ, ಪ್ರಶಾಂತ್ ಅಂಥ ಯುವಕರನ್ನೇ ಆಯ್ಕೆ ಮಾಡಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ಯುವಕರನ್ನು ಹೊಂದಿರುವ ತಂಡವಾಗಿದೆ. ಬ್ಯಾಟಿಂಗ್ ವಿಭಾಗವನ್ನು ಸಂಜು, ಗಾಯಕ್ವಾಡ್, ಆಯುಷ್, ಬ್ರೇವಿಸ್, ದುಬೆ ಬಲಪಡಿಸಿದರೆ ಬೌಲಿಂಗ್ ವಿಭಾಗದಲ್ಲಿ ಖಲೀಲ್, ರಾಮಕೃಷ್ಣ ಮ್ಯಾಥೀವ್ ಶಾರ್ಟ್, ಮಾಟ್ ಹೆನ್ರಿ, ನೂರ್ ಅಹ್ಮದ್ ಅಂಥವರಿದ್ದಾರೆ.

ಭರವಸೆಯಲ್ಲಿ ರಾಜಸ್ಥಾನ

ರಿಯಾನ್ ಪರಾಗ್ ಅವರ ನೇತೃತ್ವದಲ್ಲಿ ಕಣಕ್ಕಿಳಿಯುತ್ತಿರುವ ರಾಜಸ್ಥಾನ ತಂಡಕ್ಕಿಗ ಜಡೇಜಾ ಬಲವಿದೆ. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ಹೆಟ್ಮೇರ್, ಫೆರಾರಿಯಾ, ಧ್ರುವ್ ಜುರೇಲ್ ಅಂತಹ ಬ್ಯಾಟರ್‌ಗಳಿದ್ದಾರೆ. ಆರ್ಚರ್, ತುಷಾರ್ ದೇಶಪಾಂಡೆ, ನಾಂದ್ರೆ ಬರ್ಗರ್ ಅಂತಹ ಬೌಲರ್‌ಗಳಿದ್ದು ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.



ಪಂದ್ಯದ ಮಾಹಿತಿ

ಯಾವಾಗ: ಸೋಮವಾರ
ಎಲ್ಲಿ: ಗುವಾಹಟಿ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್


ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ. ಅಲ್ಪ ಇಬ್ಬನಿ ಕಾಟ ಇದ್ದದ್ದೆ. ಬ್ಯಾಟರ್‌ಗಳಿಗೆ ಅಲ್ಪ ಲಾಭ ನೀಡಲಿದೆ, ಆದಾಗ್ಯೂ ವೇಗ ಮತ್ತು ಸ್ಪಿನ್ನರ್‌ಗಳು ಮಿಂಚಬಲ್ಲರು. ಹೆಚ್ಚಿನ ಬೌನ್ಸ್ ಇರಲಿದೆ, ಮಳೆ ಕಾಟ ಇಲ್ಲ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಲಿದೆ.

ದಾಖಲೆಗಳ ಸರದಾರ ಕೊಹ್ಲಿ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಾದಂತೆ ಆರ್‌ಸಿಬಿಯ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಹೆಸರಿನಲ್ಲಾಗುವ ದಾಖಲೆಗಳು ಪ್ರಾರಂಭಗೊಂಡಿವೆ. ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಬ್ಯಾಟಿಂಗ್ ಮಾಡಿರುವ ವಿರಾಟ್ ಕೊಹ್ಲಿ ಹೈದರಾಬಾದ್ ವಿರುದ್ಧದ ಉದ್ಘಾಟನಾ ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಅಜೇಯ 69 ರನ್ ಗಳಿಸುವುದರೊಂದಿಗೆ ಅರ್ಧಶತಕ ಪೂರೈಸಿಕೊಂಡ ಅವರು, ವಿವಿಧ ದಾಖಲೆಗಳನ್ನು ಮಾಡಿದ್ದಾರೆ. ಚೇಸಿಂಗ್‌ನಲ್ಲಿ ಅತಿ ಹೆಚ್ಚು ರನ್, ಐಪಿಎಲ್‌ನಲ್ಲಿ ಅತಿ ಹೆಚ್ಚು ಬಾರಿ ಟಾಪ್ ಸ್ಕೋರರ್ ಆದ ದಾಖಲೆಗಳೂ ಕೊಹ್ಲಿ ಹೆಸರಿನಲ್ಲಿ ಸೇರಿಕೊಂಡಿವೆ.

ವಿವಿಧ ದಾಖಲೆ

ಮೊದಲಿಗೆ ಐಪಿಎಲ್ ಪಂದ್ಯಗಳ ವೇಳೆ ಚೇಸಿಂಗ್‌ನಲ್ಲಿ 4000 ರನ್ ಕಲೆಹಾಕಿದ ಮೊದಲ ಬ್ಯಾಟರ್ ಎಂಬ ದಾಖಲೆ ಮಾಡಿದರು. ಐಪಿಎಲ್ ಪಂದ್ಯಗಳಲ್ಲಿ ಅತಿ ಹೆಚ್ಚು ಬಾರಿ ತಂಡದ ಪರ ಅತ್ಯಧಿಕ ರನ್ ಗಳಿಸಿದ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಈ ಹಿಂದೆ ಈ ದಾಖಲೆ ಡೇವಿಡ್ ವಾರ್ನರ್ (66) ಹೆಸರಿನಲ್ಲಿತ್ತು. ಇದೀಗ 67ನೇ ಬಾರಿ ಟಾಪ್ ಸ್ಕೋರರ್ ಆಗಿದ್ದಾರೆ. ಇದಲ್ಲದೆ, ಐಪಿಎಲ್‌ನಲ್ಲಿ 50+ ಸ್ಕೋರ್‌ಗಳಿಸಿ ಅತ್ಯಧಿಕ ಬಾರಿ ಅಜೇಯರಾಗಿ ಉಳಿದ ಬ್ಯಾಟರ್ ಎಂಬ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ.



ಸಿಕ್ಸರ್‌ಗಳ ಸುರಿಮಳೆ, ರನ್ ಹೊಳೆ

ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಬಾರಿ 50+ ಸ್ಕೋರ್‌ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಅತಿ ಹೆಚ್ಚು ರನ್ (874) ಗಳಿಸಿದ ಆಟಗಾರ, ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಸಿಕ್ಸ್ ಸಿಡಿಸಿದ ಭಾರತೀಯ ಓಪನರ್ ಎಂಬ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಇದಲ್ಲದೆ ಐಪಿಎಲ್ ಇತಿಹಾಸದಲ್ಲಿ ಒಂದೇ ತಂಡದ ಪರ 19 ಸೀಸನ್ ಆಡಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ ಎಸ್‌ಆರ್‌ಎಚ್ ವಿರುದ್ಧ ಗಳಿಸಿದ 69 ರನ್‌ಗಳೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ.

ವಿರಾಮದಿಂದ ಒಳಿತು: ವಿರಾಟ್ ಕೊಹ್ಲಿ

ಬೆಂಗಳೂರು: ಸರಣಿಗಳ ನಂತರ ಸಿಗುವ ವಿರಾಮ ನನಗೆ ಕ್ರಿಕೆಟ್‌ಗಾಗಿ ಉತ್ಸುಕರನ್ನಾಗಿ ಮಾಡಿದೆ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಉದ್ಘಾಟನಾ ಪಂದ್ಯದಲ್ಲಿ ಬೆಂಗೂರು ತಂಡ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು, ಅಜೇಯ 69 ರನ್ ಗಳಿಸಿದ್ದರು. ಪಂದ್ಯಕ್ಕೂ ಮುನ್ನ ಕೊಹ್ಲಿಯ ಕ್ರಿಕೆಟ್‌ನಿಂದ ದೂರ ಉಳಿದ ದಿನಗಳ ಬಗ್ಗೆ ಚರ್ಚೆಯಾಗುತ್ತಿದ್ದವು. ಪಂದ್ಯದ ಬಳಿಕ ಇಷ್ಟು ದಿನ ಕ್ರಿಕೆಟ್‌ನಿಂದ ದೂರ ಇದ್ದಿರಿ, ಇದೀಗ ಮತ್ತೊಮ್ಮೆ ಮೈದಾನಕ್ಕೆ ಮರಳಿದ ನಂತರ ಯಾವ ಸವಾಲು ಮುಂದಿತ್ತು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ವಿರಾಟ್ ಕೊಹ್ಲಿ, ಸುಮಾರು 15 ವರ್ಷಗಳಿಂದ ನಾನು ನಿರಂತರ ಕ್ರಿಕೆಟ್ ಆಡುತ್ತಿರುವುದನ್ನು ನೀವು ನೋಡಿದ್ದೀರಿ. ಸತತ ಆಟದಿಂದಾಗಿ ನನಗೆ ವಿರಾಮವಿಲ್ಲದಂತೆ ಮಾಡಿತ್ತು. ಇದರಿಂದ ಹಲವು ಸಮಸ್ಯೆಗಳಾಗುತ್ತಿದ್ದವು. ಆದರೆ ಈಗ ಸಿಗುತ್ತಿರುವ ವಿರಾಮ ನನಗೆ ಈ ರೀತಿಯ ಸಮಸ್ಯೆಗಳಿಗೆ ಸಹಾಯ ಮಾಡುತ್ತಿದೆ ಎಂದರು. ವಿರಾಮ ಸಿಗುವುದರಿಂದ ಉತ್ಸುಕನಾಗಿರುತ್ತೇನೆ. ಮತ್ತು ಫ್ರೆಶ್ ಆಗಿರುತ್ತೇನ ಇದರಿಂದ ನನ್ನ ವೈಯಕ್ತಿಕ ಆಟದ ಮೇಲೆ ಭಾರೀ ಪರಿಣಾಮ ಬೀಳುತ್ತದೆ ಎಂದಿದ್ದಾರೆ.

ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪ | ವಿಶ್ವಕಪ್ ಗೆಲುವು ಭಾರತಕ್ಕೆ ಹೆಮ್ಮೆ

ಜಮ್ಮು-ಕಾಶ್ಮೀರ ಆಟಕ್ಕೆ ಮೋದಿ ಮೆಚ್ಚುಗೆ

ಹೊಸದಿಲ್ಲಿ: ಕಳೆದ ತಿಂಗಳು ಮುಕ್ತಾಯಗೊಂಡ ದೇಶಿ ಕ್ರಿಕೆಟ್ ಪಂದ್ಯಾವಳಿ ರಣಜಿ ಟ್ರೋಫಿ ಮುಡಿಗೇರಿಸಿಕೊಂಡಿರುವ ಜಮ್ಮು-ಕಾಶ್ಮೀರ ತಂಡದ ವೈಖರಿಯನ್ನು ಪ್ರಧಾನಿ ನರೇಂದ್ರ ಮೋದಿ ಹೊಗಳಿದರು.

ಭಾನುವಾರದ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಈ ಬಗ್ಗೆ ಪ್ರಸ್ತಾಪಿಸಿರುವ ಅವರು, ಮೊದಲ ಬಾರಿಗೆ ರಣಜಿ ಟ್ರೋಫಿ ಗೆದ್ದುಕೊಂಡಿರುವುದು ಜಮ್ಮು ಮತ್ತು ಕಾಶ್ಮೀರದ ಕ್ರೀಡಾ ಕ್ಷೇತ್ರಕ್ಕೆ ಐತಿಹಾಸಿಕ ಕ್ಷಣವಾಗಿದೆ. ಮುಂದಿನ ದಿನಗಳಲ್ಲೂ ಜಮ್ಮು-ಕಾಶ್ಮೀರ ಚಾಂಪಿಯನ್ ಪಟ್ಟ ಅಲಂಕರಿಸಲಿದೆ, ಅಲ್ಲಿನ ಕ್ರೀಡಾಪಟುಗಳು ಎತ್ತರ ಸಾಧನೆಗಳನ್ನು ಮಾಡುತ್ತಾರೆಂಬ ಭರವಸೆ ನನಗಿದೆ ಎಂದರು. ತಿಂಗಳ ಆರಂಭದಲ್ಲಿ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಪಂದ್ಯಾವಳಿ ಬಗ್ಗೆ ಪ್ರಸ್ತಾಪಿಸಿರುವ ಮೋದಿ, ಈ ಗೆಲುವು ಐತಿಹಾಸಿಕ ಸಾಧನೆ. ನಮ್ಮ ತಂಡ ಗೆದ್ದಿರುವುದು ದೇಶದ ಎಲ್ಲಾ ಜನರಿಗೂ ಹೆಮ್ಮೆಯ ವಿಚಾರ ಎಂದು ಬಣ್ಣಿಸಿದರು.




> ಈ ಗೆಲುವಿನ ಮೂಲಕ ಜಮ್ಮು-ಕಾಶ್ಮೀರದಲ್ಲಿ ಕ್ರೀಡಾ ಪ್ರೀತಿ ಹೆಚ್ಚಳಗೊಂಡಿದೆ. ಕ್ರಿಕೆಟ್ ವಿಚಾರಲ್ಲಿ ಜನರು ಇನ್ನಷ್ಟು ಉತ್ಸುಕರಾಗುವಂತೆ ಮಾಡಿದೆ. ಅಲ್ಲಿನ ಜನರಿಗೆ ಕ್ರೀಡಯಲ್ಲಿ ಗಮನಾರ್ಹ ಆಸಕ್ತಿಯಿದೆ. ಇಂತಹ ಗೆಲುವುಗಳಿಂದ ಈಗ ಜಮ್ಮು ಸ್ಪೋರ್ಟ್ಸ್ ಹಬ್ ಆಗುತ್ತಿರುವುದು ಹೆಮ್ಮೆಯ ವಿಚಾರ.
>
> ■ ನರೇಂದ್ರ ಮೋದಿ, ಪ್ರಧಾನಿ

ಹೃದಯಸ್ಪರ್ಶಿ ಗೆಲುವು

ಜಮ್ಮು-ಕಾಶ್ಮೀರ ಗೆದ್ದಿರುವ ವಿಚಾರದ ಬಗ್ಗೆ ಮಾತನಾಡುತ್ತಾ, ಏಳು ದಶಕದ ಕಾಯುವಿಕೆಯ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಚಾಂಪಿಯನ್ ಪಟ್ಟ ದಕ್ಕಿದ್ದು ಹೃದಯ ಸ್ಪರ್ಶಿಯವಾಗಿದೆ. ಇದು ಅಲ್ಲಿನ ಆಟಗಾರರ ವರ್ಷಾನುಗಟ್ಟಲೆ ಪಟ್ಟ ಪ್ರಯತ್ನ ಮತ್ತು ಶ್ರಮದ ಬಗ್ಗೆ ಹೇಳುತ್ತದೆ. ತಂಡದ ಬಗ್ಗೆ ಅಲ್ಲದೆ, ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಕಿಬ್ ನಬಿ ದಾರ್ ಬಗ್ಗೆಯೂ ಮಾತನಾಡಿರುವ ಪ್ರಧಾನಿ ಮೋದಿ, 60 ವಿಕೆಟ್ ಪಡೆದ ಆಕಿಬ್ ನಬಿ ಪ್ರದರ್ಶನ ಗಮನಾರ್ಹವಾಗಿತ್ತು ಎಂದಿದ್ದಾರೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5938

ಎಡದಿಂದ ಬಲಕ್ಕೆ
1.ಚಾರರು ಸರದ ಬಗ್ಗೆ ತಂದ ಸುದ್ದಿ (4)
3.ಬೆದರಿಸಿ ಕಿತ್ತುಕೊಳ್ಳುವುದು (3)
5.ಮುದಿತನ ಎಂಬರ್ಥದ ಷಟ್ಪದಿಯ ಹೆಸರು (3)
7.ಹುಡುಗುತನದಿಂದ ಕೂಡಿದ್ದು (3)
8.ಮತಿಯ ನಡುವೆ ಜೇನಿನಂತೆ ಸಿಹಿಯಾದದ್ದಿದೆ (4)
10.ನಕಲಿ ಒಳಗೊಂಡ ಶೌರ್ಯದಿಂದ ಕೂಡಿದ್ದು (4)
12.ಅಪರಾಧಿಗೆ ಹಾಕುವ ಬೇಡಿ (3)
14.ಕುಲದ ನಡುವೆ ಮೋಸದಿಂದ ಕೂಡಿದ್ದಿದೆ (3)
15.ಕಾಗದ-ಪತ್ರಗಳನ್ನಿಡಲು ಬಳಸುವ ಚೀಲ (3)
16.ಗಬಗಬನೆ ತಿನ್ನುವಿಕೆ (4)

ಮೇಲಿನಿಂದ ಕೆಳಕ್ಕೆ
1.ನಿಜವಾದ ವಿವರ-ಸಂಗತಿ (3)
2.ಶರದ ನಡುವಿನ ಸಪ್ತಾಹದ ದಿನ ತಲೆಕೆಳಗಾಗಿದೆ (4)
4.ಚಿಕ್ಕ ಮಕ್ಕಳ ಊಟದ ಪಂಕ್ತಿ (4)
6.ಕನಿಕರ ತಲೆಕೆಳಗಾಗಿದೆ (3)
7.ಆಕಾಶವಾಣಿಯನ್ನು ಹೀಗೂ ಕರೆಯಬಹುದು (3)
9.ಬಾಣಸಿಗ ರುಚಿ ಹೆಚ್ಚಿಸಲು ಬಳಸುವ ಪದಾರ್ಥ (3)
10.ಕಲದ ನಡುವೆ ಋಷಿಯ ಹೆಸರಿದೆ (4)
11. ಮನುಷ್ಯ ಮೊದಲಿರುವ ಅತೀವ ನೋವು (3)
12. ಕಾರ್ಯಕ್ರಮವನ್ನು ಮುನ್ನಡೆಸುವ ವ್ಯಕ್ತಿ (4)
13.ದೃಷ್ಟಿಗೆ ಬೀಳುವಂತೆ ಮಾಡು (3)

5937 ಉತ್ತರ

ಎಡದಿಂದ ಬಲಕ್ಕೆ:
3.ರೆಕ್ಕೆಬಡಿ 5.ವ್ಯವಹಾರ
6.ಆಯಾಸ 7.ನೆಗೆತ
9.ಜಾನಕಿ 10.ಟಗರು
12.ರಜತ 14.ಕುಟೀರ
16.ಹವಿಭಾಗ
17.ತೋಪುಖಾನೆ

ಮೇಲಿನಿಂದ ಕೆಳಕ್ಕೆ :
1.ಭವ್ಯಮನೆ 2.ಸರಸ
3.ಆಸರೆ 4.ಬಡತನ
8.ತವರು 9.ಜಾಗರ
11.ಗಜರಿಮ 13.ತರಗತಿ
14.ಕುಲೀನೆ 15.ರಹಸ್ಯ

ಕಿರುಸುದ್ದಿ

ಸಿಡಿಲಾರ್ಭಟಕ್ಕೆ ಸುಟ್ಟು ಕರಕಲಾದ ತೆಂಗಿನ ಮರ

ಸುಂಟಿಕೊಪ್ಪ: ಸುಂಟಿಕೊಪ್ಪ ಪಟ್ಟಣದಲ್ಲಿ ಶನಿವಾರ ಸಂಜೆ ಭಾರೀ ಗುಡುಗು ಸಿಡಿಲಿನ ಆರ್ಭಟ ಕಂಡುಬಂದಿದ್ದು, ಗದ್ದೆಹಳ್ಳದ ರಾಮ ಎಸ್ಟೇಟ್ ಬಳಿಯಲ್ಲಿ ತೆಂಗಿನ ಮರಕ್ಕೆ ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿದೆ.



ಗದ್ದೆಹಳ್ಳದ ರಾಮ ಎಸ್ಟೇಟ್ ಮಾಲಕರಾದ ದಿನೇಶ್ ಎಂಬವರ ಮನೆಯ ಮುಂಭಾಗದಲ್ಲಿ ಅಂದಾಜು 80 ಅಡಿಯ ಬೃಹತ್ ಗಾತ್ರದ ತೆಂಗಿನ ಮರಕ್ಕೆ ಸಂಜೆ ಭಾರೀ ಶಬ್ಧದೊಂದಿಗೆ ಸಿಡಿಲು ಅಪ್ಪಳಿಸಿದ್ದು, ಇದರ ಪರಿಣಾಮ ತೆಂಗಿನ ಮರದಲ್ಲಿ ಬೆಂಕಿಯ ಜ್ವಾಲೆ ಮೂಡಿ ಸಂಪೂರ್ಣ ಸುಟ್ಟುಹೋಗಿದೆ. ಮನೆಯ ಗೃಹೋಪಯೋಗಿ ವಸ್ತುಗಳು ಹಾಗೂ ಕೊಳವೆ ಬಾವಿಗೆ ಅಳವಡಿಸಲಾಗಿದ್ದ ಮೋಟಾರ್ ಕೂಡಾ ಹಾನಿಗೀಡಾಗಿದ್ದು, ಲಕ್ಷಾಂತರ ರೂ.ನಷ್ಟವುಂಟಾಗಿರುವುದಾಗಿ ತಿಳಿದು ಬಂದಿದೆ.

ಅಪ್ರಾಪ್ತ ಬಾಲಕ ಕಾರು ಚಾಲನೆ: ಆರ್‌ಸಿ ಮಾಲಕನ ವಿರುದ್ಧ ಕೇಸು

ಕಾಸರಗೋಡು: ಪ್ರಾಯ ಪೂರ್ತಿಯಾಗದೆ ಕಾರು ಚಲಾಯಿಸಿದ ಬಾಲಕನನ್ನು ಪೊಲೀಸರು ಸೆರೆ ಹಿಡಿದಿದ್ದಾರೆ. ಪನೆಯಲ್ ಕೊಟ್ಟಪಾರದಲ್ಲಿ ಹದಿನಾರರ ಹರೆಯದ ಬಾಲಕ ಕಾರು ಚಲಾಯಿಸುತ್ತಿದ್ದ. ಈ ವೇಳೆ ಬೇಕಲ ಎಸ್‌ಐ ಅಖಿಲ್ ಸೆಬಾಸ್ಟಿಯನ್ ನೇತೃತ್ವದ ಪೊಲೀಸರು ತಪಾಸಣೆ ನಡೆಸುತ್ತಿದ್ದ ವೇಳೆ ಸಿಕ್ಕಿ ಬಿದ್ದ. ಬಾಲಕನಿಗೆ ಕಾರು ಚಲಾಯಿಸಲು ನೀಡಿದ ಆರ್‌ಸಿ ಮಾಲಕ ಎಂ.ಪ್ರಜೀಶ್ ಎಂಬಾತನ ವಿರುದ್ಧ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ.

ಎಂಡಿಎಂಎ ಸಹಿತ ವ್ಯಕ್ತಿ ಸೆರೆ

ಕಾಞಂಗಾಡು: 6.61 ಗ್ರಾಂ ಎಂಡಿಎಂಎ ಸಹಿತ ಅಜಾನೂರು ಇಟ್ಟಮ್ಮಲ್ ಕ್ವಾರ್ಟರ್ಸ್‌ನಲ್ಲಿ ವಾಸಿಸುವ ಮುಹಮ್ಮದ್ ಜಮಾಲ್ (38) ಎಂಬಾತನನ್ನು ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಮಿನಾಪೀಸ್ ಜಂಕ್ಷನ್‌ನ ಬಸ್ ತಂಗುದಾಣ ಬಳಿಯಿಂದ ಸೆರೆ ಹಿಡಿಯಲಾಗಿದೆ.

ಬಸ್ ಡಿಕ್ಕಿ, ಸ್ಕೂಟರ್ ಸವಾರರಿಗೆ ಗಾಯ

ಬಂಟ್ವಾಳ: ಪುಂಜಾಲಕಟ್ಟೆ ಬಸವನಗುಡಿ ಎಂಬಲ್ಲಿ ನಿಲ್ಲಿಸಿದ್ದ ಸ್ಕೂಟರ್‌ಗೆ ಕೆಎಸ್ಸಾರ್ಟಿಸಿ ಬಸ್ಸೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರರು ಗಾಯಗೊಂಡಿದ್ದಾರೆ. ಸ್ಕೂಟರ್ ಸವಾರರಾದ ಬಡಗಕಜೆಕಾರು ಅಂಚೆ ಕಚೇರಿ ತಾತ್ಕಾಲಿಕ ಪೋಸ್ಟ್ ಮಾಸ್ಟರ್, ಬೆಳ್ತಂಗಡಿ ತಾಲೂಕಿನ ಮರೋಡಿಗ್ರಾಮದ ನಿವಾಸಿ ಶ್ರೇಯಸ್ ಹಾಗೂ ಸಹೋದ್ಯೋಗಿ ಶಾಲಿನಿ ಅವರು ಗಾಯಗೊಂಡಿದ್ದು, ಅವರನ್ನು ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಶ್ರೇಯಸ್ ಅವರು ಅಂಚೆ ಇಲಾಖೆಯ ಕೆಲಸದ ನಿಮಿತ್ತ ಬಸವನಗುಡಿಯಲ್ಲಿರುವ ಅಂಚೆ ಕಚೇರಿಗೆಂದು ಶಾಲಿನಿಯು. ಅವರನ್ನು ಸಹಸವಾರರಾಗಿ ಕುಳ್ಳಿರಿಸಿಕೊಂಡು ಬಂದು ಬಸವನಗುಡಿ ಅಂಚೆಕಚೇರಿ ಮುಂಭಾಗ ತಲುಪಿ ಕೇಂದ್ರ ಅಂಚೆ ಕಚೇರಿಗೆ ಹೋಗಲು ಆಕ್ಟಿವಾ ಸ್ಕೂಟರ್‌ನ್ನು ನಿಲ್ಲಿಸುತ್ತಿದ್ದಂತೆ ಇವರ ಹಿಂದಿನಿಂದ ಬರುತ್ತಿದ್ದ ಕೆಎಸ್ ಆರ್‌ಟಿಸಿ ಬಸ್‌ನ ಚಾಲಕ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಸ್ಕೂಟರಿಗೆ ಡಿಕ್ಕಿ ಹೊಡೆದ ಪರಿಣಾಮ ಶ್ರೇಯಸ್ ಹಾಗೂ ಸಹಸವಾರೆ ಶಾಲಿನಿಯು. ಅವರು ಆಕ್ಟಿವಾ ಸ್ಕೂಟರ್ ಸಮೇತ ಡಾಮಾರು ರಸ್ತೆಗೆ ಬಿದ್ದು ಗಾಯಗೊಂಡಿದ್ದಾರೆ. ತಕ್ಷಣ ಅವರನ್ನು ಮಂಗಳೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಈ ಬಗ್ಗೆ ಪುಂಜಾಲಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಡೆಗೆ ಅಪ್ಪಳಿಸಿದ ಕಾರು, ಪ್ರಯಾಣಿಕರು ಪಾರು

ಕೊಣಾಜೆ ; ಅಸೈಗೋಳಿ ಸಮೀಪದ ತಿಬ್ಲಪದವು ಮಸೀದಿ ಸಭಾಂಗಣದ ಬಳಿ ಶನಿವಾರ ತಡರಾತ್ರಿ ಕಾರು ಅಪಘಾತ ಸಂಭವಿಸಿ, ಸಭಾಂಗಣದ ಗೋಡೆಯೊಂದಕ್ಕೆ ಅಪ್ಪಳಿಸಿದ ಘಟನೆ ನಡೆದಿದೆ. ಕೋಣಾಜೆ ಕಡೆಯಿಂದ ದೇರಳಕಟ್ಟೆ ಕಡೆಗೆ ಸಾಗುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಸುಮಾರು 10 ಅಡಿ ಆಳಕ್ಕೆ ಜಿಗಿದು, ಸಭಾಂಗಣ ಕಟ್ಟಡದ ಗೋಡೆಗೆ ಅಪ್ಪಳಿಸಿ ಕೆಳಕ್ಕೆ ಉರುಳಿದೆ. ಅಪಘಾತದ ತೀವ್ರತೆ ಭೀಕರವಾಗಿದ್ದರೂ, ವಾಹನದಲ್ಲಿದ್ದವರು ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಿಲ್ಲದೆ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಘಟನೆಯ ಕುರಿತು ಮಂಗಳೂರು ದಕ್ಷಿಣ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾವುಂದದಲ್ಲಿ ತಾಯಿ ಮಗಳು, ಬೆಳ್ತಂಗಡಿಯಲ್ಲಿ ವಿದ್ಯಾರ್ಥಿ, ನಾಪೋಕ್ಲುವಿನಲ್ಲಿ ಕೃಷಿಕ

ಆಘಾತ ನೀಡಿದ ಅಪಘಾತ ಸರಣಿ

ಬೈಂದೂರು: ತಾಲೂಕಿನ ನಾವುಂದ ಎಂಬಲ್ಲಿ ಕಾರು ಮತ್ತು ಕಂಟೈನರ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ತಾಯಿ ಮತ್ತು ಮಗಳು ಮೃತಪಟ್ಟಿದ್ದಾರೆ.



ತಂದೆಯ ಆರೋಗ್ಯ ಸುಧಾರಿಸಲಿ ಎಂದು ಮಗಳು ಹೊತ್ತಿದ್ದ ಹರಕೆಯನ್ನು ತೀರಿಸಲು ದೇವಸ್ಥಾನಕ್ಕೆ ತೆರಳುತ್ತಿದ್ದಾಗ ವಿಧಿಯಾಟ ಬೇರೆಯೇ ಆಗಿತ್ತು.

ಅಪಘಾತದಲ್ಲಿ ಮಮತಾ ಹಾಗೂ ಆಕೆಯ ಮಗಳು ಧೃತಿಕಾ ಮೃತಪಟ್ಟ ದುರ್ದೈವಿಗಳು. ಬೆಂಗಳೂರಿನವರಾದ ಇವರು ಕುಟುಂಬದ ಸದಸ್ಯರೊಂದಿಗೆ ಕಾರಿನಲ್ಲಿ ಮುರುಡೇಶ್ವರ ದೇವಸ್ಥಾನಕ್ಕೆ ತೆರಳುತ್ತಿದ್ದರು. ನಾವುಂದದಲ್ಲಿ ರಸ್ತೆ ಬದಿಯಲ್ಲಿ ನಿಂತಿದ್ದ ಕಂಟೈನರ್ ಲಾರಿಗೆ ಕಾರು ವೇಗವಾಗಿ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಚಾಲಕನ ನಿದ್ದೆ ಮಂಪರು ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಗಾಯಾಳುಗಳ ಚೇತರಿಕೆ

ಅಪಘಾತದಲ್ಲಿ ರಾಘು (40), ಜಾಹ್ನವಿ (12), ಚಾರ್ವಿ (10) ಮತ್ತು ಕಿರಣ್ ಎಂಬವರು ಗಾಯಗೊಂಡಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರೆಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ತಿಳಿದುಬಂದಿದೆ.

ತಂದೆಗಾಗಿ ಹರಕೆ ಹೊತ್ತಿದ್ದ ಮಗಳು

ಈ ಘಟನೆಯ ಹಿಂದೆ ಮನಕಲಕುವ ಕಥೆಯೊಂದಿದೆ. ಗಾಯಾಳು ಕಿರಣ್ ಅವರ 10 ವರ್ಷದ ಪುತ್ರಿ ಚಾರ್ವಿ, ತನ್ನ ತಂದೆಯ ಆರೋಗ್ಯ ಸರಿಯಾಗಲಿ ಎಂದು ದೇವರಲ್ಲಿ ಹರಕೆ ಹೊತ್ತಿದ್ದಳು. ಮಗಳ ಹರಕೆಯನ್ನು ಪೂರೈಸಲು ಮತ್ತು ದೇವರ ದರ್ಶನ ಪಡೆಯಲು ಸಂಬಂಧಿಕರಾದ ರಘು ಹಾಗೂ ಕಿರಣ್ ಕುಟುಂಬದವರು ದೇವಸ್ಥಾನಗಳ ಪ್ರವಾಸ ಹಮ್ಮಿಕೊಂಡಿದ್ದರು.





ರಸ್ತೆ ಬದಿಯಿದ್ದ ಕಂಟೈನರ್‌ಗೆ ಡಿಕ್ಕಿ

ಕುಟುಂಬದವರು ಮೊದಲು ಉಡುಪಿಯ ಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದಿದ್ದರು. ಬಳಿಕ ತ್ರಾಸಿ ಬೀಚ್‌ನಲ್ಲಿ ಸ್ವಲ್ಪ ಸಮಯ ಕಳೆದು, ಅಲ್ಲಿಂದ ಮುರುಡೇಶ್ವರ ದೇವಸ್ಥಾನದತ್ತ ಪ್ರಯಾಣ ಬೆಳೆಸಿದ್ದರು. ಆದರೆ ನಾವುಂದ ತಲುಪುತ್ತಿದ್ದಂತೆ ಕಾರು ನಿಯಂತ್ರಣ ತಪ್ಪಿ ರಸ್ತೆ ಬದಿಯಿದ್ದ ಕಂಟೈನರ್‌ಗೆ ಡಿಕ್ಕಿ ಹೊಡೆದಿದೆ.

ತಂದೆಯ ಜೀವ ಉಳಿಯಲಿ ಎಂದು ಹರಕೆ ಹೊತ್ತು ಹೊರಟಿದ್ದ ಮಗಳ ಕಣ್ಣೆದುರೇ ತಾಯಿ ಮತ್ತು ಅಕ್ಕ ಪ್ರಾಣ ಕಳೆದುಕೊಂಡಿರುವುದು ಸ್ಥಳೀಯರಲ್ಲಿ ಕಣ್ಣೀರು ತರಿಸಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಜೆ ನಿಮಿತ್ತ ಶನಿವಾರ ಮಧ್ಯಾಹ್ನ ಉಡುಪಿ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ ಅಲ್ಲಿಂದ ಮುರುಡೇಶ್ವರದ ಕಡೆಗೆ ಪ್ರಯಾಣ ಬೆಳೆಸುವಾಗ ತ್ರಾಸಿ ಬೀಚಿನಲ್ಲಿ ಸ್ವಲ್ಪ ಹೊತ್ತು ಸಮಯ ಕಳೆದು ಹೊರಟಿದ್ದರು.

ಡಿವೈಡರ್‌ಗೆ ಬೈಕ್ ಡಿಕ್ಕಿ: ವಿದ್ಯಾರ್ಥಿ ಸಾವು

ಬೆಳ್ತಂಗಡಿ : ಬೈಕ್ ಸ್ಕೀಡ್ ಆಗಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮತ್ತು ಸಹಸವಾರ ಗಂಭೀರ ಗಾಯಗೊಂಡು ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸಾಗಿಸುವ ವೇಳೆ ಸಹಸವಾರ ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಸಂಭವಿಸಿದೆ.



ಮೃತ ವಿದ್ಯಾರ್ಥಿ ಬೆಳ್ತಂಗಡಿ ತಾಲೂಕಿನ ಲಾಯಿಲ ಗ್ರಾಮದ ಅಮ್ಮನಂಗಡಿ ನಿವಾಸಿ ಚಂದ್ರಶೇಖರ್ ಪುತ್ರ ನಿತೇಶ್(19) ಮೃತಪಟ್ಟವನು ಎಂದು ಗುರುತಿಸಲಾಗಿದೆ. ಬೈಕ್ ಸವಾರ ಪುತ್ತೂರು ನಿವಾಸಿ ಲಿಖಿತ್(20) ನಿವಾಸಿ ಗಂಭೀರ ಗಾಯಗೊಂಡು ಉಜಿರೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಉಜಿರೆ -ಧರ್ಮಸ್ಥಳ ರಾಜ್ಯ ಹೆದ್ದಾರಿಯ ಕಾಲೇಜ್ ರಸ್ತೆಯಲ್ಲಿರುವ ಪಂಚಮಿ ಲಾಡ್ಜ್ ಮುಂಭಾಗದ ಡಿವೈಡರ್‌ಗೆ ಮಾ.28 ರಂದು ರಾತ್ರಿ ಸುಮಾರು 12.30 ಗಂಟೆಗೆ ಕಾರ್ಯಕ್ರಮ ಮುಗಿಸಿ ವಾಪಸ್ ಬರುತ್ತಿದ್ದಾಗ ಬೈಕ್ ಸ್ಕೀಡ್ ಆಗಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಇಬ್ಬರು ಕೂಡ ಉಜಿರೆ ಖಾಸಗಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಾಗಿದ್ದಾರೆ.

ಉಜಿರೆ ಕಾಲೇಜ್ ರಸ್ತೆಯಲ್ಲಿ ಅಪಘಾತ ನಡೆದ ಸ್ಥಳಕ್ಕೆ ಬೆಳ್ತಂಗಡಿ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಜೀಪು ಅಪಘಾತದಲ್ಲಿ ರೈತ ದುರ್ಮರಣ

ನಾಪೋಕ್ಲು: ಜೀಪು ಅಪಘಾತದಲ್ಲಿ ವ್ಯಕ್ತಿ ಒಬ್ಬರು ದುರ್ಮರಣಗೊಂಡ ಘಟನೆ ಪೇರೂರು ಗ್ರಾಮದಲ್ಲಿ ಶನಿವಾರ ಸಂಜೆ ಜರುಗಿದೆ. ಇಲ್ಲಿಗೆ ಸಮೀಪದ ಬಲ್ಲಮಾವಟ್ಟಿ ಗ್ರಾಮ ಪಂಚಾಯತ್‌ನ ಪೇರೂರು ಗ್ರಾಮದ ನಿವಾಸಿ ರೈತ ಬೊಟ್ಟೋಳಂಡ ಶರಿ ಮೇದಪ್ಪ (54) ದುರ್ಮರಣಗೊಂಡವರು.



ಕಾರ್ಮಿಕರೊಂದಿಗೆ ತಮ್ಮ ಜೆಪಿನಲ್ಲಿ ಕಾಫಿ ತೋಟದಿಂದ ಮನೆಗೆ ಹಿಂತಿರುಗುತ್ತಿರುವ ಸಂದರ್ಭ ಶರಿ ಮೇದಪ್ಪ ಚಲಾಯಿಸುತ್ತಿದ್ದ ಜೀಪು ಅವರ ನಿಯಂತ್ರಣ ತಪ್ಪಿದ ರಸ್ತೆಯಿಂದ ಸುಮಾರು 70 ಅಡಿ ಕೆಳಗೆ ಉರುಳಿ ಬಿದ್ದಿದೆ. ಈ ಸಂದರ್ಭ ಜೀಪಿನಿಂದ ಹೊರಕ್ಕೆ ಎಸೆಯಲ್ಪಟ್ಟ ಮೇದಪ್ಪ ಪ್ರಜ್ಞೆ ಕಳೆದುಕೊಂಡಿದ್ದರು. ಬಳಿಕ ನಾಪೋಕ್ಲುವಿನಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಮಡಿಕೇರಿಗೆ ತೆರಳುತ್ತಿರುವ ಸಂದರ್ಭ ಅವರು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಜೀಪು ಸಂಪೂರ್ಣ ಜಖಂಗೊಂಡಿದ್ದು , ಕಾರ್ಮಿಕರು ಸಣ್ಣ ಪುಟ್ಟ ಗಾಯಗಳಿಂದ ಜೀವಪಾಯದಿಂದ ಪಾರಾಗಿದ್ದಾರೆ.



ಈ ಬಗ್ಗೆ ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದು ಪೊಲೀಸರು ಕಾನೂನಿನ ಕ್ರಮ ಕೈಗೊಂಡಿದ್ದಾರೆ. ಮೃತ ಶರಿ ಮೇದಪ್ಪ (54) ಅವಿವಾಹಿತರಾಗಿದ್ದು , ತಾಯಿ ರಾಣಿ ಹಾಗೂ ಒಬ್ಬರು ತಂಗಿ ಹಾಗೂ ತಮ್ಮನನ್ನು ಅಗಲಿದ್ದಾರೆ.

ಉಡುಪಿ ಜಿಲ್ಲೆಯ ಮೂರು ಮಂದಿ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಚಿನ್ನದ ಪದಕ







ಜಿಲ್ಲೆಯ ಕಾನೂನು ಸುವ್ಯವಸ್ಥೆ, ಕರಾವಳಿ ಭದ್ರತೆ ಹಾಗೂ ನಕ್ಸಲ್ ನಿಗ್ರಹ ಪಡೆಯಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಗೌರವ

ಉಡುಪಿ: ಪೊಲೀಸ್ ಇಲಾಖೆಯಲ್ಲಿ ಅತ್ಯುನ್ನತ ಹಾಗೂ ವಿಶಿಷ್ಟ ಸೇವೆ ಸಲ್ಲಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡಲಾಗುವ ಪ್ರತಿಷ್ಠಿತ 2025ನೇ ಸಾಲಿನ 'ಮುಖ್ಯಮಂತ್ರಿಗಳ ಚಿನ್ನದ ಪದಕ'ಕ್ಕೆ ಉಡುಪಿ ಜಿಲ್ಲೆಯ ಮೂವರು ಪೊಲೀಸ್ ಅಧಿಕಾರಿಗಳು ಭಾಜನರಾಗಿದ್ದಾರೆ. ಜಿಲ್ಲೆಯ ಕಾನೂನು ಸುವ್ಯವಸ್ಥೆ, ಕರಾವಳಿ ಭದ್ರತೆ ಹಾಗೂ ನಕ್ಸಲ್ ನಿಗ್ರಹ ಪಡೆಯಲ್ಲಿ ಇವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ.

ಪದಕ ಪುರಸ್ಕೃತರ ಪೈಕಿ ಉಡುಪಿ ನಗರ ಪೊಲೀಸ್ ಠಾಣೆಯ ಸಹಾಯಕ ಉಪನಿರೀಕ್ಷಕ ಚಂದ್ರ ಶೆಟ್ಟಿ ಅವರು ತಮ್ಮ ಸುದೀರ್ಘ ಸೇವಾವಧಿಯಲ್ಲಿ ತೋರಿದ ದಕ್ಷತೆಗಾಗಿ ಈ ಉನ್ನತ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅದೇ ರೀತಿ, ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಸಂತೋಷ ಶೆಟ್ಟಿ (ಎಎಚ್‌ಸಿ 82) ಅವರು ಪ್ರಸ್ತುತ ಕರಾವಳಿ ಕಾವಲು ಪೊಲೀಸ್ ಪಡೆಯಲ್ಲಿ ನಿರ್ವಹಿಸುತ್ತಿರುವ ವಿಶಿಷ್ಟ ಹಾಗೂ ಜವಾಬ್ದಾರಿಯುತ ಸೇವೆಯನ್ನು ಗುರುತಿಸಿ ಈ ಬಾರಿಯ ಚಿನ್ನದ ಪದಕವನ್ನು ಘೋಷಿಸಲಾಗಿದೆ. ಕಾರ್ಕಳದ ನಕ್ಸಲ್ ನಿಗ್ರಹ ಪಡೆಯಲ್ಲಿ (ಎಎನ್‌ಎಫ್) ಆರ್. ಎಸ್.ಐ ಆಗಿ ಕಾರ್ಯನಿರ್ವಹಿಸುತ್ತಿರುವ ಮಂಜುನಾಥ ದೇವರಮನೆ ಅವರು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ತೋರಿದ ಅತ್ಯುನ್ನತ ಸಾಹಸ ಮತ್ತು ಕರ್ತವ್ಯ ಪ್ರಜ್ಞೆಗಾಗಿ ಈ ಗೌರವಕ್ಕೆ ಆಯ್ಕೆಯಾಗಿದ್ದಾರೆ.

ಈ ಸಾಧನೆಗೆ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹಾಗೂ ಕರಾವಳಿ ಕಾವಲು ಪಡೆ ಮತ್ತು ನಕ್ಸಲ್ ನಿಗ್ರಹ ಪಡೆಯ ಪ್ರಭಾರ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಕಾಸರಗೋಡಿನಲ್ಲಿ ಮಲಯಾಳ ಭಾಷಾ ಮಸೂದೆಯ ವಿರುದ್ಧ ಕನ್ನಡಿಗರ ಪ್ರತಿಭಟನೆ

ಕಾಸರಗೋಡು: ಕೇರಳ ಸರಕಾರದ ಮಲಯಾಳ ಭಾಷಾ ಮಸೂದೆಯು ಕಾಸರಗೋಡಿನ ಕನ್ನಡಿಗರ ಹಿತಕ್ಕೆ ಮಾರಕವಾದುದು. ಒಂದರಿಂದ ಹತ್ತನೇ ತರಗತಿಯ ತನಕ ಎಲ್ಲಾ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಲಯಾಳಂ ಕಡ್ಡಾಯಗೊಳಿಸುವ ಪ್ರಸ್ತಾವದಿಂದ ಕಾಸರಗೋಡಿನ ಭಾಷಾ ಅಲ್ಪಸಂಖ್ಯಾತ ಪ್ರದೇಶವನ್ನು ಹೊರತುಪಡಿಸಬೇಕು. ಗಡಿನಾಡಿನಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಮಲಯಾಳ ಕಡ್ಡಾಯಗೊಳಿಸುವುದು ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ಕಸಿಯುವುದಕ್ಕೆ ಸಮಾನವಾಗಿದೆ. ಗಡಿನಾಡು ಕಾಸರಗೋಡಿನ ಕನ್ನಡಿಗರ ಹಕ್ಕು ಸವಲತ್ತುಗಳನ್ನು ಕಸಿದರೆ ಉಗ್ರ ಹೋರಾಟ ನಡೆಸಲಾಗುವುದೆಂದು ಕನ್ನಡ ಭವನ ಮತ್ತು ಗ್ರಂಥಾಲಯದ ಸ್ಥಾಪಕ ಅಧ್ಯಕ್ಷ ಡಾ.ವಾಮನ್ ರಾವ್ ಬೇಕಲ್ ಹೇಳಿದ್ದಾರೆ.



ಮಲಯಾಳ ಭಾಷಾ ಮಸೂದೆಯ ವಿರುದ್ಧ ಕಾಸರಗೋಡಿನ ಕನ್ನಡ ಭವನದಲ್ಲಿ ಶನಿವಾರ ನಡೆದ ಕನ್ನಡಿಗರ ಪ್ರತಿಭಟನಾ ಸಭೆಯನ್ನು ಕನ್ನಡ ಧ್ವಜವನ್ನು ಹಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅಧ್ಯಕ್ಷತೆ ವಹಿಸಿದ್ದರು.

ಕಸಾಪ ಸಂಘಟನಾ ಕಾರ್ಯದರ್ಶಿ ವಿಶಾಲಾಕ್ಷ ಪುತ್ರಕಳ, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ ಎ., ಅಧಿಕೃತ ವಕ್ತಾರ ಬಾಬು, ನೌಕರರ ಸಂಘದ ಮಾಜಿ ಅಧ್ಯಕ್ಷರು ಜಯನಾರಾಯಣ ತಾಯನ್ನೂರ್, ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್. ಸುಬ್ಬಯ್ಯಕಟ್ಟೆ, ಗಮಕ ಕಲಾ ಪರಿಷತ್ತು ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೇಕರೆ ಶಂಕರನಾರಾಯಣ ಭಟ್, ಧಾರ್ಮಿಕ ಮುಂದಾಳು ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ನಿವೃತ್ತ ಮುಖ್ಯ ಶಿಕ್ಷಕ ಸತೀಶ್ ಮಾಸ್ತರ್, ನುಳ್ಳಿಪ್ಪಾಡಿ ನೇತಾಜಿ ರೆಸಿಡೆನ್ಸ್ ಅಧ್ಯಕ್ಷ ಶಶಿಕಾಂತ ಶೆಟ್ಟಿ, ಧೂಮಾವತಿ ದೈವಸ್ಥಾನದ ಮೊಕ್ತೇಸರ ಗೋಪಾಲ ಶೆಟ್ಟಿ, ಮಾಜಿ ನಗರಸಭಾ ಸದಸ್ಯ ಶಂಕರ ಜೆ.ಪಿ.ನಗರ, ನಗರಸಭಾ ಸದಸ್ಯರಾದ ಸುಧಾರಾಣಿ ಅಣಂಗೂರು, ಸ್ಮೃತಿ ವಿಕಾಸ್, ದಿವ್ಯಾ ಸಂದೀಪ್, ಕಾಸರಗೋಡು ಜಿಲ್ಲಾ ಮರ್ಚೆಂಟ್ಸ್ ಮಹಿಳಾ ವಿಂಗ್ ಅಧ್ಯಕ್ಷೆ ಆಶಾ ರಾಧಾಕೃಷ್ಣ, ಪ್ರದೀಪ್ ಬೇಕಲ್, ರಾಜೇಶ್ ಕೋಟೆಕಣಿ, ಶಶಿಕಲಾ ಟೀಚರ್ ಕುಂಬಳೆ ಮೊದಲಾದವರು ಮಲಯಾಳ ಭಾಷಾ ಮಸೂದೆಯ ಸಾಧಕ ಬಾಧಕಗಳ ಕುರಿತು ಮತ್ತು ಕನ್ನಡಿಗರು ಕೈಗೊಳ್ಳಬೇಕಾದ ಪ್ರತಿಭಟನಾ ಕ್ರಮಗಳ ಕುರಿತು ಮಾತನಾಡಿದರು.

ಗುರುರಾಜ್, ಉಷಾ ಕಿರಣ್, ಮೋಕ್ಷ ಮೊದಲಾದವರು ಕನ್ನಡ ಗೀತೆಗಳ ಗಾಯನ ನಡೆಸಿದರು. ಕನ್ನಡ ಭವನದ ಕೋಶಾಧಿಕಾರಿ ಸಂಧ್ಯಾ ರಾಣಿ ಟೀಚರ್ ಸ್ವಾಗತಿಸಿ, ಕಾರ್ಯದರ್ಶಿ ವಸಂತ ಕೆರೆಮನೆ ವಂದಿಸಿದರು.

ಫಸಲು ನಷ್ಟದಿಂದ ತೀವ್ರ ಸಂಕಷ್ಟಕ್ಕೊಳಗಾದ ಅಡಿಕೆ ಬೆಳೆಗಾರಗೆ ಬೂಸ್ಟ್ ನೀಡಿದ ಧಾರಣೆ

ಪುತ್ತೂರು: ಫಸಲು ನಷ್ಟದಿಂದ ಸಂಕಷ್ಟಕ್ಕೆ ಈಡಾಗಿರುವ ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಲೆ ಸ್ಥಿರತೆಯನ್ನು ಕಾಪಾಡಿಕೊಂಡಿರುವುದು ಒಂದಷ್ಟು ಸಮಾಧಾನ ತರಿಸಿದೆ. ಕೆಲವು ದಿನಗಳ ಹಿಂದೆ ಒಂದಷ್ಟು ಇಳಿಕೆ ಕಂಡಿದ್ದ ದರ ಮತ್ತೆ ಏರಿಕೆಯತ್ತ ಮುಖ ಮಾಡಿದೆ.

ಹಾಲಿ ಪ್ರತಿಷ್ಠಿತ ಸಹಕಾರ ಸಂಸ್ಥೆ ಕ್ಯಾಂಪ್ಕೋದಲ್ಲಿ ಹೊಸ ಅಡಿಕೆ ಕೆ.ಜಿ.ಗೆ 260–480 ಹಾಗೂ ಚೋಲ್ ಅಡಿಕೆ 525–550ಕ್ಕೆ ತಲುಪಿದೆ. ಹೊರ ಮಾರುಕಟ್ಟೆಯಲ್ಲಿ ಹೊಸ ಅಡಿಕೆ ರೂ. 490 ತನಕ ಹಾಗೂ ಹಳೆ ಅಡಿಕೆ ರೂ. 560 ತನಕ ಖರೀದಿಯಾಗುತ್ತಿದೆ. ಆ ಮೂಲಕ ಹೊಸ ಅಡಿಕೆ ಈ ವಾರದಲ್ಲಿ ರೂ. 500 ಕ್ಕೆ ತಲುಪುವ ನಿರೀಕ್ಷೆ ಇದೆ.



▸▸ ಕ್ಯಾಂಪ್ಕೋದಲ್ಲಿ ಹೊಸ ಅಡಿಕೆ ಕೆ.ಜಿ.ಗೆ 260-480, ಚೋಲ್ ಅಡಿಕೆ 525-550ಕ್ಕೆ ತಲುಪಿದೆ.

ತಿಂಗಳ ಹಿಂದೆ ಹೊಸ ಅಡಿಕೆ ಕೆ.ಜಿ.ಯೊಂದರ ರೂ.500 ಹಾಗೂ ಹಳೆ ಅಡಿಕೆ 550 ರ ತನಕ ತಲುಪಿತ್ತು. ಅನಂತರ ರೂ. 30–40 ರಷ್ಟು ಇಳಿಕೆ ಕಂಡಿತ್ತು. ರೋಗಗಳು ಹಾಗೂ ಇತರ ಕಾರಣಗಳಿಗಾಗಿ ಫಸಲು ನಷ್ಟ ಉಂಟಾಗಿರುವುದರಿಂದ ಮಾರುಕಟ್ಟೆಯಲ್ಲಿ ಅಡಿಕೆಗೆ ಬೇಡಿಕೆ ಇದೆ. ಆದರೆ ಬೆಳೆಗಾರರು ಅಡಿಕೆ ದಾಸ್ತಾನು ಮಾಡಿ ಮಾರುಕಟ್ಟೆಗೆ ಪೂರೈಸದೆ ಕಾಪಿಡುವ ಮೂಲಕ ಕಾದುನೋಡುವ ತಂತ್ರ ಅನುಸರಿಸಿ ಜಾಣ್ಮೆ ಮೆರೆದಿದ್ದಾರೆ. ಈ ಕಾರಣದಿಂದ ಮುಂದಿನ ದಿನಗಳಲ್ಲಿ ಅಡಿಕೆಗೆ ಇನ್ನಷ್ಟು ಬೆಲೆ ಏರುವ ಸಾಧ್ಯತೆ ಇದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಮಾಹಿತಿ ಹಕ್ಕು ಅಧಿಕಾರಿ ಅಮಾನತು

ಕಣ್ಣೂರು: ಎಡರಂಗದ ಅಭ್ಯರ್ಥಿಯ ಪರವಾಗಿ ಸರಕಾರಿ ಇಲಾಖೆಯಾದ ಪಬ್ಲಿಕ್ ರಿಲೇಶನ್ಸ್ ಡಿಪಾರ್ಟ್‌ಮೆಂಟ್ ಔದ್ಯೋಗಿಕ ಪತ್ರಿಕಾ ವರದಿ ಹೊರಡಿಸಿರುವುದಾಗಿ ನೀಡಿದ ದೂರಿನಂತೆ ಕಣ್ಣೂರು ಜಿಲ್ಲಾ ಇನ್‌ಫೋರ್ಮೇಶನ್ ಆಫೀಸರ್ ಪಿ.ಪಿ.ವಿನೀಶ್‌ರನ್ನು ರಾಜ್ಯ ಚುನಾವಣಾ ಆಯೋಗ ಅಮಾನತುಗೊಳಿಸಿದೆ.

ಐಕ್ಯರಂಗ ನೀಡಿದ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಅರುಣ್ ವಿಜಯನ್ ನಡೆಸಿದ ತನಿಖಾ ವರದಿಯ ಆಧಾರದಲ್ಲಿ ಈ ಶಿಸ್ತು ಕ್ರಮ ಉಂಟಾಗಿದೆ. ನಿಷ್ಪಕ್ಷವಾದ ಚುನಾವಣೆ ಪ್ರಕ್ರಿಯೆಗಳಿಗೆ ವಿರುದ್ಧವಾಗಿ ಔದ್ಯೋಗಿಕ ಪತ್ರಿಕಾ ವರದಿ ಪ್ರಕಟಿಸಲಾಗಿದೆ ಎಂದು ಸೂಚಿಸಿ ಈ ಕ್ರಮ ಕೈಗೊಳ್ಳಲಾಗಿದೆ.

ಅಳಿಕ್ಕೋಡ್ ಮಂಡಲದ ಎಡರಂಗ ಅಭ್ಯರ್ಥಿ ಕೆ.ವಿ.ಸುಮೇಶ್‌ರ ಪರವಾಗಿ ಪಿಆರ್‌ಡಿ ಪತ್ರಿಕಾ ವರದಿ ಹೊರಡಿಸಿತ್ತು.

ವಿಶ್ವ ಹಿಂದೂ ಪರಿಷತ್ ಮಂಗಳೂರು, ಶ್ರೀರಾಮೋತ್ಸವ ಸಮಿತಿ ಮಂಗಳೂರು ನೇತೃತ್ವದ 25ನೇ ವರ್ಷದ ಶ್ರೀರಾಮೋತ್ಸವಕ್ಕೆ ತೆರೆ

ಪ್ರಭು ಶ್ರೀರಾಮಚಂದ್ರ ಅಸ್ಮಿತೆ, ಸಂಸ್ಕಾರ, ಆದರ್ಶದ ಸಂಕೇತ: ಎಡನೀರು ಶ್ರೀ

ಮಂಗಳೂರು: ರಾಮನನ್ನು ದೇವರಾಗಿ ಪೂಜಿಸುವುದರೊಂದಿಗೆ ರಾಮನ ಆದರ್ಶಗಳನ್ನು ಮೈಗೂಡಿಸಿಕೊಂಡು, ಆ ಮೂಲಕ ಧರ್ಮದ ತಿರುಳನ್ನು ಅರಿಯುವ ಕೆಲಸ ಇಂದಿನ ಯುವ ಜನಾಂಗ ಮಾಡಬೇಕು ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ ಹೇಳಿದರು.

ವಿಶ್ವ ಹಿಂದೂ ಪರಿಷತ್ ಮಂಗಳೂರು ಮತ್ತು ಶ್ರೀರಾಮೋತ್ಸವ ಸಮಿತಿ ಮಂಗಳೂರು ವತಿಯಿಂದ ಕದ್ರಿ ಮೈದಾನದಲ್ಲಿ ನಾಲ್ಕು ದಿನಗಳ ಕಾಲ ನಡೆದ 25ನೇ ವರ್ಷದ ಶ್ರೀರಾಮೋತ್ಸವದ ಕೊನೆಯ ದಿನವಾದ ಭಾನುವಾರ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.





ಪ್ರಭು ಶ್ರೀರಾಮಚಂದ್ರ ಹಿಂದೂ ಸಮಾಜದ ಅಸ್ಮಿತೆ, ಸಂಸ್ಕಾರ, ಆದರ್ಶದ ಒಂದು ಸಂಕೇತ. ಇಂದಿನ ಕಲಿಯುಗದಲ್ಲಿ ರಾಮನಿಗಿಂತ ಹೆಚ್ಚು ರಾವಣರು ಹುಟ್ಟಿಬರುತ್ತಿದ್ದಾರೆ. ನಮ್ಮ ಸುತ್ತಮುತ್ತಲೂ ಇದ್ದಾರೆ. ಸೀತಾಪಹರಣದಂತಹ ಕೆಲಸಗಳನ್ನೂ ಮಾಡುತ್ತಿದ್ದಾರೆ. ಅದನ್ನು ತಡೆಯಬೇಕಾದರೆ ನಮ್ಮ ಮನೆಯ ಮಕ್ಕಳನ್ನು ರಾಮನಂತೆ ಬೆಳೆಸಬೇಕು. ರಾಮನ ಆದರ್ಶಗಳನ್ನು ಅವರಲ್ಲಿ ಬಿತ್ತಬೇಕು. ಸೀತೆಯ ಹಾಗೆ ಬೆಳೆಸಿ ಸೀತೆಯ ಆದರ್ಶಗಳನ್ನು ಅವರಲ್ಲಿ ತುಂಬಬೇಕು. ಆಗ ಮಾತ್ರ ಸಮಾಜದಲ್ಲಿ ಮಕ್ಕಳು ಇಂತಹ ಪರಂಪರೆ ತಿಳಿಯಲು ಸಾಧ್ಯವಾಗುತ್ತದೆ ಎಂದರು.

ಹೈಕೋರ್ಟ್ ಹಿರಿಯ ವಕೀಲ ಅರುಣ್ ಶ್ಯಾಮ್ ದೀಪ ಪ್ರಜ್ವಲನೆ ಮಾಡಿ ಮಾತನಾಡಿ, ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮಚಂದ್ರನಿಗೆ ಭವ್ಯ ಮಂದಿರ ನಿರ್ಮಾಣ ಮಾಡಬೇಕು ಎನ್ನುವುದು ನಮ್ಮ ಸಂಕಲ್ಪವಾಗಿತ್ತು. ಅದು ನೆರವೇರಿದೆ. ರಾಮನ ಜೀವನವೇ ನಮಗೆ ಆದರ್ಶ. ಅದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ರಾಮೋತ್ಸವದ ಸಂಕಲ್ಪ ಯಶಸ್ವಿಯಾಗಲಿದೆ. ನಮ್ಮ ಕನಸು ನನಸಾಗಿ ಸಾಕ್ಷಾತ್ಕಾರವಾದ ಈ ಕಾಲಘಟ್ಟದಲ್ಲಿ ಸಾಮರಸ್ಯ ಜಾಗೃತಿಯಾಗಬೇಕು ಎಂದರು.

ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್, ಮಾಜಿ ಸಚಿವ ನಾಗರಾಜ ಶೆಟ್ಟಿ, ಶ್ರೀ ರಾಮೋತ್ಸವ ಸಮಿತಿ ಗೌರವಾಧ್ಯಕ್ಷ ಡಾ. ಎಂ.ಬಿ. ಪುರಾಣಿಕ್, ಯಕ್ಷ ಧ್ರುವ ಪಟ್ಲ ಫೌಂಡೇಶನ್ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ, ವಕೀಲ ಬಾಲಕೃಷ್ಣ ಶರ್ಮ, ಉದ್ಯಮಿಗಳಾದ ರವಿರಾಜ್ ಶೆಟ್ಟಿ ನಿಟ್ಟೆಗುತ್ತು, ಕೆ.ಟಿ. ಸುವರ್ಣ, ಸೀತಾರಾಮ ನೆತ್ತಿಲ ಬಾಳಿಕೆ, ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ, ಮನಪಾ ಮಾಜಿ ಸದಸ್ಯೆ ಶಕೀಲಾ ಕಾವ, ವಿಹಿಂಪ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್, ವಿಹಿಂಪ ಜಿಲ್ಲಾಧ್ಯಕ್ಷ ಎಚ್.ಕೆ. ಪುರುಷೋತ್ತಮ್, ಪೊಳಲಿ ಗಿರಿಪ್ರಕಾಶ್ ತಂತ್ರಿ, ರಾಮೋತ್ಸವ ಸಮಿತಿ ಅಧ್ಯಕ್ಷ ಸುನಿಲ್ ಆಚಾರ್, ರವಿ ಅಸೈಗೋಳಿ, ಮಾತೃಮಂಡಳಿಯ ಸುರೇಖಾ ರಾಜ್ ಉಪಸ್ಥಿತರಿದ್ದರು.

ಸುದರ್ಶನ್ ಮೂಡುಬಿದಿರೆ ಸ್ವಾಗತಿಸಿ, ದಯಾನಂದ ಕಟೀಲು ಕಾರ್ಯಕ್ರಮ ನಿರೂಪಿಸಿದರು.

ರಾವಣ ದಹನದೊಂದಿಗೆ ಸಮಾಪನ

ಮಂಗಳೂರು: ವಿಶ್ವಹಿಂದು ಪರಿಷತ್ ಮತ್ತು ಶ್ರೀರಾಮೋತ್ಸವ ಸಮಿತಿ ಮಂಗಳೂರು ವತಿಯಿಂದ ನಗರದ ಕದ್ರಿ ಮೈದಾನದಲ್ಲಿ ನಾಲ್ಕು ದಿನಗಳ ಕಾಲ ನಡೆದ 25ನೇ ವರ್ಷದ ಶ್ರೀರಾಮೋತ್ಸವ ಕಾರ್ಯಕ್ರಮ ರಾವಣ ದಹನದೊಂದಿಗೆ ಭಾನುವಾರ ಸಮಾಪನಗೊಂಡಿತು.

ಭಾನುವಾರ ಬೆಳಗ್ಗೆ ಪ್ರಾತಃ ಪೂಜೆ, ವಿಹಿಂಪ ಬಾಲಸಂಸ್ಕಾರ ಕೇಂದ್ರದ ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆ, ಬಳಿಕ 'ದೃಢನಾರಿ ಸದೃಢ ಭಾರತ' ಮಹಿಳಾ ವಿಚಾರ ಗೋಷ್ಠಿ, ದುರ್ಗಾವಾಹಿನಿ ಮಂಗಳೂರು ಜಿಲ್ಲೆ ವತಿಯಿಂದ ನೃತ್ಯರೂಪಕ 'ನಶಾ ಮುಕ್ತ ಯುವ' ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದಿಂದ ಗಾನ ಸಂಭ್ರಮ, ಧಾರ್ಮಿಕ ಸಭೆ ನಡೆಯಿತು.

ರಾತ್ರಿ ಮಹಾಪೂಜೆ ಬಳಿಕ ರಾವಣ ದಹನ, ಆಕರ್ಷಕ ಸುಡುಮದ್ದು ಪ್ರದರ್ಶನ ನೆರವೇರಿತು. ಅಪಾರ ಸಂಖ್ಯೆಯಲ್ಲಿ ಭಕ್ತರು ಈ ವೇಳೆ ಭಾಗವಹಿಸಿದ್ದರು.

ಈ ಬಾರಿ ಶ್ರೀ ರಾಮೋತ್ಸವದ ರಜತ ವರ್ಷಾಚರಣೆ ಅಂಗವಾಗಿ ನಾಲ್ಕು ದಿನಗಳ ಕಾಲ ಅದ್ದೂರಿಯಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಶನಿವಾರ ಸಂಜೆಯ ಬಳಿಕ ಸುರಿದ ಧಾರಾಕಾರ ಮಳೆಗೆ ಉಪ್ಪಿನಂಗಡಿ ಪರಿಸರದಲ್ಲಿ ಹಲವು ಸಂಕಷ್ಟಗಳನ್ನು ತಂದಿಟ್ಟಿದೆ. ಇಲ್ಲಿನ ರಾಮನಗರ ನಿವಾಸಿ ಶೋಭಾ ಎಂಬವರ ಮನೆಯ ಛಾವಣಿ ಬಿರುಗಾಳಿಯ ಹೊಡೆತಕ್ಕೆ ಸಿಲುಕಿ ಸಂಪೂರ್ಣವಾಗಿ ನುಚ್ಚುನೂರಾಗಿದ್ದು ಮನೆ ಕೂಡಾ ಸಂಪೂರ್ಣವಾಗಿ ಹಾನಿಗೀಡಾಗಿದೆ. ಬಡಪಾಯಿ ಮನೆಯೊಡತಿ ಈಗ ಮುಂದೇನು ಎಂದು ತೋಚದೆ ಅತಂತ್ರರಾಗಿದ್ದಾರೆ.

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
34° 24°	32° 26°



ಧರೆಗುರುಳಿದ ವಿದ್ಯುತ್ ಕಂಬ | ಅಲ್ಲಲ್ಲಿ ನೆಲಕಚ್ಚಿದ ಕೃಷಿ ಬೆಳೆಗಳು

ಏನು ನಿನ್ನ ಹನಿಗಳ ಲೀಲೆ!

ಸುಳ್ಯ, ಕಡಬ, ಉಪ್ಪಿನಂಗಡಿಗೆ ತ್ರಾಸ ನೀಡಿತು ತಾಸಿನ ಮಳೆ

ಮಂಗಳೂರು: ಶನಿವಾರ ಸಂಜೆ ಬಳಿಕ ಕೆಲವು ಕಾಲ ಬಂದು ಹೋದ ಮಳೆ ಸುಳ್ಯ, ಕಡಬ, ಉಪ್ಪಿನಂಗಡಿ, ಬೆಳ್ತಂಗಡಿ ತಾಲೂಕುಗಳಲ್ಲಿ ಅಪಾರ ಹಾನಿ ಉಂಟು ಮಾಡಿದೆ. ಮಳೆ ನಿಂತುಹೋಗಿದ್ದು, ಹಾನಿ ಕಷ್ಟನಷ್ಟದ ಪ್ರಮಾಣ ಹೆಚ್ಚಳವಾಗುತ್ತಿದೆ.

ಕಡಬ ಪರಿಸರವನ್ನು ನಡುಗಿಸಿದ ಮಳೆ

ಕ್ಯೊಲ ಗ್ರಾಮದ ಸಂನ್ಯಾಸಿಮೂಲೆ ಆಳಕೆ ಎಂಬಲ್ಲಿ ಗಾಳಿ ಮಳೆಗೆ ಧರೆ ಮೇಲೆ ಇದ್ದ ಮರವೊಂದು ಮನೆಯ ಮೇಲೆ ಬಿದ್ದು ಮನೆಗೆ ಹಾನಿ ಉಂಟಾಗಿದೆ. ಸಂನ್ಯಾಸಿಮೂಲೆ ಆಳಕೆ ನಿವಾಸಿ ಮರಿಯಮ್ಮ ಎಂಬವರ ಮನೆ ಹಿಂಭಾಗದಲ್ಲಿ ಸಿಮೆಂಟು ಶೀಟ್ ಹಾಕಿದ್ದ ಮಾಡಿನ ಮೇಲೆ ಮರ ಬಿದ್ದಿದ್ದು, ಸಿಮೆಂಟು ಶೀಟು ಪುಡಿಯಾಗಿ, ಮನೆಯ ಗೋಡೆಗೂ ಹಾನಿ ಉಂಟಾಗಿದೆ. ಮನೆಯ ಒಳಗೆ ಇದ್ದ ಮನೆಮಂದಿ ಮರ ಬೀಳುವ ಶಬ್ಧ ಕೇಳುತ್ತಲೇ ಮನೆಯಿಂದ ಹೊರಕ್ಕೆ ಓಡಿ ಹೋಗಿ ಅಪಾಯದಿಂದ ಪಾರಾಗಿದ್ದಾರೆ.

ಕತ್ತಲಿನಲ್ಲಿ ಸುಳ್ಯದ ಗ್ರಾಮೀಣ ಪರಿಸರ

ಗಾಳಿ, ಸಿಡಿಲನ ಅಬ್ಬರದ ಮಳೆಗೆ ಸುಳ್ಯದಾದ್ಯಂತ ವಿದ್ಯುತ್ ಪೂರೈಕೆ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ.







ಶನಿವಾರ ರಾತ್ರಿಯನ್ನು ಜನತೆ ವಿದ್ಯುತ್ ಬೆಳಕಿಲ್ಲದೇ ಕಳೆದಿದ್ದಾರೆ. ಗಾಳಿ ಮಳೆಗೆ ಅಲ್ಲಲ್ಲಿ ಮರದ ರೆಂಬೆ ಕೊಂಬೆಗಳು ಬಿದ್ದು ವಿದ್ಯುತ್ ಕಂಬ ನೆಲಕ್ಕುರುಳಿವೆ. ತಾಲೂಕಿನಲ್ಲಿ 18 ಎಚ್‌ಟಿ ಕಂಬ, ಎಲ್‌ಟಿ ತಂತಿಗಳು ಹಾದು ಹೋಗುವ 56 ಕಂಬಗಳು, ಐದು ವಿದ್ಯುತ್ ಪರಿವರ್ತಕಗಳು ಹಾನಿಗೊಂಡಿದೆ. ಗುತ್ತಿಗೆ ಆಧಾರಿತ ನೌಕರರು ಮತ್ತು ಮೆಸ್ಕಾಂ ಸಿಬ್ಬಂದಿಗಳಿಂದ ಪುನರ್ ಜೋಡಣ ಕಾರ್ಯ ಭರದಿಂದ ಸಾಗಿದೆ.

ಉಪ್ಪಿನಂಗಡಿ ಪರಿಸರದಲ್ಲಿಯೂ ಹಾನಿ

ಶನಿವಾರದ ಮಳೆಗೆ ಉಪ್ಪಿನಂಗಡಿ ಸುತ್ತಮುತ್ತ ಹಲವೆಡೆ ಹಾನಿಯುಂಟಾಗಿದೆ. ಒಟ್ಟು 35 ವಿದ್ಯುತ್ ಕಂಬಗಳು ಧರೆಗುರುಳಿದ್ದು, ವಿದ್ಯುತ್ ಪೂರೈಕೆ ಅಸ್ತವ್ಯಸ್ತವಾಗಿದೆ. ರಾಮನಗರ ನಿವಾಸಿ ಶೋಭಾ ಎಂಬವರ ಮನೆಯ ಛಾವಣಿ ಗಾಳಿಯ ಹೊಡೆತಕ್ಕೆ ಸಿಲುಕಿ ನುಚ್ಚುನೂರಾಗಿದ್ದು ಮನೆ ಸಂಪೂರ್ಣ ಹಾನಿಗೀಡಾಗಿದೆ. ಇಳಂತಿಲ, ಪೆದಮಲೆ ಎಂಬಲ್ಲಿ ಮರ ವಿದ್ಯುತ್ ತಂತ್ರಿಯ ಮೇಲೆ ಬಿದ್ದ ಪರಿಣಾಮ ಪ್ರಧಾನ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತಾದರೂ ಮೆಸ್ಕಾಂ ಸಿಬ್ಬಂದಿಗಳ ಸಕಾಲಿಕ ಸ್ಪಂದನದಿಂದಾಗಿ ರಾತ್ರಿ ವೇಳೆ ಪೇಟೆ ಭಾಗಕ್ಕೆ ವಿದ್ಯುತ್ ಸರಬರಾಜು ಪುನರಾರಂಭವಾಗಿದೆ. »ಪುಟ 6

ಉಡುಪಿ ಜಿಲ್ಲೆಯಲ್ಲಿಯೂ ಮೆಸ್ಕಾಂಗೆ ಭಾರೀ ಕಷ್ಟನಷ್ಟ

ಉಡುಪಿ ಜಿಲ್ಲೆಯಾದ್ಯಂತ ಶನಿವಾರ ಸಂಜೆ ದಿಢೀರ್ ಅಪ್ಪಳಿಸಿದ ಗುಡುಗು ಸಹಿತ ಬಿರುಗಾಳಿ ಮಳೆ, ಗ್ರಾಮೀಣ ಭಾಗಗಳಲ್ಲಿ ಭಾರೀ ಅವಾಂತರ ಸೃಷ್ಟಿಸಿತ್ತು. ಪ್ರಮುಖವಾಗಿ ಕಾರ್ಕಳ, ಹೆಬ್ರಿ ಮತ್ತು ಕಾಪು ತಾಲೂಕುಗಳಲ್ಲಿ ಸಿಡಿಲು ಹಾಗೂ ಬಿರುಗಾಳಿಯ ಅಬ್ಬರಕ್ಕೆ ಆಸ್ತಿಪಾಸ್ತಿಗಳಿಗೆ ವ್ಯಾಪಕ ಹಾನಿಯಾಗಿದೆ. ವಿದ್ಯುತ್‌ಲೈನ್‌ಗಳ ಮೇಲೆ ಮರ ಹಾಗೂ ಕೊಂಬೆ ಬಿದ್ದ ಪರಿಣಾಮ ಸುಮಾರು 50ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಸಮವಾಗಿವೆ. ಹೆಬ್ರಿ ಮತ್ತು ಕಾರ್ಕಳದ ತಪ್ಪಲು ಪ್ರದೇಶಗಳಲ್ಲಿ ಮರಗಳು ರಸ್ತೆಗುರುಳಿ ಸಂಚಾರಕ್ಕೆ ಅಡ್ಡಿಯಾಗಿತ್ತು. ಮೆಸ್ಕಾಂ ಇಲಾಖೆಗೆ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದ್ದು, ಶನಿವಾರ ರಾತ್ರಿಯಿಡೀ ಹಲವು ಗ್ರಾಮಗಳು ಕತ್ತಲಲ್ಲಿ ಮುಳುಗಿದ್ದವು.

ಸುತ್ತಮುತ್ತ

ಇಂದು ಕರಾವಳಿ ಭಾಗದ ವಿವಿಧ ಕಡೆಗಳಲ್ಲಿ ಮಳೆ, ಬಿರುಗಾಳಿಯ ಸಾಧ್ಯತೆ?

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಇಂದು (ಮಾ.30) ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ನಾಗರಿಕರಿಗೆ ಮುನ್ಸೂಚನೆ ನೀಡಿದೆ.

ಈ ಸಂದರ್ಭ ಗಾಳಿಯ ವೇಗ ಗಂಟೆಗೆ 50 ಕಿಲೋ ಮೀಟರ್ ವೇಗ ಇರುವ ಸಾಧ್ಯತೆಯಿದೆ. ನಾಗರಿಕರು ಹೆಚ್ಚಿನ ಎಚ್ಚರಿಕೆ ವಹಿಸಬೇಕು, ಜೊತೆಗೆ ಗುಡುಗು ಸಿಡಿಲು ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಸಹಜ ಸ್ಥಿತಿಯಲ್ಲಿ ಕಡಲು ನಿರಾಳ

ಕರಾವಳಿಯಲ್ಲಿ ಹಠಾತ್ ಹವಾಮಾನ ಬದಲಾಗಿ ಕೆಲವೆಡೆ ಗಾಳಿ ಮಳೆ ಕಾಣಿಸಿಕೊಂಡರೂ, ಕಡಲು ಯಥಾಸ್ಥಿತಿಯಲ್ಲಿ ಇರುವುದು ಮೀನುಗಾರರನ್ನು ನಿರಾಳವಾಗಿಸಿದೆ. ಕರಾವಳಿ ಭಾಗದ ಕಡಲಿನಲ್ಲಿ ಮೀನುಗಾರಿಕೆ ಯಥಾಸ್ಥಿತಿ ಮುಂದುವರಿದಿದೆ.

ಖುದ್ದು ರಾಜಾಸೀಟು ಉದ್ಯಾನವನದ ಸ್ಥಿತಿಗತಿ ವೀಕ್ಷಿಸಿದ ಜಿಲ್ಲಾಧಿಕಾರಿ

ಮತ್ತೆ ಓಡಲಿದೆಯೇ ಚುಕ್‌ಬುಕ್ ರೈಲು?

ಮಡಿಕೇರಿ: ಪ್ರವಾಸಿಗರ ಕೇಂದ್ರ ಬಿಂದು, ನಗರದ ಪ್ರಸಿದ್ಧ ರಾಜಾಸೀಟು ಉದ್ಯಾನವನಕ್ಕೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಖುದ್ದು ಭೇಟಿ ನೀಡಿ ವೀಕ್ಷಿಸಿದರು.

ಇದೇ ಸಂದರ್ಭ ಅವರು ಗ್ರೇಟರ್ ರಾಜಾ ಸೀಟು, ಪುಟಾಣಿ ರೈಲು ಮಾರ್ಗ, ಕೂರ್ಗ್ ವಿಲೇಜ್ ಸ್ಥಿತಿಗತಿಯ ಮಾಹಿತಿ ಪಡೆದರು.

ಕೌಂಟರ್, ಸಿಸಿ ಕ್ಯಾಮರಾ ಪರಿಶೀಲನೆ

ರಾಜಾಸೀಟು ಉದ್ಯಾನವನದ ಬಳಿಯಲ್ಲಿನ ಟಿಕೆಟ್ ಕೌಂಟರ್, ಮಾಹಿತಿ ಕೇಂದ್ರ ಹಾಗೂ ಉದ್ಯಾನವನದೊಳಗೆ ಸಿಸಿಟಿವಿ ಹಾಗೂ ಗೇಟ್ ಅನ್ನು ಕೂಡಾ ಅವರು ಪರಿಶೀಲಿಸಿದರು.

ಉದ್ಯಾನವನ ಸುತ್ತಲೂ ಸಿಸಿಟಿವಿ ವೈರ್, ವಿದ್ಯುತ್ ತಂತಿ ತುಂಬಿದ್ದು, ಕೂಡಲೇ ಎಲ್ಲಾ ದುರಸ್ತಿ ಕಾರ್ಯ, ಭೂಮಿಯ ಒಳಭಾಗದಲ್ಲಿ ತಂತಿ ಅಳವಡಿಸುವುದು, ದೀಪ ದುರಸ್ತಿಪಡಿಸಿ ಅಲಂಕಾರಿಕಾ ದೀಪಗಳು ಸೇರಿ ಇಲ್ಲಿ ವಿವಿಧ ರೀತಿಯ ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ತೋಟಗಾರಿಕೆ ಉಪ ನಿರ್ದೇಶಕರಿಗೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು. »ಪುಟ 6



ರೈಲು ಆರಂಭವಾಗಲಿ

ಪ್ರವಾಸಿಗರ ಆಕರ್ಷಣೆಯ ಕೇಂದ್ರವಾದ ರಾಜಾಸೀಟು ಬಳಿಯಲ್ಲಿ ಪುಟಾಣಿ ರೈಲು ಆರಂಭಕ್ಕೆ ಅಗತ್ಯ ಕ್ರಮವಹಿಸುವಂತೆ ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಅವರು ಸೂಚಿಸಿದರು.

ಮಾವು ಮೇಳ, ಫಲಪುಷ್ಪ ಪ್ರದರ್ಶನ ಆಯೋಜಿಸಿ...

ಕೂರ್ಗ್ ವಿಲೇಜ್‌ನಲ್ಲಿರುವ ಮಳಿಗೆ ವೀಕ್ಷಿಸಿದ ಜಿಲ್ಲಾಧಿಕಾರಿಯವರು, ಈ ಪ್ರದೇಶದಲ್ಲಿ ಮಾವು ಮೇಳ, ಫಲಪುಷ್ಪ ಪ್ರದರ್ಶನ ಮತ್ತು ಇತರೆ ಇಲಾಖೆಗಳಲ್ಲಿ ನಡೆಸುವ ಮೇಳ ಆಯೋಜಿಸಲು ಇಲಾಖೆಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

ಮರೆಯಾದ ಮಳೆ: ವಾತಾವರಣದಲ್ಲಿನ ಉಷ್ಣಾಂಶ ಮತ್ತೆ ಏರಿಕೆ

ಮಂಗಳೂರು: ಶನಿವಾರ ಜಿಲ್ಲೆಯ ಕೆಲವೆಡೆ ಘರ್ಜಿಸಿದ್ದ ಮಳೆ ಭಾನುವಾರ ಮಾಯವಾಗಿದ್ದು, ಕರಾವಳಿಯಲ್ಲಿ ತಾಪಮಾನ ಮತ್ತೆ ಏರಿಕೆ ಕಂಡಿದೆ. ಭಾನುವಾರ ಮಂಗಳೂರು ನಗರದಲ್ಲಿ ಗರಿಷ್ಠ 34 ಡಿಗ್ರಿ, ಜಿಲ್ಲೆಯಲ್ಲಿ 35 ಡಿಗ್ರಿ ಸೆಲ್ಸಿಯೆಸ್ ತಾಪಮಾನವಿತ್ತು.

ಹವಾಮಾನ ಇಲಾಖೆ ಮುನ್ಸೂಚನೆಯಂತೆ ಇಂದು ಕರಾವಳಿ ಜಿಲ್ಲೆಗಳ ಕೆಲವೆಡೆ ಮಳೆಯಾಗಲಿದೆ.

ಓವರ್‌ಲೋಡ್‌ಗೆ ಹೈರಾಣಾಗುತ್ತಿದೆ ಕಾಸರಗೋಡು ಜಿಲ್ಲೆಯಲ್ಲಿ ಟ್ರಾನ್ಸ್‌ಫಾರ್ಮರ್

ಕತ್ತಲಾದರೆ ಸಾಕು ಫ್ಯೂಸ್‌ಗಳು ಢಂ ಢಮಾರ್!

ಕಾಸರಗೋಡು: ವಿದ್ಯುತ್ ಬಳಕೆ ಸಾರ್ವಕಾಲಿಕ ದಾಖಲೆ ಮುಟ್ಟುತ್ತಿದ್ದು, ರಾತ್ರಿ ಅನೇಕ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಈಗ ಸಾಮಾನ್ಯ ವಾಗುತ್ತಿದೆ. ಈ ನಡುವೆ ಟ್ರಾನ್ಸ್‌ಫಾರ್ಮರ್‌ಗಳಲ್ಲಿನ ಫ್ಯೂಸ್ ಓವರ್ ಲೋಡ್‌ನಿಂದ ಸ್ಫೋಟಗೊಳ್ಳುತ್ತಿವೆ.

ಹೆಚ್ಚುತ್ತಿದೆ ವಿದ್ಯುತ್ ಬಳಕೆ

ಸಂಜೆ ಏಳು ಗಂಟೆಯಿಂದ ರಾತ್ರಿ 12 ಗಂಟೆ ನಡುವೆ ವಿದ್ಯುತ್‌ನ ಬಳಕೆ ಹೆಚ್ಚಳವಾಗುತ್ತಿದೆ. ಈ ಅವಧಿಯಲ್ಲಿ ಎಸಿ, ಇಂಡಕ್ಷನ್ ಸ್ಟೌ ಬಳಕೆ ಮತ್ತು ವಿದ್ಯುತ್ ವಾಹನಗಳ ಚಾರ್ಜ್‌ನಿಂದ ಟ್ರಾನ್ಸ್‌ಫಾರ್ಮರ್‌ಗಳ ಮೇಲೆ ಓವರ್ ಲೋಡ್ ಬೀಳುತ್ತಿದ್ದು, ಫ್ಯೂಸ್‌ಗಳು ಸ್ಫೋಟಗೊಳ್ಳುತ್ತದೆ. ಬಳಿಕ ಅದನ್ನು ದುರಸ್ತಿ ಮಾಡಲು ಕೆಎಸ್‌ಇಬಿ ನೌಕರರು ಪರದಾಟ ನಡೆಸಬೇಕಾಗುತ್ತಿದೆ. ಇದು ಸ್ಥಳ ಗುರುತಿಸಿ ಸರಿಪಡಿಸಲು ಸುಮಾರು ಒಂದು ಗಂಟೆ ಅವಧಿ ತೆಗೆದುಕೊಳ್ಳುತ್ತದೆ.

ಇದಲ್ಲದೆ ಪ್ರಸರಣ ಮತ್ತು ವಿತರಣೆ ಮಾರ್ಗದ ಓವರ್ ಲೋಡ್‌ಗಳು ದಿನನಿತ್ಯದ ವಿದ್ಯುತ್ ಸರಬರಾಜಿನ ಮೇಲೆ ಪರಿಣಾಮ ಬೀರುತ್ತಿದೆ. ಹೀಗಾಗಿ ವಿದ್ಯುತ್ ಕಡಿತ ಎಂಬುದು ಈಗ ಜನತೆಗೆ ದಿನನಿತ್ಯದ ಭಾಗವಾಗಿದೆ. »ಪುಟ 6



ಇನ್ನಷ್ಟು ಹೆಚ್ಚಳ ಸಾಧ್ಯತೆ

ಮಾರ್ಚ್‌ನಲ್ಲಿಯೇ ವಿದ್ಯುತ್ ಬಳಕೆ ಹೆಚ್ಚಾಗ ತೊಡಗಿದೆ. ಆದರೆ ಮುಂದಿನ ಎರಡು ತಿಂಗಳುಗಳಲ್ಲಿ ಅಂದೆ ಏಪ್ರಿಲ್ , ಮೇ ತಿಂಗಳುಗಳಲ್ಲಿ ಇನ್ನೂ ವಿದ್ಯುತ್ ಬಳಕೆ ಹೆಚ್ಚಳವಾಗಬಹುದು ಎಂದು ವಿದ್ಯುತ್ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲೆಲ್ಲಿ ಕಾಡುತ್ತಿದೆ ಸಮಸ್ಯೆ ?

ಕಾಸರಗೋಡು, ಸೀತಾಂಗೋಳಿ, ಬದಿಯಡ್ಕ, ಉಪ್ಪಳ, ಬೇಕೂರು ವಲಯಗಳಲ್ಲಿ ಕಳೆದ ಒಂದು ತಿಂಗಳುಗಳಿಂದ ಅಪರಾಹ್ನದ ಬಳಿಕ ವ್ಯಾಪಕವಾಗಿ ವಿದ್ಯುತ್ ವ್ಯತ್ಯಯ ವರದಿಯಾಗಿದೆ. ಒಮ್ಮೆ ಕಡಿತಗೊಂಡ ಬಳಿಕ ಮರಳಿ ಸರಬರಾಜಗಲು ಕನಿಷ್ಠ 15 ನಿಮಿಷ ತೆಗೆದುಕೊಳ್ಳುತ್ತಿದ್ದು, ಹಠಾತ್ ಸಂಪರ್ಕ ಹಲವೆಡೆ ಉಪಕರಣಗಳನ್ನು ಹಾನಿಗೊಳಿಸಿರುವುದು ವರದಿಯಾಗಿದೆ. ಅನಿಯಂತ್ರಿತ ವಿದ್ಯುತ್ ಕಡಿತ ವ್ಯವಸ್ಥೆಗಳ ಮೇಲೆ ಭಾರೀ ಪರಿಣಾಮ ಬೀರುತ್ತಿದೆ.

ಸುತ್ತ ಮುತ್ತ

ಶರವೂರು ದೇವಳ: ಇಂದು ಶ್ರೀ ದೇವರ ಪುನರ್ ಪ್ರತಿಷ್ಠೆ

ಆಲಂಕಾರು: ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಇಂದು (ಮಾ.30) ಬೆಳಗ್ಗೆ ದುರ್ಗಾಪರಮೇಶ್ವರೀ ದೇವರ ಪುನಃ ಪ್ರತಿಷ್ಠೆ ಅಷ್ಟಬಂಧಕ್ರಿಯೆ, ಕುಂಭೇಶ ನಿದ್ರಾಕುಂಭ, ಜೀವಕಲಶ ಅಭಿಷೇಕ, ಪ್ರಸನ್ನಪೂಜೆ ಮತ್ತು ಶ್ರೀ ಗಣಪತಿ ಲಕ್ಷ್ಮೀನಾರಾಯಣ ದೇವರುಗಳ ಪುನಃ ಪ್ರತಿಷ್ಠೆ ಕಲಶಾಭಿಷೇಕ ಪ್ರಸನ್ನ ಪೂಜೆ ನಡೆಯಲಿದೆ. ಸಂಜೆ ಗೋಪಾಲಕೃಷ್ಣ ಪಡ್ಡಿಲ್ಲಾಯರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಕಲ್ಲಡ್ಕ ಪ್ರಭಾಕರ ಭಟ್ ದೀಪ ಪ್ರಜ್ವಲನೆ ಮಾಡಲಿದ್ದಾರೆ. ರೋಹಿತ್ ಚಕ್ರತೀರ್ಥ ಭಾರತೀಯ ಬೌದ್ಧಿಕ ಪರಂಪರೆ ಎಂಬ ವಿಚಾರದ ಬಗ್ಗೆ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪು ಐತಿಹಾಸಿಕ: ದಿನೇಶ್ ಅಮ್ಟೂರು

ಬಂಟ್ವಾಳ: ಭಾರತೀಯ ಪರಂಪರೆಯಲ್ಲಿ ಜನಿಸಿದ ಪಂಥಗಳಾದ ಬೌದ್ಧ ಮತ್ತು ಸಿಖ್ ಧರ್ಮಗಳನ್ನು



ಹೊರತುಪಡಿಸಿ ಇನ್ನು ಯಾವುದೇ ಮತಕ್ಕೆ ಮತಾಂತರವಾದರೆ ಎಸ್ಸಿ ಎಸ್ಟಿ ಸ್ಥಾನಮಾನ ಪಡೆಯಲು ಅರ್ಹರಲ್ಲ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಒಂದು ಐತಿಹಾಸಿಕ ತೀರ್ಪು ಆಗಿದೆ ಎಂದು ಬಂಟ್ವಾಳ ತಾಲೂಕು ಪಂಚಾಯತ್ ನ ಮಾಜಿ ಉಪಾಧ್ಯಕ್ಷ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ. ಈ ತೀರ್ಪಿನ ಮೂಲಕ ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನು ಸಂವಿಧಾನದ ಆಶಯಗಳನ್ನು ನ್ಯಾಯಾಲಯವು ಎತ್ತಿ ಹಿಡಿದಿದೆ ಎಂದು ಅವರು ತಿಳಿಸಿದ್ದಾರೆ. ಕ್ರೈಸ್ತ ಮಿಷನರಿಗಳು,ಇಸ್ಲಾಮಿಕ್ ಮೂಲಭೂತವಾದಿಗಳು ವಿವಿಧ ಆಸೆ, ಆಮಿಷಗಳನ್ನು ಒಡ್ಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಸಮುದಾಯಕ್ಕೆ ಸೇರಿದ ಮುಗ್ಧ ಜನರನ್ನು ದಾರಿ ತಪ್ಪಿಸಿ,ತಮ್ಮ ಮೋಸದ ಜಾಲಕ್ಕೆ ಸಿಲುಕಿಸಿ ಅವರನ್ನು ಮತಾಂತರ ಮಾಡುವಂತ ಪ್ರಕ್ರಿಯೆಗೆ ಈ ತೀರ್ಪಿನಿಂದ ಸಂಪೂರ್ಣವಾಗಿ ಕಡಿವಾಣ ಬೀಳಲಿದೆ ಎಂದು ತಿಳಿಸಿರುವ ಅವರು ಸರ್ವೋಚ್ಚ ನ್ಯಾಯಾಲಯದ ಈ ತೀರ್ಪನ್ನು ಅತ್ಯಂತ ಮುಕ್ತ ಕಂಠದಿಂದ ಸ್ವಾಗತಿಸುವುದಾಗಿ ತಿಳಿಸಿದ್ದಾರೆ.

ಮೋಂತಿಮಾರು ಶ್ರೀಕ್ಷೇತ್ರ: ಆಡಳಿತ ಮೊಕ್ತೇಸರರಾಗಿ ಗಂಗಾಧರ ಶೇಂದ್ರೇಕಾರ್

ಬಂಟ್ವಾಳ: ತಾಲೂಕಿನ ಮಂಚಿ ಗ್ರಾಮದ ಮೋಂತಿಮಾರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ



ಗಂಗಾಧರ್ ಶೇಂದ್ರೆಕಾರ್ ವೀರಕಂಭ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮಾ.24ರಂದು ನಡೆದ ದೇವಸ್ಥಾನದ ವಾರ್ಷಿಕ ಮಹಾಸಭೆಯಲ್ಲಿ ಆಡಳಿತ ಮಂಡಳಿಯ ಹೊಸ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಈ ಸಂದರ್ಭದಲ್ಲಿ ಮುಂದಿನ ಐದು ವರ್ಷಗಳ ಅವಧಿಗೆ ಒಟ್ಟು 9 ಸದಸ್ಯರನ್ನು ಆಯ್ಕೆ ಮಾಡಲಾಯಿತು. ವಿಕಾಸ್ ಬೋರ್ಕರ್ ಪುತ್ತೂರು, ವಾಣಿ ವೇಣುಗೋಪಾಲ ಕಾಮತ್ ಪುಚ್ಚೆಕೆರೆ, ಗಂಗಾಧರ ಶೇಂದ್ರೆಕಾರ್ ವೀರಕಂಭ, ಕೃಷ್ಣರಾಜ ನಾಯಕ್ ನಿರ್ಬೈಲ್, ಸಂತೋಷ್ ನಾಯಕ್ ಗುಂಡಿಮಜಲು, ಗೋಪಾಲಕೃಷ್ಣ ನಾಯಕ್ ಬೆಳ್ಳಾರೆ, ಡಾ. ಮುಕುಂದ ಪ್ರಭು ನಾಡಾಜೆ, ಪ್ರಶಾಂತ್ ನಾಯಕ್ ನೇರೋಳು, ಸತ್ಯವತಿ ದಯಾನಂದ ನಾಯಕ್ ಕುಂಟಿಕಾನ. ಇವರ ಪೈಕಿ ಗಂಗಾಧರ ಶೇಂದ್ರೇಕಾರ್ ಆಡಳಿತ ಮೊಕ್ತೇಸರರಾಗಿ ಆಯ್ಕೆಯಾಗಿದ್ದು, ಉಳಿದ 8 ಮಂದಿ ಸಹ ಮೊಕ್ತೇಸರರಾಗಿರುತ್ತಾರೆ.

ನಾಳೆ ಉಪನ್ಯಾಸ

ಮುಲ್ಕಿ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ-ದಕ್ಷಿಣ ಕನ್ನಡ ,ವಿಜಯಾ ಕಾಲೇಜು, ಮುಲ್ಕಿಯ ಸಾಹಿತ್ಯ ಸಂಘ ಮತ್ತು ಐಕ್ಯುಎಸಿ ಯ ಸಹಯೋಗದೊಂದಿಗೆ ಮಾ.31ಕ್ಕೆ ಮಧ್ಯಾಹ್ನ 2ಕ್ಕೆ ಮುಲ್ಕಿಯ ವಿಜಯ ಕಾಲೇಜಿನ ಸಭಾಂಗಣದಲ್ಲಿ ಲಂಕೇಶ್ ಬರಹಗಳ ವೈಚಾರಿಕ ವಿನ್ಯಾಸ;ವಿಶೇಷ ಉಪನ್ಯಾಸ ಕಾರ್ಯಕ್ರಮ ಜರಗಲಿದೆ. ಕಾಲೇಜಿನ ಪ್ರಾಂಶುಪಾಲ ಪ್ರೊ. ವೆಂಕಟೇಶ್ ಭಟ್ ಅಧ್ಯಕ್ಷತೆ ವಹಿಸಲಿದ್ದು ವಿವಿಧ ಕಾಲೇಜುಗಳ ಉಪನ್ಯಾಸಕರು, ಪ್ರಾಂಶುಪಾಲರು ವಿಚಾರ ಮಂಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಉಬಾರ್ ಕಂಬಳೋತ್ಸವ'ದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾಹಿತಿ

ಕಂಬಳದ ಬೆಳವಣಿಗೆಗಾಗಿ ರಾಜ್ಯ ಸರ್ಕಾರದಿಂದ ಅನುದಾನ

ಉಪ್ಪಿನಂಗಡಿ: ರಾಜಕಾರಣದೊಂದಿಗೆ ಸಮಾಜ ಸೇವೆ, ಈ ಮಣ್ಣಿನ ಸಂಸ್ಕೃತಿ, ಕ್ರೀಡೆ, ಆಚಾರ ವಿಚಾರ ಉಳಿಸಿ ಬೆಳೆಸುವ ಕೆಲಸವು ರಾಜಕಾರಣಿಗಳಿಂದ ಆಗಬೇಕು. ಆ ಕೆಲಸ ಶಾಸಕ ಅಶೋಕ್ ರೈಯವರಿಂದ ಪರಿಣಾಮಕಾರಿಯಾಗಿ ನಡೆಯುತ್ತಿರುವುದು ಶ್ಲಾಘನೀಯವೆನಿಸಿದೆ ಎಂದು ರಾಜ್ಯ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಉಪ್ಪಿನಂಗಡಿಯ ವಿಜಯ- ವಿಕ್ರಮ ಜೋಡುಕರೆ ಕಂಬಳ ಸಮಿತಿಯಿಂದ ಆಯೋಜಿಸಿದ್ದ 'ಉಬಾರ್ ಕಂಬಳೋತ್ಸವ'ದ ಸಭಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಅವರು, ಇದೊಂದು ಗ್ರಾಮೀಣ ಭಾಗದ ಕ್ರೀಡೆ. ಅದನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೂ ಉಣಬಡಿಸುವ ಕೆಲಸ ಆಗಬೇಕು. ಹಾಗಾದಾಗ ಈ ಭೂಮಿ ಇರುವ ವರೆಗೂ ಕಂಬಳಕ್ಕೆ ಅಳಿವು ಬರಲು ಸಾಧ್ಯವಿಲ್ಲ. ನಮ್ಮ ಭಾಗದ ಹಲವು ಗ್ರಾಮೀಣ ಕ್ರೀಡೆಗೂ ನಿರಂತರ ಪ್ರೋತ್ಸಾಹ ನೀಡುತ್ತಿರುತ್ತೇನೆ. ಕಂಬಳಕ್ಕೆ ಸರಕಾರವು ಅನುದಾನ ನೀಡಿದ್ದು, ಇದು ಕಂಬಳದ ಬೆಳವಣಿಗೆಗೆ ಇನ್ನಷ್ಟು ಸಹಕಾರಿಯಾಗಿದೆ. ಅಶೋಕ್ ಕುಮಾರ್ ರೈಯವರು ಶಾಸಕರಾದ ಬಳಿಕ ಹಲವು ಅಭಿವೃದ್ಧಿ



ಕಾರ್ಯಗಳನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಕಂಬಳ ಸಮಿತಿಯ ಅಧ್ಯಕ್ಷ, ಶಾಸಕ ಅಶೋಕ್ ಕುಮಾರ್ ರೈ ಅಧ್ಯಕ್ಷತೆ ವಹಿಸಿ, ಸಚಿವ ಸತೀಶ್ ಜಾರಕಿಹೊಳಿ ಸರಳ ಸಜ್ಜನಿಕೆಯ ರಾಜಕಾರಣಿ. ನುಡಿದಂತೆ ನಡೆಯುವ ಮಂತ್ರಿ. ಲೋಕೋಪಯೋಗಿ ಇಲಾಖೆಯ ಸಚಿವರಾಗಿ ರಾಜ್ಯದ 224 ಶಾಸಕರಿಗೂ ಸಮಾನ ನ್ಯಾಯ ಕೊಡುವ ಸಚಿವ ಎಂದರು.

ನಟ ಅರವಿಂದ ಬೋಳಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಕ್ಷಿತ್ ಶಿವರಾಂ, ಕುದ್ರೋಳಿ ಶ್ರೀ ಗೋಕರ್ಣ ದೇವಸ್ಥಾನದ ಕೋಶಾಧಿಕಾರಿ ಪದ್ಮರಾಜ್ ಪೂಜಾರಿ ಆರ್. , ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಉದಯ ಕುಮಾರ್ ಶೆಟ್ಟಿ ಮುನಿಯಾಲು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇನಾಯತ್ ಅಲಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಮಹಮ್ಮದ್, ಚಿತ್ರನಟ ಸನಿಲ್ ಗುರು, ಪುಷ್ಪರಾಜ್ ಬೊಳ್ಳಾರ್ ಶುಭ ಹಾರೈಸಿದರು. ಈ ಸಂದರ್ಭ ಸಚಿವ ಸತೀಶ್ ಜಾರಕಿಹೊಳಿ, ಉದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಾಸ್ಟರ್ ಪ್ಲಾನರಿಯ ಎಸ್.ಕೆ. ಆನಂದ್, ಕಂಬಳ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸದಾಶಿವ ಸಾಮಾನಿ ಸಂಪಿಗೆದಡಿ, ಕಂಬಳ ಮತ್ತು ಶಿಲ್ಪಶಾಸ್ತ್ರದಲ್ಲಿ ಸೇವೆ ಸಲ್ಲಿಸಿದ ಬೆಳ್ಳಿಪ್ಪಾಡಿ ಕೊಡಪೊಟ್ಟು ಸುರೇಶ್ ಕೃಷ್ಣಯ್ಯ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಷ್ಟ್ರೀಯ ಜ್ಯೂನಿಯರ್ ಕಬಡ್ಡಿ ಚಾಂಪಿಯನ್‌ಶಿಪ್ ಆಟಗಾರ ಆಧೀಶ್ ಶೆಟ್ಟಿ ಬರೆಮೇಲು ಅವರನ್ನು ಅಭಿನಂದಿಸಲಾಯಿತು. ಚಿತ್ರದುರ್ಗದ ಮಾಜಿ ಸಂಸದ ಚಂದ್ರಪ್ಪ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನವೀನ್ ಭಂಡಾರಿ, ಕೆಪಿಸಿಸಿ ಸದಸ್ಯ ಪ್ರಸಾದ್ ಕೌಶಲ್ ಶೆಟ್ಟಿ, ರವಿ ಶೆಟ್ಟಿ ಮೂಡಂಬೈಲು, ಗುಣಪಾಲ ಕಡಂಬ, ಜಗನ್ನಾಥ ರೈ, ಉಮಾನಾಥ ಶೆಟ್ಟಿ, ಭರತ್ ಮುಂಡೋಡಿ, ಕೃಷ್ಣಪ್ರಸಾದ್ ಆಳ್ವ, ತೌಸೀಫ್ ಯು.ಟಿ., . ಈಶ್ವರ ಭಟ್ ಪಂಜಿಗುಡ್ಡೆ, ಸದಸ್ಯ ನಳಿನಿ ಪಿ. ಶೆಟ್ಟಿ, ಮಹಾಬಲ ಶೆಟ್ಟಿ, ವಿನಯ ಸುವರ್ಣ, ಜಯವಿಕ್ರಮ್ ಕಲ್ಲಾಪು, ಸುದೇಶ್ ಶೆಟ್ಟಿ, ಪ್ರಸಾದ್ ಕೌಶಲ್ ಶೆಟ್ಟಿ ಬೆಳ್ಳಿಪ್ಪಾಡಿ, ಶಿವರಾಮ ಆಳ್ವ, ನಿಹಾಲ್ ಶೆಟ್ಟಿ, ಸುಮಾ ಅಶೋಕ್ ರೈ, ಡಾ. ರಾಜಾರಾಮ್ ಕೆ.ಬಿ., ಜಯಪ್ರಕಾಶ್ ಬದಿನಾರು, ಕೃಷ್ಣ ಪ್ರಸಾದ್ ಭಟ್, ವಿಕ್ರಂ ಶೆಟ್ಟಿ ಅಂತರ, ಸಂತೋಷ್ ಭಂಡಾರಿ ಚಿಲ್ಮೆತ್ತಾರು, ಸಮಿತಿಯ ಗೌರವಾಧ್ಯಕ್ಷ ಉಮೇಶ್ ಶೆಣೈ ಎನ್., ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಅರ್ಪಿಣಿಗುತ್ತು, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಬೆಳ್ಳಿಪ್ಪಾಡಿ ಕೈಪ, ಕೋಶಾಧಿಕಾರಿ ಸೀತಾರಾಮ ಶೆಟ್ಟಿ ಹೆಗ್ಡೆಹಿತ್ಲು, ಉಪಾಧ್ಯಕ್ಷ ವಿದ್ಯಾಧರ ಜೈನ್, ರಾಮಚಂದ್ರ ಮಣಿಯಾಣಿ, ಸಂಘಟನಾ ಕಾರ್ಯದರ್ಶಿ ಯೋಗೀಶ್ ಎಸ್. ಸಾಮಾನಿ, ದಿಲೀಪ್ ಶೆಟ್ಟಿ ಕರಾಯ ಮತ್ತಿತರರು ಇದ್ದರು.

> ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಆಡಳಿತಕ್ಕೆ ಬಂದ 2.5 ವರ್ಷದಲ್ಲೇ ಲೋಕೋಪಯೋಗಿ ಇಲಾಖೆಯಿಂದ ಪುತ್ತೂರು ಕ್ಷೇತ್ರಕ್ಕೆ 248 ಕೋ. ರೂ. ಅನುದಾನ ಬಂದಿದೆ. ಕಂಬಳ ಕ್ರೀಡೆಯ ನಿಷೇಧಕ್ಕೆ ಪೇಟಾದವರು ಬಹಳಷ್ಟು ಪ್ರಯತ್ನ ಪಟ್ಟರು. ಆದರೆ ಪಕ್ಷಾತೀತವಾಗಿ ಕಂಬಳ ಉಳಿಸಲು ಹೋರಾಟ ನಡೆಸಿದ್ದರಿಂದ ಇದರ ನಿಷೇಧ ಸಾಧ್ಯವಾಗಲಿಲ್ಲ. ಈಗಿನ ಸರಕಾರವು ಕಂಬಳಕ್ಕೆ 1.15 ಕೋ.ರೂ. ಅನುದಾನ ಮಂಜೂರು ಮಾಡಿದೆ.
> ● ಅಶೋಕ್ ಕುಮಾರ್ ರೈ, ಶಾಸಕ

ಊರವರಿಂದ ಹಸಿರುವಾಣಿ ಸಮರ್ಪಣೆ | ಇಂದು ಪೇಟೆ ಸವಾರಿ, ಕಟ್ಟೆಪೂಜೆ

ಆತೂರು ಶ್ರೀ ಕ್ಷೇತ್ರದಲ್ಲಿ ಜಾತ್ರಾ ಉತ್ಸವಕ್ಕೆ ಚಾಲನೆ

ಕಡಬ: ಕಡಬ ತಾಲೂಕು ಕೊೖಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವ ಪ್ರಯುಕ್ತ ಭಾನುವಾರ ಬೆಳಿಗ್ಗೆ ಶಾಲಾ ವಿದ್ಯಾರ್ಥಿಗಳಿಂದ ಹಾಗೂ ಊರವರಿಂದ ಹಸಿರುವಾಣಿ ಸಮರ್ಪಣೆ ನಡೆಯಿತು.

ಗ್ರಾಮದ ವಿವಿಧ ಕಡೆಗಳಿಂದ ಆಗಮಿಸಿದ ಹೊರಕಾಣಿಕೆ ವಾಹನಗಳನ್ನು ದೇವಸ್ಥಾನದ ಮುಂಭಾಗದ ಮೈದಾನದಲ್ಲಿ ಬರಮಾಡಿ ಕೊಳ್ಳಲಾಯಿತು. ಬಳಿಕ ಚೆಂಡೆ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಸಾಗಿ ದೇವರಿಗೆ ಸಮರ್ಪಿಸಲಾಯಿತು. ಪವಿತ್ರಪಾಣಿ ವೆಂಟ್ರಮಣ ಕುದ್ರೆತ್ತಾಯ ಹೊರಕಾಣಿಕೆಗೆ ಪೂಜೆ ಸಲ್ಲಿಸಿದರು. ದೇವಸ್ಥಾನದ ಪ್ರಧಾನ ಅರ್ಚಕ ವಿಷ್ಣುಮೂರ್ತಿ ಬಡೆಕ್ಕಿಲ್ಲಾಯ ಪೂಜಾ ವಿಧಿ ವಿಧಾನ ನೆರವೇರಿಸಿದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರ ಬಾಳಿಕೆ, ಸದಸ್ಯ ಸುನಿತ್‌ರಾಜ್ ಶೆಟ್ಟಿ ಯತೀಶ್ ಗುಂಡಿಜೆ, ಶ್ರೀಧರ ಪೂಜಾರಿ ತುಂಬೆತ್ತಡ್ಕ, ಸಂಜೀವ ಸುದೆಂಗಳ, ಗೋಪಾಲ ನಾಯ್ಕ ಸೀಗೆತ್ತಡಿ, ಸುಜಾತ ಜೆ. ಶೆಟ್ಟಿ ಬಡಿಲ, ಮೀನಾಕ್ಷಿ ಕೆ. ಮುಂಡೈಮಾರ್, ಉತ್ಸವ ಸಮಿತಿ ಅಧ್ಯಕ್ಷ ಧರ್ಣಪ್ಪ ಗೌಡ ಕೋರಿಕ್ಕಾರು, ಪ್ರಧಾನ ಕಾರ್ಯದರ್ಶಿ ಕೊರಗಪ್ಪ ಗೌಡ ಮುಂಡೈಮಾರ್, ಉಪಾಧ್ಯಕ್ಷ ಮೋಹನ್ ದಾಸ್ ಶೆಟ್ಟಿ ಬಡಿಲ, ಸಂಜೀವ ಗೌಡ ಪರಂಗಾಜೆ, ಶ್ರೀನಿವಾಸ ಗೌಡ ಪಲ್ಲಡ್ಕಪಟ್ಟೆ, ರಾಜೀವ ಗೌಡ ಮೊಸಲಕ್ಕೆ, ಗಣೇಶ್ ಎರ್ಮಡ್ಕ, ಜೊತೆ ಕಾರ್ಯದರ್ಶಿಗಳಾದ ಶಶಿಕುಮಾರ್ ಅಂಬಾ, ಶಾಂತರಾಮ ಬೇಂಗದಪಡ್ಪು, ಜ್ಯೋತಿ ಕಲ್ಕಾಡಿ, ರಘುನಾಥ ಶೆಟ್ಟಿ ಕಲ್ಕಂಪಾಡಿ, ಸದಸ್ಯರಾದ ರವೀಂದ್ರ ಗೌಡ ಸಂಕೇಶ, ಉಮೇಶ್ ಬುಡಲೂರು, ಪರಮೇಶ್ವರ ಗೌಡ ಸಬಳೂರು, ತಿಮ್ಮಪ್ಪ ಗೌಡ ಸಂಕೇಶ, ಚಿದಾನಂದ ಪಾನ್ಯಾಲು, ಗಂಗಾಧರ ಗೌಡ ಪರಂಗಾಜೆ, ಯತೀಶ್ ಪುತ್ಯೆ, ವಸಂತ ಮೊಸಲಕ್ಕೆ, ಸುಧೀ ಶ್ ಪಟ್ಟೆ, ಮೋಹನಚಂದ್ರ ಪಲ್ಲಡ್ಕ, ರಮೇಶ್ ದಾಸ್ ಕಲಾಯಿ, ನಾಗೇಶ್ ನೀಲಮೆ, ವಿಶ್ವನಾಥ ಪುತ್ಯೆ, ಜನಾರ್ದನ ನಡುಗುಡ್ಡೆ, ಲಕ್ಷ್ಮಣ ಗೌಡ ಆನೆಗುಂಡಿ, ಪ್ರಕಾಶ್ ಕೆಮ್ಮಾರ, ಕೃಷ್ಣಪ್ಪ ಕಾಯರಕಟ್ಟ, ರುಕ್ಮಯ್ಯ ಗೌಡ ಕಾಯರಕಟ್ಟ, ಗ್ರಾಮ ಸಂಚಾಲಕ ಭವಿತ್‌ರಾಜ್ ಪಲ್ಲಡ್ಕಪಟ್ಟೆ, ಸಹ ಸಂಚಾಲಕ ಪ್ರವೀಣ್ ರಾಜ್ ಕೆ.ಎಸ್. ಕೊಲ್ಯ, ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ ಮೊದಲಾದವರು ಉಪಸ್ಥಿತರಿದ್ದರು.



ಇಂದಿನ ಕಾರ್ಯಕ್ರಮ

ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೆ ಅಂಗವಾಗಿ ಇಂದು (ಮಾ.30) ರಾತ್ರಿ ಬಲಿ ಹೊರಟು ಉತ್ಸವ, ಆತೂರಿನಿಂದ ಗೋಕುಲನಗರ, ಕೆ.ಸಿ ಫಾರ್ಮ್ ತನಕ ಪೇಟೆ ಸವಾರಿ, ಕಟ್ಟೆ ಪೂಜೆಗಳು ನಡೆಯಲಿದೆ. ಸಂಜೆ ಯಕ್ಷಗಾನ ತಾಳ ಮದ್ದಳೆ ನೆರವೇರಲಿದೆ.

ಏ.18ರಂದು ರವೀಂದ್ರ ಶೆಟ್ಟಿ ಉಳಿದೊಟ್ಟು ನೇತೃತ್ವದಲ್ಲಿ 'ಹರೇಕಳ ಕಂಬಳ'

ಅಸೈಗೋಳಿಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆ

ಕೊಣಾಜೆ: ಹರೇಕಳ ಸೂರ್ಯ-ಚಂದ್ರ ಜೋಡುಕೆರೆ ಕಂಬಳ ಸಮಿತಿ ಇದರ ವತಿಯಿಂದ ಇದರ ಏ.18ರಂದು ಹರೇಕಳದಲ್ಲಿ ರವೀಂದ್ರ ಶೆಟ್ಟಿ ಉಳಿದೊಟ್ಟು ಅವರ ಸಾರಥ್ಯದಲ್ಲಿ ನಡೆಯಲಿರುವ ಪ್ರಥಮ ವರ್ಷದ ಹೊನಲು ಬೆಳಕಿನ ಸೂರ್ಯ-ಚಂದ್ರ ಜೋಡುಕರೆ ಕಂಬಳದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಅಸೈಗೋಳಿಯ ಬಂಟರ ಭವನದಲ್ಲಿ ಶನಿವಾರ ನಡೆಯಿತು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರು ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿ, ರವೀಂದ್ರ ಶೆಟ್ಟಿ ಉಳಿದೊಟ್ಟು ಅವರ ನೇತೃತ್ವದಲ್ಲಿ ನಡೆಯಲಿರುವ ಹರೇಕಳ ಹೊನಲು ಬೆಳಕಿನ ಸೂರ್ಯ- ಚಂದ್ರ ಜೋಡುಕರೆ ಕಂಬಳವು ಎಲ್ಲರ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು.

ವಿಧಾನಪರಿಷತ್‌ನ ಮಾಜಿ ಸದಸ್ಯ ಮೋನಪ್ಪ ಭಂಡಾರಿ ಅವರು ಮಾತನಾಡಿ, ಕಂಬಳ ಗದ್ದೆಗೆ ನಮ್ಮ ಕರಾವಳಿಯಲ್ಲಿ ಧಾರ್ಮಿಕವಾಗಿ ವಿಶೇಷವಾದ ಮಹತ್ವದ ಸ್ಥಾನಮಾನವಿದೆ. ಯಕ್ಷಗಾನ ದೇಶದೆಲ್ಲೆಡೆ ಪಸರಿಸಿದೆಯೋ ಹಾಗೆಯೇ ಕಂಬಳವು ಕೂಡಾ ರಾಜ್ಯ ಮಾತ್ರವಲ್ಲ ದೇಶದಾದ್ಯಂತ ಪಸರಿಸಲಿ ಎಂದರು.



> ತುಳುನಾಡಿನಲ್ಲಿ ಕಂಬಳಕ್ಕೆ ಒಂದು ಧಾರ್ಮಿಕ ಇತಿಹಾಸವಿದೆ. ಹರೇಕಳದಲ್ಲಿ ಕಂಬಳವನ್ನು ನಡೆಸಬೇಕೆನ್ನುವ ಕನಸು ಈ ವರ್ಷ ನನಸಾಗಲಿದೆ. ಎಲ್ಲರ ಸಹಕಾರದೊಂದಿಗೆ ಮೊದಲನೇ ವರ್ಷದ ಸೂರ್ಯ ಚಂದ್ರ ಕಂಬಳವು ಯಶಸ್ವಿಯಾಗಿ ನಡೆಯಲಿದೆ .
> ● ರವೀಂದ್ರ ಶೆಟ್ಟಿ ಉಳಿದೊಟ್ಟು, ಅಧ್ಯಕ್ಷರು, ಹರೇಕಳ ಕಂಬಳ ಸಮಿತಿ

ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ದೆಬ್ಬೇಲಿಗುತ್ತು ಮೋಹನ್ ದಾಸ್ ರೈ, ಕಾರ್ಯಾಧ್ಯಕ್ಷ ಮೋಹನ್ ದಾಸ್ ಶೆಟ್ಟಿ ಉಳಿದೊಟ್ಟು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗದ ಮಾಜಿ ಸದಸ್ಯರಾದ ಕೆ.ಟಿ. ಸುವರ್ಣ, ಪ್ರಶಾಂತ್ ಗಟ್ಟಿ ಅಮ್ಮೆಂಬಳ, ಮೊಗವೀರ ಸಮಾಜದ ಮಾಜಿ ಅಧ್ಯಕ್ಷ ಸದಾನಂದ ಬಂಗೇರ, ಮಂಜನಾಡಿ ಕ್ಷೇತ್ರದ ಆಡಳಿತ ಮೊಕ್ತೇಸರ ರಾಮದಾಸ್ ಆಳ್ವ ತೇವುನಾಡುಗುತ್ತು, ಮೋಹನ್ ದಾಸ್ ಶೆಟ್ಟಿ ಉಳಿದೊಟ್ಟು, ಚಿಲಿಂಬಿ ಶಾರದೋತ್ಸವ ಸಮಿತಿ ಅಧ್ಯಕ್ಷರಾದ ಸುಬ್ರಾಯ ನಾಯಕ್, ಲಯನ್ಸ್‌ನ ಮಾಜಿ ಅಧ್ಯಕ್ಷರು ಲೋಕನಾಥ್ ಶೆಟ್ಟಿ, ಉಳ್ಳಾಲ ವಲಯ ಬಂಟರ ಸಂಘದ ಅಧ್ಯಕ್ಷ ರವೀಂದ್ರ ರೈ ಕಲ್ಲಿಮಾರ್, ಮುಖಂಡರಾದ ದೆಬ್ಬೇಲಿ ಮಹಾಬಲ ಹೆಗ್ಡೆ ಮೊದಲಾದವರು ಉಪಸ್ಥಿತರಿದ್ದರು. ಕಂಬಳ ಸಮಿತಿ ಅಧ್ಯಕ್ಷ ರವೀಂದ್ರ ಶೆಟ್ಟಿ ಉಳಿದೊಟ್ಟು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರದಾನ ಸಂಚಾಲಕ ರವೀಂದ್ರ ರೈ ಕಲ್ಲಿಮಾರ್ ಅವರು ವಂದಿಸಿದರು.

ಕೊನೆಗೂ ಚುರುಕುಗೊಂಡಿದೆ ನಂದಿನಿ ನದಿ ಹೂಳೆತ್ತುವಿಕೆ ಕಾರ್ಯ



ಸುರತ್ಕಲ್: ಸುರತ್ಕಲ್ ಸಮೀಪದ ನಂದಿನಿ ನದಿಯಲ್ಲಿ ಹೂಳೆತ್ತುವಿಕೆ ಹಾಗೂ ಕಳೆ-ಕಸದ ಸ್ವಚ್ಛತಾ ಕಾರ್ಯಗಳು ಇದೀಗ ಚುರುಕು ಗೊಂಡಿವೆ. ಲೋಕಾಯುಕ್ತ ಎಚ್ಚರಿಕೆಯ ಬಳಿಕ ಕಾಮಗಾರಿ ವೇಗ ಪಡೆದಿದೆ.

ಕಳೆದ ಕೆಲವು ತಿಂಗಳಿನಿಂದ ನದಿ ಮಾಲಿನ್ಯ, ಮೀನುಗಳ ಸಾವು ಹಾಗೂ ದುರ್ವಾಸನೆ ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದ ಹಿನ್ನೆಲೆ, ಲೋಕಾಯುಕ್ತದ ಗಂಭೀರ ಎಚ್ಚರಿಕೆ ಬಳಿಕ ಸಂಬಂಧಿಸಿದ ಇಲಾಖೆಗಳು ತುರ್ತು ಕ್ರಮಕ್ಕೆ ಮುಂದಾಗಿವೆ.

ಲೋಕಾ ಅಧಿಕಾರಿಗಳ ಭೇಟಿ

ಇತ್ತೀಚೆಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ ಹಾಗೂ ವರದಿ ನಂತರ, ನಿರ್ಲಕ್ಷ್ಯ ತೋರಿದ್ದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಇದರ ಪರಿಣಾಮವಾಗಿ ಈಗ ಯಂತ್ರೋಪಕರಣ ಬಳಸಿಕೊಂಡು ನದಿಯ ತಳಭಾಗದಲ್ಲಿ ಸಂಗ್ರಹವಾಗಿದ್ದ ಹೂಳನ್ನು ತೆಗೆದುಹಾಕುವ ಕಾರ್ಯ ಆರಂಭಗೊಂಡಿದೆ. ಜೊತೆಗೆ ನದಿಯ ಮೇಲ್ಮೈಯಲ್ಲಿ ಹರಡಿದ್ದ ಜಲಕಳೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆರವುಗೊಳಿಸುವ ಕಾರ್ಯವೂ ನಡೆಯುತ್ತಿದೆ. ಸ್ಥಳೀಯರು ಈ ಬೆಳವಣಿಗೆಯನ್ನು ಸ್ವಾಗತಿಸಿದ್ದು, ಇದು ಕೇವಲ ತಾತ್ಕಾಲಿಕ ಕ್ರಮವಾಗಬಾರದು. ನದಿ ಮಾಲಿನ್ಯಕ್ಕೆ ಮೂಲ ಕಾರಣಗಳಾದ ಕೈಗಾರಿಕಾ ತ್ಯಾಜ್ಯ ಮತ್ತು ಒಳಚರಂಡಿ ನೀರಿನ ಸೇರ್ಪಡೆ ಶಾಶ್ವತವಾಗಿ ನಿಲ್ಲಬೇಕು ಎಂದು ಒತ್ತಾಯಿಸಿದ್ದಾರೆ. ಒಟ್ಟಾರೆ, ಲೋಕಾಯುಕ್ತದ ಕಟ್ಟುನಿಟ್ಟಿನ ಎಚ್ಚರಿಕೆಯ ಬಳಿಕ ಆರಂಭಗೊಂಡಿರುವ ಈ ಶುದ್ಧೀಕರಣ ಕಾರ್ಯಗಳು ಮುಂದುವರಿದು ನದಿಯ ಮೂಲ ಸ್ವರೂಪವನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಏ.2ರಿಂದ ಮಕ್ಕಳಿಗಾಗಿ ಉಚಿತ ಬೇಸಿಗೆ ಸಂಸ್ಕಾರ ಶಿಬಿರ 'ಮಕ್ಕಳ ಕಲರವ'

- ಏ.2ರಿಂದ 4ರ ತನಕ ಪಾಂಗಳಾಯಿ ಅರಸು ಮುಂಡಿತ್ತಾಯ ದೈವಸ್ಥಾನದ ಪಠಾರದಲ್ಲಿ ಶಿಬಿರ ಆಯೋಜನೆ
- ಶ್ಲೋಕ, ನೀತಿಯುಕ್ತ ಕಥೆಗಳು, ಬುದ್ಧಿ ವಿಕಸನ ಚಟುವಟಿಕೆಗಳು ಇರಲಿದೆ

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿಯ ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ಪುತ್ತೂರು ಇದರ ವತಿಯಿಂದ ಪಾಂಗಳಾಯಿ ಅರಸು ಮುಂಡಿತ್ತಾಯ ದೈವಸ್ಥಾನದ ಪಠಾರದಲ್ಲಿ ಏ.2ರಿಂದ 4ರ ತನಕ ಮೂರು ದಿನಗಳ ಬೇಸಿಗೆ ಶಿಬಿರವನ್ನು ಮಕ್ಕಳಿಗಾಗಿ ಆಯೋಜಿಸಲಾಗಿದೆ.

ಹಿಂದೂ ಧಾರ್ಮಿಕ ಶಿಕ್ಷಣ ಯೋಜನೆಯು ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಪ್ರಾರಂಭಗೊಂಡು ಇದೀಗ 21 ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಎಲ್ಲಾ ಕೇಂದ್ರಗಳಲ್ಲಿ ಸುಮಾರು 2,500 ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಈ ಮೌಲ್ಯಯುತ ಶಿಕ್ಷಣದ ಸದುಪಯೋಗವನ್ನು ಪಡೆದುಕೊಂಡಿದ್ದಾರೆ. 50ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಸೇವಾ ರೂಪದಲ್ಲಿ ಕೈಜೋಡಿಸಿಕೊಂಡಿದ್ದಾರೆ.

ಬೇಸಿಗೆ ರಜೆಯಲ್ಲಿ ಬಿಡುವಾಗಿರುವ ಮಕ್ಕಳಿಗಾಗಿ 'ಮಕ್ಕಳ ಕಲರವ' ಎಂಬ ಬೇಸಿಗೆ ಶಿಬಿರವನ್ನು ಸಂಪೂರ್ಣ ಉಚಿತವಾಗಿ ಈ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರತಿದಿನ ಬೆಳಗ್ಗೆ 9.30 ರಿಂದ ಪ್ರಾರಂಭಗೊಂಡು ಮಧ್ಯಾಹ್ನ 12.30ಕ್ಕೆ ಕೊನೆಗೊಳ್ಳುವ ಈ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ, ಅರ್ಥ ಸಹಿತ ಶ್ಲೋಕ, ನೀತಿಯುಕ್ತ ಕಥೆಗಳು, ಬುದ್ಧಿ ವಿಕಸನ ಆಟಗಳು, ಚಟುವಟಿಕೆಗಳು, ಯೋಗ ಮತ್ತು ಧ್ಯಾನ ಭಜನೆ ಮತ್ತು ಕುಣಿತ ಭಜನೆ, ತೆಂಗಿನ ಗರಿ ಮಾವಿನ ಎಲೆ ಇತ್ಯಾದಿಗಳಿಂದ ಸಾಂಪ್ರದಾಯಿಕ ಕರಕುಶಲ ಮುಂತಾದವುಗಳನ್ನು ಕಲ್ಪಿಸಿ ಕೊಡಲಾಗುತ್ತದೆ. ಗೋವಿನ ಮಹತ್ವ ಹಾಗೂ ಮನೆಯಲ್ಲೇ ಮಕ್ಕಳೇ ಪೂಜೆ ಮಾಡುವ ಸರಳ ವಿಧಿ ವಿಧಾನವನ್ನು ಹೇಳಿಕೊಡಲಾಗುವುದು. ಸ್ವಚ್ಛತೆಗೆ ಆದ್ಯತೆ ನೀಡುವುದರೊಂದಿಗೆ ಶಿಬಿರದ ಬಳಿಕ ಪ್ರತಿದಿನವೂ ಶಿಬಿರಾರ್ಥಿಗಳಿಗೆ, ಮಧ್ಯಾಹ್ನ ಭೋಜನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಕ್ಕಳು ತಮ್ಮ ವೈಯಕ್ತಿಕ ಜ್ಞಾನ ಹಾಗೂ ಸಂಸ್ಕಾರದ ಮಟ್ಟವನ್ನು ಹೆಚ್ಚಿಸಲು ಈ ಶಿಬಿರದ ಸದುಪಯೋಗವನ್ನು ಪಡೆದು ಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 9035888916, 8095333678 ಸಂಪರ್ಕಿಸುವಂತೆ ಪ್ರಕಟನೆ ವಿನಂತಿಸಿದೆ.



ಮುಲ್ಕಿ ವಳಲಂಕೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಥೋತ್ಸವದ ಅಂಗವಾಗಿ ಶನಿವಾರ ಬೆಳಗ್ಗೆ ಕವಾಟೋದ್ಘಾಟನೆ, ಸಂಜೆ ಅವಭೃತ ಓಕುಳಿ ಉತ್ಸವ ನಡೆಯಿತು. ಶ್ರೀ ದೇವರು ಪಲ್ಲಕ್ಕಿಯಲ್ಲಿ ವಿರಾಜಮಾನರಾಗಿ ಪೇಟೆ ಸವಾರಿ ಹಾಗೂ ಓಕುಳಿ ಉತ್ಸವ ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.



ಸುಬ್ರಹ್ಮಣ್ಯದ ಯೇನೆಕಲ್ಲು ಶ್ರೀ ಶಂಖಪಾಲ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಶ್ರೀ ಉಳ್ಳಾಕುಲು, ಉಳ್ಳಾಲ್ತಿ ಬಚ್ಚನಾಯಕ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ದೇವರ ಬಲಿ ಉತ್ಸವ, ದರ್ಶನ ಬಲಿ ಉತ್ಸವ ಮತ್ತು ಬಟ್ಟಲು ಕಾಣಿಕೆ ನೆರವೇರಿತು.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂಭ್ರಮ | ಧಾರ್ಮಿಕ ಸಭಾ ಕಾರ್ಯಕ್ರಮ

ಸಮಾಜದಲ್ಲಿ ಸಾಮರಸ್ಯ ನಿರ್ಮಾಣಕ್ಕೆ ದೇವಸ್ಥಾನಗಳು ಅತೀ ಅಗತ್ಯ: ಎಡನೀರು ಶ್ರೀ

ಆಲಂಕಾರು: ಮನುಷ್ಯರಿಗೆ ದೇವರ ಮೇಲೆ ನಂಬಿಕೆ, ಶ್ರದ್ದೆ ಭಕ್ತಿ ಇದ್ದರೆ ಮಾತ್ರ ಧರ್ಮ ಉಜ್ವಲವಾಗಿ ಬೆಳಗಲು ಸಾಧ್ಯ. ಸಮಾಜದಲ್ಲಿ ಸಾಮರಸ್ಯ ಕಾಪಾಡಿಕೊಂಡು ಬರಲು ದೇವಸ್ಥಾನ ಅತೀ ಅಗತ್ಯ ಎಂದು ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರು ಹೇಳಿದರು.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಶ್ರೀ ಕ್ಷೇತ್ರ ಶರವೂರು ದುರ್ಗಾಪರಮೇಶ್ವರೀ ದೇವಸ್ಥಾನ ಬಹಳ ಸುಂದರವಾಗಿ ನಿರ್ಮಾಣವಾಗಿದೆ. ಭಕ್ತರ ಸಹಕಾರ, ಶ್ರೀ ದೇವಿಯ ಅನುಗ್ರಹದಿಂದ ಈ ಮಹಾಕಾರ್ಯ ಸಾಧ್ಯವಾಗಿದೆ ಎಂದರು.

ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ಕ್ಷೇತ್ರ ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿ



ಆಶೀರ್ವಚನ ನೀಡಿ, ಶ್ರೀ ಕ್ಷೇತ್ರ ಶರವೂರು ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ನಿನ್ನೆ ಗಂಗಾದೇವಿಯ ಪ್ರತಿಷ್ಠೆಯಾಗಿದೆ. ಇವತ್ತು ಅಮೃತ ವರ್ಷಧಾರೆಯಾಗಿದೆ. ಮನುಷ್ಯ ರಾಜನಂತೆ ಬದುಕಬೇಕು ಸನ್ಯಾಸಿಯಂತೆ ಆಲೋಚನೆ ಮಾಡಬೇಕು. ಜಗತ್ತಿನಲ್ಲಿ ನಡೆಯುವ ಸಂಘರ್ಷಕ್ಕೆ ಸಂಧಾನ ಪರಿಹಾರ ಹೊರತು ಸಂಘರ್ಷ ಅಲ್ಲ ಎಂದು ತಿಳಿಸಿ ಶುಭಹಾರೈಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಮಾತನಾಡಿ, ಶ್ರೀ ಕ್ಷೇತ್ರ ಶರವೂರು ದುರ್ಗಾಪರಮೇಶ್ವರೀ ದೇವಸ್ಥಾನ ಬಹಳ ಸುಂದರವಾಗಿ ನಿರ್ಮಾಣವಾಗಿದೆ. ಈ ಊರು ನನ್ನ ತಂದೆಯ ಊರಾಗಿದ್ದು, ನನ್ನ ತಂದೆಯ ಹೆಸರಿನಲ್ಲಿ ಈ ಭಾಗದಲ್ಲಿ ಕೃಷಿ ಪ್ರಶಸ್ತಿಯನ್ನು ನೀಡುತ್ತಿದ್ದೇವೆ ಎಂದು ತಿಳಿಸಿ ಶುಭಹಾರೈಸಿದರು.

ಖ್ಯಾತ ವಾಸ್ತು ಶಿಲ್ಪಿ ಗಳು ಡಾ.ಪ್ರಸಾದ್ ಮುನಿಯಂಗಳ ದೇವಾಲಯ ಮತ್ತು ಆಗಮ ಪದ್ಧತಿಯ ಬಗ್ಗೆ ತಿಳಿಸಿ ದೇವಸ್ಥಾನ ಎಂದರೆ ದೇವರು ಇರುವ ಜಾಗ. ದೇವಸ್ಥಾನದಲ್ಲಿ 14 ಬಗೆಯ ಕೆತ್ತನೆಗಳು ಇರಬೇಕು. ಪ್ರಕೃತಿ ಮತ್ತು ಪುರುಷರ ಸಮಾಗಮೇ ಪ್ರತಿಷ್ಠೆ ಎಂದು ತಿಳಿಸಿದರು.

ಉಚ್ಚನ್ಯಾಯಾಲಯದ ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರುಣ್ ಶ್ಯಾಮ್ ಮಾತನಾಡಿ, ಶ್ರೀ ಕ್ಷೇತ್ರ ಶರವೂರು ದುರ್ಗಾಪರಮೇಶ್ವರೀ ದೇವಸ್ಥಾನದ ಅದ್ಭುತ ಶಿಲಾಮಯ ಅಭಿವೃದ್ಧಿ ನೋಡುವ ಭಾಗ್ಯ ನನಗೆ ಸಿಕ್ಕಿದೆ ಎಂದು ಹೇಳಿ ವಿದ್ಯಾಣದಲ್ಲಿ ನಡೆಯುವ ಬ್ರಹ್ಮಕಲಶೋತ್ಸವದಲ್ಲಿ ಎಲ್ಲಾರು ಭಾಗವಹಿಸುವಂತೆ ವಿನಂತಿಸಿದರು.

ಮಾಜಿ ಸಚಿವ ವಿಜಯಕುಮಾರ್ ಸೊರಕೆ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಶ್ಯಾಮ್ ಭಟ್, ಚಿಕ್ಕಬಳ್ಳಾಪುರದ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಜಗನ್ನಾಥ ರೈ ಬಜನಿಗುತ್ತು, ಜಾರಿ ನಿರ್ದೇಶನಾಲಯದ ವಿಶೇಷ ಸರಕಾರಿ ಅಭಿಯೋಜಕ ಮಹೇಶ್ ಕಜೆ, ಉದ್ಯಮಿ ಕಿರಣ್ ಚಂದ್ರ ಪುಪ್ಪಗಿರಿ, ತಾ.ಪಂ. ಮುಖ್ಯಕಾರ್ಯ ನಿರ್ವಹಣಾಕಾರಿ ನವೀನ್ ಭಂಡಾರಿ, ಬೆಂಗಳೂರು ಉದ್ಯಮಿ ಆರ್.ಕೆ. ಭಟ್, ಸಾಹಿತಿ ಚಂದ್ರಶೇಖರ ಶುಭಹಾರೈಸಿದರು. ಸಭಾಧ್ಯಕ್ಷತೆಯನ್ನು ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ ವಹಿಸಿದ್ದರು. ಪುತ್ತೂರು ಕೋಟಿ ಚೆನ್ನಯ ಕಂಬಳ ಸಮಿತಿಯ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಕಬಡ್ಡಿ ಆಟಗಾರರಾದ ಪ್ರಶಾಂತ ರೈ ಕೈಕಾರ, ರೋಹಿತ್ ಮಾರ್ಲ, ಪ್ರಮುಖರಾದ ದೇವಿಪ್ರಸಾದ್ ಕನತ್ತೂರ್, ಮಾಧವ ಸರಳಾಯ, ಶ್ರೀದರ ಗೌಡ ನಡ್ಪ, ಶ್ರೀಧರ ರೈ ಮಾದೋಡಿ, ಶಾಂತರಾಮ ಕುಂತೂರು ಗುತ್ತು, ಮೋಹನ ಎಸ್. ಶರವೂರು, ಕುಂಞ ಮುಗೇರ, ಶ್ರೀಕೃಷ್ಣ ಎಂ.ಆರ್, ವಸಂತ ಗೌಡ ಕುಂಟ್ಯಾನ, ಸೇರಿದಂತೆ ಹಲವು ಮಂದಿ ಗಣ್ಯರು ಉಪಸ್ಥಿತರಿದ್ದರು. ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ.ಹೇಮಂತ್ ರೈ ಮನವಳಿಕೆಗುತ್ತು ಸ್ವಾಗತಿಸಿ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ ವಂದಿಸಿದರು. ಗಣರಾಜ್ ಕುಂಬ್ಳೆ, ಗುರುಕಿರಣ್ ಶೆಟ್ಟಿ ರೂಪಾ ಜೆ. ರೈ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತಮುತ್ತ

ನಾಳೆ ಮುಲ್ಕಿಯಿಂದ ಕಾಪುವರೆಗೆ ಭಜನಾ ಸಂಕೀರ್ತನಾ ಪಾದಯಾತ್ರೆ

ಮುಲ್ಕಿ: ಉಡುಪಿ ಜಿಲ್ಲೆಯ ಕಾಪು ಶ್ರೀ ಹಳೇ ಮಾರಿಯಮ್ಮ ದೇವಿಯ ನುಡಿಯ ಪ್ರಕಾರ ಮಾರ್ಚ್ 31ನೇ ಮಂಗಳವಾರದಂದು ಬೆಳಿಗ್ಗೆ 4.30 ಗಂಟೆಗೆ ದೇವಳದಿಂದ ಕಾಪು ಶ್ರೀ ವೆಂಕಟರಮಣ ದೇವಸ್ಥಾನದ ಮೂಲಕ ಕಾಪು ಹಳೇ ಮಾರಿಗುಡಿಯವರೆಗೆ 'ಭಜನಾ ಸಂಕೀರ್ತನಾ ಪಾದಯಾತ್ರೆ' ನಡೆಯಲಿದೆ. ಆ ಪ್ರಯುಕ್ತ ಮುಲ್ಕಿ ಹಾಗೂ ಹೋಬಳಿ ಗ್ರಾಮಗಳ ಸಮಸ್ತ ಭಜಕ ಬಾಂಧವರು ಪಾದಯಾತ್ರೆಯಲ್ಲಿ ಭಾಗವಹಿಸಬೇಕಾಗಿ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಸಮಗ್ರ ಜೀರ್ಣೋದ್ಧಾರ ವ್ಯವಸ್ಥಾಪಕ ಸಮಿತಿ ಪ್ರಕಟಣೆ ತಿಳಿಸಿದೆ

ಕಲ್ಮಕಾರು: ಪ್ರತಿಷ್ಠಾ ವಾರ್ಷಿಕೋತ್ಸವದ ಆಮಂತ್ರಣ ಬಿಡುಗಡೆ

ಸುಬ್ರಹ್ಮಣ್ಯ: ಕಲ್ಮಕಾರು ಗ್ರಾಮದ ಶಕ್ತಿನಗರ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದಲ್ಲಿ ಏ.9ರಂದು 12ನೇ ವರ್ಷದ ಪ್ರತಿಷ್ಠಾ ವಾರ್ಷಿಕೋತ್ಸವವು ನೆರವೇರಲಿದ್ದು, ಆಮಂತ್ರಣ ಪತ್ರಿಕೆಯನ್ನು ಅರ್ಚಕ ಶಿವರಾಮ ಭಟ್ ಬಿಡುಗಡೆ ಮಾಡಿದರು.
ಈ ಸಂದರ್ಭದಲ್ಲಿ ಭಜನಾ ಮಂದಿರದ ಅಧ್ಯಕ್ಷ ಸತೀಶ್.ಟಿ.ಎನ್., ಭಜನಾ ಮಂಡಳಿ ಅಧ್ಯಕ್ಷ ವಿಶ್ವನಾಥ ಕೊಮ್ಮೆಮನೆ, ಆಡಳಿತ ಸಮಿತಿಯ ಸದಸ್ಯರಾದ ಡ್ಯಾನಿ ಯಳದಾಳು, ವೀಣಾ ಬಿಳಿಮಲೆ, ಪೂಜಿತಾ ಎಂ., ಸದಸ್ಯೆ ತಾರಾ ಬೇರಿಕೆ ಉಪಸ್ಥಿತರಿದ್ದರು.
ಪ್ರತಿಷ್ಠಾ ಕಾರ್ಯ, ಏ.9ರಂದು ಬೆಳಿಗ್ಗೆ ಗಣಪತಿ ಹವನ, ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಶ್ರೀ ಸತ್ಯನಾರಾಯಣ ದೇವರ ಪೂಜೆ, ಮಹಾಪೂಜೆ ಹಾಗೂ ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ. ಬೆಳಗ್ಗೆ 7ರಿಂದ ಸಂಜೆ 7 ಗಂಟೆಯವರೆಗೆ ವಿವಿಧ ಭಜನಾ ತಂಡಗಳಿಂದ ಅರ್ಧ ಏಕಾಹ ಭಜನಾ ಕಾರ್ಯಕ್ರಮ ನಡೆಯಲಿದೆ.

ಯೇನೆಕಲ್ಲು ವಾರ್ಷಿಕ ಜಾತ್ರೆ: ಉಳ್ಳಾಕ್ಲು ದೈವದ ನೇಮ ಇಂದು


ಸುಬ್ರಹ್ಮಣ್ಯ: ಯೇನೆಕಲ್ಲು ಶ್ರೀ ಶಂಖಪಾಲ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಶ್ರೀ ಉಳ್ಳಾಕುಲು, ಉಳ್ಳಾಕ್ಲು ಬಚ್ಚನಾಯಕ ದೈವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯುತ್ತಿದ್ದು, ಮಾ.30ರಂದು ರಾತ್ರಿ ಉಳ್ಳಾಕ್ಲು ವಗೈರೆ ದೈವಗಳ ನೇಮ, ಮಾ. 31ರಂದು ಉದ್ದೋಡ್ತಾರು–ಕುಮಾರ ದೈವಗಳ ನೇಮ ನಡೆಯಲಿದೆ. ಏ. 1ರಂದು ಬೆಳಗ್ಗೆ 6 ಗಂಟೆಯಿಂದ ಕಾರಣಿಕ ಪ್ರಸಿದ್ಧ ಬಚ್ಚನಾಯಕ ದೈವದ ನೇಮ ಬಳಿಕ ಕೋಟಿನಾಯಕ ದೈವದ ನೇಮ, ರಾತ್ರಿ ಪ್ರಧಾನಿ ವಗೈರೆ ದೈವಗಳ ನೇಮ ಬಳಿಕ ಭಂಡಾರ ಹೊರಡುವುದು. ಏ. 2ರಂದು ರಾತ್ರಿ ಗುಳಿಗ ದೈವದ ನೇಮ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮ ಮಾ.31ರಂದು ರಾತ್ರಿ ಗುರುಪ್ರಿಯಾ ಕಾಮತ್ ಪ್ರಿಯಾ ಮ್ಯೂಸಿಕಲ್ಸ್ ಪುತ್ತೂರು ಮತ್ತು ತಂಡದಿಂದ ಗಾನಾಮೃತ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರಮಯೋಗಿ ಮಾನ್-ಧನ್, ಎನ್‌ಪಿಎಸ್ ನೊಂದಣಿ ಶಿಬಿರ

ಮುಲ್ಕಿ: ಕರ್ನಾಟಕ ಸ್ಟೇಟ್ ಟೈಲರ್ಸ್ ಅಸೋಸಿಯೇಷನ್ ನ ಮುಲ್ಕಿ ಹಾಗೂ ಹಳೆಯಂಗಡಿ ವಲಯ ಟೈಲರ್ಸ್ ಡೇ' ಪ್ರಯುಕ್ತ ಕಾರ್ಮಿಕ ಇಲಾಖೆಯ ಸಹಭಾಗಿತ್ವದಲ್ಲಿ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ –ಧನ್ ಯೋಜನೆ, ಹಾಗೂ ಎನ್.ಪಿ.ಎಸ್ ನೊಂದಾವಣೆ ಶಿಬಿರ ಮುಲ್ಕಿ ಬಿಲ್ಲವ ಸಂಘದಲ್ಲಿ ನಡೆಯಿತು ಕೆ.ಎಸ್.ಟಿ.ಎ ಮುಲ್ಕಿ ಮೂಡಬಿದಿರೆ ಕ್ಷೇತ್ರ ಅಧ್ಯಕ್ಷ ರವಿ.ಜೆ.ಅಮೀನ್ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ಸಂಘಟನೆ ಮೂಲಕ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸರಕಾರದ ಸವಲತ್ತುಗಳನ್ನು ನೀಡಲು ಶ್ರಮಿಸಿ ಮಾದರಿಯಾಗಿ ಎಂದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಎಸ್‌ಇ ತಾಲೂಕು ನೋಡೆಲ್ ಅಧಿಕಾರಿ ಧನಂಜಯ, ಸರಕಾರದಿಂದ ಸಿಗುವ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ವಲಯ ಅಧ್ಯಕ್ಷರು ಗಳಾದ ಪ್ರೀತಿಕಾ ಡಿ. ಅಮೀನ್, ಶಕಿಲಾ ಎಂ., ಕಾರ್ಯದರ್ಶಿಗಳಾದ ಸುಜಾತಾ ರಾವ್, ಅಶ್ವಿನಿ ಉಪಸ್ಥಿತರಿದ್ದರು. ಪ್ರೀತಿಕಾ ಡಿ. ಅಮೀನ್ ಸ್ವಾಗತಿಸಿದರು. ಉದಯ ಅಮೀನ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು.

ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಪ್ರಶಾಂತ್ ಆಯ್ಕೆ

ಸುಂಟಿಕೊಪ್ಪ: ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಬಿ.ಕೆ.ಪ್ರಶಾಂತ್ (ಕೋಕಾ), ಪ್ರಧಾನ ಕಾರ್ಯದರ್ಶಿಯಾಗಿ ಬಿ.ಜಿ.ರಮೇಶ್ ನಾಕೂರು ಅವರನ್ನು ನೇಮಕಗೊಳಿಸಲಾಯಿತು. ಶುಕ್ರವಾರ ಮಂಜನಾಥಯ್ಯ ಮೀನಾಕ್ಷಮ ಕಲ್ಯಾಣ ಮಂಟಪದಲ್ಲಿ ಬಿಜೆಪಿಯ ಶಕ್ತಿ ಕೇಂದ್ರದ ಅಧ್ಯಕ್ಷ ಧನುಕಾವರಪ್ಪ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು.



ಸಭೆಯಲ್ಲಿ ಮಂಡಲ ಅಧ್ಯಕ್ಷ ಗೌತಮ್, ಮಾಜಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ಗ್ರಾ.ಪಂ. ಮಾಜಿ ಅಧ್ಯಕ್ಷ ಪಿ.ಆರ್. ಸುನೀಲ್ ಕುಮಾರ್, ಯುವ ಮೋರ್ಚಾ ಮಾಜಿ ಅಧ್ಯಕ್ಷ ಚಂದ್ರಶೇಖರ್ ಹೇರೂರು, ಬಿ.ಕೆ.ಮೋಹನ್, ನಾಕೂರು ಶಿರಂಗಾಲ ಪಂಚಾಯತ್ ವ್ಯಾಪ್ತಿಯ ಶಕ್ತಿ ಕೇಂದ್ರ ಅಧ್ಯಕ್ಷ ಶಂಕರ್ ನಾರಾಯಣ, ಕೆದಕಲ್ ಪಂಚಾಯತ್ ಶಕ್ತಿ ಕೇಂದ್ರ ಅಧ್ಯಕ್ಷ ರಮೇಶ್, ಸೋಮಯ್ಯ, ಲೀಲಾ ಮೇದಪ್ಪ ಹಾಗೂ ವಿವಿಧ ಬೂತ್ ಮಟ್ಟದ ಅಧ್ಯಕ್ಷರು, ಯುವ ಮೋರ್ಚಾ ಅಧ್ಯಕ್ಷ ವಿಘ್ನೇಶ್, ವಾಸುದೇವ್, ಗ್ರಾ.ಪಂಚಾಯಿತಿ ಮಾಜಿ ಸದಸ್ಯರುಗಳು ಪಾಲ್ಗೊಂಡಿದ್ದರು. ಇದೇ ಸಂದರ್ಭ ಸಮಿತಿ ಸದಸ್ಯರಾಗಿ 5 ಮಂದಿಯನ್ನು ಆಯ್ಕೆ ಗೊಳಿಸಲಾಯಿತು.

ಪಿಂಚಣಿ ನಿಯಮಗಳ ಬದಲಾವಣೆ | ಅಪರ ಮುಖ್ಯಕಾರ್ಯದರ್ಶಿ ಅಧ್ಯಕ್ಷತೆಯ ಸಮಿತಿ ಪುನರ್ ರಚನೆ

ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಲು ಹೆಚ್ಚುವರಿ ಕಾಲಾವಕಾಶ

ಬೆಳ್ತಂಗಡಿ: ಪಿಂಚಣಿ ಸಂಬಂಧಿತ ನಿಯಮಗಳಲ್ಲಿ ಹಲವು ಬದಲಾವಣೆಗಳು ಆಗುತ್ತಿವೆ. ಪಿಂಚಣಿ ನಿಯಮಗಳಲ್ಲಿ ಆಗುತ್ತಿರುವ ಈ ಹೊಸ ಬದಲಾವಣೆಗಳ ಪರಿಣಾಮಗಳನ್ನು ಅರ್ಥೈಸಿಕೊಳ್ಳಲು ಹಾಗೂ ಈ ಕುರಿತು ಸಮಗ್ರ ಪರಿಹಾರವನ್ನು ನೀಡಬೇಕಾಗಿರುವುದರಿಂದ, ಸಮಿತಿಯು ಸರ್ಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಲು ಹೆಚ್ಚಿನ ಸಮಯಾವಕಾಶದ ಅವಶ್ಯಕತೆ ಇರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.





ವಿಧಾನಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಉಜಿರೆ ಅವರು ಎನ್‌ಪಿಎಸ್ ಯೋಜನೆಯಡಿ ನಿವೃತ್ತಿಯಾದ ಸರಕಾರಿ ನೌಕರರಿಗೆ ಕನಿಷ್ಠ ಪಿಂಚಣಿಯೂ ಸಿಗದೆ ತೊಂದರೆಯಾಗುತ್ತಿರುವ ಬಗ್ಗೆ ಹಾಗೂ ಹಳೆಯ ಪಿಂಚಣಿ ಯೋಜನೆಯ ಜಾರಿಯ ಬಗ್ಗೆ ವಿವರ ಕೇಳಿದ್ದರು.
ಅದಕ್ಕುತ್ತರಿಸಿದ ಮುಖ್ಯಮಂತ್ರಿಗಳು ಎನ್.ಪಿ.ಎಸ್ ಯೋಜನೆಯಡಿ ನಿವೃತ್ತಿ ಹೊಂದಿದ ನೌಕರದ ಫ್ರಾನ್ ಖಾತೆಯಲ್ಲಿರುವ ಶೇ. 60 ಮೊತ್ತವನ್ನು ನೌಕರರು ಹಿಂಪಡೆಯ ಬಹುದಾಗಿದೆ. ಉಳಿದ 40 ಶೇ. ಮೊತ್ತವನ್ನು Annuity Senice Provider ಹೂಡಿಕೆ ಮಾಡಿ, ಮಾಸಿಕ ಪಿಂಚಣಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಎನ್.ಪಿ.ಎಸ್ ಯೋಜನೆಯಡಿ ನಿವೃತ್ತಿಯಾಗುವ ಸರ್ಕಾರ ನೌಕರರ ಪಿಂಚಣಿಯು ನೌಕರರು ಸಲ್ಲಿಸುವ ಸೇವಾ ಅವಧಿ ಮತ್ತು ಸದರಿ ಅವಧಿಯಲ್ಲಿ ನೌಕರರ ಮೂಲವೇತನದ ಆಧಾರದ ಮೇಲೆ ಪಾವತಿಸಲ್ಪಡುವ ವಂತಿಗೆಯ ಮೇರೆಗೆ ನಿರ್ಧರಿಸಲ್ಪಡುತ್ತದೆ ಎಂದರು.
ರಾಜ್ಯದಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ, ಮಾರ್ಪಾಡು ಮಾಡಲು ಸಮಗ್ರವಾಗಿ ಪರಿಶೀಲಿಸಲು ಈಗಾಗಲೇ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್ ರಚಿಸಲಾಗಿದ್ದು ಸಮಿತಿಯು ಹಲವು ಬಾರಿ ಸಭೆಗಳನ್ನು ನಡೆಸಿರುತ್ತದೆ. ರಾಷ್ಟ್ರೀಯ ಪಿಂಚಣಿ ಯೋಜನೆಗೆ ಬದಲಾವಣೆ, ಮಾರ್ಪಾಡು ಮಾಡಿರುವ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಿಗೆ ಅಧಿಕಾರಿಗಳನ್ನೊಳಗೊಂಡ ತಂಡಗಳು ಅಧ್ಯಯನ ನಡೆಸಿ ವರದಿಗಳನ್ನು ಸಮಿತಿಗೆ ಸಲ್ಲಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಎನ್ ಪಿಎಸ್ ಯೋಜನೆಗೆ ಸೂಕ್ತ ಮಾರ್ಪಾಡುಗಳನ್ನು ಮಾಡುವ ಸಾಧ್ಯತೆಗಳ ಕುರಿತು ಮತ್ತು ಎನ್‌ಪಿಎಸ್ ಯೋಜನೆಯ ಬದಲಾಗಿ ರಾಜ್ಯದಲ್ಲಿ ಏಕೀಕೃತ ಪಿಂಚಣಿ ಯೋಜನೆ ಯುಪಿಎಸ್ ಸಾಧ್ಯತೆಗಳು ಮತ್ತು ಇತರೆ ವಿಷಯಗಳ ಕುರಿತು ಸಲಹೆಗಳನ್ನು ನೀಡುವ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ ಇವರುಗಳೊಂದಿಗೆ ಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿದೆ. ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ ಎಂದರು.
ರಾಜಸ್ಥಾನ ಹಿಮಾಚಲ ಪ್ರದೇಶ ಒಳಗೊಂಡಂತೆ ಹಲವು ರಾಜ್ಯಗಳು ಒ.ಪಿ.ಎಸ್. ಯೋಜನೆಯನ್ನು ಮರುಜಾರಿ ಮಾಡಲಾಗಿದ್ದರೂ ಸಹ ಪಿಎಫ್‌ಆರ್‌ಡಿಎ ರವರು ಒ.ಪಿ.ಎಸ್. ಮರು ಜಾರಿ ಮಾಡಿರುವ ಸದರಿ ರಾಜ್ಯಗಳು ಈಗಾಗಲೇ ಪಾವತಿಸಿರುವ ಎನ್.ಪಿ.ಎಸ್. ವಂತಿಗೆ ಮೊತ್ತಗಳನ್ನು ಸಂಬಂಧಿಸಿದ ರಾಜ್ಯ ಸರಕಾರಗಳಿಗೆ ಹಿಂದಿರುಗಿಸಿರುವುದಿಲ್ಲ, ಕೇಂದ್ರ ಸರ್ಕಾರವು ಮಾಸಿಕ ಪಿಂಚಣಿ ಆಧಾರಿತ ಯುಪಿಎಸ್ ಯೋಜನೆಯನ್ನು ಅಳವಡಿಸಿಕೊಳ್ಳಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ಅವಕಾಶ ಕಲ್ಪಿಸಿದ್ದರೂ ಸಹ, ಕೆಲವೇ ರಾಜ್ಯಗಳನ್ನು ಹೊರತುಪಡಿಸಿ ಬಹುತೇಕ ರಾಜ್ಯಗಳು ಎನ್‌ಪಿಎಸ್ ಯೋಜನೆಯನ್ನೇ ಮುಂದುವರಿಸಿರುತ್ತಾರೆ. ಆಂಧ್ರ ಪ್ರದೇಶವು ಔಕಪಿ ಯೋಜನೆ ಅಳವಡಿಸಿಕೊಳ್ಳದೇ, ಕನಿಷ್ಠ ಪಿಂಚಣಿ ಪಾವತಿಯನ್ನು ಖಾತ್ರಿಪಡಿಸುವ ನಿಶ್ಚಿತ ಪಿಂಚಣಿ ಯೋಜನೆಯನ್ನುಯೋಜನೆಯನ್ನುಜಾರಿಗೊಳಿಸಿದೆ. ಇತ್ತೀಚೆಗೆ ತಮಿಳುನಾಡು ಸರ್ಕಾರವೂ ಕೂಡ ಒಪಿಎಸ್ ಯೋಜನೆಯನ್ನು ಅಳವಡಿಸಿಕೊಳ್ಳದೇ ಟಿಪಿಪಿಎಸ್ ಜಾರಿಗೊಳಿಸಿದೆ ಎಂದರು.

> **ಹಲವು ಮಾರ್ಪಡು**
> ಕೇಂದ್ರ ಸರ್ಕಾರವು ಮಾರ್ಪಡಿಸಿದ ಪಿಂಚಣಿ ಯೋಜನೆಯಾದ ಯುಪಿಎಸ್ ಜಾರಿಗೊಳಿಸಿದೆ. ಯುಪಿಎಸ್ ಅನ್ನು ಜಾರಿಗೊಳಿಸಿದ ನಂತರವೂ ಸಹ ಎನ್‌ಪಿಎಸ್ ಯೋಜನೆಗೆ ಹಲವು ಮಾರ್ಪಡುಗಳನ್ನು ಮಾಡಲಾಗಿದೆ. ಆದಾಗ್ಯೂ, ಎನ್‌ಪಿಎಸ್ ಯೋಜನೆಯ ಅಧಿಕಾರಿಗಳು, ನೌಕರರುಗಳು ಎನ್‌ಪಿಎಸ್ ಯೋಜನೆಯಲ್ಲಿಯೇ ಮುಂದುವರೆಯಲು ಅಥವಾ ಎನ್‌ಪಿಎಸ್ ಯೋಜನೆಗೆ ಬದಲಾಯಿಸಿಕೊಳ್ಳಲು ಆಯ್ಕೆ ನೀಡಲಾಗಿದೆ. ಆದ್ದರಿಂದ ಪಿಂಚಣಿ ಸಂಬಂಧಿತ ನಿಯಮಗಳಲ್ಲಿ ಹಲವು ಬದಲಾವಣೆಗಳು ಆಗುತ್ತಿವೆ.
> ● ಸಿದ್ದರಾಮಯ್ಯ, ಮುಖ್ಯಮಂತ್ರಿ

ಡಾ. ಬಿ.ಬಿ. ಹೆಗ್ಡೆ ಕಾಲೇಜಿನ ವಾಣಿಜ್ಯ ವಿಭಾಗದಿಂದ 'ವಿ-ಗ್ರೋ' ಬಿಸಿನೆಸ್ ಡೇ



ಕುಂದಾಪುರ: ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದಿಂದ ಆಯೋಜಿಸಲಾದ 'ವಿ–ಗ್ರೋ 2026' ಬಿಸಿನೆಸ್ ಡೇ ವಾಣಿಜ್ಯ ಹಬ್ಬವು ಯಶಸ್ವಿಯಾಗಿ ಸಂಪನ್ನಗೊಂಡಿತು.
ಮಂಗಳೂರು ಶ್ರೀನಿವಾಸ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹಾಗೂ ಸಂಶೋಧನ ಮಾರ್ಗದರ್ಶಕ ಡಾ. ಗಣೇಶ್ ಭಟ್ ಎಸ್., ಮುಖ್ಯ ಅತಿಥಿಯಾಗಿದ್ದರು.
ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ತೀರ್ಪುಗಾರರಾಗಿದ್ದ ಮಹಿಳಾ ಉದ್ಯಮಿ ದಿವ್ಯ ನಾಯಕ್, ಎಕ್ಸಲೆಂಟ್ ಪಿಯು ಕಾಲೇಜಿನ ವಾಣಿಜ್ಯಶಾಸ್ತ್ರ ಉಪನ್ಯಾಸಕಿ ದಿವ್ಯ ಶೆಟ್ಟಿ, ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿ ಸುನೀಲ್ ಮೊಗವೀರ, ಕಾಲೇಜಿನ ಉಪ ಪ್ರಾಂಶುಪಾಲ ಡಾ. ಚೇತನ್ ಶೆಟ್ಟಿ ಕೋವಾಡಿ, ಕಾರ್ಯಕ್ರಮದ ಸಂಯೋಜಕ ಸತೀಶ್ ಕಾಂಚನ್ ಮೊದಲಾದವರು ಉಪಸ್ಥಿತರಿದ್ದರು. ರ್‍ಯಾಂಕ್ ವಿಜೇತ ನಾಲ್ಕು ವಿದ್ಯಾರ್ಥಿಗಳನ್ನು ಹಾಗೂ ಅಧಿಕ ಲಾಭಗಳಿಸಿರುವ ತಂಡಗಳಿಗೆ ನೀಡಲಾಗುವ ಸಿಲ್ವರ್ ರೋಲಿಂಗ್ ಟ್ರೋಫಿಯ ಪ್ರಾಯೋಜಕರಾದ ಪೂರ್ಣಚಂದ್ರ ನಾಯಕ್ ಅವರ ತಾಯಿ ಸರಸ್ವತಿ ಜಿ. ನಾಯಕ್ ಅವರನ್ನು ಸನ್ಮಾನಿಸಲಾಯಿತು.
ಕಾರ್ಯಕ್ರಮ ಸಂಯೋಜಕ ಯೋಗೀಶ್ ಶಾನುಭೋಗ್ ಸ್ವಾಗತಿಸಿ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ವೀಣಾ ವಿ. ಭಟ್ ಪ್ರಾಸ್ತಾವಿಸಿದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಸತೀಶ್ ಶೆಟ್ಟಿ ಹೆಸ್ಕತ್ತೂರು ಬಹುಮಾನ ವಿಜೇತರ ಪಟ್ಟಿಯನ್ನು ವಾಚಿಸಿ, ದೀಪಾ ಪೂಜಾರಿ ನಿರೂಪಿಸಿ, ವಂದಿಸಿದರು. ಅಂತಿಮ ಹಾಗೂ ದ್ವಿತೀಯ ಬಿ.ಕಾಂ. ವಿದ್ಯಾರ್ಥಿಗಳಿಗೆ ಆಯೋಜಿಸಿದ ಈ ಅಂತರ್–ತರಗತಿ ಸ್ಪರ್ಧೆಯನ್ನು ಮೂರು ಹಂತಗಳಲ್ಲಿ ಆಯೋಜಿಸಲಾಗಿತ್ತು. ಮೊದಲನೇ ಹಂತದಲ್ಲಿ ವ್ಯವಹಾರ ಯೋಜನೆಯ ಪ್ರಸ್ತುತಿ, ಎರಡನೇ ಹಂತದಲ್ಲಿ ವ್ಯವಹಾರ ಮೇಳದ ಭಾಗವಾಗಿ ವಿದ್ಯಾರ್ಥಿಗಳೇ ತಯಾರಿಸಿದ ಉತ್ಪನ್ನಗಳೊಂದಿಗೆ ಇತರ ವಸ್ತುಗಳ ಮಾರಾಟ, ಹಾಗೂ ಮೂರನೇ ಹಂತದಲ್ಲಿ ಹಣಕಾಸಿನ ಆಯ–ವ್ಯಯ ಪಟ್ಟಿಗಳ ಪ್ರಸ್ತುತಿ ನಡೆಸಲಾಯಿತು. ವೀ–ಗ್ರೋ 2026 ಸ್ಪರ್ಧೆಯಲ್ಲಿ ಸಮಗ್ರ ಪ್ರಥಮ ಸ್ಥಾನವನ್ನು ಬಿ.ಕಾಂ. (ಡಿ) ಮತ್ತು ದ್ವಿತೀಯ ಸ್ಥಾನವನ್ನು ಅಂತಿಮ ತೃತೀಯ ಬಿ.ಕಾಂ. (ಇ) ವಿದ್ಯಾರ್ಥಿಗಳು ಪಡೆದುಕೊಂಡರು.

ದಕ್ಷಿಣ ಕನ್ನಡ ಜಿಲ್ಲಾ ಶಾಮಿಯಾನ ಮಾಲಕರ ಸಂಘದ ಕ್ರಿಕೆಟ್ ಪಂದ್ಯಾಟ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಶಾಮಿಯಾನ ಮಾಲಕರ ಸಂಘದ 2026ರ ಸಾಲಿನ ಕ್ರಿಕೆಟ್ ಪಂದ್ಯಾಟ ಪದುವಾ ಹೈಸ್ಕೂಲ್ ಮೈದಾನದಲ್ಲಿ ಇತ್ತೀಚೆಗೆ ನಡೆಯಿತು.
ಪದುವ ಸ್ಕೂಲ್ ಪ್ರಾಂಶುಪಾಲ ಫಾದರ್ ಅರುಣ್ ವಿಲ್ಸನ್ ಲೋಬೊ, ಮೊಹಮ್ಮದ್ ಇಕ್ಬಾಲ್, ಅಧ್ಯಕ್ಷ ಬಾಲಕೃಷ್ಣ ಕದ್ರಿ, ಸ್ಥಾಪಕ ಅಧ್ಯಕ್ಷ ಉಮಾನಾಥ ಸುವರ್ಣ, ಗೌರವ ಅಧ್ಯಕ್ಷ ಹರೀಶ್ ಪಡೀಲ್, ನಿಕಟಪೂರ್ವ ಅಧ್ಯಕ್ಷ ಯುವರಾಜ್, ಕಾರ್ಯದರ್ಶಿ ಸ್ಪಂದನ ನಾಗರಾಜ್, ಕೋಶಾಧಿಕಾರಿ ಗಾಡ್ವಿನ್ ಡಿಸೋಜ ಉಪಸ್ಥಿತರಿದ್ದರು.
ಅಂತಾರಾಷ್ಟ್ರೀಯ ಕಬ್ಬಡಿ ಕ್ರೀಡಾ ಪಟು ಧನಲಕ್ಷ್ಮಿ ಪೂಜಾರಿ ಅವರನ್ನು ಈ ವೇಳೆ ಸನ್ಮಾನಿಸಲಾಯಿತು. ರವಿ ಚಂದ್ರ, ಪ್ರೀತಮ್ ಹಾಗೂ ಸಲೀಂ ಶ್ಯಾಡೊ ನಿರೂಪಿಸಿದರು.
ಮಂಗಳೂರು ನಗರದ ಶಾಮಿಯಾನ ಮಾಲಕರನ್ನು 6 ತಂಡಗಳಾಗಿ ವಿಭಜಿಸಿ ಲೀಗ್ ಮಾದರಿಯಲ್ಲಿ ಪಂದ್ಯಾಟ ನಡೆದು ಶಾಮಿಯಾನ ಕಿಂಗ್ಸ್ ಪ್ರಥಮ ಸ್ಥಾನ ಪಡೆಯಿತು. ಶಾಮಿಯಾನ ಚಾಲೆಂಜರ್ಸ್ ದ್ವಿತೀಯ ಸ್ಥಾನ ಪಡೆಯಿತು.
ಬಂಟ್ವಾಳ ಘಟಕ, ವಿಟ್ಲ ಘಟಕ, ಮೂಡುಬಿದಿರೆ ಘಟಕ ಹಾಗೂ ಬೆಳ್ತಂಗಡಿ ಘಟಕದ ಪದಾಧಿಕಾರಿಗಳು, ಡೆಕೋರೇಶನ್ ಮಾಲಕರ ಸಂಘ, ಇಲೆಕ್ಟ್ರಿಕ್ ಮಾಲಕರ ಸಂಘ ಹಾಗೂ ಕ್ಯಾಟರಿಂಗ್ ಮಾಲಕರ ಸಂಘದ ಪದಾಧಿಕಾರಿಗಳು ಶುಭ ಹಾರೈಸಿದರು.
ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಅಧ್ಯಕ್ಷ ಬಾಬು ಕೆ. ವಿಟ್ಲ, ಜಿಲ್ಲಾ ಕಾರ್ಯದರ್ಶಿ ಪಿಯುಸ್ ಮ್ಯಾಕ್ಸಿಮ್ ಸಿಕ್ವೇರ, ಅಧ್ಯಕ್ಷ ಬಾಲಕೃಷ್ಣ ಕದ್ರಿ, ಸ್ಥಾಪಕ ಅಧ್ಯಕ್ಷ ಉಮಾನಾಥ ಸುವರ್ಣ, ಕಾರ್ಯದರ್ಶಿ ಸ್ಪಂದನ ನಾಗರಾಜ್, ಕೋಶಾಧಿಕಾರಿ ಗಾಡ್ವಿನ್ ಡಿಸೋಜ, ರಾಜೇಶ್ ಎಂ., ಅಬ್ದುಲ್ ರಶೀದ್ ಉಪಸ್ಥಿತರಿದ್ದರು. ಗುರುದತ್ ಪೈ ಕಾರ್ಯಕ್ರಮ ನಿರೂಪಿಸಿದರು.

ಕುಟ್ಟ ಸರ್ಕಾರಿ ಆಸ್ಪತ್ರೆಗೆ ಶಾಸಕ ಪೊನ್ನಣ್ಣ ದಿಢೀರ್ ಭೇಟಿ, ಪರಿಶೀಲನೆ



ಮಡಿಕೇರಿ: ಕೇರಳ ಚುನಾವಣಾ ಪ್ರಚಾರದ ಜವಾಬ್ದಾರಿ ನಡುವೆಯೂ ಭಾನುವಾರ ಕ್ಷೇತ್ರಕ್ಕೆ ಆಗಮಿಸಿದ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ, ಕುಟ್ಟ ಸಾರ್ವಜನಿಕ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದರು.
ಕುಟ್ಟ ಆಸ್ಪತ್ರೆಯಲ್ಲಿರುವ ವೈದ್ಯರ ಹಾಗೂ ಸೌಲಭ್ಯಗಳ ಕೊರತೆಯನ್ನು ಗಮನಿಸಿದ ಶಾಸಕರು, ಅಲ್ಲಿಂದಲೇ ಉನ್ನತ ಅಧಿಕಾರಿಗಳಿಗೆ ಕರೆ ಮಾಡಿ ಕೂಡಲೇ ಇಲ್ಲಿನ ಆಸ್ಪತ್ರೆಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರಲ್ಲದೆ ಅಲ್ಲೇ ಇದ್ದ ರೋಗಿಗಳನ್ನು ಮಾತನಾಡಿಸಿದ ಶಾಸಕರು ಅವರಿಂದ ಚಿಕಿತ್ಸೆಯ ಬಗ್ಗೆ ವಿವರಗಳನ್ನು ಪಡೆದರು.
ಈ ಸಂದರ್ಭ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ಕುಟ್ಟ ವಲಯ ಕಾಂಗ್ರೆಸ್ ಅಧ್ಯಕ್ಷ ರಾಮಕೃಷ್ಣ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಮಾಜಿ ವಲಯ ಅಧ್ಯಕ್ಷ ಮುಕ್ಕಾಟಿರ ನವೀನ್, ಶ್ರೀಮಂಗಲ ವಲಯ ಅಧ್ಯಕ್ಷ ಪಲ್ವಿನ್, ತಿತೀರ ಮಂದಣ್ಣ, ಡಿಸಿಸಿ ಸದಸ್ಯ ಪೆಮ್ಮಂಡ ರಾಜ, ಮಚ್ಚಮಾಡ ಮನು, ಸಿದ್ದು ನಾಚಪ್ಪ ಯುವ ಕಾಂಗ್ರೆಸ್‌ನ ಫಾರ್ದಿನ್, ಅಶ್ರಫ್, ಮಜೀದ್ ಇದ್ದರು.

ಸಡಂಬೈಲು: ವಿಜ್ಞಾಪನಾ ಪತ್ರ ಬಿಡುಗಡೆ



ಶಿರ್ವ: ಬೆಳ್ಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಡಂಬೈಲು ಪುರಾತನ ಸಾನಿಧ್ಯವಾದ ಶ್ರೀಮರುಳು ಧೂಮಾವತಿ ದೈವಸ್ಥಾನ ಜೀರ್ಣೋದ್ಧಾರದ ವಿಜ್ಞಾಪನಾ ಪತ್ರ ಬಿಡುಗಡೆಗೊಳಿಸಲಾಯಿತು.
ಈ ಸಂದರ್ಭದಲ್ಲಿ ಊರಿನ ಪ್ರಮುಖರಾದ ಶಶಿಧರ ವಾಗ್ಲೆ, ಭಾಸ್ಕರ ಶೆಟ್ಟಿ, ಹಿರಿಯ ವೈದಿಕರಾದ ಬಿ.ರಮಾನಾಥ ಭಟ್, ರಾಮಕೃಷ್ಣ (ಅಪ್ಪು) ಪಾಟ್ಕರ್ ಅರಸೀಕಟ್ಟೆ, ಹರಿಯಪ್ಪ ಪಾಟ್ಕರ್, ಸತ್ಯನಾರಾಯಣ ಪ್ರಭು, ಶಿವಾನಂದ ವಾಗ್ಲೆ, ಸುಜಯ್ ಆರ್ ನಾಯಕ್, ಹರಿದಾಸ್ ಪಾಟ್ಕರ್, ವಿಶ್ವನಾಥ್ ಬಾಂದೇಲ್ಕರ್, ಸತೀಶ ಮೂಲ್ಯ, ಶಂಕರ ಮೂಲ್ಯ, ವಿಠಲ ವಾಗ್ಲೆ, ವೀರೇಂದ್ರ ಪಾಟ್ಕರ್, ಶಿವರಾಜ್, ಸದಾನಂದ ನಾಯಕ್, ಮತ್ತಿತರರು ಉಪಸ್ಥಿತರಿದ್ದರು.



ಶಿರ್ವ ಎಂಎಸ್‌ಆರ್‌ಎಸ್ ಕಾಲೇಜಿನ ಆ್ಯಂಟಿ ಡ್ರಗ್ಸ್ ಅವಾರ್ನೆಸ್ ಕಮಿಟಿಯ ವತಿಯಿಂದ ಶನಿವಾರ ಕಾಲೇಜಿನ ಆವರಣ ದಿಂದ ಶಿರ್ವ ಬಸ್ ನಿಲ್ದಾಣದವರೆಗೆ 'ಮಾದಕ ವ್ಯಸನ ಜಾಗೃತಿ ಜಾಥಾ' ಏರ್ಪಡಿಸಲಾಯಿತು. ಪ್ರಾಚಾರ್ಯ ಮಿಥುನ್ ಚಕ್ರವರ್ತಿ ಇದ್ದರು.

ಪುತ್ತೂರು ಮೊಬೈಲ್ ರಿಟೇಲರ್ ಅಸೋಸಿಯೇಷನ್‌ನ ಮಹಾಸಭೆ



ಪುತ್ತೂರು: ಆಲ್ ಇಂಡಿಯಾ ಮೊಬೈಲ್ ರಿಟೇಲರ್ ಎಸೋಸಿಯೇಷನ್ ಅಧೀನದಲ್ಲಿರುವ ಮೊಬೈಲ್ ರಿಟೇಲರ್ ಅಸೋಸಿಯೆಷನ್ ಪುತ್ತೂರು ಇದರ ವಾರ್ಷಿಕ ಮಹಾಸಭೆಯು ನಗರದ ಬೈಪಾಸ್ ಆಶ್ಮಿ ಸಭಾಂಗಣದಲ್ಲಿ ನಡೆಯಿತು. ಆಲ್ ಇಂಡಿಯನ್ ಮೊಬೈಲ್ ರಿಟೈಲರ್ ಅಸೋಸಿಯೇಷನ್ ಜಿಲ್ಲಾ ನಾಯಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪುತ್ತೂರಿನ ಎಲ್ಲಾ ಮೊಬೈಲ್ ಮಾರಾಟ ಅಂಗಡಿಯ ಮಾಲಕರು ಭಾಗವಹಿಸಿದ್ದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುತ್ತೂರು ಮೊಬೈಲ್ ರಿಟೇಲರ್ ಅಸೋಸಿಯೇಷನ್ ಅಧ್ಯಕ್ಷ ಚೇತನ್ ಕುಮಾರ್ ವಹಿಸಿದ್ದರು.
ಮುಖ್ಯ ಅತಿಥಿಯಾಗಿ ದ.ಕ. ಮೊಬೈಲ್ ರಿಟೇಲರ್ ಅಸೋಸಿಯೇಷನ್ ಅಧ್ಯಕ್ಷ ಪ್ರಶಾಂತ್ ಶೆಣೈ ಕಾರ್ಕಳ, ಕಾರ್ಯದರ್ಶಿ ಅರಿಹಂತ್ ಜೈನ್ ಬೆಳ್ತಂಗಡಿ, ಉಪಾಧ್ಯಕ್ಷ ಇಮ್ತಿಯಾಜ್ ಮಂಗಳೂರು ಭಾಗವಹಿಸಿದ್ದರು. ಪುತ್ತೂರು ಮೊಬೈಲ್ ರಿಟೇಲರ್ ಅಸೋಸಿಯೇಷನ್ ಗೌರವಾಧ್ಯಕ್ಷ ಕೆ. ಪಿ. ಸಿರಾಜುದ್ದೀನ್ ಅವರ ನೇತೃತ್ವದಲ್ಲಿ ಹೊಸ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ಗೌರವಾಧ್ಯಕ್ಷರಾಗಿ ಕೆ.ಪಿ. ಸಿರಾಜುದ್ದೀನ್, ಅಧ್ಯಕ್ಷರಾಗಿ ಚೇತನ್ ಕುಮಾರ್, ಉಪಾಧ್ಯಕ್ಷರಾಗಿ ಮಹೇಶ್, ಶಿಹಾಬ್, ಜಮಾಲ್, ಕಾರ್ಯದರ್ಶಿಯಾಗಿ ಹಫೀಜ್ ಅಹ್ಮದ್ ಯೂಸುಫ್, ಜೊತೆ ಕಾರ್ಯದರ್ಶಿ ನಾಸಿರ್, ಕೋಶಾಧಿಕಾರಿಯಾಗಿ ಸಂಪತ್ ಕುಮಾರ್, ಪದಾಧಿಕಾರಿಗಳಾಗಿ ಖಾದರ್ ಪಳಿಕೆ, ಸತೀಶ್, ನುಫೈಲ್, ಸರ್ಫುದ್ದೀನ್, ಸುದೀರ್, ಝಿಯಾಧ್, ಅಶ್ರಫ್, ಶವಿ, ಭರತ್, ಶಶಿರಾಜ್, ಪ್ರವೀಣ್ ಅಮ್ಮೆ ನೇಮಕಗೊಂಡರು. ಹಫೀಜ್ ವಂದಿಸಿದರು. ಶಶಿರಾಜ್ ನಿರ್ವಹಿಸಿದರು.

ಮಂಗಳೂರು ಬೆಂಗ್ರೆ ವಾರ್ಡ್: ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 60ನೇ ಬೆಂಗ್ರೆ ವಾರ್ಡಿನ ಶ್ರೀ ಆದಿ ನಾಗದೇವರ ಬನಸ್ಯಾಂಡ್‌ಪಿಟ್ ಬೆಂಗ್ರೆ ಬಳಿ ಅಭಿವೃದ್ಧಿ ಕಾಮಗಾರಿಯು ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆಯು ನಡೆಯಿತು.
ನಂತರ ಮಾತನಾಡಿದ ಶಾಸಕರು, ಇಲ್ಲಿನ ಸ್ಥಳೀಯರ ಬಹು ದಿನಗಳ ಬೇಡಿಕೆಯಂತೆ ಈ ಅಭಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಶೀಘ್ರದಲ್ಲಿ ಕಾಮಗಾರಿ ಮುಗಿಸುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗುವುದು ಎಂದರು.
ಪ್ರಮುಖರಾದ ಲೋಕೇಶ್ ಬೆಂಗ್ರೆ, ಮೀರಾ ಕರ್ಕೇರ, ನಿತಿನ್ ಕುಮಾರ್, ವಿನೋದ್ ಮೆಂಡನ್, ಅನಿಲ್, ಕಿಶೋರ್ ಕೊಟ್ಟಾರಿ, ಸುರೇಂದ್ರ ಪಾಂಗಳ್, ಗಂಗಾಧರ, ಸಂಜಯ್ ಸುವರ್ಣ, ಧನಂಜಯ ಪುತ್ರನ್, ಚೇತನ್ ಬೆಂಗ್ರೆ, ವಿಥುನ್, ವಾಸು ಸುವರ್ಣ, ಸುಂದರ ಸಾಲ್ಯಾನ್, ಸುಕುಮಾರ, ಜೀವನ್ ಖಾರ್ವಿ, ಸ್ಥಳೀಯ ನಿವಾಸಿಗಳು, ವಾರ್ಡಿನ ಕಾರ್ಯಕರ್ತರು ಉಪಸ್ಥಿತರಿದ್ದರು.

ಪತ್ರಕರ್ತ, ಸಾಹಿತಿ ಚಿದಂಬರ ಬೈಕಂಪಾಡಿ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಕನ್ನಡ ನುಡಿಹಬ್ಬ | ಸ್ಮರಣ ಸಂಚಿಕೆ, 12 ಕೃತಿ ಬಿಡುಗಡೆ

ಯಕ್ಷಗಾನ ತಾಳಮದ್ದಳೆ ಮಂಗಳ ಹಾಡಿನೊಂದಿಗೆ 28ನೇ ದ.ಕ. ಜಿಲ್ಲಾ ಸಮ್ಮೇಳನಕ್ಕೆ ತೆರೆ

ಬಂಟ್ವಾಳ: ನೇತ್ರಾವತಿ ನದಿ ತಟ ಬಂಟ್ವಾಳದಲ್ಲಿ ಮೂರು ದಿನಗಳ ಕಾಲ ಪಂಜೆ ಮಂಗೇಶರಾಯ ಸಭಾಂಗಣ, ರಾಣಿ ಅಬ್ಬಕ್ಕ ವೇದಿಕೆಯಲ್ಲಿ 28 ನೇ ದ.ಕ.ಜಿಲ್ಲಾ ಸಮ್ಮೇಳನಕ್ಕೆ ಯಕ್ಷಗಾನ ತಾಳಮದ್ದಳೆಯ ಮಂಗಳ ಹಾಡುವ ಮೂಲಕ ಅಂತಿಮ ಪರದೆ ಎಳೆಯಲಾಗಿದೆ.
ಸಭಾಂಗಣದ ಹೊರಭಾಗದಲ್ಲಿ ಸಣ್ಣಮಟ್ಟಿನ ಗುಡುಗು, ಹನಿಹನಿ ಮಳೆ, ತಣ್ಣನೆಯ ಗಾಳಿಯ ಮಧ್ಯೆ ಸಮ್ಮೇಳನದ ರಾಣಿ ಅಬ್ಬಕ್ಕ ವೇದಿಕೆಯಲ್ಲಿ ಅಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಜೀವನ್ ರಾಂ ಸುಳ್ಯ ತಂಡದಿಂದ ಕನ್ನಡ–ಗಾನ–ಗುಚ್ಛ, ವಿದುಷಿ ಶ್ರದ್ಧಾ ಕಲ್ಲಡ್ಕ ಮತ್ತು ಬಳಗದವರಿಂದ ನೃತ್ಯ ವೈಭವ ಹಾಗೂ ಜಿಲ್ಲೆ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ 'ಶರಸೇತುಬಂಧ'



ಯಕ್ಷಗಾನ ತಾಳಮದ್ದಳೆಗೆ ಸಾಹಿತ್ಯಾಭಿಮಾನಿಗಳು, ಯಕ್ಷಾಭಿಮಾನಿಗಳು ತಲೆದೂಗಿದರು.

ಯಶಸ್ವಿ ಸಮ್ಮೇಳನ

ಇದರೊಂದಿಗೆ ಹಿರಿಯ ಪತ್ರಕರ್ತ, ಸಾಹಿತಿ ಚಿದಂಬರ ಬೈಕಂಪಾಡಿ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆದ ಮೂರು ದಿನದ 28 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವಂತು ಯಾವುದೇ ಗೊಂದಲವಿಲ್ಲದೆ ಯಶಸ್ವಿಯಾಗಿ ಸಂಪನ್ನಗೊಂಡಿತು. ದ.ಕ.ಜಿಲ್ಲಾ ಸಾಹಿತ್ಯ ಪರಿಷತ್ ಹಾಗೂ ಬಂಟ್ವಾಳ ತಾಲೂಕು ಸಾಹಿತ್ಯ ಪರಿಷತ್ ಜಂಟಿಯಾಗಿ ಸ್ವಾಗತ ಸಮಿತಿ ಸಹಿತ ವಿವಿಧ ಉಪಸಮಿತಿಗಳನ್ನು ರಚಿಸಿಕೊಂಡು 28ನೇ ದ.ಕ.ಜಿಲ್ಲಾ ಸಮ್ಮೇಳನಕ್ಕೆ ಸಿದ್ದತೆ ಮಾಡಿಕೊಳ್ಳಲಾಗಿತ್ತು.
ಮಾ.26 ರಂದು ಸಂಜೆ ಕನ್ನಡ ಸಾಂಸ್ಕೃತಿಕ ದಿಬ್ಬಣದ ಮೆರವಣಿಗೆಯಿಂದ ಅದ್ದೂರಿಯಾಗಿ ಆರಂಭಗೊಂಡ 28 ಕನ್ನಡ ಸಾಹಿತ್ಯ ಸಮ್ಮೇಳನ ಯಕ್ಷಗಾನದ ಹಿಮ್ಮೇಳನದ ಅಬ್ಬರದೊಂದಿಗೆ ಶನಿವಾರ ರಾತ್ರಿ ತೆರೆ ಬಿತ್ತು. ಸಾಹಿತ್ಯಜಾತ್ರೆಯಲ್ಲಿ ವಿವಿಧ ವಿಚಾರಗೋಷ್ಠಿಗಳು ನಡೆಯಿತು.

ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ

ಸಾಂಕೇತಿಕವಾಗಿ ಸಮ್ಮೇಳನದ 'ಸ್ಮರಣ ಸಂಚಿಕೆ', ವಿಶೇಷವಾಗಿ 12 ನೂತನ ಕೃತಿಗಳು ಬಿಡುಗಡೆಗೊಂಡಿದೆ. ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನವು ಮೇಳೈಸಿತು. ಹಾಗೆಯೇ ಸಮ್ಮೇಳನಾಧ್ಯಕ್ಷರು, ಪತ್ರಕರ್ತರಾದ ಚಿದಂಬರ ಬೈಕಂಪಾಡಿ ಅವರೊಂದಿಗೆ ಸ್ಥಳೀಯ ಮತ್ತು ಜಿಲ್ಲಾ ಪತ್ರಕರ್ತರು ಸಂವಾದ ನಡೆಸಿ ಗಮನಸೆಳೆದರು. ಒಂದಷ್ಟು ಸಾಧಕರಿಗೆ ಸನ್ಮಾನ, ಸಾಧಕಸಿರಿ–ಕನ್ನಡಸಿರಿ ಪ್ರಶಸ್ತಿ ಪ್ರದಾನವು ನೆರವೇರಿತು. ಸನ್ಮಾನ ಸ್ವೀಕರಿಸಬೇಕಾಗಿದ್ದ ಮಹಾದಾನಿಗಳ 9 ಮಂದಿಯ ಪೈಕಿ ಇಬ್ಬರು ಮಾತ್ರ ಸನ್ಮಾನ ಪಡೆದರೆ ಉಳಿದವರು ಗೈರುಹಾಜರಾಗಿದ್ದರು. ಅದೇ ರೀತಿ ಸಾಧಕ ಸಿರಿ ಪ್ರಶಸ್ತಿಯನ್ನು ಸ್ವೀಕರಿಸಬೇಕಾದ ನಾಲ್ವರ ಪೈಕಿ ಇಬ್ಬರು ಗೈರಾಗಿದ್ದರು. ಕನ್ನಡಸಿರಿ ಪ್ರಶಸಿ 16 ಮಂದಿಯ ಪೈಕಿ ಒರ್ವರ ಗೈರಾಗಿದ್ದರೆ. ಇಲ್ಲಿ ಹೆಚ್ಚುವರಿಯಾಗಿ ಒರ್ವರಿಗೆ (ಆಮಂತ್ರಣದಲ್ಲಿ ಹೆಸರಿಲ್ಲ) ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಳೇ ಬೇರು–ಹೊಸಚಿಗುರು ಎಂಬಂತೆ ಹಿರಿಯ ಸಾಹಿತಿಗಳ ಮಧ್ಯೆ ಕಿರಿಯರು ಪಾಲ್ಗೊಂಡು 28ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಾಕ್ಷಿಯಾದರು.

ಸುತ್ತ ಮುತ್ತ

240 ತಾಲೂಕು ಕಚೇರಿಗಳಲ್ಲಿ ಭೂ ಸುರಕ್ಷಾ ಯೋಜನೆ ಜಾರಿ

ಬೆಳ್ತಂಗಡಿ: ಕಂದಾಯ ಕಚೇರಿಗಳಿಗೆ ಭೂ ದಾಖಲೆಗಳನ್ನು ಪಡೆಯಲು ಜನರು ಕಂದಾಯ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಸರಕಾರವು 'ಭೂ ಸುರಕ್ಷಾ ಯೋಜನೆ'ಯನ್ನು ರಾಜ್ಯಾದ್ಯಂತ ಎಲ್ಲಾ 240 ತಾಲೂಕು ಕಚೇರಿಗಳಲ್ಲಿ ಸಂಪೂರ್ಣ ಅನುಷ್ಠಾನಗೊಂಡಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನ ಪರಿಷತ್‌ನಲ್ಲಿ ಸದಸ್ಯ ಪ್ರತಾಪಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ವಿವರ ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಸಹಾಯಕ ಆಯುಕ್ತರ ಕಚೇರಿಗಳಲ್ಲಿಯೂ ಸಹ ಗಣಕೀಕರಣ ಕಾರ್ಯ ಪ್ರಾರಂಭಿಸಲಾಗಿದೆ. ರಾಜ್ಯದ 104 ತಾಲೂಕು ಕಚೇರಿಗಳಲ್ಲಿ ಗಣಕೀಕರಣ ಮುಕ್ತಾಯವಾಗಿದೆ. ರಾಜ್ಯದ ಎಲ್ಲಾ 240 ತಾಲೂಕು ಕಚೇರಿ, 100 ಅಟಲ್ ಜೀ ಕೇಂದ್ರ ಮತ್ತು ಆನ್ ಲೈನ್ ಮೂಲಕ ಧೃಡೀಕರಿಸಿದ ಭೂ ದಾಖಲೆ ಪಡೆಯುವ ಅವಕಾಶವನ್ನು ಈಗಾಗಲೇ ಸಂಪೂರ್ಣ ಜಾರಿಗೆ ತರಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಧರ್ಮವೇ ದೇಶದ ಮೂಲ: ರಮಾನಂದ ಗೌಡ

ಬಂಟ್ವಾಳ: ಧರ್ಮವೇ ನಮ್ಮ ದೇಶದ ಮೂಲವಾಗಿದ್ದು, ಪ್ರತಿಯೊಬ್ಬ ಹಿಂದೂವೂ ಧರ್ಮ ಶಿಕ್ಷಣ ಪಡೆದು, ಧರ್ಮಾಚರಣೆ ಮಾಡುವ ಮೂಲಕ ಆಧ್ಯಾತ್ಮಿಕ ಬಲ ಹೆಚ್ಚಿಸಿಕೊಂಡು ಹಿಂದೂ ರಾಷ್ಟ್ರದ ಸ್ಥಾಪನೆಗೆ ಕಟಿಬದ್ಧರಾಗಬೇಕಾಗಿದೆ ಎಂದು ಸನಾತನ ಸಂಸ್ಥೆಯ ಧರ್ಮಪ್ರಚಾರಕ ರಮಾನಂದ ಗೌಡ ಅವರು ಹೇಳಿದ್ದಾರೆ.



ಹಿಂದೂ ಜನಜಾಗೃತಿ ಸಮಿತಿಯ ಆಶ್ರಯದಲ್ಲಿ ತಾಲೂಕಿನ ತೆಂಕಬೆಳ್ಳೂರು ಶ್ರೀ ಕಾವೇಶ್ವರ ದೇವಸ್ಥಾನ, ಅಲ್ಲಿಪಾದೆ, ಸಜೀಪದ ಬ್ರಹ್ಮಶ್ರೀ ನಾರಾಯಣ ಗುರು ಮಂದಿರ ಹಾಗೂ ಬಂಟ್ವಾಳ ಕೋಡಪದವುಗಳಲ್ಲಿ ಆಯೋಜಿಸಲಾದ 'ಹಿಂದೂ ರಾಷ್ಟ್ರ ವ್ಯಾಖ್ಯಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತದಲ್ಲಿ ಗುರುವಿಗೆ ಅಗ್ರಸ್ಥಾನವಿದ್ದು, ಛತ್ರಪತಿ ಶಿವಾಜಿ ಮಹಾರಾಜರು ಮತ್ತು ಹಕ್ಕ-ಬುಕ್ಕರು ಕೂಡ ಗುರುಗಳ ಮಾರ್ಗದರ್ಶನದಲ್ಲಿ ಧರ್ಮಸಂಸ್ಥಾಪನೆಯ ಕಾರ್ಯವನ್ನು ಪೂರ್ಣಗೊಳಿಸಿದರು ಎಂದ ಅವರು ಪ್ರಸ್ತುತ ಅನೇಕ ದಾರ್ಶನಿಕರು ಭವಿಷ್ಯದಲ್ಲಿ ಭಾರತವು ಹಿಂದೂ ರಾಷ್ಟ್ರವಾಗಲಿದೆ ಎಂದು ಭವಿಷ್ಯ ನುಡಿದಿದ್ದಾರೆ ಎಂದರು. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಉಕ್ತಿಯಂತೆ ನಾವು ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ, ಹಾಗಾಗಿ ನಾವೆಲ್ಲರೂ ಧರ್ಮಾಚರಣೆ ಮತ್ತು ಸಾಧನೆಯನ್ನು ಹೆಚ್ಚಿಸಬೇಕು ಎಂದರು.

ಹಿಂದೂ ಜನಜಾಗೃತಿ ಸಮಿತಿಯ ಜಿಲ್ಲಾ ಸಮನ್ವಯಕ ವಿಜಯ ಕುಮಾರ್ ಮಾತನಾಡಿದರು.

ಕನ್ಯಾನ ಸದಾಶಿವ ಶೆಟ್ಟಿ ಸಂಕೀರ್ಣಕ್ಕೆ ಶಶಿಧರ ಶೆಟ್ಟಿ ದೇಣಿಗೆ: ಭರವಸೆ

ಮುಲ್ಕಿ: ಇಲ್ಲಿನ ರಾಷ್ಟ್ರೀಯ ಹೆದ್ದಾರಿ 66ರ ಬಳಿ ಡಾ. ಕನ್ಯಾನ ಸದಾಶಿವ ಶೆಟ್ಟಿ ಸಂಕೀರ್ಣ ಡಿಸೆಂಬರ್‌ನಲ್ಲಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ. ಸದಾಶಿವ ಶೆಟ್ಟಿ ಸಂಕೀರ್ಣಕ್ಕೆ 1.25 ಕೋ.ರೂ. ನೆರವು ನೀಡುವುದಾಗಿ ಒಕ್ಕೂಟದ ಮಹಾ ನಿರ್ದೇಶಕ, ಉದ್ಯಮಿ ಶಶಿಧರ ಶೆಟ್ಟಿ ಬರೋಡಾ ಹೇಳಿದರು.

ಅವರು ಮುಲ್ಕಿಯ ಪ್ರವೀಣ್ ಭೋಜ ಶೆಟ್ಟಿ ಸಂಕೀರ್ಣದಲ್ಲಿ ನಡೆದ ಸದಾಶಿವ ಶೆಟ್ಟಿ ಸಂಕೀರ್ಣದ ದ್ವಿತೀಯ ಹಂತದ ಕಾಮಗಾರಿ ಕುರಿತು ನಡೆದ ವಿಶೇಷ ಮಹಾಸಭೆ ಉದ್ಘಾಟಿಸಿ ಮಾತನಾಡಿದರು. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಮಾತನಾಡಿ, ಸಂಕೀರ್ಣದಲ್ಲಿ ಶಶಿರೇಖಾ ಆನಂದ ಶೆಟ್ಟಿ ಹೆಸರಿನಲ್ಲಿ ವೇದಿಕೆ ಜತೆಗೆ ಸಭಾಂಗಣ, ಧರ್ಮಚಾವಡಿ, ಪ್ರವೀಣ್ ಭೋಜ ಶೆಟ್ಟಿ ಆಡಳಿತ ಕಚೇರಿ ಇರಲಿದೆ. ಸಭಾಭವನಕ್ಕೆ 5 ಲಕ್ಷ ರೂಪಾಯಿಗೂ ಮಿಕ್ಕಿ ಧನ ಸಹಾಯ ನೀಡಿದವರ ಭಾವಚಿತ್ರವನ್ನು ಆಡಳಿತ ಕಚೇರಿಯಲ್ಲಿ ಹಾಕಲಾಗುವುದು ಎಂದರು. ಒಕ್ಕೂಟದ ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ ಶೆಟ್ಟಿ ಅವರು ಒಕ್ಕೂಟಕ್ಕೆ ಒಂದು ಎಕ್ರೆ ಜಾಗ ನೀಡುವ ಬದಲು ಸಭಾಭವನಕ್ಕೆ 50 ಲ.ರೂ. ದೇಣಿಗೆ ನೀಡುವುದಾಗಿ ತಿಳಿಸಿದರು. ಉದ್ಯಮಿ ರಾಕ್ಷಿ ಡೆವಲಪರ್ಸ್ ಸಂಸ್ಥೆಯ ಆಡಳಿತ ನಿರ್ದೇಶಕ ರಾಜೇಶ್ ಶೆಟ್ಟಿ, ಯುವ ವಿಭಾಗದ ಸಂಚಾಲಕ ಗಿರೀಶ್ ಶೆಟ್ಟಿ ತೆಳ್ಳಾರ್, ಕಟ್ಟಡ ವಿನ್ಯಾಸಕಾರ ಎ.ಜಿ. ಭಟ್, ಪ್ರಧಾನ ಕಾರ್ಯದರ್ಶಿ ಜಯಕರ ಶೆಟ್ಟಿ ಇಂದ್ರಾಳಿ, ಜೊತೆ ಕಾರ್ಯದರ್ಶಿ ಚಂದ್ರಹಾಸ ಶೆಟ್ಟಿ ರಂಗೋಲಿ, ಉದ್ಯಮಿ ಹರೀಶ್ ಶೆಟ್ಟಿ ಮುಂಬೈ, ಸಂಚಾಲಕ ಕೊಲ್ಲಾಡಿ ಬಾಲಕೃಷ್ಣ ರೈ ಮತ್ತಿತರರು ಇದ್ದರು. ಅನೂಪ್ ಶೆಟ್ಟಿ ಸುರತ್ಕಲ್ ಪ್ರಾರ್ಥಿಸಿದರು. ಚಂದ್ರಹಾಸ ಶೆಟ್ಟಿ ವಂದಿಸಿದರು. ಜಯಕರ ಶೆಟ್ಟಿ ಇಂದ್ರಾಳಿ ನಿರೂಪಿಸಿದರು.

ನಾಲ್ನಾಡ್ ಕಪ್ ಹಾಕಿ ಉತ್ಸವ ಉದ್ಘಾಟಿಸಿ ಕೊಡಗು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹರೀಶ್ ಪೂವಯ್ಯ ಖೇದ

ಹಾಕಿ ರಾಷ್ಟ್ರೀಯ ಕ್ರೀಡೆಯಾದರೂ ಸಿಗುತ್ತಿಲ್ಲ ಸೂಕ್ತ ಪ್ರೋತ್ಸಾಹ

ನಾಪೋಕ್ಲು: ಕೊಡಗು ಜಿಲ್ಲೆಯು ಕಾಫಿಗೆ ಹೇಗೆ ಪ್ರಸಿದ್ಧವೋ ಹಾಗೆಯೇ ಹಾಕಿ ಕ್ರೀಡೆಗೆ ಪ್ರಸಿದ್ಧವಾಗಿದೆ. ಹಾಕಿ ರಾಷ್ಟ್ರೀಯ ಕ್ರೀಡೆಯಾದರೂ ಆ ಕ್ರೀಡೆಗೆ ಹಾಗೂ ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ಕೊಡಗು ಜಿಲ್ಲಾ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಕೇಟೋಳಿರ ಹರೀಶ್ ಪೂವಯ್ಯ ಹೇಳಿದರು.

ಬಲ್ಲಮಾವಟಿ ಗ್ರಾಮದ ನೇತಾಜಿ ಪ್ರೌಢಶಾಲೆಯ ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದ ನಾಲ್ನಾಡು ಅಂತರ ಗ್ರಾಮ ಹಾಕಿ ಹಾಗೂ ಮಹಿಳಾ ಹಗ್ಗ ಜಗ್ಗಾಟದ ನಾಲ್ನಾಡ್ ಕಪ್ ಹಾಕಿ ಉತ್ಸವನ್ನು ಶನಿವಾರ ಉದ್ಘಾಟಿಸಿ, ಮಾತನಾಡಿದರು.

ಕೊಡಗು ಹಾಗೂ ಪಂಜಾಬ್ ಹಲವು ಕ್ರೀಡಾಪಟುಗಳನ್ನು ನೀಡಿದೆ. ಹಾಕಿ ಆಟವನ್ನು ಉತ್ತೇಜಿಸುವ ಉದ್ದೇಶದಿಂದ ಕ್ರೀಡಾಪಟುಗಳಿಗೆ ವಿವಿಧ ಸಂಘ-ಸಂಸ್ಥೆಗಳು ಕ್ಲಬ್‌ಗಳು ಸೂಕ್ತ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ಗ್ರಾಮೀಣ ಪ್ರದೇಶದಲ್ಲಿ ನಾಲ್ನಾಡು ಹಾಕಿ ಕ್ಲಬ್ ಮೂಲಕ ಪ್ರತಿ ವರ್ಷ ನಾಲ್ಕು ನಾಡು ವ್ಯಾಪ್ತಿಯ ಗ್ರಾಮಗಳ ನಡುವೆ ಟೂರ್ನಮೆಂಟ್ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.



ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೊಡಗು ಜಿಲ್ಲಾ ಡಿಸಿಸಿ ಬ್ಯಾಂಕ್ ಸಿಇಒ ಮಣವಟ್ಟಿರ ಜಯ ಕುಶಾಲಪ್ಪ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಕ್ರೀಡೆ ಹೆಸರುವಾಸಿ. ಕ್ರೀಡೆಯೊಂದಿಗೆ ಜನರ ಶಿಸ್ತು ಆತಿಥಿ ಸತ್ಕಾರ ಎಲ್ಲವೂ ಕೂಡ ವಿಶ್ವಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ ಎಂದ ಅವರು ಜಿಲ್ಲೆಯ ವಿಭಿನ್ನ ಸಂಸ್ಕೃತಿ ನಡವಳಿಕೆ ಹಾಗೂ ಶಿಸ್ತು ರಾಷ್ಟ್ರಮಟ್ಟದಲ್ಲಿ ಖ್ಯಾತಿಗಳಿಸಿದೆ. ಇದನ್ನು ಉಳಿಸಿ ಬೆಳೆಸುವಂತಹ ಜವಾಬ್ದಾರಿ ನಮ್ಮ ಮೇಲಿದೆ ಎಂದರು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಿಂದ ರಾಷ್ಟ್ರಮಟ್ಟಕ್ಕೆ ಹೋಗುವ ಕ್ರೀಡಾಪಟುಗಳ ಸಂಖ್ಯೆ ಕಡಿಮೆಯಾಗಿದೆ ಇತರ ರಾಜ್ಯಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿದೆ. ಇಂತಹ ಟೂರ್ನಮೆಂಟ್‌ಗಳ ಮೂಲಕ ಕ್ರೀಡಾಪಟುಗಳು ಉತ್ತಮ ತರಬೇತಿಯನ್ನು ಹೊಂದುವುದರ ಮೂಲಕ ಜಿಲ್ಲೆಯಿಂದ ಕನಿಷ್ಠ 10 ಮಂದಿ ಕ್ರೀಡಾಪಟುಗಳು ಮೇಲ್ಮಟ್ಟಕ್ಕೆ ಹೋಗುವಂತಾಗಬೇಕು ಎಂದರು.

ಟೂರ್ನಿಯ ಸಂಚಾಲಕ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು.

> **ಕ್ರೀಡಾ ಸ್ಫೂರ್ತಿ ಇರಲಿ**
> ಕ್ರೀಡಾಪಟುಗಳನ್ನು ಒಗ್ಗೂಡಿಸಿ ನಾಲ್ನಾಡ್ ಕಪ್ ಹಾಕಿ ಟೂರ್ನಮೆಂಟ್ ಅನ್ನು ಪ್ರತಿ ವರ್ಷ ಆಯೋಜಿಸಲು ಆಯೋಜಿಸಲಾಗುತ್ತಿತ್ತು. ಕಳೆದ ಕೆಲವು ವರ್ಷಗಳಿಂದ ಕಡಿತಗೊಂಡಿದ್ದ ಪಂದ್ಯಾವಳಿಯನ್ನು ಕಳೆದ ವರ್ಷ ಪುನರಾರಂಭಿಸಿ ಯಶಸ್ವಿಯಾಗಿ ಟೂರ್ನಮೆಂಟ್ ಅನ್ನು ನಡೆಸಲಾಗಿತ್ತು. ಈ ವರ್ಷ ಉದ್ಯಮಿ ಹಾಗೂ ದಾನಿ ಎಡಿಕೇರಿ ಪ್ರಸನ್ನ ಅವರು ಉದಾರವಾಗಿ 3 ಲಕ್ಷ ರೂ. ನೀಡಿದ್ದು, ಅವರ ಪ್ರಾಯೋಜಕತ್ವದಲ್ಲಿ ಟೂರ್ನಿ ಆಯೋಜಿಸಲಾಗುತ್ತಿದೆ. ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿಯಿಂದ ಟೂರ್ನಿಯಲ್ಲಿ ಪಾಲ್ಗೊಂಡು ಟೂರ್ನಿಯನ್ನು ಯಶಸ್ವಿಗೊಳಿಸಬೇಕು.
> ● ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ

ನಾಲ್ನಾಡು ಹಾಕಿ ಕ್ಲಬ್ ಅಧ್ಯಕ್ಷ ಕರವಂಡ ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಕ್ಲಬ್‌ನ ಉಪಾಧ್ಯಕ್ಷ ಕೈಬಿಲಿರಾ ಉಮೇಶ್ ಉತ್ತಪ್ಪ ಕಾರ್ಯದರ್ಶಿ ಚಗೇಟಿರ ಕುಮಾರ್ ಸೋಮಣ್ಣ, ಖಜಾಂಜಿ ಚಿಯಂಡಿ ದಿನೇಶ್, ಸಹಕಾರ್ಯದರ್ಶಿ ಮಚ್ಚೂರ ಯದುಕುಮಾರ್, ಹೊಸೊಕ್ಲು ಮಾಚಯ್ಯ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು. ಅಪ್ಪು ಮನಿಯಂಡ ಶೈಲಾ ಪ್ರಾರ್ಥಿಸಿದರು. ಪಿ.ಕೆ. ಮನು ಮುತ್ತಪ್ಪ ಸ್ವಾಗತಿಸಿ, ಕರವಂಡ ಸೀಮ ಗಣಪತಿ ನಿರೂಪಿಸಿ, ಚಗೇಟಿರ ಕುಮಾರ್ ಸೋಮಣ್ಣ ವಂದಿಸಿದರು. ಟೂರ್ನಿ ಏ.2ರ ವರೆಗೆ ನಡೆಯಲಿದೆ. ಪ್ರಥಮ ಪಂದ್ಯಾಟವು ಪುಳಿಕೋಟು ಮತ್ತು ಕೊಳಕೇರಿ ತಂಡಗಳ ನಡುವೆ ಪ್ರಾರಂಭಗೊಂಡಿತು. ಟೂರ್ನಿ ಡೈರೆಕ್ಟರ್ ಕರವಂಡ ಅಪ್ಪಣ್ಣ, ತೀರ್ಪುಗಾರರಾಗಿ ಬೊಳ್ಳಚಂಡ ನಾಣಯ್ಯ, ಚೈಯಂಡ ಅಪ್ಪಚ್ಚು, ಪಟ್ರಪಂಡ ಮಂದಣ್ಣ, ಕೊಳುವಂಡ ಚಂಗಪ್ಪ, ಕುಪ್ಪಂಡ ದಿಲನ್, ಅನ್ನಡಿಯಂಡ ಪೊನ್ನಪ್ಪ, ತಾಂತ್ರಿಕ ಸಮಿತಿ ವಿನೋದ್ (ಜೆಸಿಬಿ) ಅವರುಗಳು ನಿರ್ವಹಿಸಿದರು.

ಮೇ 8-10: ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಲೋಕಾರ್ಪಣೆ

ಪ್ರತಿಷ್ಠೆ, ಕಲಶಾಭಿಷೇಕದ ಆಮಂತ್ರಣ ಬಿಡುಗಡೆ

ಬಂಟ್ವಾಳ: ಬ್ರಹ್ಮಶ್ರೀ ನಾರಾಯಣ ಗುರುಗಳ ಚಿಂತನೆಗಳಿಗೆ ನೀರಪಾದೆ ಪ್ರೇರಣೆ ನೀಡಿದ ಕೇಂದ್ರವಾಗಿದೆ, ಗುರುಗಳ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಹಿಂದೂ ಸಮಾಜ ಜಾಗೃತವಾಗಬೇಕು, ಈ ನಿಟ್ಟಿನಲ್ಲಿ ನಿರ್ಮಾಣವಾಗುವ ಮಂದಿರ ದೇಶ, ಸಮಾಜವನ್ನು ಉಳಿಸುವ ಮಹತ್ಕಾರ್ಯ ಮಾಡಲಿ ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಹೇಳಿದರು.

ಬಂಟ್ವಾಳ ತಾಲೂಕಿನ ಬಾಳ್ತಿಲ ಗ್ರಾ.ಪಂ. ವ್ಯಾಪ್ತಿಯ ನೀರಪಾದೆ ಎಂಬಲ್ಲಿ ಮೇ 8 ರಿಂದ ಮೇ 10ರವರೆಗೆ ನಡೆಯಲಿರುವ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಲೋಕಾರ್ಪಣೆ ಹಾಗೂ ಜಗದ್ಗುರು ಬ್ರಹ್ಮಶ್ರೀ ನಾರಾಯಣ ಗುರುವರ್ಯರ ಪ್ರತಿಷ್ಠಾ ಸಾನಿಧ್ಯ ಕಲಶಾಭಿಷೇಕ ಕಾರ್ಯಕ್ರಮದ ಆಮಂತ್ರಣವನ್ನು ಭಾನುವಾರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆಧ್ಯಾತ್ಮಿಕ ಚಿಂತನೆಯ ಫಲವಾಗಿ ಭಾರತ ನಮ್ಮತನವನ್ನು ಉಳಿಸಿಕೊಂಡು ಬಂದಿದೆ. ಭಾರತಕ್ಕೆ ಹಲವು ರೀತಿಯಲ್ಲಿ ಆಕ್ರಮಣಗಳು ನಡೆದಾಗಲೂ ಸಂತರು ಭಾರತದ ಸತ್ವವನ್ನು ಉಳಿಸಿಕೊಂಡು, ರಕ್ಷಿಸುತ್ತಾ ಬಂದಿದ್ದಾರೆ. ಅಂತಹ ಮಹಾನ್ ಸಂತರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು ಕೂಡ ಓರ್ವರಾಗಿದ್ದಾರೆ ಎಂದು ಹೇಳಿದರು.



ಪ್ರಸಕ್ತ ದಿನಗಳಲ್ಲಿ ಜಾತ್ಯತೀತತೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ವಿಭಜಿಸುವ ಹುನ್ನಾರಗಳು ನಡೆಯುತ್ತಿವೆ. ನಮ್ಮ ಧಾರ್ಮಿಕ ಚಿಂತನೆಗಳಿಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ನೀರಪಾದೆ ಬ್ರಹ್ಮಶ್ರೀ ನಾರಾಯಣ ಗುರು ಮಂದಿರ ಬೆಳೆಯಲಿ ಎಂದು ಹೇಳಿದರು.

ಬ್ರಹ್ಮಶ್ರೀ ನಾರಾಯಣ ಗುರು ಇದರ ಸೇವಾ ಟ್ರಸ್ಟ್‌ನ ಗೌರವಾಧ್ಯಕ್ಷ, ಮಾಜಿ ಶಾಸಕ ಎ. ರುಕ್ಮಯ ಪೂಜಾರಿ ಮಾತನಾಡಿ, ನೀರಪಾದೆ ಪರಿಸರದ ಜನರು ಸಂಸ್ಕಾರವಂತರು ಎಂಬುದನ್ನು ಅನೇಕ ಸಂದರ್ಭಗಳಲ್ಲಿ ನಿರೂಪಿಸಿದ್ದಾರೆ. ಮಂದಿರ ಲೋಕಾರ್ಪಣೆಗೆ ಸಿದ್ಧವಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ರೀತಿಯಲ್ಲಿ ನಿರ್ವಹಿಸಿಕೊಂಡು ಬಂದಾಗ ಹಿರಿಯರ ಕನಸು ನನಸಾಗುತ್ತದೆ ಎಂದು ಹೇಳಿದರು.

ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಟ್ರಸ್ಟ್ ಅಧ್ಯಕ್ಷ ನಿಡ್ಯೆ ನಾರಾಯಣ ಪೂಜಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಜಯರಾಮ ಕಲ್ಲಾಪು, ಮಹಿಳಾ ಸಮಿತಿ ಅಧ್ಯಕ್ಷೆ ಮಲ್ಲಿಕಾ ಸೇಣೆರೆಕೋಡಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಚಂದ್ರಶೇಖರ ಚೆಂಡೆ, ಗ್ರಾ.ಪಂ. ಮಾಜಿ ಸದಸ್ಯ, ಜೀರ್ಣೋದ್ಧಾರ ಸಮಿತಿ ಉಪಾಧ್ಯಕ್ಷ ಶಿವರಾಜ್ ಕಾಂದಿಲ, ರಾಧಾಕೃಷ್ಣ ಅಡ್ಯಂತಾಯ, ಮಹಿಳಾ ಸಮಿತಿ ಗೌರವ ಅಧ್ಯಕ್ಷೆ ಮೀನಾಕ್ಷಿ ಯಶೋಧ ನಿಡ್ಯೆ, ಶಶಿಕಲಾ, ಮುಖ್ಯೋಪಾಧ್ಯಾಯಿನಿ ಜಯಶ್ರೀ ಎಸ್., ಶಿಕ್ಷಕ ಉದಯ ಕುಮಾರ್, ಸಂತೋಷ್ ಕುಮಾರ್ ಮತ್ತಿತರರಿದ್ದರು. ಟ್ರಸ್ಟ್‌ನ ಕಾರ್ಯದರ್ಶಿ ಮೋಹನ್ ಪಿ.ಎಸ್. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮಿತಿ ಉಪಾಧ್ಯಕ್ಷ ಶರತ್ ಕುಮಾರ್ ಸೇಣೆರೆಕೋಡಿ ಸ್ವಾಗತಿಸಿ, ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಸುರೇಶ್ ಶೆಟ್ಟಿ ಕಾಂದಿಲ ವಂದಿಸಿದರು. ಅಶೋಕ್ ಗಣೇಶ್ ನಗರ, ಜಗದೀಶ್ ಕಲ್ಲಡ್ಕ ನಿರೂಪಿಸಿದರು.

ಅಜಿತ್ ಪ್ರಭು ಫೌಂಡೇಶನ್‌ನಿಂದ 73 ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ಒಟ್ಟು 42 ಲ.ರೂ. ವಿದ್ಯಾರ್ಥಿ ವೇತನ ವಿತರಣೆ

ಮಂಗಳೂರು: ಪ್ರಭು ಫ್ಯಾಮಿಲಿ ಚಾರಿಟೇಬಲ್ ಟ್ರಸ್ಟ್‌ನಡಿ ಗೌಡ ಸಾರಸ್ವತ ಬ್ರಾಹ್ಮಣರ ವಿದ್ಯಾರ್ಥಿ ವೇತನ ಲೀಗ್ (ಜಿಎಸ್‌ಬಿಎಲ್) ಸಹಯೋಗದೊಂದಿಗೆ ಅಜಿತ್ ಪ್ರಭು ಫೌಂಡೇಶನ್ ವತಿಯಿಂದ 10ನೇ ವಾರ್ಷಿಕ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ ನಗರದ ಕೆನರಾ ಹೈಸ್ಕೂಲ್‌ನ ಭುವನೇಂದ್ರ ಸಭಾಂಗಣದಲ್ಲಿ ಭಾನುವಾರ ನಡೆಯಿತು.

ಈ ವರ್ಷ 73 ವಿದ್ಯಾರ್ಥಿಗಳಿಗೆ ಒಟ್ಟು 42 ಲಕ್ಷ ರೂ. ಮೌಲ್ಯದ ವಿದ್ಯಾರ್ಥಿ ವೇತನ ನೀಡಲಾಯಿತು. ಅತಿದೊಡ್ಡ ಖಾಸಗಿ ಸ್ವತಂತ್ರ ಇಂಜಿನಿಯರಿಂಗ್ ಸೇವೆಗಳ ಕಂಪನಿಯಾದ ಕ್ವೆಸ್ಟ್ ಗ್ಲೋಬಲ್‌ನ ಸಹ ಸಂಸ್ಥಾಪಕ ಮತ್ತು ಸಿಇಒ ಅಜಿತ್ ಪ್ರಭು ಅವರು ಪ್ರಾರಂಭಿಸಿದ ವಿದ್ಯಾರ್ಥಿ ವೇತನ ಕಾರ್ಯಕ್ರಮ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ಈ ಪ್ರತಿಷ್ಠಾನವು ಇದುವರೆಗೆ 900ಕ್ಕೂ ಹೆಚ್ಚು ವಿದ್ಯಾರ್ಥಿ ವೇತನಗಳ ಮೂಲಕ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೆರವಾಗಿದೆ.



1 ಸಾವಿರ ವಿದ್ಯಾರ್ಥಿಗಳಿಗೆ ನೆರವು

ಈ ವೇಳೆ ಮಾತನಾಡಿದ ಕ್ವೆಸ್ಟ್ ಗ್ಲೋಬಲ್‌ನ ಸಹ-ಸಂಸ್ಥಾಪಕ ಮತ್ತು ಸಿಇಒ ಅಜಿತ್ ಪ್ರಭು, ಮಂಗಳೂರಿನಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ನನಗೆ ನನ್ನ ಶಿಕ್ಷಕರು ವಿದ್ಯಾರ್ಥಿವೇತನ ನೀಡಿ ಶಿಕ್ಷಣ ಪಡೆಯಲು ನೆರವಾಗಿದ್ದರು. ಈ ಹಿನ್ನೆಲೆಯಲ್ಲಿ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ನೆರವಾಗಬೇಕು ಎಂಬ ದೃಷ್ಟಿಯಿಂದ ವಿದ್ಯಾರ್ಥಿವೇತನ ವಿತರಿಸಲಾಗುತ್ತಿದೆ. ಮೊದಲ ಹಂತದಲ್ಲಿ ಒಟ್ಟು ಒಂದು ಸಾವಿರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಗುರಿ ಹೊಂದಲಾಗಿದೆ. ಈಗಾಗಲೇ 14 ವೈದ್ಯಕೀಯ ವಿದ್ಯಾರ್ಥಿಗಳು, 255 ಇಂಜಿನಿಯರಿಂಗ್, 1 ಸ್ನಾತಕೋತ್ತರ ಪದವಿ, 16 ಮಂದಿ ಸಿಎ ಹಾಗೂ ಎಂಬಿಎ ಸೇರಿದಂತೆ 322 ವಿದ್ಯಾರ್ಥಿಗಳಿಗೆ 4.75 ಕೋಟಿ ರೂ. ವಿದ್ಯಾರ್ಥಿವೇತನ ನೀಡಲಾಗಿದೆ. ವಿದ್ಯಾರ್ಥಿಗಳ ಕೋರ್ಸ್‌ನ ಪೂರ್ತಿ ಅವಧಿಗೆ ಪ್ರತಿವರ್ಷ ವಿದ್ಯಾರ್ಥಿವೇತನ ನೀಡಲಾಗುವುದು. ಪ್ರತಿವರ್ಷ 50 ವಿದ್ಯಾರ್ಥಿಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗುತ್ತಿದೆ ಎಂದರು.

> ವಿದ್ಯಾರ್ಥಿಗಳ ಕೋರ್ಸ್, ಕೌಟುಂಬಿಕ ಹಿನ್ನೆಲೆ ಹಾಗೂ ಇತರ ಅರ್ಹತೆ ಪರಿಶೀಲಿಸಿ ಅವರ ಪದವಿ ಮುಗಿಯುವವರೆಗೆ ವಿದ್ಯಾರ್ಥಿವೇತನ ನೀಡಲಾಗುವುದು. ಇದರ ಜತೆಗೆ ಫೌಂಡೇಶನ್ ವತಿಯಿಂದ ಹಸಿರೀಕರಣ, ಮಹಿಳಾ ಸಬಲೀಕರಣ ಹಾಗೂ ಲಿಂಗ ಸಮಾನತೆ ಬಗ್ಗೆಯೂ ಕೆಲಸ ಮಾಡಲಾಗುತ್ತಿದೆ.
> ● ಅಜಿತ್ ಪ್ರಭು

ಅಜಿತ್ ಪ್ರಭು ಅವರ ತಾಯಿ ಶಾಲಿನಿ ಅರವಿಂದ ಪ್ರಭು, ಪತ್ನಿ ಬಬಿತಾ ಅಜಿತ್ ಪ್ರಭು, ಪ್ರಭು ಫ್ಯಾಮಿಲಿ ಚಾರಿಟೇಬಲ್ ಟ್ರಸ್ಟ್ ಟ್ರಸ್ಟಿ ಸುರೇಶ್ ವಿ., ರಾಹುಲ್ ರಾವ್ ಉಪಸ್ಥಿತರಿದ್ದರು. ಟ್ರಸ್ಟ್‌ನ ಆಪರೇಶನ್ಸ್ ಮ್ಯಾನೇಜರ್ ಶ್ರೀದೇವಿ ಮೋಹನ್ ಕಾರ್ಯಕ್ರಮ ನಿರೂಪಿಸಿದರು.

ಮಂಜೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕ ನ್ಯಾಕ್ ಭರ್ಜರಿ ಪ್ರಚಾರ ಕಾರ್ಯ



ಬಂಟ್ವಾಳ: ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಿಕೊಡುವಂತೆ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಅವರು ಮನವಿ ಮಾಡಿದ್ದಾರೆ.

ಫಲಿತಾಂಶ ಬಿಜೆಪಿ ಪರ: ವಿಶ್ವಾಸ

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ವರ್ಕಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಕ್ರಬೈಲು ಹಾಗೂ ಮಲಾರ್ ಪ್ರದೇಶದಲ್ಲಿ ಮನೆ, ಮನೆಗೆ ತೆರಳಿ ಮತಯಾಚಿಸಿದ ಶಾಸಕರು, ಇಲ್ಲಿ ಬಿಜೆಪಿಯ ಗೆಲುವು ಕಾರ್ಯಕರ್ತರ ಗೆಲುವು ಆಗಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಫಲಿತಾಂಶ ಬಿಜೆಪಿ ಪರವಾಗುವುದು ನಿಶ್ಚಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಕಾರ್ಯಕರ್ತರ ಜೊತೆ ಕೆಲ ಹೊತ್ತು ಚುನಾವಣಾ ಸಿದ್ದತೆಗಳ ಬಗ್ಗೆ ಚರ್ಚಿಸಿದ ಅವರು ಮತದಾರರನ್ನು ಸಂಪರ್ಕಿಸಿ ಮನಪರಿವರ್ತನೆಯ ಮೂಲಕ ಬಿಜೆಪಿಗೆ ಮತ ಹಾಕಿಸಬೇಕು ಎಂದರು.

ದ.ಕ. ಜಿಲ್ಲಾ ಬಿಜೆಪಿ ವಕ್ತಾರ ಮಾದವ ಮಾವೆ, ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್ ಶೆಟ್ಟಿ, ಸುದರ್ಶನ ಬಜ, ಅಮ್ಮುಂಜೆ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಕಾರ್ತಿಕ್ ಬಲ್ಲಾಳ್, ಮಂಜೇಶ್ವರ ಮಂಡಲದ ಪ್ರಧಾನ ಕಾರ್ಯದರ್ಶಿ ಯತಿರಾಜ್ ಶೆಟ್ಟಿ, ಮಂಡಲದ ಕಾರ್ಯದರ್ಶಿ ಶ್ವೇತಾ ಶೆಟ್ಟಿ, ಪ್ರಮುಖರಾದ ಸುಖಿರಾಜ್ ಶೆಟ್ಟಿ, ಸಂತೋಷ್ ದೈಯಿಗೊಳಿ, ವಿನೋದ್ ರಾಜ್ ಸಾಮಾಣೆ, ಉದಯ ಪೂಜಾರಿ ಮುಟ್ಟುಂಜ, ಲತೀಶ್, ಉಪಸ್ಥಿತರಿದ್ದರು.

ಕೆನರಾ ಕಾಲೇಜಿನಲ್ಲಿ ಯೂನಿಯನ್ ಡೇ ಸಂಭ್ರಮ: ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಇದರ 2026ನೇ ಸಾಲಿನ ಯೂನಿಯನ್ ಡೇ ಆಚರಣೆ ಕಾಲೇಜಿನ ಆವರಣದಲ್ಲಿ ಶನಿವಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಇನ್ಫೋಸಿಸ್ ಲಿಮಿಟೆಡ್ ಮೈಸೂರು ಸಂಸ್ಥೆಯ ಸೀನಿಯರ್ ಪ್ರಿನ್ಸಿಪಲ್ ಕನ್ಸಲ್ಟೆಂಟ್ (ಲರ್ನಿಂಗ್) ನಾರಾಯಣ ರಾವ್ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ವಿದ್ಯಾರ್ಥಿ ಸಂಘಟನೆಗಳು ಕಾಲೇಜು ಜೀವನದ ಹೃದಯವಾಗಿದ್ದು, ಅವು ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ, ಸಂಘಟನೆ ಸಾಮರ್ಥ್ಯ ಹಾಗೂ ನಿರ್ವಹಣಾ ಕೌಶಲಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆನರಾ ಹೈಸ್ಕೂಲ್ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿ ಎಂ. ರಂಗನಾಥ್ ಭಟ್ ಮಾತನಾಡಿ, ವಿದ್ಯಾರ್ಥಿ ಪ್ರತಿನಿಧಿತ್ವ ವ್ಯವಸ್ಥೆ ಕಾಲೇಜಿನ ಪ್ರಗತಿಗೆ ಪೂರಕವಾಗಿದ್ದು, ವಿದ್ಯಾರ್ಥಿಗಳ ಧ್ವನಿಯನ್ನು ಸಕಾರಾತ್ಮಕವಾಗಿ ವ್ಯಕ್ತಪಡಿಸುವ ವೇದಿಕೆಯಾಗಿದೆ ಎಂದು ಹೇಳಿದರು.

ಸಂಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಚಾರ್ಟರ್ಡ್ ಅಕೌಂಟೆಂಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಾಧಕರನ್ನು ಈ ವೇಳೆ ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾ ಸಂಯೋಜಕ ಡಾ. ಗಣೇಶ್ ಶೆಟ್ಟಿ ಅತಿಥಿ ಪರಿಚಯ ಮಾಡಿದರು. ಸಾಕ್ಷಿ ವಿದ್ಯಾರ್ಥಿ ಸಂಘದ ವಾರ್ಷಿಕ ವರದಿ ಮಂಡಿಸಿದರು. ಸಂಸ್ಥೆಯ ಸಂಚಾಲಕ ಸಿಎ ಜಗನ್ನಾಥ ಕಾಮತ್, ವ್ಯವಸ್ಥಾಪಕ ಶಿವಾನಂದ ಶೆಣೈ, ಆಡಳಿತಾಧಿಕಾರಿ ಡಾ. ದೀಪ್ತಿ ನಾಯಕ್, ಸಿಬ್ಬಂದಿ ಕ್ಷೇತ್ರಪಾಲನಾ ಸಂಯೋಜಕಿ ವಾಣಿ ಯು.ಎಸ್., ವಿದ್ಯಾರ್ಥಿ ಕ್ಷೇಮಪಾಲನಾ ಸಂಯೋಜಕ ಡಾ.ಗಣೇಶ್ ಶೆಟ್ಟಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಪ್ರಾಂಶುಪಾಲ ಡಾ. ಪ್ರೇಮಲತಾ ವಿ. ಸ್ವಾಗತಿಸಿ, ಸಾದ್ ಮೊಹಮ್ಮದ್ ವಂದಿಸಿ, ಊರ್ವಶಿ ನಿರೂಪಿಸಿದರು.

ಅಂಗರಗುಡ್ಡೆಯಲ್ಲಿ ರಾಮ ನವಮಿ



ಕಿನ್ನಿಗೋಳಿ: ಪಿತೃವಾಕ್ಯ ಪಾಲನೆಗಾಗಿ ಅಧಿಕಾರದ ಆಸೆ ಬಿಟ್ಟು ಕಾಡಿನೆಡೆಗೆ ನಡೆದ ಶ್ರೀ ರಾಮನ ತತ್ವ ಆದರ್ಶಗಳು ನಮಗೆ ಆದರ್ಶ ಎಂದು ಯುಗಪುರುಷದ ಭುವನಾಭಿರಾಮ ಉಡುಪ ಹೇಳಿದರು.

ಅವರು ಅಂಗರಗುಡ್ಡೆ ರಾಮ ನಗರದ ಶ್ರೀರಾಮ ಮಂದಿರದಲ್ಲಿ 39ನೇ ವರ್ಷದ ಭಜನಾ ಮಂಗಲೋತ್ಸವ ಶ್ರೀ ರಾಮ ನವಮಿಯ ಧಾರ್ಮಿಕ ಸಭೆಯಲ್ಲಿ ಮಾತನಾಡಿ, ಅಣ್ಣನ ಜೊತೆಗೆ ಕಾಡಿಗೆ ಸಾಗಿದ ಲಕ್ಷ್ಮಣ, ರಾಮಪಾದುಕೆಯನ್ನೇ ಪೀಠದಲ್ಲಿಟ್ಟು ರಾಜ್ಯವಾಳಿದ ಭರತ, ಹಾಗೂ ಶತ್ರುಘ್ನರು ನಮಗೆ ಸಹೋದರರ ಬಂಧುತ್ವದ ಪಾಠ ಹೇಳಿಕೊಡುತ್ತಾರೆ. ಅದನ್ನು ಪಾಲಿಸುವ ಗುಣ ನಮ್ಮಲ್ಲಿ ಬರಬೇಕು. ರಾಮಾಯಣದ ಆದರ್ಶ ಪಾತ್ರಗಳು ಕೇವಲ ಭಾಷಣಕ್ಕಷ್ಟೇ ಸೀಮಿತವಾಗದೆ ನಮ್ಮ ಬದುಕಿನಲ್ಲೂ ಅಳವಡಿಸಿಕೊಳ್ಳಬೇಕು ಎಂದ ಅವರು, ಅಂಗರಗುಡ್ಡೆ ಶ್ರೀ ರಾಮ ಮಂದಿರದಲ್ಲಿ ಧಾರ್ಮಿಕ ಜಾಗೃತಿಯ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಬಿಜೆಪಿಯ ಮುಖಂಡ ಈಶ್ವರ್ ಕಟೀಲ್, ಉದ್ಯಮಿ ಶ್ರೀಕಾಂತ್ ಶೆಟ್ಟಿ ಕೆಂಚನಕೆರೆ, ಮಾಜಿ ತಾ.ಪಂ. ಸದಸ್ಯ ದಿವಾಕರ್ ಕರ್ಕೇರ, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ಜಿ.ಪಂ. ಮಾಜಿ ಉಪಾಧ್ಯಕ್ಷೆ ಕಸ್ತೂರಿ ಪಂಜ, ಉದ್ಯಮಿ ಜಿಕೆ ಕೆಂಚನಕೆರೆ, ಗಣೇಶ್ ಶೆಟ್ಟಿಗಾರ್ ಬದ್ಲಾಪುರ ಮುಂಬೈ, ಹಿಂದೂ ರುದ್ರ ಭೂಮಿ ಸಮಿತಿಯ ಕೃಷ್ಣ ಶೆಟ್ಟಿಗಾರ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಗೋಪಾಲ ಕೃಷ್ಣ ಪುನರೂರು, ಪ್ರಣೀಕ್ ಕಿನ್ನಿಗೋಳಿ, ಮಂದಿರದ ಅಧ್ಯಕ್ಷ ಸಂಪತ್ ಕುಮಾರ್, ಮಂದಿರದ ಅರ್ಚಕ ಪುರುಷೋತ್ತಮ್ ದಾಸ್, ಮಹಿಳಾ ಮಂಡಲದ ಅಧ್ಯಕ್ಷ ಅನಿತಾ ಗಿರೀಶ್ ಶೆಟ್ಟಿ ಇದ್ದರು. ಸತೀಶ್ ಪೂಜಾರಿ ನಿರೂಪಿಸಿದರು. ಜೀವನ್ ಶೆಟ್ಟಿ ಅಂಗರಗುಡ್ಡೆ ಸ್ವಾಗತಿಸಿ, ಸುಧೀರ್ ಶೆಟ್ಟಿ ವರದಿ ವಾಚಿಸಿದರು. ಸುಕೇಶ್ ಸನೀಲ್ ವಂದಿಸಿದರು.

ಕಡಬ, ಮುಲ್ಕಿ ತಾಲೂಕಿನ ವಿವಿಧ ಚರ್ಚ್‌ಗಳಲ್ಲಿ ಗರಿಗಳ ಭಾನುವಾರ: ವಿಶೇಷ ಪ್ರಾರ್ಥನೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಹಾಗೂ ಮುಲ್ಕಿ ತಾಲೂಕಿನ ವಿವಿಧ ಚರ್ಚ್‌ಗಳಲ್ಲಿ ಗರಿಗಳ ರವಿವಾರ ಕಾರ್ಯಕ್ರಮ ನಡೆಯಿತು.

ಕಡಬ ತಾಲೂಕು

ಕಡಬ ತಾಲೂಕಿನಾದ್ಯಂತ ಕ್ರೈಸ್ತ ದೇವಾಲಯಗಳಲ್ಲಿ ಕ್ರೈಸ್ತ ಬಂಧುಗಳು ಗರಿಗಳ ಭಾನುವಾರ ಆಚರಿಸಿ ಸಂಭ್ರಮಿಸಿದರು. ಕಡಬ ಪರಿಸರದ ಕೋಡಿಂಬಾಳ, ಕುಂತೂರು, ಕುಟ್ರುಪ್ಪಾಡಿ, ಪದವು, ನೆಟ್ಟಣ, ವಿಮಲಗಿರಿ, ಉಳಿಪ್ಪು, ಅಡ್ಡಗದ್ದೆ, ಕರ್ಮಾಯಿ, ನೂಜಿಬಾಳ್ತಿಲ ಮುಂತಾದಡೆ ಚರ್ಚುಗಳಲ್ಲಿ ಜರಗಿದ ಗರಿಗಳ ರವಿವಾರ ಕಾರ್ಯಕ್ರಮದಲ್ಲಿ ಜನರು ಭಕ್ತಿಭಾವದಿಂದ ಭಾಗವಹಿಸಿದರು.

ಕಡಬದ ಸೈಂಟ್ ಜೋಕಿಮ್ಸ್ ಚರ್ಚ್‌ನಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಚರ್ಚ್‌ನ ಧರ್ಮಗುರು ಪ್ರಕಾಶ್ ಪೌಲ್ ಡಿ'ಸೋಜ ಅವರು ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ಸೈಂಟ್ ಜೋಕಿಮ್ಸ್ ವಾಣಿಜ್ಯ ಸಂಕೀರ್ಣದ ಬಳಿ ಸೇರಿದ ಭಕ್ತಾಧಿಗಳು ಶುದ್ಧೀಕರಿಸಿದ ತೆಂಗಿನ ಗರಿಗಳನ್ನು ಚರ್ಚ್‌ಗೆ ಮೆರವಣಿಗೆಯಲ್ಲಿ ಕೊಂಡೊಯ್ದರು. ಬಳಿಕ ಪೂಜಿಸಲ್ಪಟ್ಟ ಗರಿಗಳನ್ನು ಭಕ್ತಾಧಿ ಗಳಿಗೆ ವಿತರಿಸಲಾಯಿತು. ಪವಿತ್ರ ವಾರಕ್ಕೆ ಪೂರ್ವತಯಾರಿಯಾಗಿ ಶನಿವಾರ ಸಂಜೆ ತೈಜೆ ಪ್ರಾರ್ಥನೆಯನ್ನು ಗಾಯನ ತಂಡದ ಮುಂದಾಳುತ್ವದಲ್ಲಿ ನಡೆಸಲಾಯಿತು.


ಕಡಬ ತಾಲೂಕಿನಲ್ಲಿ ಹಬ್ಬದ ಸಂಭ್ರಮ

ಮುಲ್ಕಿಯಲ್ಲಿ ಆಚರಣೆ

ಏಸುಕ್ರಿಸ್ತರು ಸಮಸ್ತ ಮಾನವಕುಲದ ಉದ್ದಾರಕ್ಕಾಗಿ ಮಾಡಿದ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಂಡು ಅವರ ತತ್ವ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೆಥೋಲಿಕ್ ಚರ್ಚು ಧರ್ಮಗುರು ಫಾ. ಆಂತೋನಿ ಶೇರಾ ಹೇಳಿದರು.

ಗುಡ್‌ಫ್ರೈಡೇ ಪೂರ್ವಭಾವಿಯಾಗಿ ಜೆರೆಸುಲೆಮ್ ಪಟ್ಟಣ ಪ್ರವೇಶಿದ ಏಸುಕ್ರಿಸ್ತರನ್ನು ನಾಗರೀಕರು ಈಚಲ ಗರಿಗಳ ಮೂಲಕ ಸ್ವಾಗತಿಸಿದ ದಿನವನ್ನು ನೆನಪಿಸುವ ಗರಿಗಳ ಭಾನುವಾರ (ಪಾಮ್ ಸಂಡೇ) ಆಚರಣೆ ಭಾನುವಾರ ನಡೆಯಿತು.

ಮುಲ್ಕಿ ಕೆಥೋಲಿಕ್ ಚರ್ಚ್‌ನ ಧರ್ಮಗುರು ಫಾ. ಆಂತೋನಿ ಶೇರಾ ಆಶೀರ್ವಚನ ನೀಡಿದರು. ಡಿವೈನ್ ಕಾಲ್‌ಸೆಂಟರ್ ನಿರ್ದೇಶಕ ಫಾ. ಮ್ಯಾಕ್ಸಿಮ್ ಪಿಂಟೋ ಎಸ್‌ವಿಡಿ, ಚರ್ಚ್‌ನ ಪಾಲನಾ ಸಮಿತಿ ಉಪಾಧ್ಯಕ್ಷ ಜೇಮ್ಸ್ ಡಿಸೋಜ, ಕಾರ್ಯದರ್ಶಿ ಸುರೇಶ್ ಪಿರೇರಾ, ರೋಲ್ಫಿ ಡಿಕೋಸ್ಟಾ, ವಾರ್ಡುಗಳ ಗುರಿಕಾರರು, ಧರ್ಮ ಸಭಾ ಸದಸ್ಯರು ಹಾಜರಿದ್ದರು.

ಸುಂಟಿಕೊಪ್ಪ: ಕ್ರೈಸ್ತ ಬಾಂಧವರಿಂದ ಗರಿಗಳ ಭಾನುವಾರ ಆಚರಣೆ

ಸುಂಟಿಕೊಪ್ಪ: ಕ್ರೈಸ್ತ ಬಾಂಧವರ ಪವಿತ್ರ ಗರಿಗಳ ಭಾನುವಾರದ ಅಂಗವಾಗಿ ಜಿಲ್ಲೆಯಾದ್ಯಂತ ಕ್ರೈಸ್ತ ದೇವಾಲಯಗಳಲ್ಲಿ ಗರಿಗಳ ಭಾನುವಾರವನ್ನು ವಿಶೇಷ ಪ್ರಾರ್ಥನೆಯೊಂದಿಗೆ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಅದರಂತೆ ಇಲ್ಲಿನ ಸಂತ ಅಂತೋಣಿಯವರ ದೇವಾಲಯದಲ್ಲೂ ಭಕ್ತಾದಿಗಳು ಗರಿಗಳ ಭಾನುವಾರವನ್ನು ಆಚರಿಸಿದರು. ದಿನದ ಅಂಗವಾಗಿ ಇಲ್ಲಿನ ಸಂತ ಮೇರಿ ಶಾಲಾ ಆವರಣದಲ್ಲಿ ತೆಂಗಿನ ಗರಿಗಳನ್ನು ಭಕ್ತರಿಗೆ ವಿತರಿಸಲಾಯಿತು. ಸಂತ ಅಂತೋಣಿ ದೇವಾಲಯದ ಧರ್ಮಗುರು ರೆ.ಫಾ. ವಿಜಯಕುಮಾರ್ ಅವರು ಸಂತ ಮೇರಿ ಶಾಲಾ ಆವರಣದಲ್ಲಿ ತೆಂಗಿನ ಗರಿಗಳನ್ನು ಆಶೀರ್ವಚಿಸಿ ನಂತರ ಕ್ರೈಸ್ತ ಬಾಂಧವರಿಗೆ ವಿತರಿಸಿದರು. ನಂತರ ಶಾಲ ಆವರಣದಿಂದ ದೇವಾಲಯದವರೆಗೆ ಮೆರವಣಿಗೆಯಲ್ಲಿ ಆಗಮಿಸಿದ ಭಕ್ತಾದಿಗಳು ದೇವಾಲಯದಲ್ಲಿ ವಿಶೇಷ ಗಾಯನ ಬಲಿಪೂಜೆ ಹಾಗೂ ಪ್ರಬೋಧನೆಯನ್ನು ಅರ್ಪಿಸಿದರು. ಇದರೊಂದಿಗೆ ಪವಿತ್ರ ವಾರಕ್ಕೆ ಮುನ್ನುಡಿ ಇಡಲಾಯಿತು. ಈ ಸಂದರ್ಭ ಸಂತ ಕ್ಲಾರ ಕನ್ಯಾಸ್ತ್ರೀ ಮಠದ ಕನ್ಯಾಸ್ತ್ರೀಯರು ಹಾಗೂ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಗರಿಗಳ ಭಾನುವಾರದ ಬಲಿಪೂಜೆ, ಪ್ರಬೋಧನೆ ಮತ್ತು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.



ಸುತ್ತಮುತ್ತ

ಕಲ್ಲಟ್ರ ಮಾಹಿನ್ ಹಾಜಿ: ಇಂದಿನ ಪ್ರವಾಸ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಮಾ.30ರಂದು ಬೆಳಿಗ್ಗೆ 7 ಗಂಟೆಗೆ ವಿದ್ಯಾನಗರ ಜಂಕ್ಷನ್‌ನಿಂದ ನಗರಸಭಾ ಕ್ರೀಡಾಂಗಣದ ವರೆಗೆ ಯುಡಿಎಫ್ ಮತ್ತು ಯುಡಿಎಸ್‌ಎಫ್ ಜಂಟಿಯಾಗಿ ಆಯೋಜಿಸಿರುವ ಬೆಳಗಿನ ನಡಿಗೆ ಮತ್ತು ಬೆಳಗ್ಗೆ 11 ಗಂಟೆಗೆ ನಗರಸಭೆಯ ಮಹಿಳಾ ಭವನದ ಸಭಾಂಗಣದಲ್ಲಿ ನಡೆಯಲಿರುವ ಜನಪ್ರತಿನಿಧಿಗಳ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ ಕಾಸರಗೋಡು ಸರಕಾರಿ ಕಾಲೇಜು ಮತ್ತು ಕಾಸರಗೋಡು ಸರಕಾರಿ ಐಟಿಐ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲಿದ್ದಾರೆ.

ಏ.8ರಿಂದ ಎಡನೀರಿನಲ್ಲಿ ಕನ್ನಡ ಸಂಸ್ಕೃತಿ ಶಿಬಿರ

ಕಾಸರಗೋಡು: ಭೂಮಿಕಾ ಪ್ರತಿಷ್ಠಾನ ಉಡುವುಮೂಲೆ ಎಡನೀರು ಇದರ ಆಶ್ರಯದಲ್ಲಿ ಎಡನೀರು ಶ್ರೀ ಮಠದ ಆವರಣದಲ್ಲಿ 14ನೇ ವರ್ಷದ ಕನ್ನಡ ಸಂಸ್ಕೃತಿ ಶಿಬಿರ – 2026 ಕಾರ್ಯಕ್ರಮ ಏ.8 ರಿಂದ 12ರ ವರೆಗೆ ಆಯೋಜಿಸಲಾಗಿದೆ.

ಏ.8ರಂದು ಬೆಳಿಗ್ಗೆ 9.30ಕ್ಕೆ ಭವಾನಿ ಶಂಕರ ಎಂ. ಉದ್ಘಾಟಿಸುವರು. ನಿರ್ವಹಣಾ ಕೌಶಲ್ಯದೊಂದಿಗೆ ವ್ಯಕ್ತಿತ್ವ ವಿಕಾಸದ ಬಗ್ಗೆ ನಿರ್ಮಲ್ ಕುಮಾರ್ ಕಾರಡ್ಕ ಮಾಹಿತಿ ನೀಡುವರು. ಏ.9 ರಂದು ಬೆಳಿಗ್ಗೆ 9.30 ರಿಂದ ಸುಂದರ ಹಸಿರು ನಮ್ಮೆಯ ಉಸಿರು ವಿಷಯದ ಬಗ್ಗೆ ಚೇವಾರು ವಿನೋದ ತರಗತಿ ತರಬೇತಿ ನೀಡುವರು. ಏ.10 ರಂದು ರಂಗೋಲ್ಲಾಸ ವಿಷಯದಲ್ಲಿ ಸದಾಶಿವ ಬಾಲಮಿತ್ರ ತರಬೇತಿ ನೀಡುವರು. ಏ.11 ರಂದು ಹಾಡೋಣ, ನಲಿಯೋಣ, ಕಲಿಯೋಣ ವಿಷಯದಲ್ಲಿ ಕಿಶೋರ್ ಪೆರ್ಲ ತರಬೇತಿ ನೀಡುವರು.

ಏ.12 ರಂದು ಬೆಳಗ್ಗೆ 9.30ಕ್ಕೆ ಆಡೋಣ ಕುಣಿಯೋಣ – ಕಲಿಕೆಯ ಹೊಸ ವಿಧಾನ ಕಾರ್ಯಾಗಾರದಲ್ಲಿ ಲತಾ ಪ್ರಕಾಶ್ ರಾವ್ ಬಹುಮನ ಬೆಳ್ಳೂರಡ್ಕ ಅವರು ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳುವರು. ಮಧ್ಯಾಹ್ನ 2 ರಿಂದ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ಕಾಸರಗೋಡು ತಂಡದವರಿಂದ ಲಂಕಾ ದಹನ ಬೊಂಬೆಯಾಟ ಪ್ರದರ್ಶನಗೊಳ್ಳಲಿದೆ.

ಬಳಿಕ ನಡೆಯುವ ಸಮಾರೋಪದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಉಪಸ್ಥಿತರಿದ್ದು, ಹೊಂಗಿರಣ, ಮೆಲು ಹೆಜ್ಜೆ ಕೃತಿ ಲೋಕಾರ್ಪಣೆಗೊಳಿಸುವರು. ರ್‍ಯಾಂಕ್ ವಿಜೇತೆ ವೈದೇಹಿ ಕೆ. ಅವರನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಕಸಾಪ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಅತಿಥಿಯಾಗಿರುವರೆಂದು ಭೂಮಿಕಾ ಪ್ರತಿಷ್ಠಾನ ಅಧ್ಯಕ್ಷೆ, ವಿದುಷಿ ಅನುಪಮಾ ರಾಘವೇಂದ್ರ ಉಡುಪುಮೂಲೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಕಾಮಗಾರಿ ವಿಳಂಬ: ಪ್ರತಿಭಟನಾ ಸಂಗಮ

ಕಾಸರಗೋಡು: ವಿದ್ಯಾನಗರ ಸಮೀಪದ ಎಸ್‌ಪಿ ನಗರ – ಹಿದಾಯತ್‌ನಗರ – ಕೋಪ್ಪ ಪ್ರದೇಶದ ರಸ್ತೆ ಅಭಿವೃದ್ಧಿ ಕಾಮಗಾರಿ ತಿಂಗಳುಗಳಿಂದ ವಿಳಂಬಗೊಳ್ಳುತ್ತಿದೆ. ಇದರಿಂದ ನಾಗರಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಪ್ರತಿಭಟಿಸಿ ನಾಗರಿಕರಿಂದ ಪ್ರತಿಭಟನಾ ಸಂಗಮ ಕಾರ್ಯಕ್ರಮ ಜರಗಿತು. ತುರ್ತು ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು. ಚುನಾವಣೆಗಿಂತ ಮೊದಲು ಡಾಮರೀಕರಣ ಕಾಮಗಾರಿ ಆರಂಭಿಸದಿದ್ದಲ್ಲಿ ಮತದಾನ ಬಹಿಷ್ಕರಿಸಲು ನಿರ್ಧರಿಸಲಾಯಿತು. ಪರಿಸರದ ನಿವಾಸಿಗಳಾದ ಬಿ.ಟಿ.ಬಶೀರ್, ಎಂ.ಮುಹಮ್ಮದ್ ನವಾಸ್ ಮುಂತಾದವರು ಭಾಗವಹಿಸಿದ್ದರು.

ಸಿಪಿಎಂ ಪ್ರತಿಭಟನೆ

ಪೆರ್ಲ: ಎಣ್ಮಕಜೆ ಗ್ರಾ.ಪಂ. ಕಚೇರಿಯಿಂದ ಕಾನೂನು ಉಲ್ಲಂಘಿಸಿ ಸಾರ್ವಜನಿಕ ವಸ್ತುಗಳನ್ನು ಅಕ್ರಮವಾಗಿ ಹೊರ ಸಾಗಿಸಿರುವುದರ ವಿರುದ್ಧ ಸಿಪಿಎಂ, ಡಿವೈಎಫ್‌ಐ ಎಣ್ಮಕಜೆ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಪಂ. ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಸಿಪಿಎಂ ಕುಂಬಳೆ ಏರಿಯಾ ಸಮಿತಿ ಸದಸ್ಯ ನಾಸಿರ್ ಮಲಂಗರೆ ಉದ್ಘಾಟಿಸಿ ಮಾತನಾಡಿದರು. ಡಿವೈಎಫ್‌ಐ ಬ್ಲಾಕ್ ಸಮಿತಿ ಅಧ್ಯಕ್ಷ ಮನೋಜ್ ಮಣಿಯಂಪಾರೆ ಅಧ್ಯಕ್ಷತೆ ವಹಿಸಿದ್ದರು. ಸಿಪಿಎಂ ಸ್ಥಳೀಯ ಸಮಿತಿ ಸದಸ್ಯ ರಾಮಕೃಷ್ಣ ರೈ ಕುದ್ವ, ಡಿವೈಎಫ್‌ಐ ಬ್ಲಾಕ್ ಕಾರ್ಯದರ್ಶಿ ವಿಶ್ವರಾಜ್ ಮತ್ತಿತರರಿದ್ದರು.

ವಿಚಾರ ಸಂಕಿರಣ

ಪೆರ್ಲ: ಪೆರ್ಲ ನಾಲಂದ ಕಾಲೇಜಿನಲ್ಲಿ ಹಣಕಾಸು ಜಾಗೃತಿ ಮತ್ತು ಗ್ರಾಹಕ ತರಬೇತಿ ವಿಚಾರ ಸಂಕಿರಣ ಜರಗಿತು. ಕ್ಯಾಲಿಕಟ್ ವಿವಿ ಡಾ.ವಿಜಯಕುಮಾರ್ ವಿ. ಅವರು ಹಣಕಾಸು ಜ್ಞಾನ, ಷೇರು ಮಾರುಕಟ್ಟೆ, ಮ್ಯೂಚುಯಲ್ ಫಂಡ್ಸ್ ಮತ್ತು ವಿಮಾ ಪಾಲಿಸಿ ಇತ್ಯಾದಿ ವಿಷಯಗಳ ಕುರಿತು ತರಗತಿ ನಡೆಸಿದರು. ಪ್ರಾಂಶುಪಾಲ ಶಂಕರ ಕೆ. ಐಕ್ಯೂಎ ಸಂಯೋಜಕಿ ನಯನಾ ಇದ್ದರು. ಪವನ್‌ರಾಜ್ ಸ್ವಾಗತಿಸಿದರು.

ಕಾಸರಗೋಡು ಜಿಲ್ಲೆಯ ವಿಧಾನಸಭಾ ಚುನಾವಣೆ | ಮತದಾನ ಕರ್ತವ್ಯಕ್ಕೆ ನೇಮಕಾತಿ ಪ್ರಕ್ರಿಯೆ

ಚುನಾವಣಾ ಅಧಿಕಾರಿಗಳ 2ನೇ ಹಂತದ ರ್‍ಯಾಂಡಮೈಸೇಷನ್

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಗೆ ಎರಡನೇ ಹಂತದ ಮತಗಟ್ಟೆ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಹಿನ್ನೆಲೆಯಲ್ಲಿ ರ್‍ಯಾಂಡಮೈಸೇಷನ್ ಭಾನುವಾರ ಜರಗಿತು. ಅಧಿಕಾರಿಗಳನ್ನು ಮತ್ತು ನೌಕರರನ್ನು ಶೇಕಡಾ 20ರಷ್ಟು ಮೀಸಲು ಸೇರಿದಂತೆ ಮತದಾನ ಕರ್ತವ್ಯಕ್ಕೆ ನಿಯೋಜಿಸಲಾಯಿತು.



ಎರಡನೇ ಹಂತದ ರ್‍ಯಾಂಡಮೈಸೇಷನ್ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ನೇತೃತ್ವದಲ್ಲಿ ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಸಾಮಾನ್ಯ ವೀಕ್ಷಕರಾದ ವಿಜಯ್ ಬಾಲಕೃಷ್ಣ ವಾಘ್ಮಾರೆ ಮತ್ತು ಧ್ಯಾನೇಶ್ವರ ಕೊಂಡಿ ಬಹು ಕಿಲಾರಿ ಸಮ್ಮುಖದಲ್ಲಿ ನಡೆಯಿತು.

ಮಂಜೇಶ್ವರ ಕ್ಷೇತ್ರದ 230 ಮತಗಟ್ಟೆಗಳಿಗೆ 276 ಪ್ರಿಸೈಡಿಂಗ್ ಆಫೀಸರ್‌ಗಳು, 276 ಪ್ರಥಮ ಮತಗಟ್ಟೆ ಅಧಿಕಾರಿಗಳು ಮತ್ತು 552 ಮತಗಟ್ಟೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಕಾಸರಗೋಡು ಕ್ಷೇತ್ರದ 219 ಮತಗಟ್ಟೆಗಳಿಗೆ 263 ಪ್ರಿಸೈಡಿಂಗ್ ಆಫೀಸರ್‌ಗಳು, 263 ಪ್ರಥಮ ಮತಗಟ್ಟೆ ಅಧಿಕಾರಿಗಳು ಮತ್ತು 526 ಮತಗಟ್ಟೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಉದುಮ ಕ್ಷೇತ್ರದ 238 ಮತಗಟ್ಟೆಗಳಿಗೆ 286 ಪ್ರಿಸೈಡಿಂಗ್ ಆಫೀಸರ್‌ಗಳು, 286 ಪ್ರಥಮ ಮತಗಟ್ಟೆ ಅಧಿಕಾರಿಗಳು ಮತ್ತು 572 ಮತಗಟ್ಟೆ ಅಧಿಕಾರಿಗಳನ್ನು ಆರಿಸಲಾಯಿತು.

ಕಾಞಂಗಾಡು ಕ್ಷೇತ್ರದ 239 ಮತಗಟ್ಟೆಗಳಿಗೆ 287 ಪ್ರಿಸೈಡಿಂಗ್ ಆಫೀಸರ್‌ಗಳು, 287 ಪ್ರಥಮ ಮತಗಟ್ಟೆ ಅಧಿಕಾರಿಗಳು ಮತ್ತು 574 ಮತಗಟ್ಟೆ ಅಧಿಕಾರಿಗಳನ್ನು ನೇಮಿಸಲಾಗಿದೆ. ತೃಕ್ಕರೀಪ್ಪುರ ಕ್ಷೇತ್ರದಲ್ಲಿ 220 ಮತಗಟ್ಟೆಗಳಿಗೆ 264 ಪ್ರಿಸೈಡಿಂಗ್ ಆಫೀಸರ್‌ಗಳು, 264 ಪ್ರಥಮ ಮತಗಟ್ಟೆ ಅಧಿಕಾರಿಗಳು, 528 ಮತಗಟ್ಟೆ ಅಧಿಕಾರಿಗಳ ನೇಮಕ ಮಾಡಲಾಯಿತು.

ಮತದಾನ ಕರ್ತವ್ಯಕ್ಕೆ ನಿಯೋಜಿಸಲಾದ ಎಲ್ಲಾ ಅಧಿಕಾರಿಗಳು ಮತ್ತು ನೌಕರರು 2ನೇ ಹಂತದ ತರಬೇತಿಗೆ ಮುಂಚಿತವಾಗಿ ಚುನಾವಣಾ ಕರ್ತವ್ಯಕ್ಕೆ ಸಂಬಂಧಿಸಿದ ಗುರುತಿನ ಚೀಟಿಗಾಗಿ ಆರ್ಡರ್ ಸಾಫ್ಟ್‌ವೇರ್‌ನಲ್ಲಿ ತಮ್ಮ ಫೋಟೋ, ಮತದಾರರ ಗುರುತಿನ ಚೀಟಿ ಮತ್ತು ಬ್ಯಾಂಕ್ ವಿವರಗಳನ್ನು ಅಪ್‌ಲೋಡ್ ಮಾಡಬೇಕಾಗುತ್ತದೆ.

ರ್‍ಯಾಂಡಮೈಸೇಷನ್ ಸಭೆಯಲ್ಲಿ ಎಡಿಎಂ ಕೆ.ವಿ. ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್, ಎನ್‌ಐಸಿ ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಮತ್ತು ಕಲೆಕ್ಟರೇಟ್ ಚುನಾವಣಾ ಇಲಾಖೆಯ ಜೂನಿಯರ್ ಸೂಪರಿಂಟೆಂಡೆಂಟ್ ಎ.ರಾಜೀವನ್ ಮುಂತಾದವರು ಭಾಗವಹಿಸಿದ್ದರು.

ಏ.1ರಿಂದ ಅಂಚೆ ಮತದಾನ

ಅಂಚೆ ಮತಪತ್ರಗಳಿಗೆ ಅರ್ಜಿ ಸಲ್ಲಿಸಿದವರು ಏಪ್ರಿಲ್ 1 ರಿಂದ ಆಯಾ ತರಬೇತಿ ಕೇಂದ್ರದಲ್ಲಿರುವ ಮತದಾರರ ಸೌಲಭ್ಯ ಕೇಂದ್ರದಲ್ಲಿ ಮತ ಚಲಾಯಿಸಬಹುದು. ಮತದಾರರ ಸೌಲಭ್ಯ ಕೇಂದ್ರವು ಘೋಷಣೆ ದೃಢೀಕರಿಸಲು ಗೆಜೆಟೆಡ್ ಅಧಿಕಾರಿಯ ಸೇವೆಗಳು, ಮತಗಟ್ಟೆ ಅಧಿಕಾರಿಯ ಸೇವೆಗಳು, ವಿಡಿಯೋಗ್ರಫಿ ಮತ್ತು ಅಭ್ಯರ್ಥಿಗಳ ಏಜೆಂಟ್‌ಗಳಿಗೆ ಆಸನ ವ್ಯವಸ್ಥೆ ಮುಂತಾದ ಸೌಲಭ್ಯ ಹೊಂದಿರುತ್ತದೆ.

ಇಂದಿನಿಂದ ಚುನಾವಣಾ ಅಧಿಕಾರಿಗಳಿಗೆ ಎರಡನೇ ಹಂತದ ತರಬೇತಿ

ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಎರಡನೇ ಹಂತದ ತರಬೇತಿ ಕಾರ್ಯಕ್ರಮ ಮಾ.30, ಏಪ್ರಿಲ್ 1, 4 ರಂದು ನಡೆಯಲಿದೆ. ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳಲ್ಲಿ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾದ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಜರಗಲಿದೆ.

ಉದುಮ ಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾದ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನಾಯನ್ಮಾರಮೂಲೆ ತನ್‌ಬಿಹುಲ್ ಇಸ್ಲಾಂ ಎಚ್‌ಎಸ್‌ಎಸ್‌ನಲ್ಲಿ, ಕಾಞಂಗಾಡು ಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾದ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾಞಂಗಾಡು ಎಸ್‌ಎನ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮತ್ತು ತೃಕ್ಕರೀಪ್ಪುರ ಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯಗಳಿಗೆ ನಿಯೋಜಿಸಲಾದ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ತೃಕ್ಕರೀಪ್ಪುರ ಇ.ಕೆ.ನಾಯನಾರ್ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನೆರವೇರಲಿದೆ.

ವಿಧಾನಸಭಾ ಚುನಾವಣೆ: ವಲಯ ಮಟ್ಟದ ಅಧಿಕಾರಿಗಳಿಗೆ ತರಬೇತಿ



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ತೃಕ್ಕರೀಪ್ಪುರ, ಕಾಞಂಗಾಡು ವಿಧಾನಸಭಾ ಕ್ಷೇತ್ರಗಳ ವಲಯ ಮಟ್ಟದ ಅಧಿಕಾರಿಗಳಿಗೆ ಭಾನುವಾರ ತರಬೇತಿ ನೀಡಲಾಯಿತು. ಮತಗಟ್ಟೆಗಳಲ್ಲಿ ಒದಗಿಸಲಾದ ಸೌಲಭ್ಯ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ವಿವರಿಸಲಾಯಿತು. ಉದುಮ, ಕಾಞಂಗಾಡು ಮತ್ತು ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ಸಂಬಂಧಿಸಿ ಹೊಸದುರ್ಗ ತಾಲೂಕು ಕಚೇರಿಯಲ್ಲಿ ಸೆಕ್ಟರಲ್ ಅಧಿಕಾರಿಗಳೊಂದಿಗೆ ವೀಕ್ಷಕ ಜ್ಞಾನೇಶ್ವರ ಕೊಂಡಿಬಾಹು ಕಿಲಾರಿ ಮಾತನಾಡಿದರು.

ಮನೆಯಿಂದಲೇ ಮತದಾನ

ಚುನಾವಣಾ ಅಧಿಕಾರಿಗಳು ಮತದಾರರ ಮನೆಗಳಿಗೆ ಭೇಟಿ ನೀಡಿ ಮತಗಳನ್ನು ನೋಂದಾಯಿಸುವ ಮನೆಯಲ್ಲೇ ಮತ ಚಲಾಯಿಸಿ ಎಂಬ ಸೇವೆಗಾಗಿ ಕಾಸರಗೋಡು ಜಿಲ್ಲೆಯಲ್ಲಿ 6,813 ಜನರು ತಮ್ಮ ಮನೆಗಳಿಂದಲೇ ಮತಗಳನ್ನು ನೋಂದಾಯಿಸಿಕೊಳ್ಳಲಿದ್ದಾರೆ. ದಿವ್ಯಾಂಗರು, 85 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮನೆಯಿಂದಲೇ ಮತಗಳನ್ನು ನೋಂದಾಯಿಸುವ ಅವಕಾಶ ಒದಗಿಸಲಾಗು ವುದು. ಮತಗಟ್ಟೆ ಅಧಿಕಾರಿಗಳು ಮತದಾರರ ಮನೆಗಳಿಗೆ ಭೇಟಿ ನೀಡಿ ಮತ ಚಲಾವಣೆಗೆ ವ್ಯವಸ್ಥೆ ಕೈಗೊಳ್ಳುವರು.

ಈ ಸಂದರ್ಭ ಇಬ್ಬರು ಮತಗಟ್ಟೆ ಅಧಿಕಾರಿಗಳು, ಒಬ್ಬ ಮೈಕ್ರೋ ವೀಕ್ಷಕ, ಒಬ್ಬ ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಅಧಿಕಾರಿ, ಒಬ್ಬ ಬೂತ್ ಮಟ್ಟದ ಅಧಿಕಾರಿ ಒಳಗೊಂಡ ತಂಡ ಆಗಮಿಸಲಿದೆ. ಮತಗಟ್ಟೆ ಅಧಿಕಾರಿಗಳು ಜಿಪಿಎಸ್ ಅಳವಡಿಸಿದ ವಾಹನದಲ್ಲಿ ಮನೆಗಳಿಗೆ ತೆರಳಲಿದ್ದಾರೆ. ಮನೆಯಿಂದ ಮತದಾನ ಮಾಡಲು ಮಾರ್ಗ ನಕ್ಷೆಯನ್ನು ಸಿದ್ಧಪಡಿಸಿ ಸಂಬಂಧಿತ ಅಭ್ಯರ್ಥಿಗಳು ಮತ್ತು ಅವರ ಬೂತ್ ಹೆಡ್ ಏಜೆಂಟ್‌ಗಳಿಗೆ ಭೇಟಿ ಬಗ್ಗೆ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಕುಂಬಳೆ ಬಸ್ ನಿಲ್ದಾಣದಲ್ಲಿ ಕಟ್ಟಿ ನಿಂತ ಮಳೆನೀರು: ಸಂಕಷ್ಟದಲ್ಲಿ ಪ್ರಯಾಣಿಕರು



ಕುಂಬಳೆ: ಬಿಸಿಲಿನ ಬೇಗೆಯಿಂದ ಬಳಲುತ್ತಿದ್ದ ಜನತೆಗೆ ಶನಿವಾರ ಸುರಿದ ಬೇಸಿಗೆಯ ಮಳೆ ಅಲ್ಪ ತಂಪು ಎರಚಿದರೂ ಕುಂಬಳೆ ಬಸ್ ನಿಲ್ದಾಣದಲ್ಲಿ ಮಾತ್ರ ನೀರು ಕಟ್ಟಿ ನಿಂತು ಸಮಸ್ಯೆ ಸೃಷ್ಟಿಸಿದೆ. ಕುಂಬಳೆ ಪೇಟೆಯಲ್ಲಿ ಬದಿಯಡ್ಕ, ಮುಳ್ಳೇರಿಯ, ಪೇರಾಲ್ ಕಣ್ಣೂರು ಭಾಗಗಳಿಗೆ ತೆರಳುವ ಬಸ್ ತಂಗುದಾಣದ ಬಳಿಯಲ್ಲೇ ನೀರು ಕಟ್ಟಿ ನಿಂತ ಕಾರಣ ಬಸ್‌ಗಳಿಗೆ ಜನರನ್ನು ಇಳಿಸಲು, ಹತ್ತಿಸಲು ಸಮಸ್ಯೆ ತಲೆದೋರಿತು.

ರಸ್ತೆ ನಿರ್ಮಾಣದ ವೇಳೆ ಕೈಗೊಂಡ ಅವೈಜ್ಞಾನಿಕ ಚರಂಡಿಯಿಂದ ಮಳೆ ನೀರು ಕಟ್ಟಿ ನಿಲ್ಲುತ್ತಿರುವುದಾಗಿ ಸ್ಥಳೀಯರು ದೂರಿದ್ದಾರೆ. ಒಂದು ಮಳೆಗೆ ಈ ರೀತಿ ನೀರು ಕಟ್ಟಿ ನಿಂತು ಸಮಸ್ಯೆ ಉಂಟಾದರೆ ಮಳೆಗಾಲದಲ್ಲಿ ಇಲ್ಲಿನ ಅವಸ್ಥೆ ಹೇಗಿರಬಹುದು ಎಂಬ ಬಗ್ಗೆ ಸ್ಥಳೀಯರು ಪ್ರಶ್ನಿಸುತ್ತಿದ್ದು, ರಸ್ತೆ ಹಾಗೂ ಚರಂಡಿ ನಿರ್ಮಿಸಿದ ಕೆಎಸ್‌ಟಿಪಿ ಈ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಚರಂಡಿ ಅವ್ಯವಸ್ಥೆಯಿಂದ ಸಮಸ್ಯೆ: ಆರೋಪ

ರಸ್ತೆ ನಿರ್ಮಾಣದ ವೇಳೆ ಕೈಗೊಂಡ ಅವೈಜ್ಞಾನಿಕ ಚರಂಡಿಯಿಂದ ಮಳೆ ನೀರು ಕಟ್ಟಿ ನಿಲ್ಲುತ್ತಿರುವುದಾಗಿ ಸಾರ್ವಜನಿಕರು ಆರೋಪಿಸಿದ್ದಾರೆ.

ಬೇಸಗೆ ಮಳೆ ಸುರಿದಿದ್ದು, ನೀರು ಕಟ್ಟಿನಿಂತ ಸ್ಥಳದಲ್ಲಿ ಜನರಿಗೆ ಬಸ್ ಇಳಿಯಲು, ಹತ್ತಲು ಸಮಸ್ಯೆಯಾದ ಹಿನ್ನೆಲೆ ಬಸ್‌ಗಳನ್ನು ಇತರ ಕಡೆಗಳಲ್ಲಿ ನಿಲ್ಲಿಸಿ ಪರಿಹಾರ ಕಂಡುಕೊಳ್ಳಲಾಯಿತು. ಆದರೆ ಮುಂದೆ ಮಳೆ ಸುರಿದಾಗ ಇದೇ ಸಮಸ್ಯೆ ಉಂಟಾಗಬಹುದಾಗಿದೆ. ಆದ್ದರಿಂದ ಕೂಡಲೇ ಪರಿಹಾರ ಕಂಡುಕೊಳ್ಳಬೇಕು ಎಂದು ಬಸ್ ಕಾರ್ಮಿಕರು ಹಾಗೂ ಪ್ರಯಾಣಿಕರು ತಿಳಿಸಿದ್ದಾರೆ.



ಗರಿಗಳ ಭಾನುವಾರ ಆಚರಣೆ ಅಂಗವಾಗಿ ಕ್ರೈಸ್ತರ ಪವಿತ್ರ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಕಾಸರಗೋಡು ಮಂಡಲದ ವಿವಿಧ ಚರ್ಚ್‌ಗಳಿಗೆ ಭೇಟಿ ನೀಡಿದರು.

ಮೇ 5,6ರಂದು ಗೋಸಾಡ ಶ್ರೀ ಕ್ಷೇತ್ರದಲ್ಲಿ ಚಂಡಿಕಾಯಾಗ: ಆಮಂತ್ರಣ ಬಿಡುಗಡೆ



ಮುಳ್ಳೇರಿಯ: ಗೋಸಾಡ ಶ್ರೀ ಮಹಿಷಮರ್ದಿನಿ ಕ್ಷೇತ್ರದಲ್ಲಿ ಮೇ 5 ಮತ್ತು 6ರಂದು ಜರಗಲಿರುವ ಚಂಡಿಕಾಯಾಗ ಹಾಗೂ ವಿಶೇಷ ಮೂಡಪ್ಪಸೇವೆಯ ಆಮಂತ್ರಣ ಪತ್ರಿಕೆಯನ್ನು ಶುಕ್ರವಾರ ಕ್ಷೇತ್ರದಲ್ಲಿ ಬಿಡುಗಡೆಗೊಳಿಸಲಾಯಿತು.

ಶ್ರೀ ಕ್ಷೇತ್ರ ಸೇವಾ ಸಮಿತಿ ಉಪಾಧ್ಯಕ್ಷ ಪ್ರಭಾಕರ ರೈ ಮಠದಮೂಲೆ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ನಿತ್ಯಾನಂದ ಶೆಣೈ, ನಿವೃತ್ತ ಜಿಲ್ಲಾ ಮೆಡಿಕಲ್ ಆಫೀಸರ್ ರಾಮಚಂದ್ರ ಮಾರ್ಪನಡ್ಕ, ಉದ್ಯಮಿ ಶಂಕರನಾರಾಯಣ ಮಯ್ಯ, ಮೊಕ್ತೇಸರ ಶ್ರೀನಿವಾಸ ಅಮ್ಮಣ್ಣಾಯ ಪಾವೂರು, ಸೇವಾ ಸಮಿತಿ ಉಪಾಧ್ಯಕ್ಷ ಪ್ರಸಾದ ಮಣಿಯಾಣಿ ಗೋಸಾಡ, ಅರ್ಚಕ ರಾಘವೇಂದ್ರ ಚಡಗ, ಜನಜಾಗೃತಿ ವೇದಿಕೆ ತಾಲೂಕು ಅಧ್ಯಕ್ಷ ಅಖಿಲೇಶ್ ನಗುಮುಗಂ, ಮಾತೃಮಂಡಳಿ ಅಧ್ಯಕ್ಷೆ ಲಲಿತಾ ಸುಬ್ಬ ಪಾಟಾಳಿ, ಬಾಲಕೃಷ್ಣ ಕೆ.ಕೆ., ಗಂಗಾಧರ ರೈ ಮಠದಮೂಲೆ, ವಾಣಿಪ್ರಸಾದ್ ಅಮ್ಮಣ್ಣಾಯ ಪಾವೂರು, ಸೀತಾರಾಮ ರೈ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಸಂತಕುಮಾರ್ ಗೋಸಾಡ ಪ್ರಾರ್ಥಿಸಿ, ಸೇವಾ ಸಮಿತಿ ಕಾರ್ಯ ದರ್ಶಿ ಸದಾಶಿವ ರೈ ಸ್ವಾಗತಿಸಿ, ನಾರಾಯಣ ಗೋಸಾಡ ವಂದಿಸಿದರು. ಅಮೃತ್‌ರಾಜ್ ರೈ ಮರತ್ತಿಲ ಕಾರ್ಯಕ್ರಮ ವನ್ನು ನಿರೂಪಿಸಿದರು. ಪರಮೇಶ್ವರ ಭಟ್ ಗೋಸಾಡ ಅವರ ವತಿಯಿಂದ ಅನ್ನಸಂತರ್ಪಣೆ ಜರಗಿತು.

ಕಾಸರಗೋಡಿನಲ್ಲಿ ಮಕ್ಕಳ ವಿಭಾಗದ ವೈದ್ಯರಿಗೆ ರಾಷ್ಟ್ರಮಟ್ಟದ ಕಾರ್ಯಾಗಾರ



ಕಾಸರಗೋಡು: ಐಎಪಿ ಕಾಸರಗೋಡು ಶಾಖೆಯ ನೇತೃತ್ವದಲ್ಲಿ ಮಕ್ಕಳ ವಿಭಾಗದ ವೈದ್ಯರಿಗೆ 'ಇಂಧನ' ಎಂಬ ಶೀರ್ಷಿಕೆಯಡಿ ಮಕ್ಕಳ ಪೋಷಣೆ ಮತ್ತು ಬೆಳವಣಿಗೆ ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಭಾನುವಾರ ಆಯೋಜಿಸಲಾಗಿತ್ತು.

ಕಾಸರಗೋಡು ಸಿಟಿ ಟವರ್ ಹೊಟೇಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಂಗಳೂರಿನ ಮಕ್ಕಳ ವೈದ್ಯರು, ಇತರ, ಸಾಮಾನ್ಯ ವೈದ್ಯರು , ಮಕ್ಕಳ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು. ಐಎಪಿ ಕಾಸರಗೋಡು ಶಾಖೆ ಅಧ್ಯಕ್ಷ ಡಾ.ಮಾಹಿನ್ ಪಿ.ಅಬ್ದುಲ್ಲ ಮಾತನಾಡಿ, ದೈನಂದಿನ ಚಿಕಿತ್ಸೆಯಲ್ಲಿ ಮಕ್ಕಳ ಪೋಷಣೆ – ಬೆಳವಣಿಗೆ ಮೇಲ್ವಿಚಾರಣೆ ಮಹತ್ವವನ್ನು ಹೇಳಿದರು. ಈ ಸಂದರ್ಭ ಹಿರಿಯ ಮಕ್ಕಳ ತಜ್ಞ ಡಾ. ನಾರಾಯಣ ನಾಯ್ಕ್ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ವೈದ್ಯರಾದ ಡಾ.ಯತೀಶನ್ ಕೆ.ಕೆ., ಡಾ.ಎಸ್.ವಿ.ಆರ್.ಶರ್ಮಾ, ಡಾ. ಮುಸ್ತಾಫ ಮತ್ತು ಡಾ.ರಫಿ ಅಹಮ್ಮದ್ ಉಪಸ್ಥಿತರಿದ್ದರು. ಇಂಧನ ಆರಂಭಿಕ ಜೀವನ ಕಾರ್ಯಕ್ರಮ ಮತ್ತು ಶಿಶು ಪೋಷಣೆ ಕುರಿತು ಡಾ.ಜೋನಿ ಸೆಬಾಸ್ಟಿಯನ್ ಮಾತನಾಡಿದರು. ಬೆಳವಣಿಗೆ ಮೇಲ್ವಿಚಾರಣೆ– ಬೆಳವಣಿಗೆ ಚಿಕಿತ್ಸಾಲಯ ಬಗ್ಗೆ ಡಾ.ನಿತ್ಯ ಟಿ. ಮಾತನಾಡಿದರು.

ಡಾ.ಅಮರೇಶ್ ಪಾಟೀಲ್ ಅವರು ವಿವಿಧ ಮಕ್ಕಳ ವಿಷಯಗಳ ಮತ್ತು ವಿಧಾನಗಳ ಕುರಿತು, ಡಾ.ನಂದಿನಿ ಮುಂಡ್ಕೂರು ಅವರು ಮಕ್ಕಳ ಬೆಳವಣಿಗೆಯ ಪ್ರಚೋದನೆ ಕುರಿತು ತರಗತಿ ನಡೆಸಿಕೊಟ್ಟರು. ನಂತರ ಡಾ.ನಿತ್ಯ ಟಿ. ಮತ್ತು ಡಾ.ನಂದಿನಿ ಮುಂಡ್ಕೂರು ನೇತೃತ್ವದಲ್ಲಿ ಪ್ರಾಯೋಗಿಕ ತರಬೇತಿ ತರಗತಿಗಳು ಜರಗಿದವು. ಐಎಪಿ ಕಾಸರಗೋಡು ಶಾಖೆ ಕಾರ್ಯದರ್ಶಿ ಡಾ.ಉದಯ್ ಶ್ರೀನಿವಾಸ್ ಮೊದಲಾದವರು ಉಪಸ್ಥಿತರಿದ್ದರು.

ಇಂದಿನಿಂದ ಅಣ್ಣಪ್ವಾಡಿ ಶ್ರೀ ಭಜನಾ ಸಂಘದ ಸುವರ್ಣ ಸಂಭ್ರಮ, ಶಾಶ್ವತ ಚಪ್ಪರ ಸಮರ್ಪಣೆ

ಮುಳ್ಳೇರಿಯ: ಅಡೂರು ಅಣ್ಣಪ್ವಾಡಿ ಶ್ರೀ ಮಹಾಲಿಂಗೇಶ್ವರ ಭಜನಾ ಸಂಘದ ಸುವರ್ಣ ಮಹೋತ್ಸವ ಮತ್ತು ಶಾಶ್ವತ ಚಪ್ಪರ ಸಮರ್ಪಣೆ ಕಾರ್ಯಕ್ರಮ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಮಾರ್ಗದರ್ಶನದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಮಾ.30ರಂದು ಆರಂಭಗೊಳ್ಳಲಿದೆ.

ಹೊರೆಕಾಣಿಕೆ ಸಮರ್ಪಣೆ

ಮಾ.30ರಂದು ಬೆಳಿಗ್ಗೆ 10.30ಕ್ಕೆ ಚಾಪೆಕಲ್ಲು ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಿಂದ ಅಣ್ಣಪ್ವಾಡಿ ಶ್ರೀ ರಕ್ತೇಶ್ವರೀ ಸನ್ನಿಧಿಗೆ ಹೊರೆಕಾಣಿಕೆ ಸಮರ್ಪಣೆ, ಉಗ್ರಾಣ ತುಂಬಿಸುವುದು, ಮಧ್ಯಾಹ್ನ ಅನ್ನದಾನ ನಡೆಯಲಿದೆ. ಮಾ.31ರಂದು ಬೆಳಿಗ್ಗೆ 7ಕ್ಕೆ ತಂತ್ರಿವರ್ಯರ ಆಗಮನ, 9.30ಕ್ಕೆ ಗಣಪತಿ ಹೋಮ, ಶ್ರೀ ಗೌರಿಶಂಕರ ಪೂಜೆ, ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, ಶ್ರೀ ರಕ್ತೇಶ್ವರಿಗೆ ತಂಬಿಲ, 9.30ರಿಂದ ಮುರೂರು ಶ್ರೀ ವಿಶ್ವಕರ್ಮ ಭಜನಾ ಸಂಘದವರಿಂದ ಭಜನಾಮೃತ, 11.30ರಿಂದ ಕಡೆಂಗೋಡು ಶ್ರೀ ಸುಂದರ ಎ.ಕೆ. ಮತ್ತು ಬಳಗದವರಿಂದ ಭಜನಾ ಸಂಕೀರ್ತನೆ, ಮಧ್ಯಾಹ್ನ 1ಗಂಟೆಗೆ ಅನ್ನದಾನ, 2 ಗಂಟೆಗೆ ಧಾರ್ಮಿಕ ಸಭೆ, ಅಣ್ಣಪ್ವಾಡಿ ಭಜನಾ ಸಂಘದ ಅಧ್ಯಕ್ಷ ಗಿರೀಶ್‌ಕುಮಾರ್ ಎ.ಸಿ. ಅಧ್ಯಕ್ಷತೆ ವಹಿಸುವರು. ದೇಲಂಪಾಡಿ ಗ್ರಾ.ಪಂ. ಸದಸ್ಯೆ ವಿದ್ಯಾಮಹೇಶ್ ಉದ್ಘಾಟಿಸುವರು. ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಶಾಶ್ವತ ಚಪ್ಪರ ಸಮರ್ಪಣೆ , ಆಶೀರ್ವಚನ ನೀಡುವರು. ಅಡೂರು ದೇವಳ ಉತ್ಸವ ಸಮಿತಿ ಅಧ್ಯಕ್ಷ ರಾಮಚಂದ್ರ ಮಣಿಯಾಣಿ ಅತಿಥಿಯಾಗಿರುವರು.

ಹರೀಶ್ ನಾಯ್ಕ ಅಣ್ಣಪ್ವಾಡಿ, ಸುಂದರ ನಾಯ್ಕ ಗುರು ಸ್ವಾಮಿ, ಕೌಂಡಿಕ್ಕಾನ ಭಜನಾ ಸಂಘದ ಅಧ್ಯಕ್ಷ ಜನಾರ್ದನ ಸಿ.ಎಚ್., ಮಾರಿಪಡುಪ್ಪು ಭಜನಾ ಸಂಘದ ಅಧ್ಯಕ್ಷ ಸತೀಶನ್ ಕುದುರೆತೊಟ್ಟಿ, ರವಿಕುಮಾರ್, ಸುಮಿತ್ರ ಅಣ್ಣಪ್ವಾಡಿ ಭಾಗವಹಿಸುವರು.

ಸಂಜೆ 6.40ರಿಂದ 50ನೇ ಅರ್ಧ ಏಕಾಹ ಭಜನೋತ್ಸವ ಆರಂಭ, ಗಿರೀಶ್‌ಕುಮಾರ್ ಅಣ್ಣಪ್ವಾಡಿ ದೀಪಜ್ವಲನಗೈಯ್ಯುವರು. ಕೃಷ್ಣಪ್ಪ ಮಾಸ್ಟರ್ ಅಡೂರು ಭಜನೆಯನ್ನು ಆರಂಭಿಸುವರು. ರಾತ್ರಿ 12 ಗಂಟೆಗೆ ದೇವರಿಗೆ ಹೊರೆಕಾಣಿಕೆ ಸಮರ್ಪಣೆ, ಏ.1 ರಂದು ಬೆಳಗ್ಗೆ 6.27ಕ್ಕೆ ಮಂಗಳಾರತಿ ನಡೆಯಲಿದೆ.

ಗೌರವ

ಸಂಘದ ಹಿರಿಯ ಸದಸ್ಯರಾದ ಚನಿಯ ನಾಯ್ಕ ಅಣ್ಣಪ್ವಾಡಿ, ಮಹಾಲಿಂಗ ನಾಯ್ಕ, ತಿಮ್ಮಪ್ಪ ನಾಯ್ಕ, ಸುಬ್ಬನಾಯ್ಕ, ಕೃಷ್ಣನಾಯ್ಕ, ಗಣಪ ನಾಯ್ಕ, ಐತ್ತಮ್ಮ ಬಾಯಿ, ಉಮೇಶ, ವೆಂಕಪ್ಪ ನಾಯ್ಕ ಮೊದಲಾದ ವರನ್ನು ಇದೇ ವೇಳೆ ಗೌರವಿಸಲಾಗುವುದು.



ಶ್ರೀ ಕಡಂಗಲ್ಲಾಯ–ಪರಿವಾರ ದೈವಗಳ ದೈವಸ್ಥಾನದ ಆಡಳಿತ ಸಮಿತಿ ಟ್ರಸ್ಟ್ ನೂಜಿ, ಅಂಗನಿಮಾರು ಇದರ ಶ್ರೀ ಕಡಂಗಲ್ಲಾಯ –ಪರಿವಾರ ದೈವಗಳಾದ ಕುಪ್ಪೆ ಪಂಜುರ್ಲಿ, ಗುಳಿಗ ದೈವಗಳ ವಾರ್ಷಿಕ ನೇಮ ಜರಗಿತು .

ಕಾರಡ್ಕದ ಎತ್ತರ ಪ್ರದೇಶಗಳ ದಾಟಿ ಪರಿಶಿಷ್ಟ ಪಂಗಡ ವಿಭಾಗದ ಮನೆಗಳಿಗೆ ಭೇಟಿ ನೀಡಿದ ಡೀಸಿ

ಮತದಾನದ ಮಹತ್ವ, ಅರಿವು ಮೂಡಿಸಿದ ಜಿಲ್ಲಾಧಿಕಾರಿ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಕಾಸರಗೋಡು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಕಾರಡ್ಕ ಭಾಗದ ಎತ್ತರದ ಗುಡ್ಡ ಪ್ರದೇಶಗಳನ್ನು (ಪರ್ವತಗಳನ್ನು) ದಾಟಿ ಪರಿಶಿಷ್ಟ ಪಂಗಡ ವಿಭಾಗದ ಮನೆಗಳಿಗೆ ಭಾನುವಾರ ಭೇಟಿ ನೀಡಿದರು.



ಜಿಲ್ಲಾಧಿಕಾರಿಗಳು ಕಾರಡ್ಕ ಮಾತ್ರವಲ್ಲದೆ ದೇಲಂಪಾಡಿಯಲ್ಲಿರುವ ಮೂರು ಪರಿಶಿಷ್ಟ ಪಂಗಡದ ಕಾಲನಿಗಳಾದ ಕಣ್ಣಂಕೋಲ್, ಕುಕುಗುಡ್ಡೆ ಮತ್ತು ಚೆರ್ತಮೂಲೆಗಳಿಗೆ ಸಂದರ್ಶನವಿತ್ತು ಯಾವುದೇ ಯೋಜನೆಗಳು ಕಡತಗಳಿಗೆ ಸೀಮಿತವಾಗಿರದೆ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯ ಕೈಗೆ ಪ್ರಯೋಜನ ಲಭಿಸುವಂತೆ ಕರೆ ನೀಡಿದರು. ಸ್ವಚ್ಛತಾ ಕಾರ್ಯದ ಭಾಗವಾಗಿ ಜಿಲ್ಲಾಧಿಕಾರಿಗಳು ಕಾಲನಿಗಳಲ್ಲಿರುವ ಮತದಾರರಿಗೆ ಚುನಾವಣೆ ಮಹತ್ವ ಬಗ್ಗೆ ತಿಳಿಸಿದರು.

ಹಕ್ಕುಗಳ ಚಲಾಯಿಸಬೇಕು

ಜನರು ತಮ್ಮ ಹಕ್ಕುಗಳನ್ನು ಚಲಾಯಿಸಬೇಕು ಎಂದರು. ಅಭಿವೃದ್ಧಿಯ ನಿಜವಾದ ಅಳತೆ ಹಕ್ಕುಗಳ ಜ್ಞಾನ – ಅವುಗಳನ್ನು ಸಾಧಿಸುವ ಇಚ್ಛಾಶಕ್ತಿ ಎಂದು ಅವರು ನೆನಪಿಸಿದರು.

24 ಕುಟುಂಬಗಳು ವಾಸಿಸುವ ಕಣ್ಣಂಕೋಲ್ ಕಾಲನಿ, 10 ಕುಟುಂಬಗಳು ವಾಸಿಸುವ ಕುಕುಗುಡ್ಡೆ ಕಾಲನಿ ಮತ್ತು 13 ಕುಟುಂಬಗಳು ವಾಸಿಸುವ ಚೆರ್ತಮೂಲೆ ಕಾಲನಿಯ ಪ್ರತಿಯೊಂದು ಮನೆಗೂ ಜಿಲ್ಲಾಧಿಕಾರಿ ಭೇಟಿ ನೀಡಿ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾದರು. ಯಾವುದೇ ಅಧಿಕೃತ ಸ್ಥಾನಮಾನದ ನಿರ್ಬಂಧಗಳಿಲ್ಲದೆ ಮನೆಗಳ ಬಾಗಿಲಲ್ಲಿ ಕುಳಿತು ಜನರ ಅಭಿವೃದ್ಧಿ ವಿಚಾರಗಳ ಕುರಿತು ಮಾತನಾಡಿದರು.

ಕಾಲನಿಗಳ ಜನರ ಜೀವನದ ನೈಜ ಚಿತ್ರವನ್ನು ಹತ್ತಿರದಿಂದ ನೋಡಲು ಅವಕಾಶ ನೀಡಿದ ಈ ಭೇಟಿಯು ಸರಕಾರ ಮತ್ತು ಜನರ ನಡುವಿನ ಅಂತರ ಕಡಿಮೆ ಮಾಡುವ ಒಂದು ವಿಶಿಷ್ಟ ಅನುಭವವಾಗಿತ್ತು. ಜಿಲ್ಲಾಧಿಕಾರಿ ತಮ್ಮ ಅಧಿಕೃತ ವಾಹನದಲ್ಲಿ ಕಾಲನಿಗಳ ಮಕ್ಕಳನ್ನು ಕರೆದುಕೊಂಡು ಪ್ರಯಾಣಿಸಿದ್ದು ನೋಡುಗರಲ್ಲಿ ಕುತೂಹಲ ಹುಟ್ಟುಹಾಕಿತು.

ಕಾಸರಗೋಡು ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆ ಅಧಿಕಾರಿ ಕೆ.ವಿ.ರಾಘವನ್, ಕಾಸರಗೋಡು ಬುಡಕಟ್ಟು ವಿಸ್ತರಣಾಧಿಕಾರಿ ದೀಪಾ, ಕಂದಾಯ ಇಲಾಖೆ ಕಿರಿಯ ಅಧೀಕ್ಷಕ ಚಂದ್ರಶೇಖರ ನಾಯಕ್, ಗ್ರಾಮಾಧಿಕಾರಿ ಪಿ.ವಿಜಯಕುಮಾರ್ , ಪರಿಶಿಷ್ಟ ಪಂಗಡದ ಕಾರ್ಯಕರ್ತರಿದ್ದರು. ಸ್ವೀಪ್ ಕಾರ್ಯಕ್ರಮದ ಭಾಗವಾಗಿ ಈ ಭೇಟಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲೆಯಲ್ಲಿ ಚುನಾವಣಾ ಸಾಕ್ಷರತಾ ಅಭಿಯಾನ

ಕಾಸರಗೋಡು: ಕೇರಳ ರಾಜ್ಯ ಸಾಕ್ಷರತಾ ಮಿಷನ್‌ನ ಚುನಾವಣಾ ಸಾಕ್ಷರತಾ ಅಭಿಯಾನದ ಭಾಗವಾಗಿ ಕಾಸರಗೋಡು ಜಿಲ್ಲೆಯ ವಿವಿಧ ಕಡೆಗಳಲ್ಲಿ ಜಾಗೃತಿ ತರಗತಿಗಳು ಮತ್ತು ಮತದಾರರ ಪ್ರತಿಜ್ಞೆಯನ್ನು ಭಾನುವಾರ ಹಮ್ಮಿಕೊಳ್ಳಲಾಯಿತು.

ಕಾಸರಗೋಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆದ ಸ್ವೀಪ್ ತರಗತಿಯನ್ನು ಜಿಲ್ಲಾ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಉದ್ಘಾಟಿಸಿದರು. ವಿದ್ಯಾರ್ಥಿಗಳು ಮತದಾರರ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಸಾಕ್ಷರತಾ ಮಿಷನ್ ಜಿಲ್ಲಾ ಸಂಯೋಜಕ ಸಿ.ಅಬ್ದುಲ್ ರಶೀದ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿಯರಾದ ಎಂ.ಶಾಂತಕುಮಾರಿ, ಎಚ್.ಬಿ.ಸುವಿ, ಬಿ.ಅನಿತಾ, ಜಿಲ್ಲಾ ಕಚೇರಿ ಸಿಬ್ಬಂದಿ ಚಂದ್ರಮತಿ ಎ.ಪಿ., ಸಮಾನ ವರ್ಗದ ಪ್ರತಿನಿಧಿಗಳಾದ ಪಿ.ಎ.ಅಬ್ದುಲ್ ಅಜೀಜ್, ಕೆ.ಎಚ್.ಆಯಿಷತ್ ಆಸಿಫಾ, ಕೆ.ಯು. ರಹಮತ್ ಬೀವಿ ಮತ್ತು ಟಿ.ಎ.ಮುಝುಮ್ಮಿಲ್ ಮಾತನಾಡಿದರು. ಪ್ರೇರಕಿ ಕೆ.ಪಿ.ಕೃಷ್ಣವೇಣಿ ಸ್ವಾಗತಿಸಿ, ಕೆ.ಮಾಲತಿ ವಂದಿಸಿದರು.

ಕಾಞಂಗಾಡು ರಾಮನಗರ ಮಾವುಂಗಲ್ ಎಸ್‌ಆರ್‌ಎಂಜಿ ಶಾಲಾ ಸಾಕ್ಷರತಾ ಮಿಷನ್ ಚುನಾವಣಾ ಸಾಕ್ಷರತಾ ತರಗತಿಯನ್ನು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂಧನನ್ ಉದ್ಘಾಟಿಸಿದರು. ಸಮಾನತಾ ಶಿಕ್ಷಕ ಅನಿಲ್ ಅಧ್ಯಕ್ಷತೆ ವಹಿಸಿದ್ದರು. ಪ್ರೇರಕಿ ಗೀತಾ ಸ್ವಾಗತಿಸಿ, ಶಿಕ್ಷಕಿ ಇಂದು ವಂದಿಸಿದರು.

ಹೊಸದುರ್ಗ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಪ್ಲಸ್ ಟು ಹೈಸ್ಕೂಲ್ ಸಮಾನತಾ ಅಧ್ಯಯನ ಕೇಂದ್ರವನ್ನು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಉದ್ಘಾಟಿಸಿದರು. ಶಿಕ್ಷಕಿ ಪದ್ಮಾ ಮಾತನಾಡಿದರು. ಪ್ರೇರಕಿ ರಜನಿ ವೇಲುತೋಳಿ ಸ್ವಾಗತಿಸಿ, ಅನಿಲಾ ವಂದಿಸಿದರು. ಮತದಾರರ ಪ್ರತಿಜ್ಞೆಯನ್ನು ಸಹ ಬೋಧಿಸಲಾಯಿತು. ಕುತ್ತಿಕೋಲ್ ಜಿಎಚ್‌ಎಸ್ ಪ್ಲಸ್ ಒನ್ ಸಮಾನತಾ ತರಗತಿಯಲ್ಲಿ ಮತದಾನದ ಹಕ್ಕುಗಳ ಕುರಿತು ಶಿಕ್ಷಕಿ ಲಲಿತಾ ತರಗತಿಯನ್ನು ನಡೆಸಿದರು. ಚಂದ್ರನ್ ಮಾಶ್ ಚುನಾವಣೆ ಕುರಿತು ತರಗತಿ ನಡೆಸಿದರು.

ಸುತ್ತಮುತ್ತ

ಯಕ್ಷಗಾನ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಕೋಟ: ಯಕ್ಷಗಾನ ಕಲಾಕೇಂದ್ರ, ಹಂಗಾರಕಟ್ಟೆ-ಐರೋಡಿ ಹದಿಮೂರು ವರ್ಷಗಳಿಂದ ಮಕ್ಕಳಿಗಾಗಿ ಯಕ್ಷಗಾನ ತರಬೇತಿ ಶಿಬಿರವನ್ನು ನಡೆಸುತ್ತಾ ಬಂದಿದ್ದು, ಏ.15ರಿಂದ ಮೇ 3 ತನಕ ಬೆಳಿಗ್ಗೆ 9.15ರಿಂದ ಮಧ್ಯಾಹ್ನ 1.15ರ ತನಕ ಶಾಲಾ ವಿದ್ಯಾರ್ಥಿಗಳಿಗಾಗಿ 'ನಲಿ- ಕುಣಿ' ಎಂಬ ಯಕ್ಷಗಾನ ತರಬೇತಿ ಶಿಬಿರವನ್ನು ಆಯೋಜಿಸಿದೆ.
ಯಕ್ಷಗಾನ ನೃತ್ಯ ಹಾಗೂ ಅಭಿನಯದ ತರಬೇತಿಯನ್ನು ಸಾಲಿಗ್ರಾಮದ ಗುಂಡ್ಮಿಯಲ್ಲಿರುವ ಕಲಾಕೇಂದ್ರದ ಸದಾನಂದ ರಂಗ ಮಂಟಪದಲ್ಲಿ ನೀಡಲಾಗುವುದು. ಖ್ಯಾತ ಯಕ್ಷಗಾನ ವಿದ್ವಾಂಸರೂ ತರಬೇತುದಾರ ಪ್ರಾಚಾರ್ಯ ಗುಂಡ್ಮಿ ಸದಾನಂದ ಐತಾಳ ನಿರ್ದೇಶನದಲ್ಲಿ ನಡೆಯುವ ಈ ತರಬೇತಿ ಶಿಬಿರದಲ್ಲಿ ಸಹ ಶಿಕ್ಷಕರಾಗಿ ಕೇಶವ ಆಚಾರ್, ಜಯೇಂದ್ರ ಅಡಿಗ, ರಾಘವೇಂದ್ರ ಗಾಣಿಗ ಮಟಪಾಡಿ ಇವರು ಭಾಗವಹಿಸಲಿದ್ದಾರೆ. ತರಬೇತಿ ಶಿಬಿರವನ್ನು ಸೇರಬಿಚ್ಛಿಸುವ ವಿದ್ಯಾರ್ಥಿಗಳ ಪೋಷಕರು ರಾಜಶೇಖರ ಹೆಬ್ಬಾರ್ ಕಾರ್ಯದರ್ಶಿ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ- ಐರೋಡಿ ಇವರನ್ನು ದೂರವಾಣಿ ಸಂಖ್ಯೆ 9880605610 ಅಥವಾ ಗುಂಡ್ಮಿ ರಾಮಚಂದ್ರ ಐತಾಳ 9448824559 ಮುಖಾಂತರ ಏ.5ರ ಒಳಗೆ ಸಂಪರ್ಕಿಸುವುದು ಮತ್ತು ಏ.9ರ ಒಳಗೆ ಕಲಾಕೇಂದ್ರದ ಕಚೇರಿಯಿಂದ ನೋಂದಣಿ ಅರ್ಜಿಯನ್ನು ಪಡೆದು ತಮ್ಮ ಹೆಸರನ್ನು ನೊಂದಾಯಿಸಿಕ್ಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ ಎಂದು ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಹನಿಗಳ ಲೀಲೆ!

ಗ್ರಾಮಾಂತರ ಪ್ರದೇಶದಲ್ಲಿ 14 ಹೆಚ್ ಟಿ ಲೈನ್ ಕಂಬಗಳು ತುಂಡರಿಸಲ್ಪಟ್ಟಿದ್ದು, 21 ಎಲ್‌ಟಿ ಲೈನ್ ಕಂಬಗಳು ತುಂಡರಿಸಲ್ಪಟ್ಟಿದೆ. ಈ ಪೈಕಿ ಭಾನುವಾರ 22 ರಷ್ಟು ಕಂಬಗಳನ್ನು ಪುನಃ ಸ್ಥಾಪಿಸಲಾಗಿದ್ದು, ಉಳಿದವುಗಳನ್ನು ಸೋಮವಾರದಂದು ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದೆಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ಗಾಳಿಯ ಹೊಡೆತಕ್ಕೆ ಸಿಲುಕಿ ಹಲವಾರು ಕಡೆಗಳಲ್ಲಿ ಕೃಷಿ ಬೆಳೆಗಳು ಹಾನಿಗೀಡಾಗಿವೆ.

ಕೈಕಂಬ ಪರಿಸರದಲ್ಲಿಯೂ ಹಾನಿ

ಮಂಗಳೂರು ಹೊರವಲಯ ಗುರುಪುರದ ಶ್ರೀ ಜಂಗಮ ಸಂಸ್ಥಾನ ಮಠದ ಬಳಿ ಮರದ ಬೃಹತ್ ಕೊಂಬೆಯೊಂದು ಬಿರುಗಾಳಿಗೆ ಮುರಿದು ವಿದ್ಯುತ್ ತಂತಿಗೆ ಬಿದ್ದು ವಿದ್ಯುತ್ ಸರಬರಾಜು ಸ್ಥಗಿತವಾಗಿತ್ತು. ಗುರುಪುರ ಸುತ್ತಲ ಪ್ರದೇಶದಲ್ಲಿ ವಿದ್ಯುತ್ ಕಂಬಗಳು, ಅಡಿಕೆ ಮರಗಳ ಸಹಿತ ಇತರ ಕೆಲವು ಮರಗಳು ರಸ್ತೆಗಳಿಗೆ ಉರುಳಿವೆ. ಕೆಲವು ಮನೆಗಳ ಹೆಂಚು ಹಾರಿದ್ದು, ಭಾರೀ ನಷ್ಟ ಉಂಟಾಗಿದೆ. ಭಾನುವಾರ ಸಂಜೆ ವಿದ್ಯುತ್ ಮರುಸ್ಥಾಪನೆಯಾಗಿದೆ. ಗ್ರಾಮಾಂತರದಲ್ಲಿ ಹಲವೆಡೆ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು ಮೆಸ್ಕಾಂ ರಾತ್ರಿ ವೇಳೆಗೆ ಸರಬರಾಜು ಯಥಾಸ್ಥಿತಿಗೆ ತರುವಲ್ಲಿ ಯಶಸ್ವಿಯಾಗಿದೆ. ಹೆಚ್ಚಿನ ಹಾನಿ ಸಂಭವಿಸಿಲ್ಲ.

ಢಂ ಢಮಾರ್!

ಈ ನಿಟ್ಟಿನಲ್ಲಿ ವಿದ್ಯುತ್ ಪ್ರಸರಣ ವಿಭಾಗ ಗ್ರಾಹಕರಿಗೆ ಸೂಚನೆ ನೀಡಿದ್ದು, ವಾಹನಗಳನ್ನು ಚಾರ್ಜ್ ಮಾಡುವಾಗ ಸೇರಿದಂತೆ ಜಾಗರೂಕರಾಗಿರಬೇಕು, ರಾತ್ರಿ 9.30 ರಿಂದ 12.30ರ ವರೆಗೆ ವಿದ್ಯುತ್ ಬಳಕೆಯನ್ನು ಸಾಧ್ಯವಾದಷ್ಟು ನಿಯಂತ್ರಿಸಬೇಕು; ಅನಗತ್ಯ ಬಲ್ಬ್ ಹಾಗೂ ಇತರ ಉಪಕರಣಗಳ ಬಳಕೆ ಬೇಡ, ಅಡುಗೆ ಅನಿಲದ ಕೊರತೆಯೂ ಇರುವುದರಿಂದ, ಇಂಡಕ್ಷನ್ ಅನ್ನು ಸಹ ಬಳಸಲಾಗುತ್ತಿದೆ. ಇಂಡಕ್ಷನ್ 2000 ವ್ಯಾಟ್‌ಗಳ ಸಾಮರ್ಥ್ಯವನ್ನು ಹೊಂದಿದೆ. ತಡರಾತ್ರಿಯಲ್ಲಿ ಅದನ್ನು ಬಳಸದಿರಲು ಪ್ರಯತ್ನಿಸಬೇಕು. ಹಲವರು ತಡರಾತ್ರಿಯಲ್ಲಿ ವಿದ್ಯುತ್ ವಾಹನಗಳನ್ನು ಚಾರ್ಜ್ ಮಾಡುತ್ತಾರೆ. ಇದನ್ನು ನಿಯಂತ್ರಿಸಬೇಕು. ಕಾರಿಗೆ ಸುಮಾರು 7 ಕಿ.ವ್ಯಾ. ಅಗತ್ಯವಿದೆ. ಹಗಲಿನಲ್ಲಿ ಅಥವಾ ಸಂಜೆ ವಾಹನ ಚಾರ್ಜ್ ಮಾಡಬಹುದು. ಗ್ರಾಹಕರು ಓವರ್ ಲೋಡ್ ಆಗದಂತೆ ಸೂಚನೆ ಗಮನಿಸುವುದು ಅಗತ್ಯ. ಎಸಿ, ಫ್ಯಾನ್‌ಗಳು ಮತ್ತು ಇಲೆಕ್ಟ್ರಾನಿಕ್ ಉಪಕರಣಗಳನ್ನು ಎಚ್ಚರಿಕೆಯಿಂದ ಬಳಸಬೇಕೆಂದು ಸೂಚನೆ ನೀಡಲಾಗಿದೆ.

ಚುಕ್‌ಬುಕ್ ರೈಲು?

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಶಶಿಧರ ಅವರು, ರಾಜಾಸೀಟು ಉದ್ಯಾನವನ ಅಭಿವೃದ್ಧಿ ಗ್ರೇಟರ್ ರಾಜಾಸೀಟು ಬೆಳವಣಿಗೆ ಹಾಗೆಯೇ ಕೂರ್ಗ್ ವಿಲೇಜ್ ಅಭಿವೃದ್ಧಿ ಸಂಬಂಧಿಸಿದಂತೆ ಮಾಹಿತಿ ನೀಡಿದರು. ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮುತ್ತಪ್ಪ, ಇತರರು ಇದ್ದರು.

ಆಸರೆಯಾದ ಕಾರ್ಕಳ ಟೈಗರ್ಸ್, ಟೀಮ್ ಸಿಂಧೂರ್‌ನ ಸದಸ್ಯರ ಸಾಮಾಜಿಕ ಕಾರ್ಯ

ಬಡ ಕುಟುಂಬಕ್ಕೆ ಸ್ವಂತ ಸೂರು, ಬಹುದಿನಗಳ ಕನಸು ನನಸು

■ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಬಡತನದಲ್ಲಿ ಜೀವನ ನಡೆಸುತ್ತಿದ್ದ ಒಂದು ಕುಟುಂಬಕ್ಕೆ ಹೊಸ ಮನೆ ನಿರ್ಮಿಸಲು ಸಾಧ್ಯವಾಗದೆ ಸುಸಜ್ಜಿತ ಸ್ವಂತ ಮನೆಯ ಕನಸೊಂದು ಸಾಕಾರಗೊಂಡಿದೆ.
ಕಾರ್ಕಳದ ಪ್ರಸಿದ್ಧ ಉದ್ಯಮಿ ಬೋಳ ಪ್ರಶಾಂತ್ ಕಾಮತ್ ಅವರ ಹುಟ್ಟುಹಬ್ಬದ ಸಲುವಾಗಿ ಕಾರ್ಕಳ ಟೈಗರ್ಸ್ ಹಾಗೂ ಟೀಮ್ ಸಿಂಧೂರ್ ಸದಸ್ಯರು ಸೇರಿ ಸುಂದರವಾದ ಮನೆ ನಿರ್ಮಿಸಿ ಕೊಟ್ಟಿದ್ದಾರೆ. ಕಾರ್ಕಳ ತಾಲೂಕಿನ ಮಿಯಾರು ಗ್ರಾಮದ ಗೀತಾ ಆಚಾರ್ಯ ಬಡ ಕುಟುಂಬಕ್ಕೆ ಮನೆ ನಿರ್ಮಿಸಿ ಗೃಹಪ್ರವೇಶ ಮಾಡಿಸಿದ್ದಾರೆ.

ರವಿ -ದೀಪ್ ಹೆಸರು

ಕಾರ್ಕಳ ಟೈಗರ್ಸ್ ನ ಸ್ಥಾಪಕ ಸದಸ್ಯರಾದ ರವಿ ಶೆಟ್ಟಿ ಮತ್ತು ಬಾಂಗ್ಲಾದೇಶಿಯರ ದಬ್ಬಾಳಿಕೆಯಿಂದ ಕೊಲೆಯಾದ ಯುವಕ ದೀಪು ಚಂದ್ರದಾಸ್ ಇವರಿಬ್ಬರ ಸವಿನೆನಪಿಗಾಗಿ ಮನೆಯನ್ನು ನಿರ್ಮಿಸಿ ರವಿ ದೀಪ್ ಎಂದು ಹೆಸರನ್ನು ಇಟ್ಟು ಇವರಿಗೆ ಹಸ್ತಾಂತರಿಸಲಾಯಿತು.



ಸಾರ್ವಜನಿಕರ ಮೆಚ್ಚುಗೆ

ಬಡ ಕುಟುಂಬಕ್ಕೆ ವಾಸಕ್ಕೆ ಯೋಗ್ಯವಾದ ಮನೆ ನಿರ್ಮಿಸಿ ಆಸರೆಯಾದ ಕಾರ್ಕಳ ಟೈಗರ್ಸ್ ಹಾಗೂ ಟೀಮ್ ಸಿಂಧೂರ್ ನ ಸದಸ್ಯರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ತೆರೆ ಮರೆಯಲ್ಲಿ ಸಮಾಜ ಸೇವೆ

ತೆರೆ ಮರೆಯಲ್ಲಿ ಸಮಾಜ ಸೇವೆ ಮಾಡುತ್ತಿದ್ದ ಬೋಳ ಪ್ರಶಾಂತ್ ಕಾಮತ್ ಎಂಬ ಯುವಕನನ್ನು ಸಮಾಜ ಸೇವೆಗೆ ತರಲೇಬೇಕೆಂಬ ಪಣ ತೊಟ್ಟ ಅವರ ಹಿತೈಷಿಗಳ ಪ್ರಯತ್ನವೇ ಬೋಳ ಪ್ರಶಾಂತ್ ಕಾಮತ್ ಅಭಿಮಾನಿ ಬಳಗ ಕಾರ್ಕಳ ಟೈಗರ್‌ನ ಆರಂಭಕ್ಕೆ ಕಾರಣವಾಗಿದೆ. ಕಾರ್ಕಳದಲ್ಲಿ ಜನ ಸಂಘ ಹಾಗೂ ಬಿಜೆಪಿಯನ್ನು ಪ್ರಬಲವಾಗಿ ಕಟ್ಟಲು ನಿರಂತರ ಹೋರಾಟ ಮಾಡಿದವರು ಕಾರ್ಕಳದ ಬೋಳ ಪ್ರಭಾಕರ ಕಾಮತ್ ಅವರು, ಬೋಳ ಪ್ರಭಾಕರ ಕಾಮತ್ ಎಂದರೆ ಕಾರ್ಕಳ ತಾಲೂಕು ಮಾತ್ರವಲ್ಲದೆ ಕರಾವಳಿಯಲ್ಲಿ ಪ್ರಭಾವೀ ಹೆಸರು. ಕಾರ್ಕಳದಲ್ಲಿ ಬಿಜೆಪಿ ಪರಿಣಾಮಕಾರಿಯಾಗಿ ಇಂದಿನ ಮಟ್ಟದಲ್ಲಿ ಸಾಗ ಬೇಕಾದರೆ ಅವರು ಅಂದಿನ ದಿನಗಳಿಂದಲೂ ಮಾಡಿದ ಹೋರಾಟಕ್ಕೆ ಯಾರು ಕೂಡಾ ಯಾವುದೇ ಬೆಲೆ ಕಟ್ಟಲು ಸಾಧ್ಯವಿಲ್ಲ, ಅವರ ಪಕ್ಷ ಸಿದ್ಧಾಂತ, ಆದರ್ಶಗಳು ಪ್ರಸ್ತುತ ಸಮಾಜಕ್ಕೆ ಬಹಳ ಅಗತ್ಯ. ಅವರ ಮಕ್ಕಳಲ್ಲಿ ಬೋಳ ಶ್ರೀನಿವಾಸ ಕಾಮತ್, ಬೋಳ ಪ್ರಶಾಂತ್ ಕಾಮತ್‌ರು ಸಾಮಾಜಿಕ ಕ್ಷೇತ್ರದಲ್ಲಿ ಬಹಳ ಪ್ರಮುಖವಾದವರು. ಅವರಲ್ಲಿ ಬೋಳ ಪ್ರಶಾಂತ್ ಕಾಮತ್ ಅವರ ಮಿತ್ರರು ಒಗ್ಗೂಡಿ ಬೋಳ ಪ್ರಶಾಂತ್ ಕಾಮತ್ ಅವರು ಮಾಡುತ್ತಿದ್ದ ಸಮಾಜ ಸೇವೆಯನ್ನು ಸಮಾಜದ ಮುಂದಿಡುವ ಪ್ರಯತ್ನವನ್ನು ಬೋಳ ಟೈಗರ್ ಹಾಗೂ ಟೀಮ್ ಸಿಂಧೂರ್ ತಂಡ ಮಾಡುತ್ತಿದೆ.

> **ಸ್ಥಿತಿಗತಿ ಅರಿವಿಗೆ ಬಂದು ನೆರವು**
>
> ಗೀತಾ ಆಚಾರ್ಯ ಅವರ ಮನೆಯ ಸ್ಥಿತಿಗತಿ ಅರಿವಿಗೆ ಬಂದು ಮನೆ ನಿರ್ಮಿಸುವ ಕಾರ್ಯಕ್ಕೆ ಮುಂದಾಗಿ ಬಡ ಕುಟುಂಬಕ್ಕೆ ಸುಂದರವಾದ ಮನೆ ನಿರ್ಮಿಸಿಕೊಟ್ಟಿದ್ದೇವೆ. ನಮ್ಮ ಸದಸ್ಯರಿಬ್ಬರ ನೆನಪಿಗಾಗಿ ಮನೆಯನ್ನು ನಿರ್ಮಿಸಿ ರವಿ -ದೀಪ್ ಎಂದು ಹೆಸರನ್ನು ಇಟ್ಟು ಇವರಿಗೆ ಹಸ್ತಾಂತರಿಸಲಾಗಿದೆ.
>
> 
>
> ● ಬೋಳ ಪ್ರಶಾಂತ್ ಕಾಮತ್, ಮನೆ ನಿರ್ಮಾಣದ ರೂವಾರಿ

ವಿಶ್ವರಂಗಭೂಮಿ ದಿನಾಚರಣೆ | ಪ್ರೊ. ಕೃಷ್ಣಮೂರ್ತಿ ಚಿತ್ರಾಪುರ ಬಣ್ಣನೆ

ರಂಗಭೂಮಿ ಪ್ರತಿರೋಧದ ಪ್ರಭಾವಶಾಲಿ ಮಾಧ್ಯಮ

ಕುಂದಾಪುರ: ಸಾಮಾಜಿಕ ವ್ಯವಸ್ಥೆಯ ಅಸಮಾನತೆಯ ವಿರುದ್ಧದ ಬಂಡಾಯದ ಧ್ವನಿಯಾಗಿ ನಾಟಕ ರಂಗ ಬಹಳ ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ಆಳುವ ಸರ್ಕಾರ ದಾರಿ ತಪ್ಪಿದಾಗ ಪ್ರತಿಭಟನೆಯ ಸ್ವರೂಪವಾಗಿ ರಂಗಭೂಮಿ ಬೀದಿಗೆ ಇಳಿದಿದೆ. ಸರ್ಕಾರದ ವ್ಯವಸ್ಥೆಯ ವಿರುದ್ಧ ನಡೆಯುತ್ತಿದ್ದ ಬೀದಿನಾಟಕಗಳು ಇಂದು ಸರಕಾರದ ಸವಲತ್ತು ಪಡೆದು ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಸರಕಾರದ ಜಾಹಿರಾತಿಗೆ ಬಳಕೆಯಾಗುತ್ತಿರುವುದು ವಿಷಾದನೀಯ ಎಂದು ಸುರತ್ಕಲ್‌ನ ಗೋವಿಂದದಾಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಕೃಷ್ಣಮೂರ್ತಿ ಚಿತ್ರಾಪುರ ಹೇಳಿದರು.
ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಆಯೋಜನೆಯಲ್ಲಿ ಸಮುದಾಯ ಕುಂದಾಪುರದ ಸಹಭಾಗಿತ್ವದಲ್ಲಿ ವಿಶ್ವರಂಗಭೂಮಿ ದಿನಾಚರಣೆ ಪ್ರಯುಕ್ತ ಕುಂದಾಪುರದ ಹಂಚು ಕಾರ್ಮಿಕರ ಸಭಾಭವನದಲ್ಲಿ ನಡೆದ ವಿಚಾರಗೋಷ್ಠಿ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ 'ಕನ್ನಡ ರಂಗಭೂಮಿ- ವರ್ತಮಾನದ ತಲ್ಲಣಗಳು' ಎಂಬ ವಿಷಯದಲ್ಲಿ ಅವರು ಮಾತನಾಡಿದರು.
ಕನ್ನಡ ರಂಗಭೂಮಿ ವರ್ತಮಾನದ ತಲ್ಲಣಗಳಿಗೆ ಪ್ರತಿಭೂಮಿಯಾಗಿ ಕೆಲಸ ಮಾಡಬೇಕಿದೆ ಎಂದು ಅವರು ಹೇಳಿದರು.



> **ಪ್ರಭಾವ ಹೆಚ್ಚು**
>
> ಕನ್ನಡ ರಂಗಭೂಮಿ ಮೇಲೆ ನೀನಾಸಂ ಮತ್ತು ಸಮುದಾಯದ ಜಾಥಾಗಳು, ಬೀದಿನಾಟಕ, ಜಾಗತೀಕರಣದ ಪ್ರಭಾವ ಬಹಳ ದಟ್ಟವಾಗಿದೆ. ಜಾಗತೀಕರಣದಿಂದ ಕಾರ್ಮಿಕ ರಂಗ ಚಳವಳಿ ಬಹುತೇಕ ನಿಂತುಹೋಗಿದೆ. ವರ್ತಮಾನದ ತಲ್ಲಣಗಳಿಗೆ ರಂಗ ಚಳವಳಿ ಮೂಲಕ ಮುಖಾಮುಖಿಯಾಗುವ ಕೆಲಸವನ್ನು ಕಾರ್ಮಿಕ ಸಂಘಟನೆಗಳು ಮತ್ತೆ ಕೈಗೆತ್ತಿಕೊಳ್ಳಬೇಕು.
>
> ● ಪ್ರೊ. ಕೃಷ್ಣಮೂರ್ತಿ ಚಿತ್ರಾಪುರ

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ನಾಟಕ ಅಕಾಡೆಮಿಯ ಉಡುಪಿ ಜಿಲ್ಲಾ ಸಂಚಾಲಕ ಸಂತೋಷ ನಾಯಕ್ ಪಟ್ಲ ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ಅಭಿಲಾಷಾ ಎಸ್. ಶುಭ ಹಾರೈಸಿದರು. ಸಮುದಾಯ ಕುಂದಾಪುರದ ಚಿನ್ನಾ ಗಂಗೇರ ಅವರು ವಿಶ್ವರಂಗಭೂಮಿ ದಿನದ ಸಂದೇಶ ವಾಚನ ಮಾಡಿದರು.
ಕುಂದಾಪುರ ಸಮುದಾಯದ ಅಧ್ಯಕ್ಷ ಡಾ.ಸದಾನಂದ ಬೈಂದೂರು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿ ದರು. ಕಾರ್ಯದರ್ಶಿ ರವಿ ವಿ.ಎಂ. ನಿರೂಪಿಸಿ ದರು. ಗಣೇಶ ಶೆಟ್ಟಿ ವಂದಿಸಿದರು.

ಅಧ್ಯಕ್ಷ ಗಂಗಾಧರ ರಾವ್ ಪ್ರಾಯೋಜಕತ್ವದಲ್ಲಿ ನಿರ್ಮಿಸಿದ 'ನಂದಾದೀಪ'

ಯಕ್ಷಗಾನ ಕಲಾರಂಗದ 92ನೇ ಮನೆ ಹಸ್ತಾಂತರ

ಉಡುಪಿ: ಯಕ್ಷಗಾನ ಕಲಾರಂಗ ವಿದ್ಯಾಪೋಷಕ್‌ನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಯಜ್ಞ (ಕುಸುಮಾ ಮತ್ತು ಕೃಷ್ಣ ಇವರ ಪುತ್ರಿ) ಅವರಿಗೆ ಉಡುಪಿಯ ಉದ್ಯಾವರದಲ್ಲಿ ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಇವರ ಪ್ರಾಯೋಜಕತ್ವದಲ್ಲಿ ನಿರ್ಮಿಸಿದ ನೂತನ ಮನೆ 'ನಂದಾದೀಪ'ವನ್ನು ಸೋದೆ ಮಠಾಧೀಶರಾದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ಇಂದು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.
ಅಧ್ಯಕ್ಷತೆ ವಹಿಸಿದ್ದ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿಯವರು ಮಾತನಾಡಿ, ಕಲಾರಂಗದ ಕಾರ್ಯಕ್ರಮಕ್ಕೆ ಬಂದಾಗ ಸಜ್ಜನರ ಒಡನಾಟ ಸಿಗುತ್ತದೆ. ಸಮಯ ಪ್ರಜ್ಞೆಯಿಂದ ಶಿಸ್ತುಬದ್ಧವಾಗಿ ನಡೆಸುವ ಅವರ ಸಭಾಕಲಾಪವೇ ಸಮಾಜಕ್ಕೊಂದು ಸಂದೇಶ. ಗಂಗಾಧರ ರಾಯರ ಸರಳತೆ, ಸಜ್ಜನಿಕೆ, ಸಮಾಜಪ್ರೀತಿ ಉಳಿದವರಿಗೆ ಅನುಕರಣೀಯ ಎಂದರು.
ವಿಜಯ ಇಂಡಸ್ಟ್ರೀಸ್ ಮಾಲಕರಾದ ಕೆ. ಸತ್ಯೇಂದ್ರ ಪೈ, ಇಂಜಿನಿಯರ್ಸ್ ಅಸೋಶಿಯೇಷನ್ ಅಧ್ಯಕ್ಷ ಯೋಗಿಶ್ಚಂದ್ರಧರ್, ನ್ಯಾಯವಾದಿ ಎಂ. ಗೋಪಿಕೃಷ್ಣ ರಾವ್, ಹಿರಿಯರಾದ ಯು. ವಿಶ್ವನಾಥ ಶೆಣೈ ವೇದಿಕೆಯಲ್ಲಿ ಇದ್ದರು. ಈ ಹಿಂದೆ ಮನೆಯ ಪ್ರಾಯೋಜಕತ್ವ ವಹಿಸಿದ್ದ ಮರ್ಣೆ ಉಮೇಶ್ ಭಟ್, ಡಾ. ಜೆ.ಎನ್ .ಭಟ್, ಯು. ಎಸ್. ರಾಜಗೋಪಾಲ್ ಆಚಾರ್ಯ, ಅರವಿಂದ ನಾಯಕ್, ಪಿ. ಕೃಷ್ಣಮೂರ್ತಿ ಭಟ್, ವಿಜಯ್ ಕುಮಾರ್ ಮುದ್ರಾಡಿ ಮತ್ತು ಪ್ರಾಯೋಜಕತ್ವ ವಹಿಸಲಿರುವ ವಿಷ್ಣುಮೂರ್ತಿ ಭಟ್, ಸುದರ್ಶನ ಮೂರ್ತಿ-ಲಕ್ಷ್ಮೀ ದಂಪತಿಗಳು ಭಾಗವಹಿಸಿದ್ದರು. ಉಡುಪಿ ಇಂಜಿನಿಯರ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಎಂ.ಗೋಪಾಲ ಭಟ್, ಪಾಂಡುರಂಗ ಆಚಾರ್, ಪದಾಧಿಕಾರಿಗಳು, ಯಕ್ಷಗಾನ ಕಲಾರಂಗದ ಪದಾಧಿಕಾರಿಗಳಾದ ಎಸ್.ವಿ. ಭಟ್, ಪ್ರೊ.ಕೆ. ಸದಾಶಿವ ರಾವ್, ವಿದ್ಯಾ ಪ್ರಸಾದ್ ಮತ್ತು ಸದಸ್ಯರು, ಎಂ. ಗಂಗಾಧರ ರಾವ್ ಅವರ ಮನೆಯವರಾದ ಸರಸ್ವತಿ ಜಿ. ರಾವ್, ಪಾವನಿ, ಸಿಎ ಹರಿಣಿ ಜಿ. ರಾವ್, ಕಮಲಾಕ್ಷಿ, ಐಶ್ವರ್ಯ ಪಾಲ್ಗೊಂಡಿದ್ದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯ ಮಾತುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು.



> **ನೈತಿಕ ಶಕ್ತಿ ವೃದ್ಧಿ**
>
> ಎಂ. ಗಂಗಾಧರ ರಾವ್ ಅವರು ಮಾದರಿ ಸಂಸ್ಥೆಯ ಮಾದರಿ ಅಧ್ಯಕ್ಷರಾಗಿದ್ದಾರೆ. ತಮ್ಮ ದುಡಿಮೆಯ ಒಂದು ಪಾಲನ್ನು ಸಮಾಜಕ್ಕೆ ಅರ್ಪಿಸಿ ಸಂತೋಷವನ್ನು ಹೊಂದಿದ್ದಾರೆ. ಸಂಘಟನೆಯ ವರಿಷ್ಠರು ಸ್ವತಃ ದಾನಿಗಳಾಗಿದ್ದಾಗ ಜನರಿಂದ ಪಡೆಯುವ ನೈತಿಕ ಶಕ್ತಿ ಹೆಚ್ಚುತ್ತದೆ.
>
> ● ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು, ಸೋದೆ ಮಠಾಧೀಶ

ಸಮಾಜದ ಪರಿವರ್ತನೆಯಲ್ಲಿ ಮಹಿಳೆಯ ಪಾತ್ರ ಮಹತ್ವದ್ದು



ಕೋಟ: ಸಮಾಜದ ಪರಿವರ್ತನೆಯಲ್ಲಿ ಇಂದು ಮಹಿಳೆ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾಳೆ. ಅವಳ ಕೊಡುಗೆ ಅನನ್ಯವಾದದ್ದು ಮತ್ತು ಅಪೂರ್ವವಾದದ್ದು. ಸಾಹಿತ್ಯಕವಾಗಿ ಸಂಚಿಯ ಹೊನ್ನಮ್ಮನಿಂದ ಹಿಡಿದು ಇಲ್ಲಿಯವರೆಗಿನ ಬರಹಗಾರ್ತಿಯರು ತಮ್ಮದೇ ವಿಶಿಷ್ಟವಾದ ಕಾಣಿಕೆಯನ್ನು ಸಾಹಿತ್ಯಕ್ಕೆ ನೀಡಿದ್ದಾರೆ ಎಂದು ಲೇಖಕಿ ಸವಿತಾ ಮಾಧವ ಶಾಸ್ತ್ರಿ ನುಡಿದರು.
ಡಾ. ಶಿವರಾಮ ಕಾರಂತ ಪ್ರತಿಷ್ಠಾನ ಕೋಟ, ಕೋಟತಟ್ಟು ಗ್ರಾಮ ಪಂಚಾಯತ್, ಅಮೃತೇಶ್ವರಿ ಮಹಿಳಾ ಮೀನುಗಾರರ ಸಹಕಾರಿ ಸಂಘ ಕೋಟ, ನೆನಪು ಮೂವೀಸ್ ಮತ್ತು ಉಸಿರು ಕೋಟ ಆಶ್ರಯದಲ್ಲಿ ನಡೆದ ಮಹಿಳೆಯರ 4ನೇ ಕಾಲಮಿತಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಮಾತನಾಡಿದರು.
ಅಮೃತೇಶ್ವರೀ ಮಹಿಳಾ ಮೀನುಗಾರರ ಸಂಘದ ಅಧ್ಯಕ್ಷೆ ಸುಶೀಲಾ ಸೋಮಶೇಖರ್ ಸಮ್ಮೇಳನವನ್ನು ಉದ್ಘಾಟಿಸಿದರು. ಅತಿಥಿಯಾದ ಸುಮನಾ ಹೇರ್ಳೆ ಕನ್ನಡ ಸಾಹಿತ್ಯ ಲೋಕಕ್ಕೆ ಮಹಿಳೆಯರ ಕೊಡುಗೆಗಳನ್ನು ಸ್ಮರಿಸಿಕೊಂಡರು. ವೇದಿಕೆಯಲ್ಲಿ ಸಮಾರಂಭದ ಅಧ್ಯಕ್ಷತೆಯನ್ನು ಪಂಚಾಯತ್ ಕಾರ್ಯದರ್ಶಿ ಸುಮತಿ ಅಂಚನ್ ವಹಿಸಿದ್ದರು.
ಈ ವೇಳೆ ಕಾರಂತ ಆಯ್ಕೆ ಸಮಿತಿಯ ಸಂಚಾಲಕ ಯು.ಎಸ್. ಶೆಣೈ ಮತ್ತು ಸಾಂಸ್ಕೃತಿಕ ಚಿಂತಕಿ ಶಾರದಾ ಜೈನ್ ಉಪಸ್ಥಿತರಿದ್ದರು. ಪ್ರತಿಷ್ಠಾನದ ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ ಸ್ವಾಗತಿಸಿದರು. ಶಿಕ್ಷಕಿ ನಾಗರತ್ನ ಜಿ ವಂದಿಸಿದರು. ಗ್ರಂಥಪಾಲಕಿ ಶೈಲಜಾ ಕೆ.ಎನ್. ನಿರೂಪಿಸಿದರು. ಬಳಿಕ ಮಹಿಳೆಯರ ಕವಿತಾಗೋಷ್ಠಿ ನಡೆಯಿತು.

ಗಂಗೊಳ್ಳಿ ಹಿರಿಯ ಪ್ರಾಥಮಿಕ ಶಾಲೆ: ನೇತ್ರ ತಪಾಸಣಾ ಶಿಬಿರ



ಕುಂದಾಪುರ: ಕಣ್ಣು ಮನುಷ್ಯದ ದೇಹದ ಪ್ರಮುಖ ಮತ್ತು ಅತ್ಯಂತ ಸೂಕ್ಷ್ಮವಾದ ಅಂಗ. ಕಣ್ಣಿನ ಬಗ್ಗೆ ನಿರ್ಲಕ್ಷ್ಯ ಮಾಡದೆ ಹೆಚ್ಚು ಜಾಗೃತೆ ವಹಿಸಬೇಕು. ಕಾಲ ಕಾಲಕ್ಕೆ ಕಣ್ಣಿನ ತಪಾಸಣೆ ನಡೆಸಿ ಕಣ್ಣಿನ ಆರೈಕೆ ಮಾಡಿಕೊಳ್ಳಬೇಕು ಎಂದು ಗಂಗೊಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಜಯಂತಿ ಖಾರ್ವಿ ಹೇಳಿದರು.
ದೃಷ್ಟಿ (ಪ್ರ)ದಾನ ಯೋಜನೆ 2026-27, ಕರ್ನಾಟಕ ಸರಕಾರ, ಉಡುಪಿ ಜಿಲ್ಲಾ ಅಂಧತ್ವ ನಿವಾರಣಾ ವಿಭಾಗ, ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾ.ಪಂ. ಗಂಗೊಳ್ಳಿ, ಪ್ರಾಥಮಿಕ ಆರೋಗ್ಯ ಕೇಂದ್ರ ಗಂಗೊಳ್ಳಿ, ಪಾರ್ವತಿ ಮಹಾಬಲ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಶಿರೂರು ಮುದ್ದುಮನೆ ಹಾಗೂ ಶ್ರೀ ನಾರಾಯಣ ಗುರು ಜನಸೇವಾ ಬಳಗ ಗಂಗೊಳ್ಳಿ ಆಶ್ರಯದಲ್ಲಿ ಗಂಗೊಳ್ಳಿಯ ಸ.ವಿ. ಹಿರಿಯ ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನೇತ್ರ ಉಚಿತ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಮಾತನಾಡಿದರು.
ಗಂಗೊಳ್ಳಿ ಶ್ರೀ ನಾರಾಯಣ ಗುರು ಜನಸೇವಾ ಬಳಗದ ಅಧ್ಯಕ್ಷ ಜಿ.ಗೋಪಾಲ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಲಕ್ಷ್ಮೀ ಬಿ. ಪೂಜಾರಿ ಗಂಗೊಳ್ಳಿ ಶಿಬಿರ ಉದ್ಘಾಟಿಸಿದರು. ಗ್ರಾಪಂ. ಉಪಾಧ್ಯಕ್ಷ ತಬ್ರೇಜ್ ಮತ್ತು ಕಾರ್ಯಕ್ರಮ ಸಂಯೋಜಕ ಯು.ಶಂಕರ ಶೆಟ್ಟಿ ಶುಭಾಶಂಸನೆಗೈದರು. ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಎಚ್‌ಒ ನಯನಾ, ವೈದ್ಯಾಧಿಕಾರಿ ಡಾ.ರಂಜಿತಾ ಉಪಸ್ಥಿತರಿದ್ದರು. ಉಪಾಧ್ಯಕ್ಷೆ ಮಮತಾ ಪೂಜಾರಿ ಸ್ವಾಗತಿಸಿದರು. ಉಪನ್ಯಾಸಕ ನರೇಂದ್ರ ಎಸ್.ಗಂಗೊಳ್ಳಿ ಕಾರ್ಯಕ್ರಮ ನಿರ್ವಹಿಸಿ, ಉಪಾಧ್ಯಕ್ಷೆ ಸುಜಾತಾ ಬಾಬು ಖಾರ್ವಿ ವಂದಿಸಿದರು.

ಶ್ರೀ ಪಾರ್ಥಸಾರಥಿ ಇಲೆವೆನ್ ತಂಡಕ್ಕೆ 'ಜಿಜಿಪಿಎಲ್' ಟ್ರೋಫಿ



ಕುಂದಾಪುರ: ಹರಿಓಂ ಗಂಗೊಳ್ಳಿ ಆಶ್ರಯದಲ್ಲಿ ಎಂ.ಜಿ. ಜಗನ್ನಾಥ ಪೈ, ಪೈ ಗ್ರೂಪ್ ಆಫ್ ಹೊಟೇಲ್ಸ್ ಬೆಂಗಳೂರು ಮತ್ತು ಜಿ.ವಿವೇಕಾನಂದ ನಾಯಕ್ ದುಬೈ ಪ್ರಾಯೋಜಕತ್ವದಲ್ಲಿ ಗಂಗೊಳ್ಳಿಯ ಎಸ್.ವಿ. ಹಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಭಾನುವಾರ ಜರಗಿದ ಜಿ.ಎಸ್.ಬಿ. ಸಮಾಜ ಬಾಂಧವರ ಸತತ 7ನೇ ವರ್ಷದ 30 ಗಜಗಳ ಲೀಗ ಮಾದರಿಯ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟ 'ಜಿಜಿಪಿಎಲ್-2026'ರಲ್ಲಿ ಶ್ರೀ ಪಾರ್ಥಸಾರಥಿ ಇಲೆವೆನ್ ತಂಡ ಪ್ರಥಮ ಸ್ಥಾನ ಪಡೆದು ಟ್ರೋಫಿ ತನ್ನದಾಗಿಸಿಕೊಂಡಿತು.
ಕೆನರಾ ಸೂಪರ್ ಕಿಂಗ್ಸ್ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿತು. ಶ್ರೀ ಪಾರ್ಥಸಾರಥಿ ಇಲೆವೆನ್ ತಂಡದ ರಮೇಶ ಪೈ ಫೈನಲ್ ಪಂದ್ಯದ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರೆ, ವಿಜಯೇಂದ್ರ ನಾಯಕ್ ಸರಣಿಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು. ರಮೇಶ ಪೈ ಉತ್ತಮ ದಾಂಡಿಗ, ಗಣೇಶ ಪ್ರಭು ಉತ್ತಮ ಎಸೆತಗಾರ, ಅನಂತ ಪೈ ಮತ್ತು ವಿಜೇಶ ಪಡಿಯಾರ್ ಉತ್ತಮ ಕ್ಷೇತ್ರರಕ್ಷಕ ಹಾಗೂ ಪ್ರಥಮ ಆಚಾರ್ಯ ಉದಯೋನ್ಮುಖ ಆಟಗಾರ ಪ್ರಶಸ್ತಿಗೆ ಭಾಜನರಾದರು.
ಸಮಾರೋಪ ಸಮಾರಂಭದಲ್ಲಿ ಉದ್ಯಮಿ ಕೆ. ಪ್ರಭಾಕರ ನಾಯಕ್, ಆಟಕೆರೆ ಅನಂತ ಪೈ ಕೋಟೇಶ್ವರ, ಕೆ. ಸತೀಶ ಕಾಮತ್ ಕೋಟೇಶ್ವರ ಮತ್ತು ಬೆಂಗಳೂರು ಪಿಬಿಎ ಅಕಾಡೆಮಿ ಮಾಲೀಕ ಎಂ.ಪ್ರಭಾಕರ ಪೈ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು. ಹರಿಓಂ ಸಂಸ್ಥೆಯ ವಿವೇಕ ಮಲ್ಯ ಇದ್ದರು. ಜಿ.ಸುದರ್ಶನ ಆಚಾರ್ಯ ನಿರ್ವಹಿಸಿದರು.

ಉಚ್ಚಂಗಿ ಸಹಿತ ಮಾರಿಯಮ್ಮ ದೇವಿಯ ದರುಶನ ಪಡೆದ ಸಂಸದ ಕುಟುಂಬ

ಕಾಪು ಸನ್ನಿಧಿಗೆ ಸಂಸದ ಬಿ.ವೈ.ರಾಘವೇಂದ್ರ ಭೇಟಿ

ಕಾಪು: ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದರಾದ ಬಿ ವೈ ರಾಘವೇಂದ್ರ ಅವರು ಇಂದು ಕುಟುಂಬ ಸಮೇತರಾಗಿ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೆ ಭೇಟಿ ನೀಡಿ ಉಚ್ಚಂಗಿ ಸಹಿತ ಮಾರಿಯಮ್ಮ ದೇವಿಯ ದರುಶನ ಪಡೆದರು.
ಕಾಪು ವಿಧಾನಸಭಾ ಕ್ಷೇತ್ರದ ಶಾಸಕ ಮತ್ತು ದೇವಳದ ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಗುರ್ಮೆ ಸುರೇಶ್ ಶೆಟ್ಟಿ ಮತ್ತು ಅಧ್ಯಕ್ಷ ರಾಜರ್ಷಿ ಕೆ. ವಾಸುದೇವ ಶೆಟ್ಟಿ ಅವರನ್ನು ಆತ್ಮೀಯವಾಗಿ ಭರಮಾಡಿಕೊಂಡರು.
ದೇಗುಲದ ಪ್ರಧಾನ ಅರ್ಚಕ ವೇದಮೂರ್ತಿ ಶ್ರೀನಿವಾಸ ತಂತ್ರಿ ಕಲ್ಯ ಅವರು ವ್ಯವಸ್ಥಾಪನಾ ಸಮಿತಿ ಅಭಿವೃದ್ಧಿ ಸಮಿತಿಯ ಸಮ್ಮುಖದಲ್ಲಿ ಪ್ರಾರ್ಥಿಸಿ ಅಮ್ಮನ ಅನುಗ್ರಹ ಪ್ರಸಾದವನ್ನು ನೀಡಿ ಗೌರವಿಸಿದರು.
ಈ ಸಂದರ್ಭದಲ್ಲಿ ಅಭಿವೃದ್ಧಿ ಸಮಿತಿ ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ, ದೇವಳದ ಪ್ರಬಂಧಕ ಗೋವರ್ಧನ್ ಸೇರಿಗಾರ್ ಮತ್ತು ಸಿಬ್ಬಂದಿ ಲಕ್ಷ್ಮಣ್ ಶೆಟ್ಟಿ ಮಂಡೇಡಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ನಗರದ ನೀರಿನ ಮೂಲಗಳ ಸದ್ಬಳಕೆಗೆ ಸ್ವಚ್ಛ ಕಾರ್ಕಳ ಬ್ರಿಗೇಡ್ ಪ್ರಯತ್ನ

ನಿಷ್ಪ್ರಯೋಜಕವಾಗಿದ್ದ ಹಳೆ ಬಾವಿಯ ಸ್ವಚ್ಛತೆ

ಕಾರ್ಕಳ: ದಿನಬಳಕೆಯ ನೀರಿನ ಮೂಲಗಳಾದ ತೆರೆದ ಸರಕಾರಿ ಬಾವಿಗಳು ನಿರ್ವಹಣೆಯಿಲ್ಲದೇ ನಿಷ್ಪ್ರಯೋಜಕವಾಗಿದ್ದ ಕಾರ್ಕಳ ಅನೆಕೆರೆ ಕುಂಟಲ್ಪಾಡಿ ಬೈಲಡ್ಕ ಬಾಲಾಜಿ ಅಯ್ಯಪ್ಪ ಮಂದಿರ ಬಳಿ ಇರುವ ಸರಕಾರಿ ತೆರೆದ ಬಾವಿ ಹಾಗೂ ಅದರ ಸುತ್ತಮುತ್ತಲ ಸ್ವಚ್ಛ ಕಾರ್ಕಳ ಬ್ರಿಗೇಡ್ ತಂಡ ಭಾನುವಾರ ಕಾರ್ಯಪ್ರವೃತ್ತರಾಗಿ ಸ್ವಚ್ಛತೆಯನ್ನು ನಡೆಸಿದರು.
ಸುಮಾರು 70 ವರ್ಷಗಳ ಹಳೆಯ ಬಾವಿಯ ಸ್ವಚ್ಛತೆ, ಬಾವಿಯ ಸುತ್ತಮುತ್ತ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ, ಬಾವಿಯ ನೀರಲ್ಲಿ ಬಿದ್ದಿರುವ ಕಸಕಡ್ಡಿ ಸ್ವಚ್ಛಗೊಳಿಸಿದರು.
ಕಾರ್ಕಳ ನಗರದ ಜನರು ಮತ್ತೆ ಬಾವಿ ನೀರು ಉಪಯೋಗಿಸುವಂತೆ ವ್ಯವಸ್ಥೆ ಮಾಡಬೇಕು ಎಂದು ನಿರ್ಧರಿಸಿದ ಸ್ವಚ್ಛ ಕಾರ್ಕಳ ಬ್ರಿಗೇಡ್ ಕಾರ್ಯಕರ್ತರು ಪ್ರತಿ ಭಾನುವಾರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಬಾವಿಯಲ್ಲಿ ತುಂಬಿದ್ದ ಕಸಕಡ್ಡಿಗಳನ್ನು, ಸಣ್ಣ ಪುಟ್ಟ ಗಿಡಗಂಟಿಗಳನ್ನು ಕಿತ್ತು ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಸ್ವಚ್ಛ ಮಾಡಲಾಯಿತು. ಬಾವಿಯ ಹೊರಗೆ ಸುತ್ತಮುತ್ತಲು ತುಂಬಿದ್ದ ಕಸಕಡ್ಡಿ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಸ್ವಚ್ಛ ಮಾಡಿ ಬಾವಿಯ ಗೋಡೆಗಳಿಗೆ ಹಳದಿ ಬಣ್ಣದ ಪೈಂಟ್ ಕೊಡಲಾಯಿತು. ಸುಮಾರು 20ಕ್ಕೂ ಅಧಿಕ ಮಂದಿ ಕಾರ್ಯಕರ್ತರು ಭಾಗವಹಿಸಿದರು.

